## ಕರ್ನಾಟಕ ವಿಧಾನಪರಿಷತ್ತು

ದಿನಾಂಕ: 31ನೇ ಜುಲೈ 2015
ಶುಕ್ರವಾರ

### ವಿಷಯಾನುಕ್ರಮಣಿಕೆ


1. ಪ್ರಕಟಣೆ 02

2. ವರದಿಯನ್ನೊಪ್ಪಿಸುವುದು 02

3. ಕಾರ್ಯದರ್ಶಿಯವರ ವರದಿ 2–3

4. ನಿಯಮ 330ಎ ಅಡಿಯಲ್ಲಿ ವಿಶೇಷ ಪ್ರಸ್ತಾವಗಳು 3–8

ಅ) ವಿಧಾನಸಭಾ ಮತ್ತು ವಿಧಾನ ಪರಷತ್ತಿನ ಸದಸ್ಯರುಗಳಿಗೆ ಸರ್ಕಾರಿ ಇಲಾಖೆಗಳಿಂದ ನಿಯೋಜನೆ ಮೇರೆಗೆ ಹಾಗೂ ಗುತ್ತಿಗೆ ಆಧಾರದ ಮೇಲೂ ಕಾರ್ಯನಿರ್ವಹಿಸುತ್ತಿರುವ ಆಪ್ತ ಸಹಾಯಕರುಗಳಿಗೆ ಅಧಿವೇಶನ ಸಮಯದಲ್ಲಿ ಇತರರಿಗೆ ನೀಡುವಂತೆ ಅಧಿವೇಶನ ಭತ್ಯೆ ನೀಡುವ ಕುರಿತು ಹಾಗೂ ಶಾಸಕರ ಆಪ್ತ ಸಹಾಯಕರುಗಳಿಗೆ ವೇತನ ನೀಡುವಿಕೆಯಲ್ಲಿ ತಾರತಮ್ಯವಾಗುತ್ತಿರುವ ಕರಿತು.

– ಶ್ರೀ ಪ್ರಟೀಲ್ ಶಿವರಾಂ

– ಪ್ರೋ: ಪಿ.ವಿ. ಕೃಷ್ಣಭಟ್

– ಶ್ರೀ ಅರುಣ ಶಹಾಪುರ

– ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು)(ಮುಖ್ಯಮಂತ್ರಿಗಯವರ ಪರವಾಗಿ)

ಆ) ಮಲಪ್ರಭಾ – ಮಹದಾಯಿ ನದಿ ಜೋಡಣೆ ಯೋಜನೆ ಅನುಷ್ಠಾನಗೊಳಿಸಲು ಒತ್ತಾಯಿಸಿ, ಗದಗ ಜಿಲ್ಲೆ ನರಗುಂದದಲ್ಲಿ ರೈತಸೇವಾ ಕರ್ನಾಟಕ ಹಾಗೂ ಇರತ ಸಂಘಟನೆಗಳು ಧರಣಿ ಸತ್ಯಾಗ್ರಹ ನಡೆಸುತ್ತಾ ಬಂದಿರುವ ಬಗ್ಗೆ.

– ಶ್ರೀ ಎಸ್.ವ್ಹಿ. ಸಂಕನೂರ

– ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು)(ಮುಖ್ಯಮಂತ್ರಿಗಯವರ ಪರವಾಗಿ)

ಇ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳು ಕಳೆದ ಎರಡು ವರ್ಷಗಳಿಂದ ಸತತವಾಗಿ ಬರಗಲಕ್ಕೆ ತುತ್ತಾಗಿರುವುದ ರಿಂದ ರೈತರು ಸಂಕಷ್ಟಕ್ಕೆ ಒಳಗಾಗಿರುವ ಬಗ್ಗೆ.

– ಶ್ರೀ ಅಲ್ಲಮಪ್ರಭು ಪಾಟೀಲ್

– ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು)(ಮುಖ್ಯಮಂತ್ರಿಗಯವರ ಪರವಾಗಿ)

ಈ) ರಾಯಚೂರು ನಗರದ ಮುಖ್ಯ ರಸ್ತೆಯಲ್ಲಿರುವ ಪುರಾತನ ದೇವಾಲಯವನ್ನು ಅಭಿವೃದ್ಧಿ ಹೆಸರಿನಲ್ಲಿ ಏಕಾಏಕಿ ಒಡೆದು ಹಾಕಿರುವುದರಿಂದ ಸ್ಥಳೀಯ ಜನರು, ಸಾರ್ವಜನಿಕ ಸಂಘ ಸಂಸ್ಥೆಗಳೂ, ಧಾರ್ಮಿಕ ಸಂಸ್ಥೆಗಳು ಹಾಗೂ ಮಠಾಧಿಪತಿಗಳು ಹೋರಾಟ ನಡೆಸುತ್ತಿರುವ ಬಗ್ಗೆ

– ಶ್ರೀ ಭಾನುಪ್ರಕಾಶ್

– ಶ್ರೀ ಟಿ.ಬಿ. ಜಯಚಂದ್ರ(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಸಭಾಪತಿಯವರ ಅನುಮತಿ ಮೇರೆಗೆ ಪ್ರಸಾಪಿಸಲ್ಪಟ್ಟಿದ್ದ ವಿಷಯಗಳಿಗೆ ಸಂಬಂಧಿಸಿದ ಉತ್ತರಗಳ ಮಂಡನೆ

5. ಶಾಸನ ರಚನೆ 8–49

ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ, 2015

– ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಯವರ ಪರವಾಗಿ)

– ಶ್ರೀ ವಿ. ಸೋಮಣ್ಣ
– ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)
– ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು)
– ಶ್ರೀ ಬಸವರಾಜ ಹೊರಟ್ಟಿ
– ಡಾ॥ ವೀರಣ್ಣ ಮತ್ತಿಕಟ್ಟಿ
– ಕೆ.ಬಿ. ಶಾಣಪ್ಪ
– ಡಾ॥ ಎಂ.ಆರ್. ಹುಲಿನಾಯ್ಕರ್
– ಬಿ.ಜೆ. ಪುಟ್ಟಸ್ವಾಮಿ
– ಶ್ರೀ ಎಸ್.ಆರ್.ಪಟೀಲ್ (ಸಭಾನಾಯಕರು)
– ಶ್ರೀ ಇ. ಕೃಷ್ಣಪ್ಪ
– ಶ್ರೀ ಆರ್.ಕೆ ಸಿದ್ದರಾಮಣ್ಣ
– ಶ್ರೀ ಐವನ್ ಡಿ'ಸೋಜಾ
– ಶ್ರೀ.ಕೆ.ಜೆ ಜಾರ್ಜ್ (ಗೃಹ ಸಚಿವರು)
– ಶ್ರೀ ಗೋ. ಮಧುಸೂಧನ್
– ಶ್ರೀ ವಿ.ಎಸ್. ಉಗ್ರಪ್ಪ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**6. ಪ್ರಕಟಣೆ** **49–49**

**7. ಸಭೆಯ ಮುಂದಿಡಲಾದ ಕಾಗದ ಪತ್ರಗಳು** **49–50**

**8. ಶಾಸನ ರಚನೆ** **50–63**

**ವಿಧೇಯಕದ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ವಿಧೇಯಕ, 2015**

– ಶ್ರೀ ಕಿಮ್ಮನೆ ರತ್ನಾಕರ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)
– ಶ್ರೀ ಎಸ್.ವ್ಹಿ. ಸಂಕನೂರ
– ಶ್ರೀ ಅರುಣ ಶಹಾಪುರ
– ಶ್ರೀ ರಾಮಚಂದ್ರಗೌಡ
– ಶ್ರೀ ಬಸವರಾಜ ಹೊರಟ್ಟಿ
– ಶ್ರೀ ಗೋ.ಮಧುಸೂಧನ್
– ಕ್ಯಾಪ್ಟನ್ ಗಣೇಶ್ ಕಾರ್ಣಿಕ್
– ಪ್ರೋ.ಪಿ.ವಿ.ಕೃಷ್ಣಭಟ್
– ಶ್ರೀಮತಿ ಮೋಟಮ್ಮ
– ಶ್ರೀ ಸಿ.ಹೆಚ್. ವಿಜಯಶಂಕರ
– ಶ್ರೀ ವಿ.ಎಸ್. ಉಗ್ರಪ್ಪ
– ಶ್ರೀ ವಿ. ಸೋಮಣ್ಣ
– ಶ್ರೀ ವೈ.ಎ. ನಾರಾಯಣಸ್ವಾಮಿ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**9. ಖಾಸಗಿ ಸದಸ್ಯರ ನಿರ್ಣಯ** **63–90**

**ದಿನಾಂಕ: 10.07.2015ರಂದು ಮಂಡಿಸಿರುವ "ಅರಣ್ಯ ಮತ್ತು ಅರಣ್ಯೇತರ ಎಂಬ ಭೇದ ತೊರೆದು ಒಟ್ಟಾರೆ ಭೂಪ್ರದೇಶ ಗಮನದಲ್ಲಿಟ್ಟುಕೊಂಡು ಅರಣ್ಯೇತರ ಪ್ರದೇಶವನ್ನು ಕೂಡ ಯಾವುದೇ ಕಾರಣಕ್ಕೂ ಖಾಸಗೀಕರಣ ವ್ಯವಸ್ಥೆಗಳಿಂದ ವಂಚಿತವಾಗದೇ ವನಸಂಪತ್ತನ್ನು ಹೆಚ್ಚಿಸಿ ಹಸಿರೀಕರಣಗೊಳಿಸಲು ಪುರಸಭೆ, ನಗರಾಭಿವೃದ್ಧಿ ಪ್ರಾಧಿಕಾರಗಳು,ನೀರಾವರಿ, ಭೂಪ್ರದೇಶ ಮತ್ತು ಹಸರೀಕರಣಕ್ಕಾಗಿ ಲಭ್ಯವಿರುವ ಸಂಪನ್ಮೂಲದಲ್ಲಿ ಅಗತ್ಯ ಹಣಕಾಸಿನ ಅನುಕೂಲತೆ ಕಲ್ಪಿಸಿಕೊಂಡು ಹಸಿರೀಕರಣಕ್ಕೆ ಆದ್ಯತೆ ನೀಡಲು 'ಮರಸಂರಕ್ಷಣಾ ಅಧಿನಿಯಮ' ದ ಅಡಿಯಲ್ಲಿ ಮೇಲ್ಕಾಣಿಸಿದ ಇಲಾಖೆಗಳಿಗೂ ಹೊಣೆಗಾರಿಕೆ ನಿಗದಿಗೊಳಿಸಲು ಅದಲ್ಲದೇ ಸರ್ಕಾರಿ ಕಛೇರಿಗಳಲ್ಲಿನ ಆವರಣಗಳಲ್ಲಿ ಲಭ್ಯವಿರುವ ಜಾಗಗಳಲ್ಲಿ ಸಸಿಗಳನ್ನು ಕಡ್ಡಾಯವಾಗಿ ನೆಟ್ಟು ಬೆಳೆಸಲು ಸಂಬಂಧಿಸಿದ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿಸಲು ಈ ವಿಚಾರಗಳನ್ನು ಕೈಗೆತ್ತಿಕೊಳ್ಳುವ ಕುರಿತು"**

– ಶ್ರೀ ಸಿ.ಹೆಚ್. ವಿಜಯಶಂಕರ
– ಶ್ರೀ. ಬಿ. ರಾಮಕೃಷ್ಣ
– ಶ್ರೀ ರಾಮಚಂದ್ರಗೌಡ
– ಶ್ರೀ ಹೆಚ್.ಎಂ. ರೇವಣ್ಣ
– ಡಾ॥ ವೀರಣ್ಣ ಮತ್ತಿಕಟ್ಟಿ
– ಶ್ರೀ ವಿ.ಎಸ್. ಉಗ್ರಪ್ಪ
– ಬಿ.ಜೆ. ಪುಟ್ಟಸ್ವಾಮಿ
– ಪ್ರೋ.ಪಿ.ವಿ.ಕೃಷ್ಣಭಟ್
– ಕ್ಯಾಪ್ಟನ್ ಗಣೇಶ್ ಕಾರ್ಣಿಕ್
– ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ
– ಶ್ರೀ ಎಸ್.ಆರ್.ಪಟೇಲ್ (ಸಭಾನಾಯಕರು)

**(ನಿರ್ಣಯದ ಬಗ್ಗೆ ಚರ್ಚೆ ಮುಂದುವರೆದಿತ್ತು)**

**10. ಪ್ರಕಟಣೆಗಳು** **90–94**

**11. ಸಭೆಯ ಮುಂದಿಡಲಾದ ಕಾಗದ ಪತ್ರಗಳು** **94–95**

**12. ಶಾಸನ ರಚನೆ** **95–108**

**ವಿಧೇಯಕದ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಕರ್ನಾಟಕ ಭೂ ಸುಧಾರಣಾ(ತಿದ್ದುಪಡಿ) ವಿಧೇಯಕ, 2015**

– ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)
– ಶ್ರೀ ಅಶ್ವಥ್ ನಾರಾಯಣ
– ಕ್ಯಾಪ್ಟನ್ ಗಣೇಶ್ ಕಾರ್ಣಿಕ್
– ಶ್ರೀ ಸಿ.ಹೆಚ್. ವಿಜಯಶಂಕರ
– ಶ್ರೀ ರಾಮಚಂದ್ರಗೌಡ
– ಶ್ರೀ. ಬಿ. ರಾಮಕೃಷ್ಣ
– ಶ್ರೀ ಗೋ.ಮಧುಸೂಧನ್
– ಶ್ರೀ ವಿ.ಎಸ್. ಉಗ್ರಪ್ಪ
– ಶ್ರೀ ಐವನ್ ಡಿ'ಸೋಜಾ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

13. ಪ್ರಕಟಣೆಗಳು – – – – 109

# ಕರ್ನಾಟಕ ವಿಧಾನಪರಿಷತ್ತು

**ಶುಕ್ರವಾರ, 31ನೇ ಜುಲೈ 2015**

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 11 ಗಂಟೆ 42 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಎಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

**1. ಪ್ರಕಟಣೆ**

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯ ದಿನಾಂಕ: 30.07.2015 ರಂದು 2015ನೇ ಸಾಲಿನ "ಕರ್ನಾಟಕ ಲೋಕಾಯುಕತ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಗಳೊಂದಿಗೆ ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

**2. ವರದಿಯನ್ನು ಒಪ್ಪಿಸುವುದು**

**ಶ್ರೀ ಗೋ.ಮಧುಸೂಧನ್:–** ಮಾನ್ಯ ಸಭಾಪತಿಯವರೆ, ನಾನು ಹಕ್ಕುಬಾಧ್ಯತಾ ಸಮಿತಿಯ ಅಧ್ಯಕ್ಷನಾಗಿ ಕರ್ನಾಟಕ ವಿಧಾನ ಪರಿಷತ್ತಿನ ಹಕ್ಕುಬಾಧ್ಯಾತಾ ಸಮಿತಿಯ 77 ನೇ ಹಾಗೂ 78ನೇ ವರದಿಗಳನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:–** ಒಪ್ಪಿಸಲಾಯಿತು.

**ಶ್ರೀ ಗೋ.ಮಧುಸೂಧನ್:–** ಮಾನ್ಯ ಸಭಾಪತಿಯವರೆ, ವರದಿಯನ್ನು ಒಪ್ಪಿಸಿದ್ ಮೇಲೆ ವರದಿಯ ಮೇಲೆ ಏನಾದರು ಮಾತನಾಡುವುದಕ್ಕೆ ಅವಕಾಶ ಇದೆಯೇ

**ಶ್ರೀ. ಕೆ. ಗೋವಿಂದರಾಜು:–** ಮಾನ್ಯ ಸಭಾಪತಿಯವರೆ, ವರದಿಯನ್ನು ಒಪ್ಪಿಸಿದ ಮೇಲೆ ಮುಗಿಯಿತು. ಮತ್ತೆ ವರದಿಯ ಮೇಲೆ ಮಾತನಾಡುವುದಕ್ಕೆ ಅವಕಾಶಗಳಿಲ್ಲ.

**3. ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ(ಕರ್ನಾಟಕ ವಿಧಾನ ಪರಷತ್ತಿನ ಸಚಿವಾಲಯ):–** ಮಾನ್ಯ ಸಭಾಪತಿಯವರೆ, ತಮ್ಮ ಅನುಮತಿಯೊಂದಿಗೆ ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದಂತಹ ರೂಪದಲ್ಲಿರುವ 2015ನೇ ಸಾಲಿನ "ಕರ್ನಾಟಕ ಲೋಕಾಯುಕ್ತ" (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದಿಡುತ್ತಿದ್ದೇನೆ.

**ಸಭಾಪತಿಯವರು:–** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 330ಎ ವಿಶೇಷ ಪ್ರಸ್ತಾವಗಳು ಕೆಲವು ಬಂದಿದೆ. ನಾನು ಅಗ್ರಸ್ತಾನಗಳನ್ನು ನಂತರ ತೆಗೆದುಕೊಳ್ಳುತ್ತೇನೆ. ಏಕೆಂದರೆ ಅವು ಸ್ವಲ್ಪ ಸ್ಕೂಟಿನಿಯವಾಗುತ್ತಿವೆ. ಈಗ ಶ್ಯೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದಂತಹ ವಿಷಯದ ಬಗ್ಗೆ ಉತ್ತರಗಳು ಬಂದಿದೆ ಎಂದು ಹೇಳಿದ್ದಾರೆ. ಅದನ್ನು ಮಂಡನೆ ಮಾಡಿ.

**ಶ್ರೀ ಗೋ.ಮಧುಸೂಧನ್:–** ಮಾನ್ಯ ಸಭಾಪತಿಯವರೆ, ನಾನು ಇವತ್ತು ಹಕ್ಕುಬಾಧ್ಯತಾ ಸಮಿತಿಯ ವರದಿಯನ್ನು ಒಪ್ಪಿಸಿದ್ದೇನೆ. ಈ ಹಿಂದೆಯೂ ಸಹಾ ನಾನು ಹಕ್ಕುಬಾಧ್ಯತಾ ಸಮಿತಿಯ ವರದಿಯನ್ನು ಒಪ್ಪಿಸಿದಾಗ ಒಬ್ಬರು ಸಚಿವರು ಹಕ್ಕುಚ್ಯುತಿಯನ್ನು ಮಾಡಿದ್ದಾರೆಂದು ಹೇಳಿದ್ದೇವು. ತಾವು ಅದರ ಬಗ್ಗೆ ಸರ್ಕಾರಕ್ಕೆ ಒಂದು ರೂಲಿಂಗ್ ಅನ್ನು ಕೂಡ ಕೊಟ್ಟಿದ್ದೀರಿ. ಆ ಒಂದು ದಿನ ಅಲ್ಪಸಂಖ್ಯಾತರ ಆಯೋಗದ ವರದಿಯನ್ನು ಅದನದಲ್ಲಿ ಮಂಡಿಸಿ ಎಂದು ಹೇಳಲಾಗಿತ್ತು. ಆದರೆ ಇಲ್ಲಿಯವರೆಗೆ ಸರ್ಕಾರ ಆ ವರದಿಯನ್ನು ಸದನದಲ್ಲಿ ಮಂಡಿಸಿರುವುದಿಲ್ಲ ಇದು ಎಷ್ಟರ ಮಟ್ಟಿಗೆ ಸರೀ? ನಾವು ವರದಿಯನ್ನು ಒಪ್ಪಿಸುತ್ತಿರುವಂಥದ್ದು, ಸರ್ಕಾರ ಇದಕ್ಕೆ ಬೇಜವಾಬ್ದಾರಿಯಿಂದ ನಡೆದುಕೊಳ್ಳುವಂಥದ್ದು ಇದು ಎಷ್ಟರ ಮಟ್ಟಿಗೆ ಸರಿ? ಸದನದ ಘನತೆಗೆ ಎಲ್ಲಿಯೋ

ಒಂದು ಕಡೆ ಚ್ಯುತಿ ಬರುತ್ತಿದೆ. ಇವತ್ತು ಸದನದಲ್ಲಿ ಕಾನೂನು ಸಚಿವರು ಇದ್ದಾರೆ. ಅವರು ಉತ್ತರವನ್ನು ಕೊಡಬೇಕು.

**ಸಭಾಪತಿಯವರು:–** ನಾನು ನೋಡುತ್ತೇನೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ವರದಿಯನ್ನು ಒಪ್ಪಿಸಿದ ನಂತರ ಮೇಲೆ ಮಾತನಾಡುವಹಾಗಿಲ್ಲ.

**ಸಭಾಪತಿಯವರು:–** ಮಾನ್ಯ ಸದಸ್ಯರು ಅವರ ಅಭಿಪ್ರಾಯವನ್ನು ಹೇಳುತ್ತಿದ್ದಾರೆ.

**ಶ್ರೀ ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೆ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಬಿಬಿಎಂಪಿ ಚುನಾವಣೆಯ ಸ್ಟೇಗೆ ಓಡಾಡುತ್ತಿದ್ದಾರೆ.

**ಸಭಾಪತಿಯವರು:–** ಮೊದಲನೆಯದಾಗಿ ನಿಯಮ 330ಎ ಪ್ರಕಾರವಾಗ ಐದು ಜನ ಒಂದೇ ವಿಷಯದ ಪರವಾಗಿ ಶ್ರೀ ಪಟೇಲ್ ಶಿವರಾಂರವರು ಓದುತ್ತಾರೆ. ಯಾರ್‍ಯಾರು ಆ ಐದು ಜನ ಎಂದರೆ, ಶ್ರೀ ಪಟೇಲ್ ಶಿವರಾಂರವರು, ಪ್ರೊ ಪಿ.ವಿ.ಕೃಷ್ಣಭಟ್‌ರವರು, ಶ್ರೀ ಅರುಣ್ ಶಹಾಪುರ್‌ರವರು, ಶ್ರೀ ಎಸ್.ವ್ಹಿ. ಸಂಕನೂರುರವರು ಮತ್ತು ಶ್ರೀ ಮಹಾಂತೇಶ್ ಕವಟಗಿಮಠ ಮಲ್ಲಿಕಾರ್ಜುನ

## 4. ನಿಯಮ 330ಎ ಅಡಿಯಲ್ಲಿ ವಿಶೇಷ ಪ್ರಸ್ತಾವಗಳು

**ಅ) ವಿಧಾನ ಸಭಾ ಮತ್ತು ವಿಧನ ಪರಿಷತ್ತಿನ ಸದಸ್ಯರುಗಳಿಗೆ ಸರ್ಕಾರಿ ಇಲಾಖೆಗಳಿಂದ ನಿಯೋಜನೆ ಮೇರೆಗೆ ಹಾಗೂ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಆಪ್ತ ಸಹಾಯಕರುಗಳಿಗೆ ಅಧಿವೇಶನದ ಸಮಯದಲ್ಲಿ ಇರತರರಿಗೆ ನೀಡುವಂತೆ ಅಧಿವೇಶನ ಭತ್ಯೆ ನೀಡುವ ಕುರಿತು ಹಾಗೂ ಶಾಸಕರ ಆಪ್ತ ಸಹಾಯಕರುಗಳಿಗೆ ವೇತನ ನೀಡುವಿಕೆಯಲ್ಲಿ ತಾರತಮ್ಯವಾಗುತ್ತಿರುವ ಕುರಿತು.**

**ಶ್ರೀ ಪಟೇಲ್ ಶಿವರಾಂ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ವಿಧಾನಸಭಾ ಮತ್ತು ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಸರ್ಕಾರಿ ಇಲಾಖೆಗಳಿಂದ ನಿಯೋಜನೆ ಮೇರೆಗೆ ಹಾಗೂ ಗುತ್ತಿಗೆ ಆಧಾರದ ಮೇಲೂ ಕಾರ್ಯನಿರ್ವಹಿಸುತ್ತಿರುವ ಆಪ್ತ ಸಹಾಯಕರುಗಳಿಗೆ ಅಧಿವೇಶನ ಸಮಯದಲ್ಲಿ ಇತರರಿಗೆ ನೀಡುವಂತೆ ಅಧಿವೇಶನ ಭತ್ಯೆ ನೀಡುವ ಕುರಿತಾಗಿ ಹಲವಾರು ಬಾರಿ ಪ್ರಸ್ತಾಪಿಸಲಾಗಿದೆ. ಈ ಕುರಿತಾಗಿ ಮಾನ್ಯ ಡಿ.ವಿ. ಸದಾನಂದಗೌಡರು ವಿಧಾನ ಪರಿಷತ್ತಿನ ವಿರೋಧಪಕ್ಷದ ನಾಯಕರಾಗಿದ್ದ ಸಂದರ್ಭದಲ್ಲೂ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ದಿನಾಂಕ: 31.07.2013 ರಂದು ಪತ್ರ ಮುಖೇನ ಕೋರಿರುತಾರೆ ಅಲ್ಲದೇ ಮುಖ್ಯಮಂತ್ರಿಗಳು ಸ್ಪಂದಿಸಿದ್ದರು. ನಂತರದಲ್ಲಿ ದಿನಾಂಕ: 30.01.2014 ರಂದು ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಕೈಗೊಳ್ಳುವ ಸಂದರ್ಭದಲ್ಲಿಯೂ ಪ್ರಸ್ತಾಪಿಸಲ್ಪಟ್ಟಾಗ ಮಾನ್ಯ ಮುಖ್ಯಮಂತ್ರಿಗಳು ಈ ಕೂಡಲೇ ಯಾವುದೇ ಆದೇಶವಾಗದೇ, ತಟಸ್ಥವಾಗಿ ಇರುವುದಾಗಿ ತಿಳಿದು ಬಂದಿದೆ. ದಿನನಿತ್ಯವೂ ಕಛೇರಿ ವೇಳೆಯನ್ನೂ ಮೀರಿ ಹಾಗೂ ಅಧಿವೇಶನದ ಸಂದರ್ಭಗಳಲ್ಲಿ ಬೆಂಗಳೂರಿನಲ್ಲಿಯೂ ಹಾಗೂ ಬೆಳಗಾವಿಯ ಅಧಿವೇಶನದಲ್ಲಿಯೂ ಸಹ ಪೂರ್ಣವಾಗಿ ಮಾನ್ಯ ಸದಸ್ಯರುಗಳ ಸಹಾಯಕರಾಗಿ ಕಾರ್ಯ ನಿರ್ವ್ಹಿಸುವ ಆಪ್ತ ಸಹಾಯಕ ಸಿಬ್ಬಂದಿಗಳಿಗೆ ವೇತನ ಹೊತುಪಡಿಸಿ ಯಾವುದೇ ಭತ್ಯೆಗಳು ಇರುವುದಿಲ್ಲ. ಆದುದರಿಂದ ಕನಿಷ್ಟಪಕ್ಷ ಅಧಿವೇಶನ ನಡೆಯುವ ದಿನಾಂಕಗಳನ್ನು ಪರಿಗಣಿಸಿ ಅಧಿವೇಶನ ಭತ್ಯೆಯನ್ನು ನೀಡುವುದು ಅತ್ಯಂತ ಸಮಂಜಸ ಹಾಗೂ ನ್ಯಾಯೋಚಿತಬಾಗಿರುವುದನ್ನು ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧರಣೆ ಇಲಾಖೆಯಿಂದ ಸಚಿವರ ಕಛೇರಿಗಳಲ್ಲಿ ಪದವಿ ವಿದ್ಯಾರ್ಹತೆಯ ಗುತ್ತಿಗೆ ಸಿಬ್ಬಂದಿಗಳಿಗೂ ಮತ್ತು ಪದವಿ ವಿದ್ಯಾಹ್ತೆಯ ಶಾಸಕರ ಆಪ್ತ ಸಹಾಯಕರ ಮಾಸಿಕ ವೇತನದಲ್ಲೂ ಇರುವ ತಾತಮ್ಯವನ್ನು ಸರಿಪಡಿಸುವ ಕುರಿತಾಗಿ

ಕನ್ನಡ ಪ್ರಭ ದಿನ ಪತ್ರಿಕೆಯಲ್ಲಿ ದಿನಾಂಕ:30.07.2015ರಂದು ವರದಿಯಾಗಿರುವ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತಾ. ಈ ನಿಟ್ಟಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಕೂಡಲೇ ಆದೇಶಿಸಬೇಕೆಂಬುದನ್ನು ನಿಯಮ 330ಎ ವಿಶೇಷ ಪ್ರಸ್ತಾವನೆಯಡಿಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಇದರ ಬಗ್ಗೆ ಸರ್ಕಾರ ಕೂಡಲೇ ಗಮನವನ್ನು ಹರಿಸಬೇಕು ಏಕೆಂದರೆ, ಇದು ಪರಿಷತ್ತಿಗೆ ಏನೂ ಹೊರೆಯಾಗುವುದಲ್ಲ.

**ಸಭಾಪತಿಯವರು:–** ನೀವು ಹೇಳಿದ್ದೀರಿ ಸಾಕು. ಇದರ ಬಗ್ಗೆ ಹೇಳುತ್ತಾರೆ.

**ಶ್ರೀ ಎಸ್.ಆರ್.ಪಟೇಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಮೇಲ್ಮನೆ ಸದಸ್ಯರಾದ ಶ್ರೀ ಪಟೇಲ್ ಶಿವರಾಂ ರವರು, ಪ್ರೋ.ಕೆ.ವಿ ಕೃಷ್ಣಭಟ್ ರವರು, ಶ್ರೀ ಅರುಣ ಶಹಪುರ್ ರವರು, ಶ್ರೀ ಎಸ್.ವ್ಹಿ. ಸಂಕನೂರುರವರು, ಶ್ರೀ ಮಹಾಂತೇಶ ಕವಟಗಿಮಠ ಮಲ್ಲಿಕಾರ್ಜುನ ರವರು ಶಾಸಕರ ಎರಡನೆಯ ಆಪ್ತ ಸಹಾಯಕರ ಕುರಿತು ನಿಯಮ 330ಎ ವಿಶೇಷ ಪ್ರಸ್ತಾವನೆಯಲ್ಲಿ ಸೂಚನೆಯನ್ನು ನೀಡಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಅದಕ್ಕೆ ಸರಿಯಾದಂತಹ ಉತ್ತರವನ್ನು ನಂತರ ಒದಗಿಸಿಕೊಡುತ್ತೇನೆ.

**ಪ್ರೊ.ಪಿ.ವಿ.ಕೃಷ್ಣಭಟ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೆ, ಮಾನ್ಯ ಶಾಸಕರುಗಳ ಆಪ್ತ ಸಹಾಯಕರುಗಳಿಗೆ ವೇತನ ನೀಡುವಿಕೆಯಲ್ಲಿ ತಾತಮ್ಯವಾಗುತ್ತಿರುವ ಕುರಿತು ನಿನ್ನೆಯ ಕನ್ನಡ ಪ್ರಭ ದಿನ ಪತ್ರಿಕೆಯಲ್ಲಿ ವರದಿಯಾಗಿದೆ. ಮಾನ್ಯ ಸಚಿವರು ಹಾಗೂ ಸಚಿವ ಸಂಪುಣ ದರ್ಜೆ ಸ್ಥಾನಮಾನ ಹೊಂದಿರುವ ಕಛೇರಿಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಪ್ತ ಸಹಾಯಕರುಗಳಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಪದವಿ ವಿದ್ಯಾರ್ಹತೆಯ ಅನುಗುಣವಾಗಿ 1.600 ರೂಪಾಯಿಗಳನ್ನು ನೀಡುತ್ತಿದ್ದು, ಅದರೆ ಮಾನ್ಯ ಶಾಸಕರುಗಳ ಆಪ್ತ ಸಹಾಯಕರುಗಳಿಗೆ ಮಾತ್ರ 14,450 ರಪಾಯಿಗಳನ್ನು ನೀಡುತ್ತಿದ್ದಾರೆ. ಈ ಸಿಬ್ಬಂದಿಗಳು ಪದವಿ ವಿದ್ಯಾರ್ಹತೆಯ್ನು ಹೊಂದಿರುತ್ತಾರೆ. ಇವರಿಗೂ ಕೂಡ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಅಧಿವೇಶನದ ಸಂದರ್ಭದಲ್ಲಿ ವಿಧಾನ ಮಂಡಲದ ಪ್ರತಿಯೊಬ್ಬ ನೌಕರರಿಗೂ ಬೆಂಗಳೂರಿನಲ್ಲಿ ನಡೆಯುವ ಅಧಿವೇಶನ ಭತ್ಯೆ 750 ರೂಪಾಯಿಗಳನ್ನು (ಒಂದು ದಿನಕ್ಕೆ) ಹಾಗೂ ಬೆಳಗಾವಿಯಲ್ಲಿ ನಡೆಯುವ ಅಧಿವೇಶನದ ಸಂದರ್ಭದಲ್ಲಿ 1.000(ಒಂದು ದಿನಕ್ಕೆ) ನೀಡುತ್ತಿದ್ದಾರೆ. ಹಾಗೂ ಪೊಲೀಸ್ ಸಿಬ್ಬಂದಿಗೂ ಅನ್ವಯಿಸುವಂತೆ ಸುಮಾರು 2,500 ನೌಕರರಿಗೆ ಭತ್ಯೆ ನೀಡಲಾಗುತ್ತಿದ್ದು ಶಾಸಕರ ಸುಮರು 300 ಜನ ಆಪ್ತ ಸಯಾಯಕರುಗಳಿಗೆ ಮಾತ್ರ ಅದಿವೇಶನ ಭತ್ಯೆ ನೀಡಲಾಗುತ್ತಿಲ್ಲ. ಈ ಕುರಿತು ದಿನಪತ್ರಿಕೆಗಳಲ್ಲಿ ವರದಿಯಾಗಿದ್ದು ಶಾಸಕರುಗಳ ಆಪ್ತ ಸಹಾಯಕರುಗಳು ಕುಟುಂಬ ನಿರ್ವಹಣೆ ಕಷ್ಟವಾಗಿರುತ್ತದೆ ಎಂದು ಮನವಿ ಮಾಡಿರುತ್ತಾರೆ. ಈ ಕುರಿತು ಸರ್ಕಾರ ಕೂಡಲೇ ವೇತನ ನೀಡುವಿಕೆಯಲ್ಲಿ ಆಗಿರುವ ತಾರತಮ್ಯ ಸರಿಪಡಿಸಿ ಹಾಗೂ ಅಧಿವೇಶನ ಭತ್ಯೆ ನೀಡಲು ಸರ್ಕಾರ ಕ್ರಮ ವಹಿಸಬೆಕೆಂದು ವಿನಂತಿಸುತ್ತೇನೆ.

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಶಾಸಕರುಗಳ ಆಪ್ತ ಸಹಾಯಕರುಗಳಿಗೆ ವೇತನ ನೀಡುವಿಕೆಯಲ್ಲಿ ತಾರತಮ್ಯವಾಗುತ್ತಿರುವ ಕುರಿತು ನಿನ್ನೆಯ ಕನ್ನಡಪ್ರಭ ದಿನ ಪತ್ರಿಕೆಯಲ್ಲಿ ವರದಿಯಾಗಿದೆ. ಮಾನ್ಯ ಸಚಿವರು ಹಾಗೂ ಸಚಿವ ಸಂಪುಟ ದಜೆ ಸ್ಥಾನಮಾನ ಹೊಂದಿರುವ ಕಛೇರಿಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕಾಯ್ ನಿರ್ವಹಿಸುತ್ತಿರುವ ಆಪ್ತ ಸಹಾಯಕರುಗಳಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಪದವಿ ವಿದ್ಯಾಹ್ತೆಯ ಅನುಗುಣವಾಗಿ 16.000 ರೂಪಾಯಿಗಳನ್ನು ನೀಡುತ್ತಿದ್ದು, ಆದರೆ ಮಾನ್ಯ ಶಸಕರುಗಳ ಆಪ್ತ ಸಹಾಯಕರುಗಳಿಗೆ ಮಾತ್ರ 14.450 ರೂಪಾಯಿಗಳನ್ನು ನೀಡುತ್ತಿದ್ದಾರೆ. ಈ ಸಿಬ್ಬಂದಿಗಳು ಪದವಿ ಪದವಿ ವಿದ್ಯಾರ್ಹತೆಯ್ನು ಹೊಂದಿರುತ್ತಾರೆ. ಇವರಿಗೂ ಕೂಡ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದಲೇ ವೇತನ ಪಾವತಿ ಮಾಡಲಾಗುತ್ತಿದೆ. ಹೀಗಾಗಿ ಈ ತಾರತಮ್ಯವೇಕೆ? ವಿಧಾನ ಮಂಡಲದ ಅಧಿವೇಶನದ ಸಂದರ್ಭದಲ್ಲಿ ವಿಧಾನ ಮಂಡಲದ ಪ್ರತಿಯೊಬ್ಬ ನೌಕರರಿಗೂ ಬೆಂಗಳೂರಿನಲ್ಲಿ ನಡೆಯುವ ಅಧಿವೇಶನ ಭತ್ಯೆ 750 ರೂಪಾಯಿಗಳನ್ನು (ಒಂದು ದಿನಕ್ಕೆ) ಹಾಗೂ ಬೆಳಗಾವಿಯಲ್ಲಿ ನಡೆಯುವ

ಅಧಿವೇಶನದ ಸಂದರ್ಭದಲ್ಲಿ 1.000(ಒಂದು ದಿನಕ್ಕೆ) ನೀಡುತ್ತಿದ್ದಾರೆ. ಹಾಗೂ ಪೊಲೀಸ್ ಸಿಬ್ಬಂದಿಗೂ ಅನ್ವಯಿಸುವಂತೆ ಸುಮಾರು 2,500 ನೌಕರರಿಗೆ ಭತ್ಯೆ ನೀಡಲಾಗುತ್ತಿದ್ದು ಶಾಸಕರ ಸುಮರು 300 ಜನ ಆಪ್ತ ಸಯಾಯಕರುಗಳಿಗೆ ಮಾತ್ರ ಅದಿವೇಶನ ಭತ್ಯೆ ನೀಡಲಾಗುತ್ತಿಲ್ಲ. ಈ ಕುರಿತು ದಿನಪತ್ರಿಕೆಗಳಲ್ಲಿ ವರದಿಯಾಗಿದ್ದು ಶಾಸಕರುಗಳ ಆಪ್ತ ಸಹಾಯಕರುಗಳು ಕುಟುಂಬ ನಿರ್ವಹಣೆ ಕಷ್ಟವಾಗಿರುತ್ತದೆ ಎಂದು ತಮ್ಮ ಅಹವಾಲುಗಳನ್ನು ಸಲ್ಲಿರುತ್ತಾರೆ. ಈ ಕುರಿತು ಸರ್ಕಾರ ಕೂಡಲೇ ವೇತನ ನೀಡುವಿಕೆಯಲ್ಲಿ ಆಗಿರುವ ತಾರತಮ್ಯ ಸರಿಪಡಿಸಿ ಹಾಗೂ ಅಧಿವೇಶನ ಭತ್ಯೆ ನೀಡಲು ಸರ್ಕಾರ ಕ್ರಮ ವಹಿಸಬೇಕೆಂದು ವಿನಂತಿಸುತ್ತಿದ್ದೇನೆ.

**ಆ) ಮಲಪ್ರಭಾ-ಮಹದಾಯಿ ನದಿ ಜೋಡಣೆ ಯೋಜನೆ ಅನುಷ್ಠಾನಗೊಳಿಸಲು ಒತ್ತಾಯಿಸಿ ಗದಗ ಜಿಲ್ಲೆ ನರಗುಂದದಲ್ಲಿ ರೈತಾಸೇನಾ ಕರ್ನಾಟಕ ಹಾಗೂ ಇತರ ಸಂಘಟನೆಗಳು ಧರಣಿ ಸತ್ಯಗ್ರಹ ನಡೆಸುತ್ತಾ ಬಂದಿರುವ ಬಗ್ಗೆ.**

**ಶ್ರೀ ಎಸ್.ವ್ಹಿ. ಸಂಕನೂರ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, 14 ದಿನಗಳಿಂದ ಮಹದಾಯಿ ನದಿ ಜೋಡಣೆ ಯೋಜನೆ ಅನುಷ್ಠಾನಗೊಳಿಸಲು ಒತ್ತಾಯಿಸಿ ಗದಗ ಜಿಲ್ಲೆ ನರಗುಂದದಲ್ಲಿ ರೈತಾಸೇನಾ ಕರ್ನಾಟಕ ಹಾಗೂ ಇತರ ಸಂಘಟನೆಗಳು ಧರಣಿ ಸತ್ಯಗ್ರಹ ನಡೆಸುತ್ತಾ ಬಂದಿರುವರು. ಆದರೆ ಈ ಪ್ರತಿಭಟನೆ 14ನೇ ದಿನದಂದು ಹಿಂಸೆಗೆ ತಿರುವು ಪಡೆದುಕೊಂಡಿದ್ದು, ಪ್ರತಿಭಟನಾಕರರು ನಗರದ ಎರಡು ಸ್ಪೀಟ್ ಮಾರ್ಟ್‌ಗಳಿಗೆ ಕಲ್ಲುತೂರಿ ಮತ್ತು ಒಂದು ಬೇಕರಿಗೆ ನುಗ್ಗಿ ಗಾಜು ಒಡೆದು, ಕೈಗೆ ಸಿಕ್ಕ ವಸ್ತುಗಳನ್ನೆಲ್ಲಾ ಬೀದಿಗೆ ಎಸೆದು ನಾಶ ಪಡಿಸಿರುವರು. ಇದೂ ಅಲ್ಲದೆ ತಳ್ಳುವ ಗಾಡಿಯ ಮೇಲೆ ಕಲ್ಲು ಎಸೆದು ತರಕಾರಿ ಹಾಗೂ ಹಣ್ಣುಗಳನ್ನು ನೆಲಕ್ಕುರುಳಿಸಿರುವರು. ಈ ಎಲ್ಲಾ ಘಟನೆಗಳಿಂದ ನಗರದಲ್ಲಿ ಜನರು ಭಯಭೀತರಾಗಿರುವರು.

ಈ ಒಂದು ಹೋರಾಟಕ್ಕೆ 4 ಜಿಲ್ಲೆಗಳಾದ ಗದಗ, ಬಾಗಲಕೋಟೆ, ಬೆಳಗಾವಿ, ಧಾರವಾಡ ತಾಲ್ಲೂಕಿನ ರೈತರು ಪ್ರತಿ ದಿನ ಧರಣಿ ಸತ್ಯಾಗ್ರಹದಲ್ಲಿ ಬಂದು ಭಾಗವಹಿಸುತ್ತಿದ್ದಾರೆ. ಇತ್ತೀಚೆಗೆ ಧರಣಿ ಸತ್ಯಾಗ್ರಹ ಕೈಗೊಂಡ ಸಂಘಟನೆಗಳ ನಾಯಕರು ಸಮಸ್ಯೆ ಇತ್ಯರ್ಥಪಡಿಸಲು ಇದೇ ಜುಲೈ 30ರ ಒಳಗಾಗಿ ರೈತ ಮುಖಂಡ ನಿಯೋಗವನ್ನು ದೆಹಲಿಗೆ ಕರೆದುಕೊಮಡು ಹೋಗಲು ಗಡುವು ನೀಡಿದ್ದಾರೆ. ಮಲಪ್ರಭಾ-ಮಹಾದಾಯಿ ನದಿ ಜೋಡಣೆ ಯೋಜನೆ ಅನುಷ್ಠಾನಗೊಳಿಸುವಲ್ಲಿ ಇರುವ ಅಡೆ, ತಡೆಗಳನ್ನು ನಿವಾರಿಸಲು ರಾಜೀ ಸೂತ್ರ ಕಂಡು ಹಿಡಿಯುವಲ್ಲಿ ಮತುತ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮಧ್ಯಾಂತರ ಆದೇಶ ಹೊರಡಿಸಿ ಕನಿಷ್ಠ 14 ಟಿ.ಎಂ.ಸಿ ನೀರನ್ನಾದರೂ ನವಿಲು ತೀರ್ಥ ಅಣೆಕಟ್ಟಿಗೆ ಸೇರ್ಪಡೆಗೊಳಸಿ ಎಂದು ನ್ಯಾಯಾಧಿಕರಣದ ಮೇಲೆ ಒತ್ತಡ ತರಲು ಎಲ್ಲಾ ಸಂಸದರು ಶಾಸಕರು ಹಾಗೂ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನಿಸಬೇಕೆಂಬ ಬೇಡಿಕೆಯನ್ನು ಮಂಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಸಂಬಂಧಪಟ್ಟ ಸಂಸದರು ಶಾಸಕರ ಹಾಗೂ ರೈತ ಮುಖಂಡರ ನಿಯೋಗವನ್ನು ದೆಹಲಿಗೆ ಕರೆದುಕೊಂಡು ಹೋಗಿ ಪ್ರಧಾನ ಮಂತ್ರಿಗಳನ್ನು ಹಾಗೂ ಸಂಬಂಧಪಟ್ಟ ಸಚಿವರುಗಳನ್ನು ಬೇಟಿ ಮಾಡಿ ಚರ್ಚೆ ನಡಸಿ ಸಮಸ್ಯೆಗೆ ಶೀಘ್ರ ಪರಿಹಾರ ಕಂಡು ಹಿಡಿಯುವಲ್ಲಿ ದಿನಾಂಕವನ್ನು ಪ್ರಕಟ ಮಾಡಲು ಒತ್ತಾಯಿಸುವೇನು.

**ಇ) ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳು ಕಳೆದ ಎರಡು ವರ್ಷಗಳಿಂದ ಸತತವಗಿ ಬಾರಗಾಲಕ್ಕೆ ತುತ್ತಾಗಿರುವುದರಿಂದ ರೈತರು ಸಂಕಷ್ಟಕ್ಕೆ ಒಳಗಾಗಿರುವ ಬಗ್ಗೆ.**

**ಶ್ರೀ ಎಸ್.ಆರ್.ಪಟೀಲ್(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಈ ಜ್ವಲಂತ ಸಮಸ್ಯಯ ಬಗ್ಗೆ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ನಂತರ ಮಾನ್ಯ ಜಲ ಸಂಪನ್ಮೂಲ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

**ಶ್ರೀ ಅಲ್ಲಮಪ್ರಭು ಪಾಟೀಲ್(ವಿಧಾನಸಭಾ ಕ್ಷೇತ್ರ):- ಶ್ರೀ ಎಸ್.ಆರ್.ಪಟೀಲ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆ ಕಳೆದ ಎರಡು ವರ್ಷಗಳಿಂದ ಸತತವಾಗಿ ಬರಗಾಲಕ್ಕೆ ತುತ್ತಾಗಿರುತ್ತದೆ. ಎರಡೂ ಜಿಲ್ಲೆಗಳಲ್ಲಿ ಮಳೆಗಾಲ ಪ್ರಾರಂಭವಾಗಿದ್ದರು ಸಹ ವಾಡಿಕೆಯಂತೆ ಕಡಿಮೆ ಮಳೆಯಾಗಿರುವುದು ಕೃಷಿ ಇಲಾಖೆಯ ಮಾಹಿತಿಯಿಂದ ತಿಳಿದು ಬಂದಿದೆ. ಈಗಾಗಲೇ ಹತ್ತಕಿಂತ ಹೆಚ್ಚು ರೈತರು ಮೃತಪಟ್ಟಿದ್ದರೆ. ರೈತರು ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಕಳೆದ ವರ್ಷ ಬರಗಲ ಪ್ರದೇಶವೆಂದು ಘೋಷಣೆಯಾಗಿದ್ದರೂ ಸರ್ಕಾರ ರೈತರಿಗೆ ಪರಿಹಾಣ ಹಣ ನೀಡಿರುವುದಿಲ್ಲ. ಬೆಳೆ ವಿಮೆಯನ್ನು ಕೆಲವು ತಾಲ್ಲೂಕುಗಳಿಗೆ ಸಮರ್ಪಕವಾಗಿ ನೀಡದೆ ತಾರತಮ್ಯ ಮಾಡಲಾಗಿರುತ್ತದೆ. ಜೇವರ್ಗಿ ತಾಲ್ಲೂಕಿನ ನೆಲೋಗಿ ಮತ್ತು ಜೀಳವಾರ ಗ್ರಾಮದಲ್ಲಿ ಸುಮಾರು 1250 ರೈತರು ಜೀವ ವಿಮೆಯನ್ನು ಕಾಲಕಾಲಕ್ಕೆ ಪಾವತಿಸಿದ್ದರು, ಬರಗಾಲ ಗ್ರಾಮ ಎಂದು ಘಷಣೆಯಾದರು ಸಹಿತ ಸದರಿ ರೈತರಿಗೆ ಬೆಳೆ ಮಿಮೆ ನೀಡಿರುವುದಿಲ್ಲ. ರೈತರು ಆತ್ಮಹತ್ಯೆಗೆ ಮೊರೆ ಹೋಗುತ್ತಿದ್ದಾರೆ. ಭೀಮಾ, ಕೃಷ್ಣಾನದಿಗಳು ಬತ್ತಿ ಹೋಗಿದ್ದು, ದನಕರುಗಳಿಗೆ ಕುಡಿಯಲಿ ನೀರು ಇಲ್ಲದಂತಾಗಿರುತ್ತದೆ. ಅಲ್ಲದೆ ಜನ ಗುಳೆ ಹೊಗಲು ಪ್ರಾರಂಭಿಸಿರುತ್ತಾರೆ. ಆದ್ದರಿಂದ ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಯ ರೈತರುಗಳಿಗೆ ಧೈರ್ಯ ತುಂಬುವ ಸಲುವಾಗಿ ಕೂಡಲೆ ಬೆಳೆ ವಿಮೆಗಳನ್ನು ಮತುತ ಬರಗಾಲ ಕಾಮಗಾರಿಗಳನ್ನು ತೆಗೆದುಕೊಳ್ಳತಕ್ಕಂಥದ್ದು ಮತ್ತು ಬರಗಾಲ ಎಂದು ಘೋಷಣೆ ಮಾಡಿ ಅವರ ಸಾಲವನ್ನು ಮಾಫಿ ಮಾಡುವ ಬಗ್ಗೆ ಮಾನ್ಯ ಕೃಷಿ ರಾಜ್ಯ ಸಚಿವರ ಗಮನಕ್ಕೆ ನಾನು ತಮ್ಮ ಮೂಲಕ ತರಬಯಸುತೇನೆ.

**ಈ) ರಾಯಚೂರು ನಗರದ ಮುಖ್ಯ ರಸ್ತೆಯಲ್ಲಿರುವ ಪುರಾನತ ದೇವಾಲಯವನ್ನು ಅಭಿವೃದ್ದಿ ಹೆಸರಿನಲ್ಲಿ ಏಕಾಏಕಿ ಒಡೆದು ಹಾಕಿರುವುದರಿಂದ ಸ್ಥಳೀಯ ಜನರು ಸಾರ್ವಜನಿಕ ಸಂಘಸಂಸ್ಥೆಗಳು ಧಾಮಿಕ ಸಂಸ್ಥೆಗಳು ಮತ್ತು ಮಠಾಧಿಪತಿಗಳು ಹೋರಾಟ ನಡೆಸುತ್ತಿರುವ ಬಗ್ಗೆ.**

**ಶ್ರೀ ಎಸ್.ಆರ್.ಪಟೀಲ್(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಮೊನ್ನೆ ನಡೆದ ಸಂಪುಟದಲ್ಲಿ ಬಹಳಷ್ಟು ವಿಸ್ತಾರವಾಗಿ ಚರ್ಚೆ ನಡೆದಿದೆ. ಇದಕ್ಕೆ ಕಂದಾಯ ಸಚಿವರ ಮುಖಾಂತರ ನಂತರ ಅವರಿಗೆ ಉತ್ತರವನ್ನು ಕೊಡಿಸುತ್ತೇನೆ.

**ಶ್ರೀ ಭಾನುಪ್ರಕಾಶ್(ವಿದಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ರಾಯಚೂರು ನಗರದ ಮುಖ್ಯ ರಸ್ತೆಯಲ್ಲಿರುವ ಪುರಾತನ ದೇವಾಲಯವನ್ನು ಅಭಿವೃಧ್ಧಿ ಹೆಸರಿನಲ್ಲಿ ಏಕಾಏಕಿ ಒಡೆದು ಹಾಕಿರುತ್ತಾರೆ. ಈ ಬಗ್ಗೆ ಸ್ಥಳೀಯ ಜವರು, ಸಾರ್ವಜನಿಕ ಸಂಘಸಂಸ್ಥೆಗಳು, ಧಾರ್ಮಿಕ ಸಂಸ್ಥೆ ಮತ್ತು ಮಠಾಧಿಪತಿಗಳು ಹೋರಾಟ ನಡೆಸುತ್ತಿದ್ದಾರೆ. ದೇವಸ್ಥಾನವನ್ನು ಒಡೆದು ಹಾಕಿರುವ ರಸ್ತೆಯಲ್ಲಿಯೆ ಇರುವ ಗೋರಿಯನ್ನು ಒಡೆದು ಹಾಕದೆ ರಸ್ತೆಯ ಪಕ್ಕದ ಚರಂಡಿಯ ಮಾರ್ಗವನ್ನೇ ಬದಲಾಯಿಸಿ ಈ ರೀತಿ ತಾರತಮ್ಯ ನೀತಿ ಮಾಡುತ್ತಿರುವ ಜಿಲ್ಲಾಡಳಿತನ ನೀತಿಯನ್ನು ಸರ್ಕಾರ ಗಮನಿಸಬೇಕೆಂದು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಬಯಸುತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ರೋಡ್ ವೈಡನಿಂಗ್ ಬಗ್ಗೆ ನಮ್ಮ ಅಭ್ಯಂತರವಿಲ್ಲ. ಮಾನ್ಯ ಭಾನುಪ್ರಕಾಶ್ ರವರು ಹೇಳಿರುವ ಕಡೆ ಮೂರು ದೇವಸ್ಥಾನಗಳು ಇವೆ. ಆ ಮೂರು ದೇವಸ್ಥಾನಗಳನ್ನು ಒಡೆದು ಹಾಕಿದ್ದಾರೆ. ಆದರೆ ಅದರ ಪಕ್ಕದಲ್ಲಿ ಯಾವುದೋ ಗೋರಿ ಇದೆ. ಅದಕ್ಕೆ ಬೇರೆ ವ್ಯವಸ್ಥೆ ಮಡಿದ್ದಾರೆ. ಆದರೆ ಈ ಮೂರು ದೇವಸ್ಥಾಗಳಿಗೆ ಏನೊ ವ್ಯವಸ್ಥೇಯನ್ನು ಮಾಡಿಲ್ಲ. ರಾಯಚೂರು ಶಾಂತಿಯಿಂದ ಇರುವಂಥ ಊರು, ಅಲ್ಲಿ ಹಿಂದುಗಳಿಗೆ ತೊಂದರೆ ಕೊಡುತ್ತಿದ್ದಾರೆ, ಮುಸಲ್ಮಾನರಿಗೆ ಮಾತ್ರ ಪ್ಲೀಸ್ ಮಾಡುತ್ತಿದ್ದರೆನ್ನುವ ಅಭಿಪ್ರಯಾ ಅಲ್ಲಿ ಕೇಳಬರುತ್ತಿದೆ. ಅಲ್ಲಿ ಹೋರಾಟಗಳು ಪ್ರಾರಂಭವಾಗಿವೆ. ಆ

ಹೋರಾಟಗಳೂ ನಿಲ್ಲಬೇಕು. ಅದಕ್ಕಾಗಿ ನನ್ನ ಪ್ರಾರ್ಥನೆ ಏನೆಂದರೆ ಆ ಮೂರು ದೇವಸ್ಥಾನಗಳನ್ನು ಏಕೆ ಹೊಡೆದುಹಾಕಿದ್ದಾರೆ ಅದಕ್ಕೆ ವ್ಯವಸ್ಥೆ ಮಾಡುವ ದಿಕ್ಕಿನಲ್ಲಿ ಸರ್ಕಾರ ಗಮನಿಸಬೇಕು.

**ಶ್ರೀ ಟಿ.ಬಿ. ಜಯಚಂದ್ರ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಈಗಷ್ಟೇ ವಿಷಯವನ್ನು ಪ್ರಸ್ತಾಪ ಮಡಿದ್ದಾರೆ. ಅದರ ವಿಚಾರ ಏನೆಂಬುದನ್ನು ನಾನು ತಿಳಿದುಕೊಂಡು ಅದನ್ನು ಸೌಹಾರ್ದವಾಗಿ ಬರೆಹರಿಸತಕ್ಕಂಥ ಎಲ್ಲಾ ಪ್ರಯತ್ನವನ್ನು ನಾವು ಮಾಡುತ್ತೇವೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಸರ್ಕಾರ ಅದನ್ನು ತಿಳಿದುಕೊಳ್ಳಲಿ. ಆದರೆ ಎಲ್ಲರಿಗೂ ಒಂದೇ ಕಾಯಿದೆ ಇರಲಿ ಎಂದು ಅವರು ಹೇಳುತ್ತಿದ್ದಾರೆ. ಈ ರಾಜ್ಯದಲ್ಲಿ, ಈ ದೇಶದಲ್ಲಿ ಹುಟ್ಟಿದವರಿಗೆ ಎಲ್ಲರಿಗೂ ಒಂದೇ ಕಾನೂನು. ಒಬ್ಬರಿಗೊಂದು ಒಬ್ಬರಿಗೊಂದು ಕಾನೂನನ್ನು ಮಾಡಬೇಡಿ. ವೋಟಿನ ರಾಜಕಾರಣ ಮಡಬೇಡಿ ಎಂದು ಅವರು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಟೇಲ್(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, It is in the Preamable of the Constitution. India is a secular and sovereing country.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, ರಸ್ತೆ ಬೇಕಾದರೆ ಅಗಲ ಮಾಡಿ ಆದರೆ ಗೋರಿಯನ್ನು ಬಿಟ್ಟು ದೇವಸ್ಥಾನಗಳನ್ನು ಒಡೆಸುವುದು

**ಶ್ರೀ ಎಸ್.ಆರ್.ಪಟೇಲ್(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಕಾನೂನು ಸಚಿವರು ನ್ಯಾಯ ಸಮ್ಮತವಾಗಿ ಬಗೆಹರಿಸುತ್ತೇವೆಂದು ಹೇಳಿದ್ದಾರೆ.

**ಶ್ರೀ ಭಾನುಪ್ರಕಾಶ್(ವಿದಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನನ್ನ ಹತ್ತಿರ ಕೆಲವೊಂದು ಮಾಹಿತಿಗಳಿವೆ ಅವುಗಳನನು ಸಭಾನಾಯಕರಿಗೆ ಕಳುಹಿಸುತ್ತೇನೆ.

**ಸಭಾಪತಿಯವರು:–** ಕಳುಹಿಸಿಕೊಡಿ.

**ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಿಸಿದ ಉತ್ತಗಳ ಮಂಡನೆ**

**ಶ್ರೀ ಎಸ್.ಆರ್.ಪಟೇಲ್(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಬಳಿ ಇರುವ ಮಾಹಿತಿಗಳನ್ನು ಅವರು ಕಳುಹಿಸಿ ಕೊಡಲಿ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾಧಂಥ ಪ್ರೊ.ಪಿ.ವಿ. ಕೃಷ್ಣಭಟ್ ರವರು ದಿನಾಂಕ:17.07.2015ರಂದು, ಶ್ರೀ ಅಲ್ಲಮಪ್ರಭು ಪಾಟೀಲ್, ಶ್ರೀ ಮೃತ್ಯಂಜಯ ಜಿನಗಾ ಹಾಗೂ ಶ್ರೀಮತಿ ಗಾಯತ್ರಿ ಶಾಂತೇಗೌಡರು ದಿನಾಂಕ: 25.07.2015ರಂದು ಶ್ಯೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು, (ಮಾನ್ಯ ಸದಸ್ಯರಿಗೆ ಉತ್ತರವನ್ನು ಪ್ರತ್ಯೇಕವಾಗಿ ಒದಗಿಸಲಾಗಿದೆ)

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಬೆಳಗಾವಿ ಖಾನಾಪುರದ ಒಬ್ಬ ಹುಡುಗನ ಎರಡು ಕೈಗಳು ಕಟ್ಟ ಆಗಿರುವ ವಿಷಯವನ್ನು ನಾನು ಶೂನ್ಯವೇಳೆಯಲ್ಲಿ ಪ್ರಸ್ತಾಪಿದ್ದೇನೆ. ಇವೊತ್ತಿನವರೆಗೆ ಅದಕ್ಕೆ ಉತ್ತರವಿಲ್ಲ.

**ಸಭಾಪತಿಯವರು:–** ಮಾನ್ಯ ಸಚಿವರು ಈ ವಿಚಾರಕ್ಕೆ ಸಂಬಂಧಿಸಿದಂತೆ ಉತ್ತರ ಕೊಡುತೇನೆ, ಪರಿಹಾರವನ್ನು ಕೂಡ ಕೊಡುತ್ತೇನೆಂದು ಹೇಳಿದ್ದಾರೆ.

**ಶ್ರೀ ಎಸ್.ಆರ್.ಪಟೀಲ್(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಖಾಯಂ ಆಗಿ ಅಂಗವಿಕಲರಾದಂತಹ ಘಟನೆಯನ್ನು ಮಾನ್ಯ ಹೊರಟ್ಟಿಯವರು ಪ್ರಸ್ತಾಪಿಸಿದ್ದಾರೆ. ಅದಕ್ಕೆ ಉತ್ತರ ಕೊಡುವುದಷ್ಟೇ ಅಲ್ಲ ಅವರಿಗೆ ಪರಿಹಾರ ಕೊಡಿಸುವಂಥ ವ್ಯವಸ್ಥೆಯನ್ನು ಕೂಡ ಮಾಡಲು ಸಂಬಂಧಪಟ್ಟವರಿಗೆ ಸೂಚಿಸುತ್ತೇನೆಂದು ಹೇಳಿದ್ದೇನೆ.

## 5. ಶಾಸನ ರಚನೆ

## ವಿಧೇಯಕಗಳ ಪ್ರರ್ಯಾಲೋಚನೆ ಹಾಗೂ ಅಂಗೀಕಾರ

## ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ)ವಿಧೇಯಕ 2015 ಪರ್ಯಾಲೋಚನೆ ಪ್ರಸ್ತಾಪ

**ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2015ರ ಕರ್ನಾಟಕ ಲೋಕಾಯುಕ್ತ ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೆ, ಕಳೆದ ಒಂದು ತಿಂಗಳಿಂದ ಬೆಳಗಾವಿ ಮತುತ ಬೆಂಗಳೂರಿನಲ್ಲಿ ಅಧಿವೇಶನ ನಡೆಯುತ್ತಿರುವಾಗ ಉಭಯ ಸದನಗಳಲ್ಲಿ ವ್ಯಾಪಕವಾಗಿರತಕ್ಕಂಥ ಹಂತವಾಗಿರತಕ್ಕಂಥ ಚರ್ಚೆ ಲೋಕಾಯುಕ್ತದ ಬಗ್ಗೆ ಆಗುತ್ತಿದೆ. ಭ್ರಷ್ಟಾಚಾರವನ್ನು ನಿಗ್ರಹಿಸಬೇಕಾಗಿರುತಕ್ಕಂಥ ಸಂಸ್ಥೆ ಈ ಊಭಯ ಸದನಗಳು ಸೃಷ್ಟಿ ಮಾಡಿದಂಥದ್ದು. ಆದರೆ ಅ ಸಂಸ್ಥೆ ಈಗ ತಾನೆ ಭ್ರಷ್ಟಾಚಾರಕ್ಕೆ ಒಳಗಾಗಿರತಕ್ಕಂಥದ್ದು ಅದು ಜನರ ಕೋಪಕ್ಕೆ ಕೂಡ ಕಾರಣವಾಗಿದೆ. ಮಾಧ್ಯಮದಲ್ಲಿ ಚರ್ಚೆಯಗುತ್ತಿದೆ. ಸಾರ್ವಜನಿಕರು ಇದಕ್ಕೆ ಏನು ಪರಿಹಾರವನ್ನು ಕೊಡುತ್ತಾರೆಂದು ಎರಡೂ ಸದನಗಳ ಕಡೆ ನೋಡುವಂಥ ಸಂದರ್ಭ ಇದಾಗಿದೆ. ಇದರ ಬಗ್ಗೆ ಹಿಂದೆ ಏನು ಚರ್ಚೆಯಗಿದೆ ಎಂದು ಹೇಳತಕ್ಕಂಥ ಅವಶ್ಯಕತೆ ಈಗ ಇಲ್ಲ. ಆದರೆ ಇವೊತ್ತು ಜನಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸಬೇಕು, ಜನಗಳ ಸಾರ್ವಭೌಮತ್ವ ಉಳಿಸಬೇಕು, ನಾವೇ ಭ್ರಷ್ಟಾಚಾರಕ್ಕೊಳಗಾಗಿದ್ದಾರೆಂದು ಅನುಮಾನಗಳು ಬಂದಂಥ ಸಂದರ್ಭದಲ್ಲಿ ನಾವು ಕೈಕಟ್ಟಿ ಕುಳಿತುಕೊಳ್ಳುವಂಥದ್ದಾಗಬಾರದು.

**(12–00 ಗಂಟೆ)**

ನಮ್ಮ ಹಿಂದಿನ ಕಾನೂನಿನಲ್ಲಿ ಈ ಲೋಕಾಯುಕ್ತರನ್ನು ತೆಗೆಯುವಂತಹ ಸಂದರ್ಭದಲ್ಲಿ ಅದಕ್ಕೆ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಪೀಠದ ನ್ಯಾಯಾಧೀಶರನ್ನು ತೆಗೆಯಬೇಕಾದಂತಹ ವಿಧಿವಿಧಾನಗಳನ್ನು ಅನುಸರಿಸಬೇಕೆನ್ನುವಂತಹ ಉಲ್ಲೇಖ ಇದ್ದುದರಿಂದ, ಅದನ್ನು ಅವತ್ತಿನ ಸಂದರ್ಭದಲ್ಲಿ ಯಾರು ಕೂಡ ನಿರೀಕ್ಷೆ ಮಾಡಿರಲಿಲ್ಲ. ಆದರೆ ಅವತ್ತು ಕಾನೂನಾಯಿತು, ಆದರೆ ಅದನ್ನು ಜಾರಿಗೊಳಿಸುವುದು, ಅದನ್ನು ಅನ್ವಯಗೊಳಿಸುವಂಥದ್ದು ಕಷ್ಟ. ಆ ಕಾರಣಕ್ಕೋಸ್ಕರ ಈಗ ನಮ್ಮ ಎರಡೂ ಸದನಗಳಲ್ಲಿ ಈ ವಿಚಾರವಾಗಿ ಚರ್ಚೆಯಾಗಿರುವಂತಹ ಹಿನ್ನೆಲೆಯಲ್ಲಿ ನಾನು ಇದಕ್ಕೆ ಒಂದು ತಿದ್ದುಪಡಿಯನ್ನು ತರುವುದಾಗಿ ಏನು ತಿಳಿಸಿದ್ದೆ, ಆ ಪ್ರಕಾರ ಒಂದು ತಿದ್ದುಪಡಿ ವಿಧೇಯಕವನ್ನು ತಂದಿರುತ್ತೇನೆ. ತಿದ್ದುಪಡಿ ತಂದಿರುವಂಥದ್ದರ ಬಗ್ಗೆ ನೆನ್ನೆ ಕೆಳಮನೆಯಲ್ಲಿ ಸಹ ವ್ಯಾಪಕವಾಗಿ ಚರ್ಚೆಯಾಯಿತು.

ನಾವೀಗ ತಂದಿರುವಂತಹ ತಿದ್ದುಪಡಿ ಏನಿದೆ, ಇದು ಬಹಳ ಸೀಮಿತವಾದುದಾಗಿದ್ದು, ಲೋಕಾಯುಕ್ತರನ್ನು ನೇಮಕಾತಿ ಮಾಡಬೇಕಾದಾಗ ಯಾವ ರೀತಿ ಮಾಡಬೇಕು, ಮೊದಲಿದ್ದುದೇನು? ಸುಪ್ರೀಂ ಕೋರ್ಟ್‌ನ ನಿವೃತ್ತ ಜಡ್ಜ್‌ರವರು, ಹೈಕೋರ್ಟ್‌ನ ನಿವೃತ್ತ ಚೀಫ್ ಜಸ್ಟೀಸ್‌ರವರು ಮತ್ತು ಬಹಳಷ್ಟು ಸಂದರ್ಭಗಳಲ್ಲಿ ನಮ್ಮಲ್ಲಿ ಅನೇಕ ಹುದ್ದೆಗಳಿಗೆ ಮುಖ್ಯ ನ್ಯಾಯಾಧೀಶರುಗಳು ಬೇಕು, ಸುಪ್ರೀಂ ಕೋರ್ಟ್ ಜಡ್ಜಸ್ ಬೇಕು. ಇವತ್ತು ನಮಗೆ ಆ ರೀತಿ ನ್ಯಾಯಾಧೀಶರು ಸಿಗುತ್ತಿಲ್ಲ, ನಮ್ಮಲ್ಲಿ ಯಾರೂ ಇಲ್ಲ. ಇದ್ದರೂ ಸಹ ಬರುವುದಕ್ಕೆ ಒಪ್ಪುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ ಮಾನವ ಹಕ್ಕುಗಳ ಆಯೋಗಕ್ಕೆ ನೇಮಕ ಮಾಡುವ ಸಲುವಾಗಿ ಕಳೆದ ಎರಡು–ಮೂರು ವರ್ಷಗಳಿಂದ ಸತತವಾಗಿ ಪ್ರಯತ್ನಗಳನ್ನು ನಡೆಸುತ್ತಿದ್ದರೂ ಅದಕ್ಕೆ ಚೀಫ್ ಜಸ್ಟೀಸ್ ಆಗಿರುವಂಥವರು, ನಿವೃತ್ತ ಮುಖ್ಯ ನ್ಯಾಯಾಧೀಶರೇನು ಬೇಕಾಗುತ್ತದೆ, ಇವತ್ತಿನವರೆಗೂ ಸಹ ನಮ್ಮ ಕರ್ನಾಟಕದಲ್ಲಿ ಅಂತಹವರು ಸಿಗುತ್ತಿಲ್ಲ. ಹೀಗಾಗಿ ನಾವು ಒಂದಲ್ಲಾ ಒಂದು ರೀತಿಯಲ್ಲಿ ಬೇರೆ ರಾಜ್ಯದವರ ಮೇಲೆ ಅವಲಂಭಿಸುವಂತಹ ಅವಶ್ಯಕತೆ ಇದೆ.

ಈಗಿರುವಂತಹ ಲೋಕಾಯುಕ್ತರು ಸಹ ನಮ್ಮ ಕರ್ನಾಟಕ ಮೂಲದವರಲ್ಲ. ಹಾಗಾಗಿ ನಮ್ಮ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವಂತಹ ಜನರಿಗೆ ಕನಿಷ್ಟ 10 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿರುವಂಥವರಿಗೆ ಲೋಕಾಯುಕ್ತರನ್ನಾಗಿ ನೇಮಕ ಮಾಡುವುದಕ್ಕೆ ಅವಕಾಶ ಇರಬೇಕು ಎನ್ನುವಂತಹ ಒಂದು ಪ್ರಸ್ತಾವನೆ ಇದ್ದು, ಅದೇರೀತಿಯಲ್ಲಿ ಉಪ ಲೊಕಾಯುಕ್ತರ ನೇಮಕಾತಿಗೆ 5 ವರ್ಷಗಳ ಕಾಲ ಸೇವೆ ಸಲ್ಲಿಸಿದವರಿಗೆ ಮಾತ್ರ ಅದರಲ್ಲಿ ಸೇರಿಸುವುದಕ್ಕೆ ಅವಕಾಶ ಎನ್ನುವುದು ಇನ್ನೊಂದು ಪ್ರಸ್ತಾವನೆಯನ್ನು ಇಟ್ಟಿದ್ದೇವೆ. ಇದು ನೇಮಕಾತಿಗೆ ಸಂಬಂಧಿಸಿದಂತಹ ವಿಚಾರ, ಆದರೆ removal of Lokayuktha ಎನ್ನುವಂತಹ ವಿಚಾರ ಬಂದಾಗ ಅದರ ಬಗ್ಗೆ ನೆನ್ನೆ ದಿವಸ ಕೆಳಮನೆಯಲ್ಲಿ ಕೂಡ ಚರ್ಚೆಯಾಯಿತು. ಈ ಮೇಲ್ಮನೆ ಅಥವಾ ಕೆಳಮನೆಯಲ್ಲಿ ಅದನ್ನು ಮೂರನೇ ಒಂದು ಭಾಗದಷ್ಟು ಪ್ರಮಾಣದಲ್ಲಿ ಎಂದು Motion ನ್ನು ಮೇಲ್ಮನೆಯ ಸಭಾಪತಿಯವರು ಅಥವಾ ಕೆಳಮನೆಯ ಸಭಾಧ್ಯಕ್ಷರಿಗೆ ಕೊಟ್ಟಂತಹ ಸಂದರ್ಭದಲ್ಲಿ ಅದನ್ನು ನೇರವಾಗಿ ಹೈಕೋರ್ಟ್ ನ್ಯಾಯಪೀಠಕ್ಕೆ ಕಳುಹಿಸಿಕೊಡಬೇಕಾಗುತ್ತದೆ. ಹೈಕೋರ್ಟ್‌ನಿಂದ ಬಂದ ಮೇಲೆ, ಮೇಲ್ಮನೆಯಲ್ಲಿ ಅದು ಬಂದಾಗ ಎರಡೂ ಸದನಗಳಲ್ಲಿ ಕೂಡ ಮೂರನೇ ಎರಡು ಭಾಗದಷ್ಟು ಮೆಜಾರಿಟಿಯಲ್ಲಿ, ನಾವು ಮೊದಲಿದ್ದದ್ದು simple majority ಎಂದು ಇಟ್ಟಿದ್ದೆವು, ಇಲ್ಲಿ ಇಡೀ ಸದನದ ಸ್ವತ್ತಾಬೇಕು, ಸದನವೇ ಕಾರಣವಾಗಬೇಕು, ಸದನವೇ ಜವಾಬ್ದಾರಿ ಹೊರಬೇಕು ಎನ್ನುವಂತಹ ಒಂದು ಸೂಚನೆ ಏನು ವಿರೋಧ ಪಕ್ಷದ ಸದಸ್ಯರಿಂದ ಬಂತು, ಅದಕ್ಕೆ ಸರ್ಕಾರ ಕೂಡ ಒಪ್ಪಿ ಈಗ ಮೂರನೇ ಎರಡು ಭಾಗದ ಘೊರ ಎನ್ನುವಂತಹ ಒಂದು ತಿದ್ದುಪಡಿಯನ್ನು ಈ ಮಸೂದೆಯಲ್ಲಿ ಅಡಕಗೊಳಿಸಿ ಒಪ್ಪಿಗೆಗಾಗಿ ತಮ್ಮ ಮುಂದಿಟ್ಟಿದ್ದೇವೆ.

ಬಹಳ ಪ್ರಮುಖವಾದ ಮತ್ತೊಂದು ವಿಚಾರವೆಂದರೆ, ನಮ್ಮ ಲೋಕಾಯುಕ್ತದಲ್ಲಿನ ವಿದ್ಯಮಾನಗಳೇನೆಂಬುದು ನಮಗೆ ಇದುವರೆಗೆ ಗೊತ್ತಾಗುತ್ತಿರಲಿಲ್ಲ. ಎಲ್ಲ ಇಲಾಖೆಗಳಂತೆಯೇ ಲೋಕಾಯುಕ್ತ ಸಹ ಒಂದು ಇಲಾಖೆ. ಸರ್ಕಾರದಿಂದ ಅನುದಾನವನ್ನು ಪಡೆದುಕೊಳ್ಳುತ್ತಾರೆ, ಆದರೆ ಅದರ ಬಳಕೆಯ ಬಗ್ಗೆ ನಮಗೆ ಯಾವುದೇ ರೀತಿಯ ಮಾಹಿತಿ ಸಿಗುತ್ತಿರಲಿಲ್ಲ. ಯಾವತ್ತೋ ಒಂದು ದಿವಸ ವರದಿಗಳನ್ನು ಕೊಡುತ್ತಿದ್ದರು, ಹಾಗಾಗಿ ಅದರ ಬಗ್ಗೆ ಹೆಚ್ಚಿನ ಗಮನವನ್ನು ಹರಿಸುವುದಕ್ಕಾಗುತ್ತಿರಲಿಲ್ಲ. ಆ ಕಾರಣಕ್ಕೋಸ್ಕರ ಈಗ ನಾವೇನು ಮಾಡಿದ್ದೇವೆ ಎಂದರೆ, ಪ್ರತಿ ವರ್ಷ ಅಕ್ಟೋಬರ್ ತಿಂಗಳೊಳಗಾಗಿ ಅವರು ಒಂದು Performance Report ನ್ನು ಕೊಡಬೇಕು, ಅದನ್ನು ಉಭಯ ಸದನಗಳಲ್ಲಿ ಕೂಡ ಮಂಡಿಸಬೇಕು. ಅದರ ಮುಖಾಂತರ ಅಲ್ಲಿ ನಡೆಯುತ್ತಿರುವಂತಹ ವಿದ್ಯಮಾನಗಳ ಬಗ್ಗೆ ಚರ್ಚೆಯಾಗಬೇಕು, ಜನರಿಗೆ ಮಾಹಿತಿ ಇರಬೇಕು ಎನ್ನುವಂತಹ ದೃಷ್ಟಿಯಿಂದ ಈ ಒಂದು ತಿದ್ದುಪಡಿಯನ್ನು ತರಲಾಗಿದೆ. ಹೀಗಾಗಿ ಈ ವಿಧೇಯಕದಲ್ಲಿ 3 ಸೆಕ್ಷನ್‌ಗಳಿಗೆ ಮಾತ್ರ ನಾವು ತಿದ್ದುಪಡಿಯನ್ನೇನು ತಂದಿದ್ದೇವೆ, ಅದಕ್ಕೆ ಸದನ ಒಪ್ಪಿಗೆ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಏಕೆಂದರೆ ಇವತ್ತು ನಮ್ಮ ಸದನದ ಸಾರ್ವಭೌಮತ್ವವನ್ನು ಪ್ರಶ್ನೆ ಮಾಡುವಂತಹ ಸಂದರ್ಭದಲ್ಲಿ, ಅದರಲ್ಲಿ ಅಧಿಕಾರವನ್ನು ಚಲಾಯಿಸಬೇಕಾದಾಗ ಕಾನೂನಿನಲ್ಲಿ ಬದಲಾವಣೆ ಬೇಕಾಗುತ್ತದೆ. ಆ ರೀತಿ ಕಾನೂನಿನಲ್ಲಿ ಬದಲಾವಣೆ ತರುವುದಕ್ಕೋಸ್ಕರ ಇವತ್ತು ತಮ್ಮ ಸಹಕಾರವನ್ನು ಕೋರಿ ಈ

ವಿಧೇಯಕವನ್ನೇನು ಮಂಡಿಸಿದ್ದೇವೆ, ಇದಕ್ಕೆ ಈ ಸದನ ದಯಮಾಡಿ ಒಪ್ಪಿಗೆ ಕೊಡಬೇಕು, ಅದು ಸೀಮಿತವಾಗಿರುವಂತಹ ಒಂದು ತಿದ್ದುಪಡಿ ಎಂಬುದಾಗಿ ನಾನು ಮತ್ತೊಮ್ಮೆ ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:–** ವಿಧೇಯಕಗಳ ವಿಚಾರದಲ್ಲಿ ಮಾತನಾಡಬಯಸುವವರೆಲ್ಲರಿಗೂ ನಾನು ಅವಕಾಶ ಮಾಡಿಕೊಡುತ್ತೇನೆ. ಏಕೆಂದರೆ ಆ ರೀತಿ ಚರ್ಚೆ ಮಾಡುವುದಕ್ಕಾಗಿಯೇ ಈ ಸದನ ಇರುವುದು. ಚರ್ಚೆ ಮಾಡಬೇಕಾಗುತ್ತದೆ, ನಮ್ಮ ಅಭಿಪ್ರಾಯವನ್ನು ಹೇಳಬೇಕಾಗುತ್ತದೆ. ಅದಕ್ಕಾಗಿ ನಾನು ಎಲ್ಲರಿಗೂ ಅವಕಾಶವನ್ನು ಮಾಡಿಕೊಡುತ್ತೇನೆ. ಆದರೆ ಒಂದು ವಿಷಯವೆಂದರೆ, ಲೋಕಾಯುಕ್ತ ಕಛೇರಿಯಲ್ಲಿ ನಡೆದಿರುವುದರ ಬಗ್ಗೆ, ಲೋಕಾಯುಕ್ತರ ಬಗ್ಗೆ ಈ ಸದನದಲ್ಲಿ ಸಾಕಷ್ಟು ಚರ್ಚೆ ಆಗಿಹೋಗಿದೆ. ಈಗ ನಾವು ಚರ್ಚೆ ಮಾಡಬೇಕಾಗಿರುವುದು ಲೋಕಾಯುಕ್ತರಿಗೆ ಸಂಬಂಧಿಸಿದ ಹಳೆಯ ಮಸೂದೆ ಏನಿದೆ, ಅದರ ಮೇಲೆ ತಂದಿರುವಂತಹ ತಿದ್ದುಪಡಿಗಳ ಬಗ್ಗೆ ಮಾತ್ರ ದಯಮಾಡಿ ಮಾತನಾಡಬೇಕು.

ಲೋಕಾಯುಕ್ತ ಕಛೇರಿಯಲ್ಲಿ ಬೇರೆ ಏನು ನಡೆಯುತ್ತಿದೆ ಅದೆಲ್ಲಾ ಆಗಿಹೋಗಿಬಿಟ್ಟಿದೆ, ಹೇಳಿಬಿಟ್ಟಿದ್ದೇವೆ, ಸಾಕಷ್ಟು ಚರ್ಚೆಯಾಗಿದೆ. ಈಗ ಮತ್ತೆ ಆ ವಿಚಾರದ ಬಗ್ಗೆ ಪ್ರಸ್ತಾಪಿಸುವುದಕ್ಕೆ ಹೋದರೆ ಅದು ಚರವಿತ ಚರವಣ ಆಗುತ್ತದೆ. ಆ ರೀತಿ ಆದಾಗ ನಾನು ಮಧ್ಯದಲ್ಲಿ ಅದನ್ನು ನೆನಪು ಮಾಡಿದರೆ ದಯಮಾಡಿ ಯಾರೂ ಅದನ್ನು ತಪ್ಪಾಗಿ ತಿಳಿಯಬಾರದು. ವಿಧೇಯಕದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೋರುವ ಎಲ್ಲರಿಗೂ ನಾನು ಅವಕಾಶ ಕೊಡುವುದಕ್ಕೆ ತಯಾರಿದ್ದೇನೆ, ಖಂಡಿತವಾಗಿಯೂ ಅವಕಾಶ ಕೊಡುತ್ತೇನೆ. ಆದರೆ ಈ ವಿಧೇಯಕದ ಮೂಲಕ ಅವರು ತಂದಿರುವಂತಹ ತಿದ್ದುಪಡಿಗಳ ಬಗ್ಗೆ ಮಾತ್ರ ಮಾತನಾಡೋಣ. ಈಗ ಸೋಮಣ್ಣನವರು ಮಾತನಾಡುತ್ತಾರೆ.

**ಶ್ರೀ ವಿ.ಸೋಮಣ್ಣ(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಕಾಯಿದೆ ಬಗ್ಗೆ ಮಾತನಾಡುವಾಗ ಕಾಯಿದೆಯ ಸಾಧಕ–ಬಾಧಕಗಳು, ರೂಪು–ರೇಷೆಗಳನ್ನು ಮಾತ್ರ ಮಾತನಾಡುವುದಕ್ಕೆ ತಾವು ಏನು ಸೂಚನೆ ಕೊಟ್ಟಿದ್ದೀರಿ ಎನ್ನುವುದಕ್ಕಿಂತ ಹೆಚ್ಚಾಗಿ ನಾನೂ ಸಹ ಒಬ್ಬ ಹಿರಿಯ ಸದಸ್ಯನಾಗಿ ಅದನ್ನು ತಮ್ಮ ಜೊತೆಯಲ್ಲಿ ಹಂಚಿಕೊಳ್ಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಕಾಲಕಾಲಕ್ಕೆ ಕಾನೂನುಗಳು ಬದಲಾಗಬೇಕು, ಲೋಪದೋಷಗಳಿದ್ದರೆ ಇರುವಂತಹ ಶಾಸನಗಳನ್ನು ತಿದ್ದುಪಡಿ ಮಾಡಬೇಕು, ಅದರಿಂದ ಕಾಯಿದೆ ಮತ್ತಷ್ಟು ಬಲಿಷ್ಠವಾಗಬೇಕು. ನಾಗರಿಕರ ಅಗತ್ಯತೆಗಳು, ಬೇಕು–ಬೇಡಗಳನ್ನು ಪ್ರಾಯಶಃ ಅವತ್ತಿನ ಸಂದರ್ಭಕ್ಕೆ ತಕ್ಕಂತೆ ಕಲ್ಪಿಸಿಕೊಡುವಂತಹ ಹಕ್ಕು ಈ ಕಾಯಿದೆಗಳಿಗಿದೆ. ಅಂತಹ ಕಾಯಿದೆಗಳನ್ನು ರೂಪಿಸುವಂತಹ ಸಂದರ್ಭದಲ್ಲಿ ಏನಿವತ್ತು ಲೋಕಾಯುಕ್ತ ಕಾಯಿದೆಗೆ ಸನ್ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು 29 ವರ್ಷಗಳ ನಂತರ ದಿಢೀರನೆ ತಿದ್ದುಪಡಿ ವಿಧೇಯಕವೊಂದನ್ನು ತಂದಿದ್ದಾರೆ, ನಾವು ಈ ಸದನದಲ್ಲಿ ಏನೇನು ಮಾತನಾಡಿದ್ದೇವೆ, ಅದು ವಿರೋಧ ಪಕ್ಷದವರು ಮಾತನಾಡಿರುವುದಿರಬಹುದು ಅಥವಾ ಆಡಳಿತ ಪಕ್ಷದಲ್ಲಿರುವವರು ಮಾತನಾಡಿರುವುದಿರಬಹುದು, ಆ ಯಾವುದೊಂದನ್ನೂ ಸಹ ಉಲ್ಲೇಖಿಸದೆ ಇದರಲ್ಲಿರುವಂತಹ ಕೆಲವು ನ್ಯೂನತೆಗಳನ್ನು, ಇದರಲ್ಲಿರುವಂತಹ ಸರಿ–ತಪ್ಪುಗಳನ್ನು ನಾವು ತಿಳಿಸಲೇಬೇಕಾಗುತ್ತದೆ. ದಯಮಾಡಿ ತಾವು ಅದಕ್ಕೆ ಅನುವು ಮಾಡಿಕೊಡಬೇಕೆಂದು ಕೂಡ ನಾನು ಈ ಸಂದರ್ಭದಲ್ಲಿ ವಿನಂತಿಸುತ್ತೇನೆ.

ಮಾನ್ಯ ಸಚಿವರಾದ ಟಿ.ಬಿ.ಜಯಚಂದ್ರ ಅವರು ಎರಡು ಪ್ರಮುಖವಾದ ಇಲಾಖೆಗಳಾದಂತಹ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವುಗಳ ಜೊತೆಗೆ ಅವರು ಪಶುಸಂಗೋಪನೆ ಇಲಾಖೆಯನ್ನು ಸಹ ನಿರ್ವಹಿಸುತ್ತಿದ್ದಾರೆ. ಹೀಗಾಗಿ ಸಂಸದೀಯ ವ್ಯವಹಾರಗಳ ಇಲಾಖೆಯ ಕಾನೂನುಗಳು ಮತ್ತು ಪಶುಸಂಗೋಪನೆ ಇಲಾಖೆಯ ಕಾನೂನುಗಳು ಒಂದೊಂದು ರೀತಿ ಇರುವುದರಿಂದ ಇವೆರಡನ್ನೂ ಮಾಡಿ ಈ ವಿಧೇಯಕದಲ್ಲಿ ಒಂದು ರೀತಿ ಕಲಸುಮೇಲೋಗರವಾಗುವಂತಹ ಒಂದು ಸಂಶಯವನ್ನು ಈ ಕಾಯಿದೆಯಲ್ಲಿ ತಂದಿದ್ದಾರೆ ಎನ್ನುವುದು ನನ್ನ ಅನುಭವದ ಮಾತು. ನಾನೇನೂ ವಕೀಲನಲ್ಲ, ನಾನು ವಕೀಲಿ ವೃತ್ತಿಯನ್ನು ನಿರ್ವಹಿಸುತ್ತಿರುವವನೂ ಅಲ್ಲ, ಆದರೆ ಒಂದಂತೂ ಸತ್ಯ, ಕೆಲವು common sense ನಿಂದ ನಾವು ಇವತ್ತು ವಿವೇಚನೆ ಮಾಡಬೇಕಾಗುತ್ತದೆ. ಆ ರೀತಿ ವಿವೇಚನೆ ಮಾಡುವಾಗ

ಯಾವುದೇ ಒಂದು ಸರ್ಕಾರವನ್ನು ಮುಜುಗರಕ್ಕೀಡು ಮಾಡುವುದಕ್ಕಾಗಲಿ, ಯಾವುದೋ ಒಬ್ಬ ವ್ಯಕ್ತಿಯನ್ನು target ಮಾಡುವುದಕ್ಕಾಗಲಿ, ಇದರ ಸಾಧಕ–ಬಾಧಕಗಳನ್ನು ಯಾವ ರೀತಿ ನಾವು ಯೋಚನೆ ಮಾಡಬೇಕು ಎನ್ನುವಂತಹ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ದಿ॥ರಾಮಕೃಷ್ಣ ಹೆಗಡೆಯವರನ್ನು ನಾವು ಇವತ್ತು ನೆನಪು ಮಾಡಿಕೊಳ್ಳಬೇಕಾಗುತ್ತದೆ.

ಅವತ್ತಿನ ಕಾಲದಲ್ಲಿ ಧರ್ಮ ಇತ್ತು, ಇವತ್ತು ಎಲ್ಲವೂ ಸಹ ನಶಿಸಿ ಹೋಗಿದೆ ಎಂದರೆ ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಆದರೆ ಆ ಧರ್ಮದ ವ್ಯವಸ್ಥೆಯಲ್ಲಿ ಒಂದು ಕಟ್ಟುಪಾಡುಗಳನ್ನು ತಂದು, ಪ್ರತಿಯೊಂದು ಕಾಯಿದೆಯನ್ನೂ ಮಾಡಿರುವಂಥದ್ದನ್ನು ನಾವು ನೋಡಿದ್ದೇವೆ. ಈ ತಿದ್ದುಪಡಿ ವಿಧೇಯಕದ ಮುಖಾಂತರ 3(2)(ಎ)(ಬಿ)ಗೆ ತಿದ್ದುಪಡಿಗಳನ್ನು ಸರ್ಕಾರ ತರುವಾಗ ಎಷ್ಟರಮಟ್ಟಿಗೆ ಇದರ ಸ್ವರೂಪವನ್ನು ಬದಲಾವಣೆ ಮಾಡಬೇಕು ಎನ್ನುವುದನ್ನು ಎಲ್ಲಿಯೂ ಸಹ ಸರ್ಕಾರ ಸ್ಪಷ್ಟವಾಗಿ ತಿಳಿಸಿರುವುದಿಲ್ಲ. 3ನೇ ಪ್ರಕರಣ, (1)(2)ನೇ ಉಪಪ್ರಕರಣ, (੨)(ಎ) ಖಂಡದಲ್ಲಿ, "ಅಥವಾ ಹತ್ತು ವರ್ಷಗಳಿಗೆ ಕಡಿಮೆ ಇಲ್ಲದಂತೆ ಉಚ್ಛ ನ್ಯಾಯಾಲಯದ ನ್ಯಾಯಾಧೀಶನಾಗಿ ಪದಧಾರಣೆ ಮಾಡಿದ್ದಂಥ' ಎಂಬ ಪದಗಳನ್ನು ಸೇರಿಸತಕ್ಕದ್ದು ಎಂದು ಏನು ನಮೂದಿಸಲಾಗಿದೆ, ಅದನ್ನು ತಾವು ಸ್ವಲ್ಪ ಗಮನಿಸಬೇಕಾಗುತ್ತದೆ. ಇದನ್ನು ಮಾಡುವಾಗ ಸರ್ಕಾರ ಏನು ಮಾಡುತ್ತದೆ ಎಂದರೆ, "ಇದು ರಾಜ್ಯ ಸರ್ಕಾರವು ಅಧಿಸೂಚನೆ ಮುಖಾಂತರ ಗೊತ್ತುಪಡಿಸಬಹುದಾದಂತಹ ದಿನಾಂಕದಿಂದ ಜಾರಿಗೆ ಬರತಕ್ಕದ್ದು" ಎಂದು ತಿಳಿಸಿದ್ದೀರಿ. ಈ ಹತ್ತು ವರ್ಷಗಳು ಎನ್ನುವುದನ್ನು ಇವತ್ತಿನ ಸಂದರ್ಭದಲ್ಲಿ ಹತ್ತು ವರ್ಷಗಳು ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿರುವಂತಹವರು ಇವತ್ತು ಹೈಕೋರ್ಟ್‌ನ ನ್ಯಾಯಾಧೀಶರು ಸಹ ಆಗಿ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಾಧೀಶರಾಗಿರುವಂಥವರು ಎಷ್ಟು ಜನರಿದ್ದಾರೆ ಎಂಬುದನ್ನು ತಾವು ಎಲ್ಲಿಯಾದರೂ ಯೋಚನೆ ಮಾಡಿದ್ದೀರಾ? ಇದನ್ನು ದಯಮಾಡಿ ಸಚಿವರು ಸದನಕ್ಕೆ ತಿಳಿಸಬೇಕಾಗುತ್ತದೆ.

ಆದುದರಿಂದ ನಾನು ತಮಗೆ ವಿನಂತಿ ಮಾಡುವುದೇನೆಂದರೆ, ತಾವು ವಿಧೇಯಕದಲ್ಲಿ (ii) (ಬಿ) ಖಂಡದಲ್ಲಿ, "ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ" ಎಂಬ ಪದಗಳ ತರುವಾಯ "ಐದು ವರ್ಷಗಳಿಗೆ ಕಡಿಮೆ ಇಲ್ಲದಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು. ಎಂದು ಹೇಳಿದ್ದೀರಿ. ಮಾನ್ಯ ಸಭಾಪತಿಯವರೇ, ನನ್ನ ಸಣ್ಣ ಅನುಭವದಲ್ಲಿ ಬಹುತೇಕ ಇತ್ತೀಚಿನ ದಿನಗಳಲ್ಲಿ ಕೋರ್ಟಿನ ಜಡ್ಜ್ ಆಗುವುದಕ್ಕೆ ಯಾರೂ ಸಹ ಬಯಸುತ್ತಿಲ್ಲ. ಏಕೆಂದರೆ, ಈ ಹುದ್ದೆ ನಮಗೆ ಬೇಡಪ್ಪ, ಇದರಲ್ಲಿ ಎಲ್ಲೋ ಒಂದು ಕಡೆ ಒಂದು ರೀತಿಯ ವ್ಯವಸ್ಥೆ ಇರುತ್ತದೆ, ಅದರಲ್ಲಿ ನಾವು ಕಟ್ಟುಪಾಡಿನಲ್ಲಿ ಇರುವುದಕ್ಕೆ ಆಗುವುದಿಲ್ಲ ಎನ್ನುವುದು ಒಂದು ಕಡೆಯಾದರೆ, ಮತ್ತೊಂದು ಕಡೆ ಯಾವುದೇ ಜಡ್ಜ್‌ಗಳು ಹೈಕೋರ್ಟಿಗಾಗಲಿ, ಸುಪ್ರೀಂ ಕೋರ್ಟಿಗಾಗಲಿ ಜಡ್ಜ್ ಆಗಿ ಹೋಗುವಂಥವರು ವಕೀಲರು ನೇರವಾಗಿ ಸುಪ್ರೀಂ ಕೋರ್ಟಿನ ಜಡ್ಜ್ ಆಗಬಹುದು. ಹೈ ಕೋರ್ಟಿಗೂ ಕೂಡ ವಕೀಲರು ನೇರವಾಗಿ ಜಡ್ಜ್ ಆಗಬಹುದು. ಆದರೆ ಹತ್ತು ವರ್ಷಗಳನ್ನು ಮಾಡಿರುವಂತಹ ನಿಮ್ಮ ಭಾವನೆ ಏನಿದೆ, ಇದರಲ್ಲಿ ಇರುವಂತಹ ಜನರು ಯಾರು? ಯಾರು ಇವತ್ತು " ಹಾಳೂರಿಗೆ ಉಳಿದವನೇ ಗೌಡ" ಎನ್ನುವಂತೆ ಎಲ್ಲೋ ಒಂದು ಕಡೆ ಕೆಲವರು ಇಂತಹ ಹುದ್ದೆಗಳಿಗೆ ಬರುವಂತಹ ವ್ಯವಸ್ಥೆಗಳಿಲ್ಲ. ಆ ವ್ಯವಸ್ಥೆಯನ್ನು ಸರಿಪಡಿಸುವಂಥದ್ದಕ್ಕೆ ಸರ್ಕಾರದ ಚಿಂತನೆಗಳೇನು? ನಿಮ್ಮ ಸಾಧಕ ಬಾಧಕಗಳೇನು? ಒಬ್ಬ ನ್ಯಾಯಾಧೀಶನಾಗಬೇಕಾದರೆ ಆತನ ಅನುಭವ ಎಷ್ಟು ಮುಖ್ಯವೋ, ಆತನ Confidential Report ಕೂಡ ಅಷ್ಟೇ ಮುಖ್ಯ. ಆತನ ನಡವಳಿಕೆಗಳೂ ಕೂಡ ಅಷ್ಟೇ ಮುಖ್ಯವಾಗುತ್ತದೆ. ಅದನ್ನು ನೀವು ಯಾವ ರೀತಿ ಗಣನೆಗೆ ತೆಗೆದುಕೊಳ್ಳುತ್ತೀರಿ? ಇದಕ್ಕೆ ಯಾವ ರೀತಿ ತೆಗೆದುಕೊಳ್ಳಬೇಕು ಎಂಬುದಕ್ಕೆ ಒಂದು ಮಾನದಂಡವಿದೆ. ಇವತ್ತು ಒಂದು recruitment ಮಾಡುವಾಗಲೂ ಸಹ ಒಂದು ಮಾನದಂಡವಿದೆ. ಆ ಮಾನದಂಡವೇನೆಂದರೆ, ಹೈಕೋರ್ಟಿನ ನ್ಯಾಯಾಧೀಶರಾದವರು ಸುಪ್ರೀಂ ಕೋರ್ಟಿಗೆ ನಾಲ್ಕೈದು ವರ್ಷ ನ್ಯಾಯಾಧೀಶರಾಗಿ ಸೇವೆ ಸಲ್ಲಿಸುವುದಕ್ಕೆ ಕೆಲವು ಸಂದರ್ಭದಲ್ಲಿ ಹೋಗುತ್ತಾರೆ. ಆದರೆ ನೇರವಾಗಿ ವಕೀಲರಾಗಿ ನ್ಯಾಯಾಧೀಶರಾಗುವುದಕ್ಕೆ ಯಾವುದೇ recruitment ಗಳಿಲ್ಲ. ಆದರೆ ಅವರ ಅನುಭವ, ಅವರು ಮಾಡುವಂತಹ ಕೆಲಸ ಕಾರ್ಯಗಳ ಹಿನ್ನೆಲೆಯಲ್ಲಿ ಅವರನ್ನು up-gradation

ಮಾಡುವಂಥದ್ದರಲ್ಲಿ ನಿಮ್ಮ conclusion ಏನು? ಯಾವ ರೀತಿಯಾಗಿ ಇವರನ್ನು ನೇಮಕ ಮಾಡುತ್ತೀರ ಎನ್ನುವುದು ನಮಗೆ ಬೇಕಾಗುತ್ತದೆ.

ಇನ್ನೊಂದು ವಿಷಯವೇನೆಂದರೆ, ಒಂದು ವಿಚಾರವನ್ನು ಈ ಸದನದ ಗಮನಕ್ಕೆ ತರಬೇಕೆ ಅಥವಾ ಬೇಡವೆ ಎಂಬುದು ತಿಳಿಯುತ್ತಿಲ್ಲ. ಮಾನ್ಯ ಉಗ್ರಪ್ಪನವರು ಸಹ ವಕೀಲರಿದ್ದಾರೆ. ಈ ಹಿಂದೆ ನ್ಯಾಯಾಧೀಶರ ಬಗ್ಗೆ ಒಂದು ರೆಸಾರ್ಟ್ ಕೇಸಿನಲ್ಲಿ ದುರ್ನಢತೆ ಎನ್ನುವುದು ಬಂತು. ಪ್ರಾಯಶಃ ಏನೆಲ್ಲಾ ಆಯಿತು. ಆದರೆ ತೀರ್ಮಾನವಾದ ಮೇಲೆ ಏನು ಫಲಿತಾಂಶ ಬಂತು ಮಾನ್ಯ ಜಯಚಂದ್ರ ಸಾಹೇಬರೆ? ಶಾಸಕಾಂಗದಲ್ಲಿರುವಂತಹ ಅಧಿಕಾರವನ್ನು ನೀವು ತೆಗೆದುಕೊಂಡು ಹೋಗಿ ನ್ಯಾಯಾಂಗಕ್ಕೆ ಕೊಟ್ಟು, ಹಳ್ಳಿಯಲ್ಲಿ ಒಂದು ಗಾದೆ ಮಾತಿದೆ, ಏನೆಂದರೆ, "ತಾಳ ತೆಗೆಯುವುದಕ್ಕೆ ಹೋಗಿ ಅದೇನೋ ತಗಲಾಕಿದ" ಎನ್ನುವಂತಹ ವ್ಯವಸ್ಥೆಯಾದರೆ, ಇದರ ಬಗ್ಗೆ ನೀವು ಚಿಂತನೆಯನ್ನು ಮಾಡಬೇಕಾಗುತ್ತದೆ. ಈ ಚಿಂತನೆಯನ್ನು ಮಾಡುವಾಗ ಪ್ರಾಯಶಃ ತಾವು ಯಾವುದನ್ನು ಮಾಡಬೇಕು, ಮಾಡಬಾರದು ಎನ್ನುವುದರ ಬಗ್ಗೆ ಎಲ್ಲಿಯೂ ತಮ್ಮ ಸ್ಪಷ್ಟತೆ ಇಲ್ಲ. ಸ್ಪಷ್ಟತೆ ಇರಬೇಕೆಂದರೆ, ತಾವು ಕೊಟ್ಟಿರುವಂತಹ ಪದಗಳಲ್ಲಿ ಒಂದು ಕಡೆ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ದುರ್ವರ್ತನೆ ಅಥವಾ ಅಸಾಮರ್ಥ್ಯತೆ ಎಂದು ಹೇಳುತ್ತೀರಿ. ಈ ದುರ್ವರ್ತನೆ ಎಂದರೇನು? ಅಸಾಮರ್ಥ್ಯತೆ ಎಂದರೇನು? ದಯವಿಟ್ಟು ಸದನದಕ್ಕೆ ತಿಳಿಸಬೇಕು. ನನಗಿರುವ ಸಾಮಾನ್ಯ ಜ್ಞಾನದಲ್ಲಿ ದುರ್ವರ್ತನೆ ಎಂದರೆ ನಮ್ಮ ನಡವಳಿಕೆಯಲ್ಲಿ ಏನಾದರು ಸ್ವಲ್ಪ ಹೆಚ್ಚು ಕಡಿಮೆ ಆದರೆ, ಉದಾಹರಣೆಗೆ ಲೋಕಾಯುಕ್ತ ಕಛೇರಿಯಲ್ಲಿ ಕೆಲಸ ಮಾಡುವಂತಹ ಒಬ್ಬ ಹೆಣ್ಣುಮಗಳು ಹೋಗಿ ಅವರು ನನ್ನ ಕೈಹಿಡಿದರು ಎಂದು ಹೇಳಿ ದುರ್ನಡತೆ ಎಂದು ಕೊಟ್ಟರೆ ಒಂದು ಕೇಸ್ ರಿಜಿಸ್ಟರ್ ಆಗುತ್ತದೆ. ಇಂಥ ಪದಗಳನ್ನು ತಾವು ಸೇರಿಸುವಾಗ ಇದರ ಗಾಂಭೀರ್ಯತೆ ಬಗ್ಗೆ ತಾವೇನಾದರು ಚಿಂತನೆ ಮಾಡಿದ್ದೀರಾ? ಇದರಿಂದ ಮುಂದೆ ಆಗುವಂತಹ ಕೆಲವು ದುಷ್ಪರಿಣಾಮಗಳ ಬಗ್ಗೆ ತಮಗೆ ಏನಾದರು ಮಾಹಿತಿ ಇದೆಯೇ? ಆದುದರಿಂದ ನಾನು ದುರ್ವರ್ತನೆ ಅಥವಾ ಅಸಾಮರ್ಥ್ಯತೆಗೆ ಪದಚ್ಯುತಿಗೊಳಿಸುವಂತಹ ಒಂದು ವ್ಯವಸ್ಥೆ ಏನಿದೆ, ಇದಕ್ಕೆ ತಾವೇನು ಮಾಡಿದ್ದೀರಿ ಎಂದರೆ, ಇಲ್ಲಿ ಮೊದಲು 1/3rd ಇತ್ತು, ಅದನ್ನು 2/3rd ಮಾಡಿದಿರಿ. ಶಾಸಕಾಂಗದ ಒಂದು ಹಕ್ಕನ್ನು ಪ್ರಾಯಶಃ ಯಾವ ರೀತಿ ಮಾಡಬೇಕು ಎಂಬುದರ ಬಗ್ಗೆ ನಮಗೆ ಅದರ ಬಗ್ಗೆ ಚಿಂತನೆ ಇಲ್ಲ. ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ ತಾವು ಇದನ್ನು ಮಾಡಿ ಏನು ಮಾಡುತ್ತಿದ್ದೀರಿ ಎಂದರೆ, ಮತ್ತೆ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರನ್ನು ಕರೆದು ಕೊಡುತ್ತೀರಿ. ಆ ಮುಖ್ಯ ನ್ಯಾಯಾಧೀಶರು ಅವರೇ ಎನ್ಕ್ವಯರಿ ಮಾಡಿದರೂ ಆಗಬಹುದು, ಅಥವಾ ಅವರೇನು ಮಾಡುತ್ತಾರೆ ಎಂದರೆ ಇನ್ನೊಬ್ಬ subordinate ಆಥವಾ ಒಬ್ಬ ಜೂನಿಯರ್‌ಗೆ ಕೊಡುತ್ತಾರೆ. ಆ ಜೂನಿಯರ್ ಏನು ಇರುತ್ತಾರೆ ಅವರು ಲೋಕಾಯುಕ್ತರು ಯಾರು ಇರುತ್ತಾರೆ ಅವರಿಗಿಂತ ಜೂನಿಯರ್ ಆಗಿರುತ್ತಾರೆ. ಇದರ ಬಗ್ಗೆ ತಮ್ಮ ಕಟ್ಟುಪಾಡೇನು? ತಮ್ಮ ಒಂದು ತೀರ್ಮಾನಗಳೇನು ಇದಕ್ಕೆ ನಾವು ಅವರಿಗೆ ಏನಾದರು instruction ಮಾಡುವುದಕ್ಕೆ, ಅವರಿಗೆ insist ಮಾಡುವುದಕ್ಕೆ, ಕೋರ್ಟ್‌ಗೆ ನಾವು ಇದೇ ರೀತಿ ಮಾಡಿ ಎಂದು ಷರತ್ತು ವಿಧಿಸುವುದಕ್ಕೆ ಈ ಕಾಯಿದೆಯಲ್ಲಿ ಎಲ್ಲಿಯೂ ಕೂಡ ನನ್ನ ಅನುಭವದಲ್ಲಿ ಗೊತ್ತಾಗುತ್ತಿಲ್ಲ. ಅದರ ಬಗ್ಗೆ ತಾವು ತಿಳಿಸಬೇಕು. ಇದರ ಜೊತೆಗೆ ಪ್ರಾಯಶಃ ನಾವು ಇದನ್ನು 2/3rd majority ಮಾಡಿ, ಎರಡೂ ಸದನಗಳ ಸಭಾಪತಿಯವರು ಹಾಗು ಸಭಾಧ್ಯಕ್ಷರು ತೀರ್ಮಾನ ಮಾಡಿ, ಹೈ ಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳನ್ನು ಕರೆಸಿದ ಮೇಲೆ ಎಲ್ಲಾ ಪ್ರಕ್ರಿಯೆಯನ್ನು 90 ದಿವಸದಲ್ಲಿ ಮುಗಿಸಬೇಕು ಎನ್ನುವಂತಹ ಮಾತನ್ನೂ ಕೂಡ ಹೇಳಿದ್ದೀರಿ. 90 ದಿವಸದಲ್ಲಿ ಮುಗಿಸದೇ ಹೋದರೆ ಆ ಕಾಯಿದೆಯ ಗಾಂಭೀರ್ಯತೆ ಏನು? ಅವರು ನಮ್ಮ ಅನುಮತಿಯಲ್ಲಿ ಕೆಲಸ ಮಾಡುವುದಿಲ್ಲ. ಅವರು ಕೆಲಸ ಮಾಡುವುದು ಏನಿದ್ದರು ಕೂಡ ಕರ್ನಾಟಕದಲ್ಲಿ ಮುಖ್ಯ ನ್ಯಾಯಾಧೀಶರು ಯಾರಿರುತ್ತಾರೆ, ಅವರ ಒಂದು ವ್ಯವಸ್ಥೆಯಲ್ಲಿ ಮಾಡುತ್ತಾರೆ. ಇದೆಲ್ಲವೂ ಮುಗಿದ ಮೇಲೆ ಪ್ರಾಯಶಃ ಕೊಟ್ಟಂತಹ ವರದಿಯಲ್ಲಿ ಇದರಲ್ಲಿ ಯಾವುದೂ ಸತ್ಯವಿಲ್ಲ, ಇದೆಲ್ಲವೂ ಕೂಡ ಅಪೂರ್ಣ, ಆದುದರಿಂದ ನಾವು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಒಂದು ವರದಿ ಕೊಟ್ಟರೆ what is the fate of both the Houses? ಇದಕ್ಕೆ ಮಾನ್ಯ ಸಚಿವರು ವ್ಯವಸ್ಥಿತವಾಗಿ ಸಮಜಾಯಿಷಿಯನ್ನು ಕೊಡಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಇದರಲ್ಲಿ ಯಾವುದೂ ಕೂಡ ರಾಜಕಾರಣ ಇಲ್ಲ ಅಲ್ಲವೆ? ಇವತ್ತು ಲೋಕಾಯುಕ್ತರು ಬಂದು ಶನಿಮಹಾತ್ಮ ಎಲ್ಲಿದ್ದನೋ ಗೊತ್ತಿಲ್ಲ. ನಾವು ಶನಿಮಹಾತ್ಮರನ್ನು ದೇವಸ್ಥಾನಗಳಲ್ಲಿ ಪೂಜೆ ಮಾಡುತ್ತೇವೆ. ಆದರೆ ಅವರು 7ನೇ ಮನೆಗೆ ಬಂದರೋ 9ನೇ ಮನೆಗೆ ಬಂದರೋ ಒಟ್ಟಿನಲ್ಲಿ ಕರ್ನಾಟಕಕ್ಕೆ ಬಂದರು. ಬಂದಮೇಲೆ ಅವರೊಬ್ಬರನ್ನು ತೆಗೆಯುವುದಕ್ಕೋಸ್ಕರ ಇಡೀ ಸದನ, ಇಡೀ ರಾಜ್ಯದ 6 ಕೋಟಿ ಕನ್ನಡಿಗರು ಬೊಬ್ಬೆ ಹಾಕುತ್ತಿದ್ದರೂ ಕೂಡ ಎಲ್ಲೋ ಒಂದು ಕಡೆ ಈ ಕಾಯಿದೆಯನ್ನು ಮುಂದಿಟ್ಟುಕೊಂಡು ಪ್ರಾಯಶಃ ಏನೂ ಇಲ್ಲ ಎಂದು ಹೇಳುವಾಗ ತಾವು ಮಾಡುತ್ತಿರುವಂತಹ ಈ ಕಾಯಿದೆ ಇವತ್ತಿನ ಹೊರತೇನು ಅಲ್ಲ. ಎರಡೂ ಮನೆಯಲ್ಲಿ ನಾವೇನು ತೀರ್ಮಾನ ಮಾಡಿದಮೇಲೆ ಅವತ್ತೇ ಅವರೇನಾದರು ಕೆಲಸದಿಂದ ಹೋಗುವುದಾದರೆ ಅವರಿಗೆ ನೀವು ರಜಾ ಹಾಕಿ ಹೋಗಿ ಎಂದು ಹೇಳಬಹುದು. ಅದನ್ನು ನಾವು ಹೇಳುವುದಕ್ಕೆ ಆಗುವುದಿಲ್ಲ. ಆದರೆ ಈಗ ತಾವು ತಂದಿರುವಂತಹ ಕಾಯಿದೆಯಲ್ಲಿ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳು ಹೇಳಬೇಕಾಗುತ್ತದೆ. ಅದರ ಬಗ್ಗೆ ನಿಮ್ಮ ಸ್ಪಷ್ಟತೆ ಏನು? ಇದನ್ನು ತಾವು ದಯಮಾಡಿ ಈ ಸದನಕ್ಕೆ ತಿಳಿಸಬೇಕಾಗುತ್ತದೆ. ಮೇಲ್ಮನೆ ಕೆಳಮನೆಯ ಎಲ್ಲವನ್ನೂ ಕೂಡ ಸಾಧಕ–ಬಾಧಕಗಳನ್ನು ವಿಮರ್ಶೆ ಮಾಡಿ, ತನ್ನದೇ ಆದಂತಹ ದೃಷ್ಟಿಕೋನವನ್ನು ನೀಡುವಂಥದ್ದು ಈ ಮನೆಯ ಆಧ್ಯ ಕರ್ತವ್ಯ ಎನ್ನುವುದು ನನ್ನ ಭಾವನೆ. ಆದ್ದರಿಂದ ಇಷ್ಟೆಲ್ಲಾ ಮಾಡಿದ ಮೇಲೆ ಪ್ರಯಶಃ ಆತ ಎಲ್ಲಿಯಾದರು ಹೋಗಿ, ನನ್ನ ಮೇಲೆ vengeance ಗೋಸ್ಕರವಾಗಿ ನನ್ನನ್ನು ತೆಗೆಯುತ್ತಿದ್ದಾರೆ, ಲೋಕಾಯುಕ್ತರಿಂದ ಬಂದಿದ್ದು, ಶಾಸಕಾಂಗದಿಂದ ಬಂದಂತಹ ತಿದ್ದುಪಡಿಯನ್ನು ನಮಗೆ ಎನ್‌ಕ್ವಯರಿ ಮಾಡುವುದಕ್ಕೆ ಒಬ್ಬ ಜೂನಿಯರ್‌ನ ಹಾಕಿದ್ದಾರೆ, ನಾನು ಆ ಜೂನಿಯರ್ ಹತ್ತಿರ ಹೋಗಿ ಕೈಕಟ್ಟಿ ನಿಲ್ಲುವುದಕ್ಕೆ ನನ್ನ ಮನಸ್ಸು ಒಪ್ಪುವುದಿಲ್ಲ, ಅದಕ್ಕೋಸ್ಕರವಾಗಿ ನಮಗೆ ಸ್ಟೇ ಕೊಡಬೇಕೆಂದು ಹೈಕೋರ್ಟಿಗಾಗಲಿ ಅಥವಾ ಸುಪ್ರೀಂ ಕೋರ್ಟಿಗಾಗಲಿ ಹೋಗುವುದಾದರೆ ತಕ್ಷಣವೆ ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್ ಸ್ಟೇ ಕೊಟ್ಟರೆ ಈ ಕಾಯಿದೆಯ ಗತಿ ಏನಾಗುತ್ತದೆ? ಇದರ ಬಗ್ಗೆ ನಿಮ್ಮ ಕಾಯಿದೆಯಲ್ಲಿ ಎಲ್ಲಿಯೂ ಕೂಡ ಸ್ಪಷ್ಟತೆ ಇಲ್ಲ. ಇವೆಲ್ಲವನ್ನೂ ನೋಡಿದಾಗ ಪ್ರಾಯಶಃ ಏಕೋ ಏನೋ ಗೊತ್ತಿಲ್ಲ, ಮಾನ್ಯ ಜಯಚಂದ್ರ ಸಾಹೇಬರಿಗೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಮಾತ್ರ ಕೊಟ್ಟಿದ್ದರೆ ಸಾಕಾಗಿತ್ತೇನೋ, ಅದರ ಜೊತೆಗೆ ಪಶುಸಂಗೋಪನಾ ಇಲಾಖೆಯು ಕೊಟ್ಟಿರುವುದರಿಂದ ಈ ಕಾಯಿದೆಯನ್ನು ಇತ್ತ ಕಡೆಗೆ, ಅತ್ತ ಕಡೆಗೆ ಅಥವಾ ಎತ್ತ ಕಡೆಗಾದರು ಹಾಕಬಹುದು ಎಂಬ ದೃಷ್ಟಿಯಿಂದ ಪ್ರಾಯಶಃ ಎಲ್ಲೋ ಒಂದು ಕಡೆ ನೀವು ದಾರಿ ತಪ್ಪಿದ್ದೀರಿ, ಅಥವಾ ನಿಮಗೆ ನಿಮ್ಮ ಕಾನೂನು ಇಲಾಖೆಯ ಅಧಿಕಾರಿಗಳು ದಾರಿ ತಪ್ಪಿಸಿದ್ದಾರೆ ಎನ್ನುವುದು ನನ್ನ ಸ್ಪಷ್ಟವಾದ ಒಂದು ನಿವೇಧನೆ. ನಾನು ಏಕೆ ನಿವೇಧನೆ ಎಂದು ಹೇಳಿದೆ ಎಂದರೆ, ಅವರು ನನಗಿಂತ ಒಂದು ವರ್ಷ ದೊಡ್ಡವರು ಎಂದು ಇತ್ತೀಚೆಗಷ್ಟೆ ಓದಿದ್ದೇನೆ. ಹಾಗಾಗಿ ಇದಕ್ಕೆ ನಿಮ್ಮ hidden ಏನು? ಇದಕ್ಕೋಸ್ಕರವಾಗಿ ಏನೂ ಇಲ್ಲದೆ ಇರುವುದಕ್ಕೆ ಒಗ್ಗರಣೆ ಹಾಕಿ ತಂದಿದ್ದೀರಲ್ಲ, ಈ ಒಗ್ಗರಣೆ ಕಾಯಿದೆಗೆ ನಿಮ್ಮ hidden agenda ಏನು? ಇದನ್ನು ತಾವು ದಯಮಾಡಿ ತಿಳಿಸಿ.

ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ, ಏನೆಂದರೆ, ಈ ಒಂದು ವಿಧೇಯಕ confusion ನಲ್ಲಿ ಇಲ್ಲವೆಂದು ಸನ್ಮಾನ್ಯ ಕಾನೂನು ಸಚಿವರು ಮಾತನಾಡುವಾಗ ಹೇಳಿದರು. ಆದರೆ ಈ ವಿಧೇಯಕ ನೂರಕ್ಕೆ ನೂರರಷ್ಟು ಗೊಂದಲದಲ್ಲಿದೆ. ಈ ವಿಧೇಯಕಕ್ಕೆ ಸರಿಯಾದ ಒಂದು ದಾರಿ ಇಲ್ಲ. ಪ್ರಾಯಶಃ ನನಗೆ ತಿಳಿದಮಟ್ಟಿಗೆ ಈ ವಿಧೇಯಕ ಪ್ರಾಯಶಃ ಯಾವುದೇ ಕಾರಣಕ್ಕೂ ಕೂಡ validate ಅಲ್ಲ, ಇದು struck down ಆಗುವಂತಹ ಒಂದು ವಿದೇಯಕ.

ಇದು ಒಂದು ರೀತಿ ಹಲ್ಲು ಕಿತ್ತ ಹಾವಿನ ಹಾಗೆ. ಹೆಬ್ಬಾವು ಮತು ಹಾವನ್ನು ಹಲ್ಲು ಕಿತ್ತು ಜೇಬಿನಲ್ಲಿಟ್ಟುಕೊಂಡು ನಿಮಗೆ ಬಿಡುತ್ತೇನೆ. ಎಂದು ಹೆದರಿಸುವುದರ ಹಾಗೆ ಆಗುತ್ತಿದೆ. ನನಗೆ ತಿಳಿದ ಮಟ್ಟಿಗೆ ನಾನು ಬೆಂಗಳೂರಿಗೆ ಬಂದು 46 ವರ್ಷ ಆಗಿದೆ. ಒಬ್ಬ ಲೋಕಾಯುಕ್ತರನ್ನು ಓಡಿಸುವ ಸಲುವಾಗಿ ಇಡೀ ರಾಷ್ಟ್ರಕ್ಕೆ ಒಂದು ಲೋಕಾಯುಕ್ತ ಕಾಯಿದೆಯನ್ನು ತಂದು ಕೊಟ್ಟ ಕೀತಿ ಕರ್ನಾಟಕಕ್ಕೆ ಇತ್ತು, ಪ್ರಾಯಶಃ ಆ ಕಾಯಿದೆಯನ್ನು ಇವತ್ತು

ನನಗೆ ತಿಳಿದ ಮಟ್ಟಿಗೆ ದಿವಂಗತ ರಾಮಕೃಷ್ಣ ಹೆಗ್ಗಡೆಯವರು ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ಬರುತ್ತದೆ ಎನ್ನುವುದು ನೋಡಬೇಕು.

**ಶ್ರೀ ಟಿ.ಬಿ. ಜಯಚಂದ್ರ(ಕಾನೂನು ಸಚಿವರು):–** ಮಾನ್ಯ ಸಭಾಪತಿಯವರೆ, ಕೆಳಮನೆಯಲ್ಲಿ ಚರ್ಚೆ ಆಗುವಂತಹ ಸಂದರ್ಭದಲ್ಲಿ ಪಕ್ಷಾತೀತವಾಗಿ ಇದರ ಬಗ್ಗೆ ಚರ್ಚೆ ಆಗಬೇಕೆಂದು ಎಲ್ಲರೂ ಕೂಡ ಧ್ವನಿಯನ್ನು ಗೂಡಿಸಿದ್ದಾರೆ. ಇದು 1984ರಲ್ಲಿ ತಂದಂತಹ ಕಾಯಿದೆ. ಈ ಕಾಯಿದೆ ಜಾರಿಗೆ ಬಂದ ಮೇಲೆ ಕೇಂದ್ರದ ಮಟ್ಟದಲ್ಲಿ ಲೋಕ್ಪಾರ್ ಮಸೂದೆ ಕೂಡ ಬಂದಿದೆ. ಲೋಕಪಾಲ್ ಮಸೂದೆ ತರಬೇಕಾದ ಸಂದರ್ಭದಲ್ಲಿ ಎಲ್ಲಾ ವಲಯದ ಎಲ್ಲಾ ಹಂತಗಳಲ್ಲಿಯೂ ಸಹ ಚರ್ಚೆ ಆಗಿ ನ್ಯಾಯಧೀಶರು ಮತ್ತು activists ಎಲ್ಲರೂ ಸಹ ಹೋರಾಟವನನು ಮಾಡಿ ಅದನ್ನು ಜಾರಿಗೆ ತರುವ ಪ್ರಯತ್ನವನ್ನು ಮಾಡಿದ್ದಾರೆ. ನಮಗೆ benchmark ಅಂದರೆ ಲೋಕಪಾಲ್ ಮಸೂದೆ, ಅದನ್ನು ಆದರಿಸಿಯೇ ನಾವು ಕಾನೂನನ್ನು ತರಬೇಕಾಗುತ್ತದೆ. ಬೇರೆ ಬೇರೆ ರಾಜ್ಯಗಳಲ್ಲಿಯೂ ಸಹ ಈ ಕಾನೂನು ಇದೆ. ಕಾನೂನು ತರುವಾಗಲೂ ಸಹ ಲೋಕಪಾಲ್ ಮಾದರಿಯಲ್ಲಿಯೇ ಕಾನೂನನ್ನು ತರುವಂತಹ ಪ್ರಯತ್ನವನ್ನು ಮಾಡಿದ್ದಾರೆ. ಇದರ ಬಗ್ಗೆ ಕ್ಲಾರಿಫೀಕೇಶನ್ ಅನ್ನು ಉತ್ತರ ಕೊಡುವ ಸಂದರ್ಭದಲ್ಲಿ ಹೇಳುತ್ತೇನೆ. ದಯಮಾಡಿ ತಾವುಗಳು ನಾವು ಇದನ್ನು ಬಿಟ್ಟರೆ ಬೇರೆ ಏನು ಮಾಡಬಹುದಿತ್ತು ಎನ್ನುವುದನ್ನು ಹೇಳಿ.

**ಶ್ರೀ ಕೆ.ಎಸ್. ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೇ, ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ ಈ ಭೂತ ಹಾಗೆಯೇ ಹೋಗುವುದಿಲ್ಲ, ಇದು ಅಂಟಿಕೊಂಡುಬಿಟ್ಟಿದೆ. ಈ ಭೂತಕ್ಕೆ ಏನು ತೆಗೆದುಕೊಂಡು ಹೋಡೆದರೆ ಹೋಗುತ್ತದೆ ಎನ್ನುವುದು ನಮಗೆ ಗೊತ್ತಿಲ್ಲ. ಇವತ್ತು ಈ ಸದನದಲ್ಲಿ ನಾವು ಬಿಲ್ ಪಾಸ್ ಮಾಡಿಕೊಡುತ್ತೇವೆ. ಅಲ್ಲಿ ಚರ್ಚೆಯನ್ನು ಕೂಡ ಮಾಡಿದ್ದೇವೆ. ಏನು ಮಾಡಿದರೆ ಈ ಭೂತ ಹೋಗುತ್ತದೆ. ಎನ್ನುವ ಸಲಹೆ ಕೊಡಿ ಎಂದು ಕೇಳಿದಾಗ ನಿನ್ನೆಯ ದಿವಸ ಇದರ ಬಗ್ಗೆ ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ಈ ಸದನದಲ್ಲಿಯೂ ಕೆಲವು ಪರಿಣಿತರಿದ್ದಾರೆ. ಅಲ್ಲಿ ಸಭಾಧ್ಯಕ್ಷರ ಜೊತೆ, ಸಭಪತಿಗಳು ಇಲ್ಲಿನ ಕೆಲವು ಸದಸ್ಯರು ಸೇರಿ ಒಟ್ಟಿಗೆ ಕೊಡಿ ಚರ್ಚೆಯನ್ನು ಮಾಡಿ ಈ ಬಿಲ್ ತಂದಿದ್ದಲ್ಲಿ ನಿಜಕ್ಕೂ ಸಹ ನಮಗೆಲ್ಲರಿಗೂ ಅನುಕೂಲ ಆಗುತ್ತಿತ್ತು. ಈಗ ನಾವೆಲ್ಲರೂ ಚರ್ಚೆಯನ್ನು ಮಾಡಬಹುದು. ಆದರೆ ಕಾನೂನು ಸಚವರು ಒಂದು ವಿಚಾರವನ್ನು ಸ್ಪಷ್ಟವಾಗಿ ಚರ್ಚೆಯನ್ನು ಮಾಡಬಹುದು. ಆದರೆ ಕಾನೂನು ಸಚಿವರು ಒಂದು ವಿಚಾರವನ್ನು ಸ್ಪಷ್ಟವಾಗಿ ಹೇಳಿಬಿಡಿ. ಆ ದರಿದ್ರವನ್ನು ಅಷ್ಟು ಸುಲಭವಾಗಿ ಹೊರಗಡೆ ತಳ್ಳಲಿಕ್ಕೆ ಆಗುವುದೇ? ಇದನ್ನು ಶನಿ ಭೂತ ಏನು ಬೇಕಾದರೂ ಕರಿಯಬಹುದು, ಇಡೀ ರಾಜ್ಯದ ಜನರು ಇವತ್ತು ವಿಲಿವಿಲಿ ಎಂದು ಒದ್ದಾಡುತ್ತಿದ್ದಾರೆ. ಹಾಗಾಗಿ ನನ್ನ ಅಪೇಕ್ಷೆ ಇದ್ದದ್ದು ಬೇರೆ. ಈ ಬಿಲ್ ತಂದು ಕೆಳಮನೆಯಲ್ಲಿ ಚರ್ಚೆ ಮಾಡಲಾಗಿದೆ. ಈ ಬಿಲ್ ತಂದು ಏನೇ ಮಾಡಿದರೂ ಸಹ ಈ ಭಷ್ಟ ಲೋಕಾಯುಕ್ತರನ್ನು ಹೊರಕ್ಕೆ ಹಾಕಲಾಗುವುದೇ? ನಮಗೆ ಆ ಶಕ್ತಿ ಇದೆಯೇ, ಆರೂವರೆ ಕೋಟಿ ಜನರು ಇದನ್ನು ಮೂಕಪ್ರೇಕ್ಷಕರಾಗಿ ನೋಡುತ್ತಿದ್ದಾರೆ. ಒಬ್ಬ ವ್ಯಕ್ತಿ ಒಂದು ಕಡೆ ಆದರೆ ಕಾಂಗ್ರೇಸ್, ಬಿಜೆಪಿ, ಜನತದಳ ಹೀಗೆ ಎಲ್ಲಾ ಪಕ್ಷಗಳವರು ಒಂದು ರೀತಿಯಲ್ಲಿ ಸಹಾಯಕರಾಗಿದ್ದೇವೆ. ಇದರ ಬಗ್ಗೆ ಚರ್ಚೆಯನ್ನು ಮಾಡೋಣ. ಆದ್ದರಿಮದ ನಿನ್ನೆ ಸೇರಿ ಚರ್ಚೆ ಮಾಡಿ ಅಲ್ಲಿ ಬಂದಂತಹ ಸಲಹೆಗಳ ಮೇಲೆ ಬಿಲ್ ತರಗಲಾಗಿದೆ, ಇದನ್ನು ಆತುರದಲ್ಲಿ ಮಾಡಲಾಗಿದೆಯೇ ಎಂದು ನನಗನಿಸುತ್ತಿದೆ. ಏಕೆಂದರೆ ಇನ್ನೂ ಒಂದೆರಡು ದಿವಸ ಕಾಯ್ದು ಇನ್ನೂ ಕೆಲವು ಪರಿಣಿತರ ಸಲಹೆ ಪಡೆದು, ನಮ್ಮ ಸದನ ಮತ್ತು ಹೊರಗಡೆಯಲ್ಲಿಯೂ ಸಹ ಅನೇಕ ಪರಿಣಿತರು ಇದ್ದಾರೆ, ಕಾನೂನು ತಜ್ಞರು ಇದ್ದರೆ,ಅವರ ಜೊತೆಯಲ್ಲಿ ಚೆರ್ಚಿಸಿ, ಈ ಪುಣ್ಯಾತ್ಮನನ್ನು ಹೊರಕ್ಕೆ ತಳ್ಳುವುದು ಹೇಗೆಂದು ಚರ್ಚೆ ಮಾಡಬಹುದಿತ್ತು. ಈಗ ಮಾರಿ ಒಳಕ್ಕೆ ಬಂದು ಸಿಕ್ಕಿಕೊಂಡಿದೆ. ಮಾರಿಯನ್ನು ಹೊರಕ್ಕೆ ತಳ್ಳುವುದು ಅಷ್ಟು ಸುಲಭದ ಕೆಲಸವಲ್ಲ. ಅದಕ್ಕೆ ಏನೇನು ಬಲಿ ಕೊಡಬೇಕೆಂದು ನನಗೆ ಗೊತ್ತಿಲ್ಲ. ಈಗ ಕೊಡುತ್ತಿರುವ ಸಲಹೆಗಳನ್ನು ಪಡೆದುಕೊಳ್ಳಿ, ಆದರೆ ಇದಕ್ಕೆ ಒಂದು ಶಾಶ್ವತ ಪರಿಹಾರ ಬೇಕು. ಈ ದಿಕ್ಕಿನಲ್ಲಿ ಈ ಒಂದು ಅಧಿವೇಶನ ಮುಗಿದ ನಂತರ ನನ್ನ ಸಲಹೆ ಏನೆಂದರೆ ಎಲ್ಲ experts ಗಳನ್ನು ಕರೆದು ಸರ್ಕಾರ ಅವರ ಅಭಿಪ್ರಾಯಗಳನನು ಪಡೆದುಕೊಳ್ಳಲಿ. ಈಗ ಏನಾಗಿದೆ ಎಂದರೆ ಹಗಲುರಾತ್ರಿ ರಾಜ್ಯದ ಜನ ನಿದ್ದೆ ಮಾಡುವ ಹಾಗಿಲ್ಲ, ಪ್ರತಿದಿವಸ ಲೋಕಾಯುಕ್ತ ಇದೆ ಆಗಿದೆ. ದೇವರನ್ನು

ಇಷ್ಟರಮಟ್ಟಿಗೆ ನಾವು ನೆನಪು ಮಾಡಿಕೋಳ್ಳುತ್ತವೋ ಇಲ್ಲವೋ ನಮಗೆ ಗೊತ್ತಿಲ್ಲ. ಆದ್ದರಿಮದ ನನ್ನ ಪ್ರಾರ್ಥನೆ ಏನೆಂದರೆ ಸರ್ಕಾರ ಎಲ್ಲಾ ಪ್ರಮುಖರ ಸಲಹೆಯನ್ನು ಪಡೆದುಕೊಳ್ಳಬೇಕು. ಬಿಲ್ ಸಹ ನಾವು ಪಾಸ್ ಮಾಡಿ ಕೊಡುತ್ತೇವೆ. ಆದರೆ ನಮ್ಮ ಪ್ರಶ್ನೆ ಏನೆಂದರೆ ಇದಕ್ಕೆ ಶಾಶ್ವತ ಪರಿಹಾರ ಏನೆಂಬುದಕ್ಕೆ experts ಗಳ ಒಂದು ಸಭೆಯನ್ನು ಸರ್ಕಾರ ದಯಮಾಡಿ ಕರೆಯಬೇಕು. ಅಲ್ಲಿ ಎಲ್ಲರ ಸಲಹೆಗಳನ್ನು ಪಡೆದಾಗ ಮಾತ್ರ ಇದಕ್ಕೆ ಒಂದು ರೂಪ ಬರುತ್ತದೆ ಎನ್ನುವುದು ನನ್ನ ಸಲಹೆ.

**ಶ್ರೀ ಎಸ್.ಆರ್.ಪಟೀಲ್(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಲೋಕಾಯುಕ್ತ ಮತ್ತು ಉಪಲೋಕಾಯುಕ್ತರ ಪದಚ್ಯುತಿಯ ಬಗ್ಗೆ ಮೊದಲು ಇರತಕ್ಕ ಕಾನೂನಿಗೆ ತಿದ್ದುಪಡಿಯನ್ನು ತಂದು ಸರಳೀಕರಣ ಮಾಡಿ ಒಂದು ಕಾಯಿದೆಯನ್ನು ಸರ್ಕಾರ ಈಗಾಗಲೇ ಮಂಡಿಸಿದ್ದು. ಕೆಳಮನೆಯಲ್ಲಿ ಈಗಾಗಲೇ ಪಾಸ್ ಆಗಿ ಇಲ್ಲಿಗೆ ಬಂದಿದೆ. ಇದರಲ್ಲಿ ಏನಾದರೂ ಲೋಪದೋಷಗಳಿದ್ದಲ್ಲಿ ಅದನ್ನು ಹೇಳಿದರೆ ಅದಕ್ಕೆ ಬೇರೆ ರೂಪದಲ್ಲಿ redressal ಏನಾದರೂ ಹೇಳಿದಲ್ಲಿ ಅದನ್ನು ಪರಿಶೀಲಿಸಬಹುದು. ಏಕೆಂದರೆ ನೀವು ಇಡೀ ರಾಜ್ಯದ ಜನತೆಯ ಧ್ವನಿಯಾಗಿ ನೀವಿಲ್ಲಿಗೆ ಬಂದಿದ್ದೀರಿ. ನಾವು ಪುನಃ ಜನಸಾಮಾನ್ಯರ ಮುಂದೆ ಹೋಗಿ ಚರ್ಚೆ ಮಾಡಬೇಕಾಗಿಲ್ಲ, ಏಕೆಂದರೆ ನಿವು ಅವರೆಲ್ಲರ ಧ್ವನಿ. ಮೇಲ್ಮನೆ ಮತ್ತು ಕೆಳಮನೆಯ ಸದಸ್ಯರು ಈ ನಾಡಿನ ಅರೂವರೆ ಕೋಟಿ ಜನತೆಯ ಧ್ವನಿಯಾಗಿ ನಾವಿಲ್ಲಿಗೆ ಬಂದಿದೇವೆ. ಅವರ ಪರವಾಗಿ ಅವರ ಭಾವನೆಗಳನ್ನು ವ್ಯಕ್ತಮಾಡುವಂತಹ ಮತ್ತು ಇದಕ್ಕೆ redressal ಒದಗಿಸುವಂತಹ ಮಾರ್ಗೋಪಾಯಗಳನ್ನು ಹೇಳುವಂತಹ ಅಧಿಕಾರವನ್ನು ಜನರು ನಿಮಗೆ ನೀಡಿದಾರೆ. ಆದ್ದರಿಂದ ನೀವಿಲ್ಲಿ ಚರ್ಚೆಯನ್ನು ಮಾಡಿ, ಇದರಲ್ಲಿ ಏನಾದರೂ ಲೋಪದೋಷಗಳಿದ್ದರೆ ಹೇಳಿ. ಇದಕ್ಕೆ ಬೇಕಾದ ಪರಿಹಾರೋಪಾಯಗಳನ್ನು ತಾವು ಹೇಳಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸಭಾನಾಯಕರೆ, ನೀವು ಹೇಳುವುದು ಸರಿಯಾಗಿದೆ. ನಾವು ಬೃಹಸ್ಪತಿಗಳಲ್ಲ. ನಾವು ಹೇಳುವುದು ಎಲ್ಲರೂ ಸಲಹೆಗಳನ್ನು ಕೋಡೋಣ, ಚರ್ಚೆ ಮಾಡೋಣ, ಆದರೆ ಚರ್ಚೆ ಮಾಡಿ ಪರಿಹಾರ ಕಂಡುಹಿಡಿದು ಆತನನ್ನು ಹೊರಕ್ಕೆ ಹಾಕಿಬಿಡುತ್ತೇವೆ. ಎನ್ನುವ ವಿಶ್ವಾಸ ಸರ್ಕಾರಕ್ಕೆ ಇದೆಯೇ? ಈ ಬಿಲ್ ಪಾಸು ಮಾಡಿಕೊಡುವುದರಿಂದ ಇದು ಆಗುತ್ತದೆಯೇ? ಅದಕ್ಕೆ ನಾನು ಹೇಳುವುದೇನೆಂದರೆ ಇದರಲ್ಲಿ ನಾವು ಖಂಡಿತ expert ಅಲ್ಲ. Experts ಗಳನ್ನು ಇಟ್ಟುಕೊಂಡು ಕಾನೂನು ಸಚಿವರು ಒಂದು ಸಭೆಯನ್ನು ಕರೆದು ನಮ್ಮೆಲ್ಲರ ಸಲಹೆಗಳನ್ನು ಪಡೆದುಕೊಳ್ಳಿ, ಅದರ ಮುಖಾಂತರ ಮುಂದಕ್ಕೆ ಹೋಗಬೇಕೆನ್ನುವುದೇ ನನ್ನ ಅಭಿಪ್ರಾಯ ಬೇರೆ ಏನು ಇಲ್ಲ.

**ಶ್ರೀ ವಿ.ಸೋಮಣ್ಣ(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಗಳೆ, ಮಾನ್ಯ ಸಭಾನಾಯಕರು ಈ ಕಾಯಿದೆಯ ಸರಳೀಕರಣದ ಪ್ರಯತ್ನ ಎಂದು ಹೇಳಿದರು. ಹಿಂದೆ ಮಾಡಿದ ಕಾನೂನಿನಲ್ಲಿ ನಾವು ಲೋಕಾಯುಕ್ತ ಮತ್ತು ಉಪಲೋಕಾಯುಕ್ತರನ್ನು ಅಷ್ಟೋ ಇಷ್ಟೋ ಹಿಡಿತದಲ್ಲಿ ಇಟ್ಟುಕೊಳ್ಳಬಹುದಿತ್ತು. ಆದರೆ ಇದನ್ನು ಕೂಡ ಈಗ ಹೈಕೋರ್ಟಿಗೆ ಈ ಅಧಿಕಾರ ವಹಿಸುತ್ತಿದ್ದೇವೆ. ಹೈಕೋರ್ಟಿನ ಮುಖ್ಯನಾಯಾಧೀಶರು ತಮಗೆ ಬೇಕಾದವರಿಗೆ ಕೊಟ್ಟು ನಿಲ್ಲಿಸಿದರೆ ಈ ಕಾಯಿದೆಯ ಗತಿ ಏನಾಗುತ್ತದೆ ಎನ್ನುವುದಕ್ಕಿಂತ ಹೆಚ್ಚಾಗಿ ಈ ಎರಡು ಸಭೆಗಳ ಶಾಸಕಾಂಗದ ವ್ಯವಸ್ಥೆಯಲ್ಲಿ ಈ ರಾಜ್ಯದ ಜನರ ಪರಿಸ್ಥಿತಿಯನ್ನು ತಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನನ್ನ ಅನುಭವದ ಆಧಾರದ ಮೇಲೆ ನಾನಿವತ್ತು ಒಂದು ಮಾತನ್ನು ಇಲ್ಲಿ ಹೇಳಬಯಸುತ್ತೇನೆ. ನಾನು ಒಬ್ಬ ಲಾಯರ್ ಅಲ್ಲ, ನಾನೊಬ್ಬ ಸಾಮಾನ್ಯ ಕುಟುಂಬದಿಂದ ಬಂದಿರುವವನು. ಪ್ರಾಯಶಃ ಈ ಲೋಕಾಯುಕ್ತರಿಂದ ಆಗಿರುವ ಅನಾನುಕುಲತೆಯಲ್ಲಿ ಏನು ತಪ್ಪು ಮಾಡದೇ ನೋವನ್ನು ಅನುಭವಿಸುತ್ತಿರುವವನು. ಇದರ ಬಗ್ಗೆ ನಾನು ಏನು ಬೇಕಾದರೂ ಹೇಳಬಹುದು. ಒಂದು ಕಾಯಿದೆಯನ್ನು ಸರಳೀಕರಣ ಮಾಡಲಾಗುವುದು ಎಂದು ಸಭಾನಾಯಕರು ಏನು ಹೇಳಿದ್ದಾರೆ, ಈ ಸರಳೀಕರಣವನ್ನು ಮಾಡಲಾಗುವುದು ಎಂದು ಸಭಾನಾಯಕರು ಏನು ಹೇಳಿದ್ದಾರೆ, ಈ ಸರಳೀಕರಣವನ್ನು ಬಿಟ್ಟು ಶಾಸಕಾಂಗದ ಕಗ್ಗೊಲೆಯನ್ನು ಮಾಡಿ ನಮ್ ಅಧಿಕಾರವನ್ನು ಅವರಿಗೆ ನೀಡಿ, ನಾವು ಈತ ಸರಿಯಿಲ್ಲ ಇವನನ್ನು ಇಳಿಸಬೇಕೆಂದು ಇಲ್ಲಿ ಕಾಯಿದೆ ಮಾಡಿ ಕಳುಹಿಸಿದ ಮೇಲೆ 90 ದಿವಸಗಳಲ್ಲಿ ಈ ಎರಡು ಸದನಗಳಲ್ಲಿ ತೀರ್ಮಾನ ಮಾಡಿದ ಹಾಗೆ ಈ ಲೋಕಾಯುಕ್ತ ಮತ್ತು ಉಪಲೋಕಾಯುಕ್ತರನ್ನು

ಪದಚ್ಯುತಿಗೊಳಿಸಿದಲ್ಲಿ ನಾನು ಈ ರಾಜಕಾರಣದಿಂದಲೆ ನಿವೃತ್ತಿ ಹೊಂದುವುದರ ಜೊತೆಯಲ್ಲಿ ನನ್ನಷ್ಟು ಸಂತೋಷ ಪಡುವವನು ಬೇರೆ ಯಾರು ಇರುವುದಿಲ್ಲ. ಇದು ಖಂಡಿತ ಆಗುವುದಿಲ್ಲ. ಸರ್ಕಾರ ಎಲ್ಲೋ ಒಂದು ಕಡೆ hidden agenda ದ ವ್ಯವಸ್ಥೆಗೆ ಹೋಗುತ್ತಿದೆ ಎನ್ನುವ ಅನುಮಾನ ನನ್ನನ್ನು ಕಾಡುತ್ತಿದೆ. ಇದಕ್ಕೆ ಏನು ಮಾಡಬಹುದು ಎನ್ನುವ ಒಂದು ಮಾತನ್ನು ಹೇಳಿದರು. ನ್ಯಾಯಾಧೀಶರು ನಿವೃತ್ತಿ ಹೊಂದಿದ ಮೇಲೆ ರಾಜಕಾರಣಿಗಳು ನಿವೃತ್ತಿ ಹೊಂದಿದ ಮೇಲೆ ರಾಜಕಾರಣಿಗಳು ನಿವೃತ್ತಿ ಹೊಂದಿದ ಮೇಲೆ ಮಾಜಿಗಳಾಗುವ ಹಾಗೆ ಅವರು ಸಹ ಮಜಿಗಳೇ ಆಗಬೇಕು. ಒಂದು ಕೆಲಸ ಮಾಡಿ, ನುರಿತ ನ್ಯಾಯಾಧೀಶರ ನುರಿತ ವಕೀಲರ ಶಾಸಕರ ಸಮಾಜ ಸೇವಕರನ್ನು ಒಳಗೊಂಡ ಒಂದು ಉನ್ನತ ಮಟ್ಟದ ಸಮಿತಿಯನ್ನು ರಚನೆ ಮಾಡಿ, ಕೆಲವರು ದೇವಲೋಕದಿಂದ ಏನೂ ಇಳಿದು ಬಂದವರಲ್ಲ, ಅವರನ್ನು ಹೊರತು ಪಡಿಸಿದರೆ ಇವತ್ತು ಕೆಪಿಎಸ್‌ಸಿ, ಅಧ್ಯಕ್ಷರು ಉಪಕುಲಪತಿಗಳು ಇವರ ನೇಮಕಾತಿ ಒಂದು ಗೈಡ್‌ಲೈನ್ಸ್ ಇದೆ. ಕೆಪಿಎಸ್‌ಸಿಯಲ್ಲಿ ಮೆಂಬರ್ಗಳನ್ನು ಮಾಡುವುದಕ್ಕೆ ಒಂದು ಗೈಡ್‌ಲೈನ್ಸ್ ಇದೆ. ಇವೆಲ್ಲವೂ ಸಹ ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿಯೇ ಇರುತ್ತದೆ. ಇಂತಹದ್ದರ ಬಗ್ಗೆ ನಾವು ಚಿಂತನೆಯನ್ನು ಮಾಡದೇ ಪ್ರಾಯಶಃ ನೀವು ಇದನ್ನು ತಂದು ನಮ್ಮ ಎಲ್ಲಾ ಅಧಿಕಾರವನ್ನು ಯಾರಿಗೂ ಕೊಟ್ಟು ನಮ್ಮನ್ನೆಲ್ಲ ನಗೆಪಾಟಲು ಮಾಡಿ, ನನಗನಿಸುತ್ತದೆ ಇವತ್ತು ದಿವಂಗತ ಜೆ.ಹೆಚ್ ಪಟೇಲರು ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಇದ್ದಿದ್ದರೆ ಅವರ ಗರಡಿಯಲ್ಲಿಯೇ ಅವರಿಗೆ ಸಮಾನರಾಗಿ ಬೆಳೆದಂತಹ ಸಿದ್ದರಾಮಯ್ಯನವರು ಪ್ರಾಯಶಃ ಒಂದೇ ಒಂದು ದಿವಸ ಹಳೆಯ ಸಿದ್ದರಾಮಯ್ಯ ಆಗಿ ಒಂದು ಘಟನೆ ಮಾಡಬೇಕಾಗಿತ್ತು.

**(12–30 ಗಂಟೆ)**

'ನಿನ್ನಂಥ ಭ್ರಷ್ಟ ಈ ದೇಶದಲ್ಲಿ ಇಲ್ಲ. ಮೊದಲು ಇಲ್ಲಿಂದ ತೊಲಗು' ಎಂಬ ಸೂಚನೆಯನ್ನು ಕೊಟ್ಟಿದ್ದರೆ ಇದ್ದಾವುದೂ ಬರುತ್ತಿರಲಿಲ್ಲ. ಇಂತಹ ಪ್ರಕರಣಗಳು 30 ವರ್ಷದ ವ್ಯವಸ್ಥೆಯಲ್ಲಿ ಇದೊಂದು ಬಂದಿದೆ. ನಾನು ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ನೆಗಡಿ ಆಗಿದೆ ಎಂದು ಮೂಗನ್ನು ಕೊಯ್ದುಕೊಳ್ಳಬಾರದು. ಕೆಲವು ಬದಲಾವಣೆಗಳನ್ನು ತರಬೇಕಾಗುತ್ತದೆ. ಆಯಾ ಕಾಲಕ್ಕೆ ಅನುಗುಣವಾಗಿ ಕಾಯಿದೆಗಳನ್ನು ಬಲಪಡಿಸಬೇಕಾಗುತ್ತದೆ. ಸಾಮಾನ್ಯ ಜನರಿಗೆ ಬೇಕಾಗಿರುವ ಬೇಕು ಬೇಡಗಳನ್ನು ಪೂರೈಸಲು ಕಾಯಿದೆಯನ್ನು ಬಲಪಡಿಸಬೇಕಾಗುತ್ತದೆ. ಇದೆಲ್ಲದರ ಜೊತೆ ಪ್ರಾಯಶಃ ಎರಡೂ ಸದನಗಳ ಮೂರನೆ ಒಂದು ಭಾಗವನ್ನು ಮತ್ತೆ ಎಲ್ಲೋ ಒಂದು ಕಡೆ ಕೆಂಪುಕೋಟೆಗೆ ಹಾಕಿ, ಆ ಕೆಂಘುಕೋಟೆಯವರು ವರ್ಷಾನುಗಟ್ಟಲೆ ಏನು ಮಾಡುತ್ತಾರೋ, ಅದೇ ಅಧಿಕಾರಿಯನ್ನು ಇಟ್ಟುಕೊಮಡು ಅವರ ಮುಖವನ್ನೇ ನೋಡಬೇಕಾಗಿ ಬಂದಾಗ, ಅಂದು ಪರ್ಯಾಯ ವ್ಯವಸ್ಥೆಗೆ ಏನು? ಮುಂದಿನ option ಏನು ಎಂದು ಹೇಳಬೇಕಾಗುತ್ತದೆ. ನಾನು ಒಂದು ಮಾತನ್ನು ಹೇಳುತ್ತೇನೆ. ಅನ್ಯಾಥಾ ಭಾವಿಸಿದರೆ ನನಗೇನೂ ಬೇಜಾರಿಲ್ಲ, ನಾನೇನು ಸದನದಲ್ಲಿ ಗೂಟ ಹೊಡೆಸಿಕೊಂಡು ಇರುವವನಲ್ಲ. ಇಂತಹ ಕಾಯಿದೆಗಳಿಗೆ ಕಾಯಿದೆಯ ಸೂಕ್ಷ್ಮತೆಯನ್ನು ಅರಿತುಕೊಳ್ಳಬೇಕಾಗುತ್ತದೆ. ಈ ಕಾಯಿದೆಯ ಲೋಪಗಳನ್ನು ಯೋಚನೆ ಮಾಡಬೇಕಾಗುತ್ತದೆ. ದಯವಿಟ್ಟು ಈ ಕಾಯಿದೆಯು ಮಾರಕವಾಗಿದೆ. ಅಲ್ಲಿ ನಡೆಯುವ ವಿದ್ಯಮಾನಗಳನ್ನು 3 ತಿಂಗಳಿಗೆ ಒಮ್ಮೆ ತಿಳಿಸಬೇಕಾಗುತ್ತದೆ ಎಂಬ ಮಾತನ್ನು ಹೇಳಿದರು. ವಾಷಿಕ ವರದಿಯನ್ನು ಅಕ್ಟೋಬರ್ ನಲ್ಲಿ ಕೊಡಬೇಕೆಂದು ಹೇಳಿದರು. ಲೋಕಾಯುಕ್ತ ಭ್ರಷ್ಟತೆ ವ್ಯವಸ್ಥೆ ಪ್ರಾರಂಭವಾದ ಮೇಲೆ, ಲೋಕಾಯುಕ್ತದಲ್ಲಿ ಮೂರ್ನಾಲ್ಕು ತಿಂಗಳುಗಳಿಂದ ಆದ ಹಗರಣವನ್ನು ಮುಚ್ಚಿಹಾಕುವ ಕೆಲಸ ಎಷ್ಟಾಗಿದೆ ಎಂಬುದನ್ನು ದಯವಿಟ್ಟು ಪರಿಶೀಲನೆ ಮಾಡಿ, ಸದನಕ್ಕೆ ಒಪ್ಪಿಸುವುದಾದರೆ ಲೋಕಾಯುಕ್ತರ ಯೋಗ್ಯತೆ, ಸರ್ಕಾರದ ಆಗುಹೋಗುಗಳು ಹಾಗು ಸರ್ಕಾರ ಯಾವರೀತಿ ನಡೆದುಕೊಳ್ಳುತತಿದೆ ಎಂದು ತಿಳಿಯುತ್ತದೆ. ಇವತ್ತಿನ ಕಾನೂನಿಲ್ಲಿ ಲೋಕಾಯುಕ್ತರನ್ನು ಏನೋ ಮಾಡಿದ್ದೇವೆ ಎಂದು ತಿಪ್ಪೆ ಸಾರಿಸುವ ಕೆಲಸವನ್ನು ಮಾಡುವುದರ ಜೊತೆಗೆ ಇತಿಹಾಸ ಇರುವ ಕಾನೂನನ್ನು ಮರುಕಳಿಸದಂತೆ ಮಾಡಿ ನಮ್ಮ ಅಧಿಕಾರವನ್ನು ಕೆಂಪು ಕೋಟೆಗೆ ಕೊಡುವ ಅವ್ಯವಸ್ಥೆ ಸರಿಯಾದುದ್ದಲ್ಲ. ದಯಮಾಡಿ ಇದನ್ನು ಮಾಡುವಾಗ ನನ್ನ ಸಲಹೆಗಳನ್ನು ಪರಿಗಣಿಸಬೇಕು. ನಾನು ಎಷ್ಟರಮಟ್ಟಿಗೆ ದೊಡ್ಡವನು ಎಂಬ ಮಾತನ್ನು ಹೇಳುತ್ತಿಲ್ಲ. ಮುಜದಿನ ದಿನಗಳಲ್ಲಿ ಆಗುವ ಕೆಲವು ಲೋಪಗಳು ಮತ್ತು ಅನಾಹುತಗಳ ಬಗ್ಗೆ ಗಮನಹರಿಸಬೇಕು. 3 ತಿಂಗಳೀಂದ ಆಗಿರುವ ಕಡತಗಳನ್ನು ಸಭೆಯ

ಮುಂದೆ ಮಂಡಿಸಿದರೆ, ಯಾರ್‍ಯಾರು ಏನೇನು ಯಾರ್‍ಯಾರ ಕೈವಾಡ ಇದೆ, ಸರ್ಕಾರ ಏನು, ಯಾರು ಲೋಕಾಯುಕ್ತರನ್ನು ಉಳಿಸಿಕೊಳ್ಳಲು hidden agend ತಂದಿದೆ ಎಂದು ಹೇಳಿ, ಈ ವಿಧೇಯಕ ನೂರಕ್ಕೆ ನೂರು ಸಮಂಜಸವಾದುದಲ್ಲ. ರಾಜ್ಯದ ಜನರಿಗೆ ಮಾರಕ ವಿಧೇಯಕ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಸರ್ಕಾರ ಒಂದು ವಿಧೇಯಕವನ್ನು ತಂದಿದೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಏಕೆಂದರೆ 1984ನೇ ಇಸವಿಯಲ್ಲಿ ನಾನು ಸದನದಲ್ಲಿ ಇದ್ದೆ.

**ಶ್ರೀ ಟಿ.ಬಿ. ಜಯಚಂದ್ರ:–** ಆಗಲೂ ಇದ್ದರು, ಈಗಲೂ ಇದ್ದಾರೆ ಮುಂದೆಯೂ ಇರುತ್ತಾರೆ, ಅವರು ಖಾಲಿ ಮಾಡುವ ಪಾಟಿ ಅಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಅಂದಿನ ಸರ್ಕಾರಕ್ಕೆ ಇಂತಹ ಲೋಕಾಯುಕ್ತರು ಬರುತ್ತಾರೆ ಎಂದು ಗೊತ್ತಿರಲಿಲ್ಲ. ಅದು ಗೊತ್ತಿದ್ದರೆ ಏನಾದರೂ ಒಂದು ಕಾಯಿದೆ ಮಾಡುತ್ತಿದ್ದರು. ವಿಧೇಯಕದ (1)ರ (ಎ) ಖಂಡದಲ್ಲಿ "ಅಥವಾ ಒಂದು ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧಿಶನಾಗಿ ಪದಧಾರನೆ ಮಾಡಿದ್ದಂಥ" ಎಂಬ ಪದಗಳ ರುವಾಯ "ಅಥವಾ ಹತ್ತು ವರ್ಷಗಳಿಗೆ ಕಡಿಮೆ ಇಲ್ಲದಂತೆ ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ಪರಧಾರಣೆ ಮಾಡಿದ್ದಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು ಎಂದು ಇದ್ದು, ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಾಗಿ ಎಷ್ಟು ವರ್ಷಗಳಿಗೆ ಆಗುತ್ತಾರೆ? 55 ವರ್ಷಗಳ ನಂತರ ಆಗುತ್ತಾರೆ. ಅವರು ನ್ಯಾಯಾಧೀಶರಾಗಿ ಪ್ರಾಕ್ಟೀಸ್ ಮಾಡಿ ಹೆಚ್ಚು–ಕಡಿಮೆ 55 ವರ್ಷಗಳ ನಂತರ ಆಗುತ್ತಾರೆ. ನೇರವಾಗಿ ಆಗುವುದು ಬಹಳ ಕಡಿಮೆ. ಆಗ ಏನು ಮಾಡುತ್ತಾರೆ? 55 ವರ್ಷಗಳ ನಂತರ 10 ವರ್ಷ ಕಳೆದರೆ ಸುಮರು 70 ವರ್ಷಗಳಿಗೆ ಬರುತ್ತದೆ. ಅವರು ಆಗ ಅಲ್ಲಿಗೆ ಬಂದು ಏನು ಮಾಡುತ್ತಾರೆ? ಆಗ ಅರಳು–ಮರಳು ಎಂಬಂತೆ ಇರುತ್ತದೆ. ನಾವು ಇಷ್ಟೆಲ್ಲಾ ಮಾತನಾಡಿದರೂ ರಾಜೀನಾಮೆ ಕೊಡುವ ಪ್ರಜ್ಞೆ ಇಲ್ಲವೆಂದರೆ ಅರಳು ಮರಳು ಇದ್ದಂತೆ ಆಗಿರುತ್ತದೆ. ಇದು ವಯಸ್ಸಿನ ಕಾರಣವಾಗಿದೆ. ಬೇರೆಯವರ್‍ಯಾರಾದರೂ ಇದ್ದರೆ ತಕ್ಷಣವೇ ರಾಜೀನಾಮೆ ಕೊಡುತ್ತಿದ್ದರು. ಮುಖ್ಯೆ ನ್ಯಾಯಾಧೀಶರು ಎನ್ನವುದರ ಬದಲು ಹೈಕೋರ್ಟ್‌ನ ನ್ಯಾಯಾಧೀಶರು ಎಂದರೆ ಆಗುವುದಿಲ್ಲವೇ? ಎಂಬ ಸಲಹೆ ನೀಡಬಯಸುತೇನೆ. ಸಕಾರದಿಂದ ನಿವೃತ್ತ ನ್ಯಾಯಾಧೀಶರನ್ನು ವಿಚಾರಣೆಗೆ ಮಾಡಿದಾಗ ನಾಲ್ಕಾರು ವರ್ಷಗಳು ಹಾಗೆ ಹೋಗಿಬಡುತ್ತದೆ. ಆ ಹಿನ್ನೆಲೆಯಲ್ಲಿ ಮುಖ್ಯ ನ್ಯಾಯಾಧೀಶರ ಬದಲು ಹೈಕೋರ್ಟ್‌ನ ನ್ಯಾಯಾಧೀಶರು ಎಂದು ಹೇಳಿದರೆ ಸೂಕ್ಷ್ಮ ಎಂದು ನನಗೆ ಅನಿಸುತ್ತಿದೆ. ಇದನ್ನು ದಯವಿಟ್ಟು ನೋಡಬೇಕು. ಇದೇ ರೀತಿ 2ರ (ಬಿ) ಖಂಡದಲ್ಲಿ "ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ" ಎಂಬ ಪದಗಳ ತರುವಾಯ "ಐದು ವರ್ಷಗಳಿಗೆ ಕಡಿಮೆ ಇಲ್ಲದಂತೆ" ಎಂಬ ಪದಗಳನ್ನು ಸೇರಿಸಿರುವುದು ಸರಿಯಾಗಿದೆ. ಇದರಲ್ಲಿ ಸೀನಿಯಾರಿಟಿ, ಜ್ಯೂನಿಯಾರಿಟಿ ಬರುತ್ತದೆ. ಇದರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಎಂದು ಇರಬೇಕು, ಬೇರೆ ರಾಜ್ಯದವರು ಏಕೆ ಬೇಕು? ಕರ್ನಾಟಕ ಉಚ್ಚ ನ್ಯಾಯಾಲಯದ ಸೀನಿಯರ್ ಇರುವವರನ್ನು ಲೋಕಾಯುಕ್ತ ಮಾಡುವುದಕ್ಕೆ ಎಂಬ ಪದವನ್ನು ಹಾಕಿದರೆ ಸೂಕ್ತ ಎನಿಸುತ್ತದೆ.

ಮಾನ್ಯ ಸಭಾಪತಿಯವರೆ, ವಿಧಾನ ಮಂಡಲವು ಸುಪ್ರೀಂ ಆಗಿದ್ದು, ಮಾನ್ಯ ಸೋಮಣ್ಣನವರು ಹೇಳಿದಂತೆ ವಿಧಾನ ಮಂಡಲದಲ್ಲಿ ಭ್ರಷ್ಟರೆಂದು ಕಂಡು ಬಂದಾಗ ಪದಚ್ಯುತಿಗೊಳಿಸುತ್ತೇವೆ. ಹೀಗೆ ತೆಗೆದು ನಂತರ ಕೋರ್ಟ್‌ಗೆ ಹೋಗುವ ಅವಕಾಶ ಇರಬಾರದು. ಅದನ್ನು ಕಾಯ್ದೆಯಲ್ಲಿ ಅಳವಡಿಸಬೇಕು, ಇಲ್ಲದಿದ್ದರೆ ಅವರು ಕೋರ್ಟ್‌ಗೆ ಹೋಗಿ ಸ್ಟೇ ತರುತ್ತಾರೆ. 'Blood is thicker than water 'ಎನ್ನುವಂತೆ ಅವರವರು ಅಡ್ಜೆಸ್ಟ್ ಆಗಬಹುದು. ಬಹಳ ಸಾರಿ ಈ ರೀತಿ ನಡೆಯುತ್ತವೆ. ಕೋರ್ಟ್‌ಗೆ ಹೋಗುವ ಆಸ್ಪದ ಇರಬಾರದು, ನಮ್ಮಲ್ಲಿ A.G.,ಇದ್ದು, ನಮ್ಮಲ್ಲಿ ಕಾನೂನು ಇಲಾಖೆ ಮತ್ತು ಮಂತ್ರಿಗಳು ಇರುತ್ತಾರೆ. ಇಲ್ಲಿಯೇ ಚರ್ಚೆ ಮಾಡಿ ಇಲ್ಲಿಯೇ ಪದಚ್ಯುತಿಗೊಳಿಸುವ ಬಗ್ಗೆ ತಿದ್ದುಪಡಿ ಮಾಡಬೇಕು. ಈ ವಿಧೇಯಕದ 6ರಲ್ಲಿ " ರಾಜ್ಯ ಸರ್ಕಾರವು, ಸಭಾಧ್ಯಕ್ಷರು ಅಥವಾ ಸಭಾಪತಿ ಅಥವಾ ಸಂದರ್ಭಾನುಸಾರವಾಗಿ ಇಬ್ಬರೂ ಅಗತ್ಯಪಡಿಸಿದರೆ, ಲೋಕಾಯುಕ್ತ ಅಥವಾ ಸಂದರ್ಭಾನುಸಾರವಾಗಿ ಉಪ ಲೋಕಾಯುಕ್ತನ ವಿರುದ್ಧ ಪ್ರಕರಣವನ್ನು ನಡೆಸಲು ಒಬ್ಬ ವಕೀಲರನ್ನು

ನೇಮಿಸಬಹುದು" ಎಂದು ಹೇಳಿದ್ದಾರೆ. ವಕೀಲರನ್ನು ಏಕೆ ನೇಮಿಸುತ್ತಾರೆ? ವಕೀಲರನ್ನು ನೇಮಿಸುವುದೇ ದೊಡ್ಡ ತಪ್ಪಿದೆ.

**ಶ್ರೀ ಟಿ.ಬಿ. ಜಯಚಂದ್ರ:–** ನ್ಯಾಚುರಲ್ ಜಸ್ಟೀಸ್ ಒದಗಿಸಬೇಕು, ಒಬ್ಬ ಗುಮಾಸ್ತನನ್ನು ತೆಗೆಯಬೇಕಾದರೂ ಅವನಿಗೆ ಅವಕಾಶ ಕೊಡಬೇಕು. ಬಹುತೇಕ ಕೇಸ್‌ಗಳು ಅವಕಾಶ ಕೊಟ್ಟಿಲ್ಲ ಎಂದು ವಾಪಸ್ಸು ಬರುತ್ತಿವೆ. ಅದಿಲ್ಲದಿದ್ದರೆ ಕಷ್ಟವಾಗುತ್ತದೆ.

**ಶ್ರೀ ಬಸವರಾಜ ಹೊರಟ್ಟಿ:–** ಅದಕ್ಕಾಗಿ ಅಡ್ವೋಕೇಟ್ ಜನರಲ್ ಮತ್ತು ಕಾನೂನು ಇಲಾಖೆ ಇದ್ದು ಅವರೊಡನೆ ಕೂಡಿಕೊಳ್ಳಿ. ಆದರೆ ಒಬ್ಬ ವಕೀಲನನ್ನು ನೇಮಿಸಿ, ಅವರಿಗೆ ದಿನಾಂಕ ಕೊಟ್ಟು ಮುಂದಾಕುತ್ತಾ ಹೋಗುವುದು ಬೇಡ. ಎ.ಜಿ ಏಕೆ ಇರುತ್ತಾರೆ? ಎ.ಜಿ ಅವರನ್ನು ಸುಪ್ರೀಂಕೋರ್ಟ್ ಎಲ್ಲಾ ಕಡೆ ಕಳುಹಿಸುತ್ತೇವೆ. ಅವರ ಸಲಹೆಗಳನ್ನು ತೆಗೆದುಕೊಳ್ಳುತ್ತೇವೆ. ಎ.ಜಿ ಮತ್ತು ಕಾನೂನು ಕಾರ್ಯದರ್ಶಿಯವರು ಕೂಡಿಕೊಂಡು ಮಾಡಲಿ. ಅದಕ್ಕೆ ಮತ್ತೊಬ್ಬ ವಕೀಲರನ್ನು ನೇಮಿಸುವಾಗ ಆತನು ಯಾರು, ಏನು, ಆತನು ಅವರಿಗೆ ಬೇಕಾಗಿದ್ದಾನೋ ಅಥವಾ ನಮಗೆ ಬೇಕಾಗಿದ್ದಾನೋ ಎಂದು ಅವನ ಮೂಲ ತೆಗೆಯುವ ಕೆಲಸ ಆಗಬಾರದು. ಆದ್ದರಿಂದ ಎ.ಜಿ ಮತ್ತು ಕಾನೂನು ಕಾರ್ಯದರ್ಶಿಯವರು ಕೂಡಿಕೊಂಡು ಮೂರ್‍ನಾಲ್ಕು ದಿವಸಗಳಲ್ಲಿ ವರದಿ ಕೊಡುವಂತೆ ಹೇಳಲಿ. ನಿರ್ಬಂಧ ಮಾಡದಿದ್ದರೆ ಕಷ್ಟ. ಎ.ಜಿ ಮಾಡಿದರೆ ನ್ಯಾಚುರಲ್ ಜಸ್ಟೀಸ್ ಕೊಟ್ಟಂತೆ ಆಗುತ್ತದೆ. ಇದು ನನ್ನ ಸಲಹೆಯಾಗಿದೆ.

ಇನ್ನು **"**3ರ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಗೊತ್ತುವಳಿ ಸೂಚನೆಯನ್ನು ಸ್ವೀಕರಿಸಿದ ತರುವಾಯ ಆದಷ್ಟು ಬೇಗನೆ, ಸಭಾಧ್ಯಕ್ಷರು ಅಥವಾ ಸಂದರ್ಭಾನುಸಾರವಾಗಿ ಸಭಾಪತಿಯವರು, ತಾನು ಸೂಕ್ತವೆಂದು ಭಾವಿಸಬಹುದಾದಂಥ ವ್ಯಕ್ತಿಗಳು, ಯಾರಾದರೂ ಇದ್ದಲ್ಲಿ, ಅವರೊಡನೆ ಸಮಾಲೋಚಿಸಿದ ತರುವಾಯ ಮತ್ತು ತನಗೆ ಲಭ್ಯವಿರಬಹುದಾದ ಅಂಥ ವಾಸ್ತವಾಂಶಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ಪರಿಗಣಿಸಿದ ತರುವಾಯ ಮತ್ತು ಲೋಕಾಯುಕ್ತ ಅಥವಾ ಸಂದರ್ಭಾನುಸಾರವಾಗಿ ಉಪ ಲೋಕಾಯುಕ್ತನ ಅಸಾಮರ್ಥ್ಯತೆ ಅಥವಾ ದುರ್ವರ್ತನೆಯ ಪ್ರಕರಣ ಇದೆ ಎಂಬುದರ ಬಗ್ಗೆ ಮೇಲ್ನೋಟಕ್ಕೆ ತನಗೆ ಮನದಟ್ಟಾದ ತರುವಾಯ, ಗೊತ್ತುವಳಿಯನ್ನು ಅಂಗೀಕರಿಸಬಹುದು ಅಥವಾ ಅದನ್ನು ಅಂಗೀಕರಿಸುವುದನ್ನು ನಿರಾಕರಿಸಬಹುದು**"** ಎಂದಾಗ ಮಾನ್ಯ ಸಭಾಪತಿಯವರು ಹಾಗೂ ಮಾನ್ಯ ಸಭಾಧ್ಯಕ್ಷರು ಇಬ್ಬರೂ ಕೂಡಿ ಚರ್ಚೆ ಮಾಡಿದ ನಂತರ ಸದನದಲ್ಲಿ ಬರುತ್ತದೆ. ಕೆಳಮನೆಯಲ್ಲಿ ಸಭಾಧ್ಯಕ್ಷರು ಮತ್ತು ಮೇಲ್ಮನೆಯಲ್ಲಿ ಸಭಾಪತಿಯವರು ಮಾಡಿದ ನಂತರ ಮೂರನೇ ಎರಡು ಭಾಗದ ಮೆಜಾರಿಟಿಯಿಂದ ಪಾಸ್ ಆದ ನಂತರ ಖಂಡಿತವಾಗಿ ಕಾನೂನು ಮಾಡಿ, ಮುಂದೆ ಆಸ್ಪದ ಸಿಗದಂತೆ ಮಾಡಬೇಕು. ಸದನ ಸುಪ್ರೀಂ ಆಗಿರುತ್ತದೆ. ಕೇವಲ ಸಿಂಪಲ್ ಮೆಜಾರಿಟಿಯಿಂದ ಸರ್ಕಾರ ಬೇಕಾದಂತೆ ವಿಧೇಯಕಗಳನ್ನು ಪಾಸು ಮಾಡಿಕೊಳ್ಳುತ್ತದೆ ಎನ್ನುವಂತೆ ಆಗುವುದಿಲ್ಲ. ಮೂರನೇ ಎರಡು ಭಾಗದ ಮೆಜಾರಿಟಿಯಿಂದ ಪಾಸ್ ಮಾಡಿದಾಗ ಮುಂದೆ ಯಾವುದೇ ಆಸ್ಪದ ಸಿಗುವುದಿಲ್ಲ ಎಂಬ ಮನವಿ ಇದೆ. ಇದನ್ನು ಸೂಕ್ತವಾಗಿ ಪರಿಗಣಿಸಬೇಕು. ಕೆಪಿಎಸ್‌ಸಿ ವೈಸ್ ಛಾನ್ಸಲರ್ ನೇಮಕಾತಿ ಮಾಡುವಾಗ ಸಮಿತಿ ಮಾಡಿದಂತೆ ಸಮಿತಿ ಮಾಡಿದರೂ ಸೂಕ್ತ. ಎರಡರಲ್ಲಿ ಒಂದು ಮಾಡಬಹುದು. ಮೊನ್ನೆ ಬಸವಕಲ್ಯಾಣದಲ್ಲಿ ಒಬ್ಬರಿಗೆ ಜೈಲಿಗೆ ಹಾಕಿದರು. ಆದ್ದರಿಂದ ಅವರ ಹಿನ್ನೆಲೆಯಲ್ಲಿ ಸಂಪೂರ್ಣವಾಗಿ ಅರ್ಥಮಾಡಿಕೊಂಡು, ಅವರ biodata ಇಟ್ಟುಕೊಂಡು ಮಾಡುವ ಕೆಲಸ ಮಾಡಬೇಕು ಎಂಬ ಸಲಹೆಗಳನ್ನು ಕೊಡಲು ಬಯಸುತ್ತೇನೆ.

**ಡಾ: ಮತ್ತಿಕಟ್ಟಿ ವೀರಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ಸರ್ಕಾರ ತಂದಿರುವ ಲೋಕಾಯುಕ್ತ ತಿದ್ದುಪಡಿ ವಿಧೇಯಕ 2015ನ್ನು ನಾನು ಸ್ವಾಗತಿಸುತ್ತೇನೆ. ನಮ್ಮ ಲೋಕಾಯುಕ್ತ ಏನು ಇದೆ, ಆಡಳಿತ ಸುಧಾರಣಾ ಆಯೋಗ 1966ರ ವರದಿ ಪ್ರಕಾರ ಕೇಂದ್ರದಲ್ಲಿ ಲೋಕಪಾಲ್ ಹಾಗೂ ರಾಜ್ಯಗಳಲ್ಲಿ ಲೋಕಾಯುಕ್ತ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಸಾರ್ವಜನಿಕ ದೂರುಗಳು ಹಾಗೂ ಕುಂದುಕೊರತೆಗಳ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಲು ಕ್ರಮ ಕೈಗೊಳ್ಳಲು ನಿರ್ಧಾರ ತೆಗೆದುಕೊಂಡಿದೆ. ಅದರ ಪ್ರಕಾರ

ಕರ್ನಾಟಕ ಸರ್ಕಾರದಲ್ಲಿ 1984ರಲ್ಲಿ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ರಾಮಕೃಷ್ಣ ಹೆಗಡೆಯವರು ಇಡೀ ದೇಶದಲ್ಲಿಯೇ ಶ್ರೇಷ್ಠವಾದ ಲೋಕಾಯುಕ್ತ ಕಾನೂನನ್ನು ರಾಜ್ಯದಲ್ಲಿ ತಂದರು. ಅವರಿಗೆ ಲೋಕಾಯುಕ್ತರಿಗೆ ಪರಮೋಚ್ಛ ಅಧಿಕಾರವನ್ನು ಕೊಟ್ಟಿದ್ದು, ನ್ಯೂನತೆಗಳನ್ನು ತೆಗೆದುಹಾಕಲು ಅವಕಾಶ ಇರಲಿಲ್ಲ. ಲೋಕಾಯುಕ್ತರು ಬಹಳ ಉತ್ತಮವಾದ ನ್ಯಾಯಾಧೀಶರಾಗಿರುತ್ತಾರೆಂಬ ಕಲ್ಪನೆಯೊಂದಿಗೆ ಕಾನೂನನ್ನು ತಂದರು. ನಮ್ಮ ಲೋಕಾಯುಕ್ತದಲ್ಲಿ ಮುಖ್ಯಮಂತ್ರಿಗಳಿಂದ ಹಿಡಿದು, ಮಂತ್ರಿಗಳು ಶಾಸಕರೆಲ್ಲರನ್ನು ವಿಚಾರಣೆ ಮಾಡುವ ಅಧಿಕಾರವನ್ನು ಕೊಟ್ಟಿದ್ದೇವೆ. ಬೇರೆ ರಾಜ್ಯಗಳಲ್ಲಿ ಈ ರೀತಿ ಇಲ್ಲ. ಇಂತಹ ಲೋಕಾಯುಕ್ತ ಅಧಿಕಾರಕ್ಕೆ ಬರುತ್ತಾನೆ ಎಂದು ಅಂದಿನವರಿಗೆ ಗೊತ್ತಿರಲಿಲ್ಲ. 1986ರಿಂದ ಇಲ್ಲಿಯವರೆಗೆ ಮಾನ್ಯ ಕೌಶಲ್ ಇರಬಹುದು, ಶ್ರೀ ರಬೀಂದ್ರನಾಥ್ ಪೈ ರವರು ಇರಬಹುದು, ಶ್ರೀ ಅಬ್ದುಲ್ ಹಕೀಂರವರು ಇರಬಹುದು, ಶ್ರೀಯುತ ಎನ್.ಎಂ. ವೆಂಕಟಾಚಲಯ್ಯನವರು, ಶ್ರೀ ಸಂತೋಷ್ ಹೆಗಡೆಯವರು ಹಾಗೂ ಸ್ವಲ್ಪ ಕಾಲ ಇದ್ದ ಶ್ರೀ ಶಿವರಾಜ್ ಪಾಟೀಲ್‌ರವರುಗಳೆಲ್ಲರೂ ರಾಜ್ಯ ಶ್ರೇಷ್ಠ ಲೋಕಾಯುಕ್ತರು ಎಂದು ರಾಷ್ಟ್ರಕ್ಕೆ ತೋರಿಸಿಕೊಟ್ಟರು. ಗೌರವ ಬರುವ ರೀತಿ ಪಕ್ಷಾತೀತ ಮತ್ತು ಜಾತ್ಯಾತೀತವಾಗಿ ನಿರ್ಧಾರಗಳನ್ನು ಕೈಗೊಂಡರು. ಅದರಲ್ಲಿ ಶ್ರೀ ವೆಂಕಟಾಚಲಯ್ಯ ಹಾಗೂ ಶ್ರೀ ಸಂತೋಷ್ ಹೆಗಡೆಯವರು ಉತ್ತಮವಾದ ಐತಿಹಾಸಿಕ ನಿರ್ಧಾರಗಳನ್ನು ಮಾಡಿ ರಾಷ್ಟ್ರದಲ್ಲಿ ಗೌರವಕ್ಕೆ ಪಾತ್ರರಾಗುವ ಕೆಲಸ ಮಾಡಿದರು. ಇವತ್ತು ಎಲ್ಲ ಪಕ್ಷಗಳು, ಸಾರ್ವಜನಿಕ ಸಂಘಟನೆಗಳು, ಸಾಮಾಜಿಕ ಕಾರ್ಯಕರ್ತರು, ಸ್ವಾತಂತ್ರ್ಯ ಯೋಧರು ಹಾಗು ಸಮಾಜದ ಒಳಿತಿನ ಚಿಂತನೆ ಇರುವವರು ಇಂದಿನ ಲೋಕಾಯುಕ್ತರಾದ ಶ್ರೀ ಭಾಸ್ಕರ್‌ರಾವ್‌ರವರ ಭ್ರಷ್ಟತೆಯ ಆಗರವನ್ನು ವಿರೋಧಿಸುತ್ತಿದ್ದಾರೆ. ನಮ್ಮ ಹಳ್ಳಿಗಳಲ್ಲಿ ಹೊಲ ಕಾಯಲು ಬೇಲಿ ಹಾಕಿದರೆ ಬೇಲಿಯೇ ಹೊಲವನ್ನು ಮೇಯ್ದಂತೆ ಎಂದು ಹೇಳುತ್ತಾರೆ. ಭ್ರಷ್ಟಾಚಾರವನ್ನು ನಿರ್ಮೂಲನ ಮಾಡಲು ಲೋಕಾಯುಕ್ತರನ್ನು ನಿರ್ಮಾಣ ಮಾಡಲಾಗಿದೆ. ಇದನ್ನು ರಾಜ್ಯದ ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ನಿರ್ಧಾರಗಳನ್ನು ತೆಗೆದುಕೊಂಡು ವಿಧೇಯಕವನ್ನು ಮಾಡಿದ್ದವು. ಭ್ರಷ್ಟಾಚಾರ ನಿರ್ಮೂಲನೆ ಮಾಡುವ ಲೋಕಾಯುಕ್ತರೇ ಮನೆ, ಕಛೇರಿ, ಅವರ ಬಂಧು–ಬಳಗವೇ ಇದ್ದಾರೆ. ಇದನ್ನು ಎಸ್‌ಐಟಿಯವರು ಸಮರ್ಥವಾಗಿ ಕೇಸ್ ವಿಚಾರಣೆ ಮಾಡುತ್ತಿದ್ದು, ಅದರಲ್ಲಿ ನೂರಕ್ಕೆ ನೂರು ಸತ್ಯ ಹೊರಬಂದಿದೆ. ಲೋಕಾಯುಕ್ತ ಹಾಗೂ ಲೋಕಾಯುಕ್ತದ ಕೆಲವು ಅಧಿಕಾರಿಗಳು ಮತ್ತು ಅವರ ಮಗ ನೇರವಾಗಿ ಭ್ರಷ್ಟಾಚಾರದಲ್ಲಿ ಇನ್ವಾಲ್ವ್ ಆಗಿದ್ದು, ಭ್ರಷ್ಟರನ್ನು ರಕ್ಷಿಸುತ್ತಿದ್ದಾರೆ. ಭ್ರಷ್ಟರನ್ನು ಋಣಮುಕ್ತ ಹಾಗೂ ನಿರಪರಾಧಿಗಳನ್ನಾಗಿ ಮಾಡುತ್ತೇವೆಂದು ಕೋಟ್ಯಾಂತರ ರೂಪಾಯಿಗಳ ಲಂಚವನ್ನು ಸಂಗ್ರಹಿಸುತ್ತಿದ್ದಾರೆ ಎಂಬ ವಿಷಯ ಬಂದಿದೆ. ಇದರಿಂದ ರಾಜ್ಯದ ಉದ್ದಗಲಕ್ಕೂ ಪ್ರತಿಭಟನೆ ಪ್ರಾರಂಭವಾಗಿವೆ. ತಮಗೆ ಗೊತ್ತಿರುವಂತೆ ಕೋರ್ಟುಗಳ ವಕೀಲರು ಹಾಗೂ ವಕೀಲರ ಸಂಘಗಳು ಅವರು ರಾಜೀನಾಮೆ ಕೊಡಬೇಕೆಂದು ಪ್ರತಿಭಟನೆ ಮಾಡುತ್ತಿವೆ. ಇದು ದುರ್ದೈವವಾಗಿದ್ದು, ಈ ರಾಜ್ಯದ ಇತಿಹಾಸದಲ್ಲಿ ಸ್ವಲ್ಪ ಆರೋಪ ಬಂದರೆ ರಾಜೀನಾಮೆ ಕೊಡುತ್ತಾರೆ. ಮಾನ್ಯ ಶಿವರಾಜ ಪಾಟೀಲರು ಆದರ್ಶವಾಗಿದ್ದು, ಅವರು ಲೋಕಾಯುಕ್ತರಾಗಿ ನಿಯುಕ್ತಿಗೊಂಡ ನಂತರ ಇದಕ್ಕೂ ಮೊದಲು ಎರಡು ಸೈಟುಗಳ ವಿಚಾರ ಬಂದಾಗ ತಕ್ಷಣವೇ ರಾಜೀನಾಮೆ ಕೊಟ್ಟು ಆದರ್ಶ ವ್ಯಕ್ತಿಯಾದರು. ನಂತರ ಉಪ ಲೋಕಾಯುಕ್ತರಾದ ಶ್ರೀ ಚಂದ್ರಶೇಖರ್‌ರವರ ಮೇಲೆ ಸೈಟುಗಳ ಆರೋಪ ಬಂದಾಗ ರಾಜೀನಾಮೆ ಕೊಟ್ಟರು. ಪಕ್ಷಾತೀತವಾಗಿ ಇಂತಹ ಭ್ರಷ್ಟ ಲೋಕಾಯುಕ್ತರ ಮೇಲೆ ಕ್ರಮ ಕೈಗೊಂಡು ಶಿಕ್ಷಿಸಬೇಕು. ಅದಕ್ಕೆ ಈಗಿರುವ ಕಾನೂನಿನಲ್ಲಿ ಪ್ರಾವಿಜನ್ ಇಲ್ಲ, ಅದು ಬದಲಾವಣೆಯಾಗಬೇಕೆಂದು ಒಂದೂವರೆ ತಿಂಗಳಿನಿಂದ ರಾಜ್ಯದಲ್ಲಿ ಇದೇ ಸುದ್ಧಿಯಾಗಿದೆ. ರಾಜ್ಯದಲ್ಲಿ ಎಲ್ಲರೂ ರೋಸಿಹೋಗಿ ಪ್ರತಿಭಟನೆ ಮಾಡಿದರೂ...... ನಾವು ಒಂದೆರಡು ದಿವಸಗಳಲ್ಲಿ ಲೋಕಾಯುಕ್ತರು ರಾಜೀನಾಮೆ ಕೊಡುತ್ತಾರೆ ಎಂದು ತಿಳಿದಿದ್ದೆವು. ಆದರೆ ದುರ್ದೈವವಾಗಿ ಅವರು ಕೊಡಲಿಲ್ಲ. ನಿಜವಾಗಿ ಆದರ್ಶ ನ್ಯಾಯಾಧೀಶ ಮತ್ತು ವ್ಯಕ್ತಿಯ ಮೇಲೆ ಸಂಶಯ ವ್ಯಕ್ತವಾದಾಗ ತಕ್ಷಣ ರಾಜೀನಾಮೆ ಕೊಡಬೇಕಾಗಿತ್ತು. ಅದನ್ನು ಮಾಡಲಿಲ್ಲ. ಅವರು ಬಹಳಷ್ಟು ಬದಲಾವಣೆ ಮಾಡಲಿಲ್ಲ. ಈ ಕಾಯಿದೆಯಲ್ಲಿ ಲೋಕಾಯುಕ್ತರು ಭ್ರಷ್ಟರಾದಾಗ ಯಾವರೀತಿ ಕ್ರಮ ಕೈಗೊಳ್ಳಬೇಕು ಎಂಬ ವ್ಯಾಪಕ ಚಿಂತನೆಯೊಂದಿಗೆ ಸರ್ಕಾರ ಮಸೂದೆ ತರಲು ಕಾರಣ ಆಯಿತು. ಇದರಲ್ಲಿ ಸಣ್ಣ ಪುಟ್ಟ ಬದಲಾವಣೆ ಬಗ್ಗೆ ಹೇಳಿದ್ದಾರೆ. ಎರಡೂ ಸದನಗಳು ತೀರ್ಮಾನ ತೆಗೆದುಕೊಂಡ ಮೇಲೆ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಿಗೆ

ಕಳುಹಿಸುವ ಅವಶ್ಯಕತೆ ಇಲ್ಲ ಎಂದು ಹೇಳಲು ಇಚ್ಛಿಪಡುತ್ತೇನೆ. ಏಕೆಂದರೆ ನಾವು ಕೇವಲ ಬಹುಮತದ ಮೇಲೆ ಈ ನಿರ್ಧಾರವನ್ನು ತೆಗೆದುಕೊಳ್ಳುತ್ತಿಲ್ಲ. 1984ರ ಲೋಕಾಯುಕ್ತ ಕಾನೂನಿಗೆ ಬಹಳಷ್ಟು ಬದಲಾವಣೆ ಮಾಡದೇ, ಲೋಕಾಯುಕ್ತರು ಭ್ರಷ್ಟರಾದಾಗ ತೆಗೆಯಲು ಏನು ಮಾಡಬೇಕು ಎಂಬ ಬಗ್ಗೆ ಮಾತ್ರ ಈ ವಿಧೇಯಕದಲ್ಲಿ ಇದೆ.

ಆ ದೃಷ್ಟಿಯಿಂದ ಈ ಆ್ಯಕ್ಟನ್ನು ಇಷ್ಟು ತೀವ್ರಗತಿಯಿಂದ ಏಕೆ ತಂದಿದ್ದಾರೆಂದು ಕೆಲವರು ಕೇಳುತ್ತಿದ್ದಾರೆ. ಇದರ ಅವಶ್ಯಕತೆಯಿದೆ. ಕಳೆದ ಎರಡು ತಿಂಗಳುಗಳಿಂದ ಈ ಸಮಸ್ಯೆ ನಮ್ಮ ತಲೆಯ ಮೇಲೆ ತೂಗುಕತ್ತಿಯಾಗಿ ತೂಗುತ್ತಿದೆ. ಕರ್ನಾಟಕ ಸರ್ಕಾರ ಲೋಕಾಯುಕ್ತರನ್ನು ಬೆಂಗಳಿಸುತ್ತಿದೆ ಎನ್ನುವ ಅಭಿಪ್ರಾಯವನ್ನು ವಿರೋಧ ಪಕ್ಷದವರು ಮತ್ತು ಅನೇಕ ಸಂಘಸಂಸ್ಥೆಗಳು ಹೇಳಿವೆ. ಸರ್ಕಾರ ಲೋಕಾಯುಕ್ತನ್ನು ಬೆಂಬಳಿಸುತ್ತಿಲ್ಲ. ಅದಕ್ಕಾಗಿ ಸರ್ಕಾರ ಅತ್ಯಂತ ತೀವ್ರಗತಿಯಿಂದ ಲೋಕಾಯುಕ್ತ ವಸೂದೆಗೆ ತಿದ್ದುಪಡಿಯನ್ನು ತಂದಿದೆ. ಈ ತಿದ್ದುಪಡಿಯಲ್ಲಿರುವ ಎರಡು ವಿಚಾರಗಳನ್ನು ನಾನು ಈಗಾಗಲೇ ಹೇಳಿದ್ದೇನೆ. ಅದನ್ನು ಮತ್ತೊಮ್ಮೆ ಸರ್ಕಾರ ಪರಿಶೀಲಸಬೇಕಾಗಿದೆ. ಎಂದು ಹೇಳುತ್ತಾ, ಈ ಮಸೂದೆಗೆ ನನ್ನ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತಪಡಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೆ, ಮತ್ತೊಮ್ಮೆ ಸರ್ಕಾರ ಎಲ್ಲರ ಜೊತೆಗೆ ಚರ್ಚೆ ನಡೆಸಿ ಸಂಪೂರ್ಣವಾದ ಬದಲಾವಣೆಯನ್ನು ತರಬೇಕಾಗುತ್ತದೆ. ಈಗಾಗಲೇ ರಾಷ್ಟ್ರಮಟ್ಟದಲ್ಲಿ 'ಜನಲೋಕ್ ಪಾಲ್' ವಿಧೇಯಕವನ್ನು ತರಬೇಕೆಂದು ಮಾನ್ಯ ಅಣ್ಣಾ ಹಜಾರೇಯವರ ನೇತೃತ್ವದಲ್ಲಿ ನಡೆದ ಜನಾಂದೋಲನದ ಆಧಾರದ ಮೇಲೆ ಕೆಲವು ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಕೇಂದ್ರಸರ್ಕಾರ ಲೋಕ್‌ಪಾಲ್ ವಿದೇಯಕವನ್ನು ಜಾರಿಗೆ ತಂದಿದೆ. ಅಲ್ಲಿಂದ ಕೆಲವು ಮಾರ್ಗದರ್ಶನಗಳನ್ನು ಪಡೆದುಕೊಂಡು ಎಲ್ಲವನ್ನು ಮತ್ತೊಮ್ಮೆ ಪರಿಶೀಲಿನೆ ಮಾಡಿ, ಸಂಪೂರ್ಣ ಪ್ರಮಾಣದಲ್ಲಿ ಚರ್ಚೆ ನಡೆಸಿ, ಲೋಕಾಯುಕ್ತ ಮಸೂದೆಯನ್ನು ಬದಲಾವಣೆ ಮಾಡುವುದಕ್ಕೆ ಸರ್ಕಾರ ಪ್ರಯತ್ನಿಸಬೇಕು. ಈ ಮಸೂದೆಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಕೆ.ಬಿ. ಶಾಣಪ್ಪ(ನಾಮ ನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಬಸವರಾಜ್ ಹೊರಟ್ಟಿಯವರು ಹೇಳಿದಂತೆ 1984ರಲ್ಲಿ ಲೋಕಾಯುಕ್ತ ಬಿಲ್ ತಂದಾಗ ನಾನು ಸಹ ಈ ಸದನದಲ್ಲಿದ್ದೆ. ಆಗ ಈ ರೀತಿಯ ಗೊಂದಲ ನಿರ್ಮಾಟವಾಗುತ್ತದೆ ಎನ್ನುವ ವಿಚಾರ ಯಾರ ತಲೆಯಲ್ಲಿಯೂ ಸುಳಿದಿರಲಿಲ್ಲ. ನ್ಯಾ॥ವೆಂಕಟಾಚಲಯ್ಯನವರು ಮತ್ತು ನ್ಯಾ॥ಸಂತೋಷ್ ಹೆಗ್ಡೆಯವರು ಲೋಕಾಯುಕ್ತ ಸಂಸ್ಥೆಯಲ್ಲಿದ್ದಾಗ ಯಾವುದೇ ರೀತಿಯ ಗೊಂದಲಗಳು ನಿರ್ಮಾಣವಾಗಿರಲಿಲ್ಲ. ಕಳೆದ 30 ವರ್ಷಗಳಿಂದ ಅನೇಕ ಜನ ನ್ಯಾಯಾಧೀಶರು ಈ ಸಂಸ್ಥೆಯನ್ನು ನಡೆಸಿಕೊಂಡು ಬಂದಿದ್ದಾರೆ. Nobody was prepared to talk about Lokayuktha and about this subject on the floor of the House. ಆ ಸಂಸ್ಥೆಯಲ್ಲಿರುವ ಒಬ್ಬ ವ್ಯಕ್ತಿ ಕೆಟ್ಟವನಾದರೇ, ಈ ರೀತಿಯ ಗೊಂದಲ ಗೋಜಲುಗಳೂ ಪ್ರಾರಂಭವಾಗುತ್ತವೆ.It is not the institution which is wrong. The institution which has been headed by certain personss ಅದರಲ್ಲೂ ಕಳೆದ 3–4 ತಿಂಗಳುಗಳಿಂದ ಒಂದು ರೀತಿಯಾದ ಸಮಸ್ಯೆ ಈ ರಾಜ್ಯದಲ್ಲಿ ಪ್ರಾರಂಭವಾಗಿದೆ.

ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಸೋಮಣ್ಣನವರು ಹೇಳಿದಂತೆ, ಮೂರು ತಿಂಗಳು ಕಳೆದ ಮೇಲೆ ಹೈಕೋರ್ಟ್ ಜಡ್ಜ್ ಒಬ್ಬರು ಈ ಸ್ಥಾನಕ್ಕೆ ಬಂದರೆ, ಅವರು ಈ ರೀತಿ ಮಾಡುವುದಿಲ್ಲ ಎನ್ನು ಗ್ಯಾರಂಟಿ ಏನಿದೆ? What is the guarantee once you refer it after passing the bill from this House? Are you not giving your rope to the High Court Judge to tie you? ನಾವು ಯಾವುದೇ ತೀರ್ಮಾನಗಳನ್ನು ತೆಗೆದುಕೊಂಡು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗೆ ಹೋಗುವ ಅಧಿಕಾರ ಈ ದೇಶದ ಪ್ರತಿಯೊಬ್ಬ ಪ್ರೆಜೆಗೂ ಇದೆ. ಈಗ ಸರ್ಕಾರ ತಂದಿರುವ ತಿದ್ದುಪಡಿ ವಿಧೇಯಕದಲ್ಲಿರುವ ಅವರದೇ ಆಗಿರುವ ಕೆಲವು ಸಬ್ಜೆಕ್ಟ್‌ಗಳಿವೆ. You cannot restrict them to go and appear before the Superme Court. ಇವರನ್ನು ಪದಚ್ಯುತಿಗೊಳಿಸಿದರೆ, he can approach the High Court and the Supreme Court. There is no bar for it. 'ನಾವು ಇಲ್ಲಿ ವಿಧೇಯಕವನ್ನು

ಪಾಸ್ ಮಾಡಿದ್ದೇವೆ ಹೈಕೋರ್ಟ್ ಮಧ್ಯಪ್ರವೇಶ ಮಾಡಬಾರದು' ಎಂದು ಹೇಳುವುದಕ್ಕೆ ಸಾಧ್ಯವಿದೆಯೇ? ಆ ಅಧಿಕಾರ ನಮಗಿದೆಯೇ? ಈ ಸರ್ಕಾರದ ವ್ಯಾಪ್ತಿಯಲ್ಲಿ ಇದನ್ನು ತರಲಾಗಿದೆ. ಆದರೆ, ಮುಂದಿನ ದಿನಗಳಲ್ಲಿ ಇದರ ಪರಿಣಾಮವೇನಾಗಬಹುದು ಎಂದರೆ, ನಮಗೂ ಅವರಿಗೂ ಯಾವುದೇ ಅಧಿಕಾರ ಇರುವುದಿಲ್ಲ. ಲೋಕಾಯುಕ್ತ ವಿಧೇಯಕದಲ್ಲಿ ಅನೇಕ ಪ್ರಕರಣಗಳೂ (ಸೆಕ್ಷನ್)ಇವೆ. ಅನವುಗಳಲ್ಲಿ 3, 6 ಮತ್ತು 12ನೆ ಪ್ರಕರಣಗಳಿಗೆ ಮಾತ್ರ ಸರ್ಕಾರ ತಿದ್ದುಪಡಿಯನ್ನು ತಂದಿದೆ. What about the government departments for which we have already given concurrence to see that they can intervene in it? ಸಹಕಾರ ಇಲಾಖೆಗೆ ತನ್ನದೇ ಆಗಿರುವ Co-operative Act ಇದೆ. ಅದನ್ನು ಉಲ್ಲಂಘನೆ ಮಾಡಿ ಲೋಕಾಯುಕ್ತಕ್ಕೆ ಹೋಗುತ್ತಾರೆ. What is the use of Co-operative Act then? Teh Chief Registrar of the Co-operative Societies is the final judge of the co-operative movement. They go to the Lokayukta. He never sees whether he is empowered to admit hte case or not. He admits it. ಇದೇ ರೀತಿ ಅನೇಕ ಇಲಾಖೆಗಳಿವೆ You have surrendered many departments before the Lokayukta. The why should we be here? ಪ್ರತಿಯೊಂದು ಇಲಾಖೆಯಲ್ಲಿಯೂ ಸಿ.ಸಿ.ಎ ರೂಲ್ಸ್ ಪ್ರಕಾರ ಪ್ರತ್ಯೇಕವಾಗಿ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರವಿದೆ. ನಾವು ಇಷ್ಟೆಲ್ಲ ಮಾಡಿದರೂ ಸಹ ಅವರುಗಳು ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟಿಗೆ ಹೋದರೆ. you have to surrender before them. We have accepted the rule of law. ನಮ್ಮ ವ್ಯಾಪ್ತಿಯಲ್ಲಿ ಕೆ.ಎ.ಟಿ. ಮತುತ ಲೋಕಾಯುಕ್ತ ಸಂಸ್ಥೆಗಳನ್ನು ರಚನೆ ಮಡಲಾಯಿತು. ಈ ಎರಡೂ ಸಂಸ್ಥೆಗಳ ತೀರ್ಮಾನವನ್ನು ಉಲ್ಲಂಘನೆ ಮಾಡಿ. ಹೈಕೋರ್ಟಿಗೆ ಹೋದರೆ, they have got the right to admit it . Therefore whatever rule you are making and whateve law you are passing tommorrow it is not final. ನನಗೆ ಮಟ್ಟಿಗೆ ನಾನು ಹೇಳುತ್ತಿದ್ದೇನೆ. ಮಾನ್ಯ ಉಗ್ರಪ್ಪನವರು ಕಾನೂನು ತಜ್ಞರಾಗಿದ್ದಾರೆ ಅವರು ಈ ಬಗ್ಗೆ ಮಾರ್ಗದರ್ಶನ ಮಾಡಬೇಕಗಿದೆ. ಈ ವಿಧೇಯಕ ಅಂತಿಮವಾಗಿದೆ. ತನಿಖಾ ಪ್ರಕ್ರಿಯೆಯನ್ನು ನ್ಯಾಯಾಧೀಶರು ಮಾಡುತ್ತಾರೆ. A bureaucrat is working under him. Is it a court? ಅವರಿಗೆ ಏನಾದರೂ ನಿರ್ದೇಶನವನ್ನು ಕೊಟ್ಟರೆ, ಹೈಕೋರ್ಟಿನಲ್ಲಿ ಈ ರೀತಿಯೇ ಮಾಡಬೇಕು ಎಂದು ಯಾವ ಕಾರ್ಯವಿಧಾನಗಳನ್ನು ಅನುಸರಿಸಲಾಗುತ್ತದೆ, ಅದನ್ನು ಈ ಸಂಸ್ಥೆಯಲ್ಲಿ ಅನುಸರಿಸಲಗುತ್ತಿದೆಯೇ? ಲೋಕಾಯುಕ್ತ ನ್ಯಾ॥ಭಾಸ್ಕರ್ ರಾವ್ ರವರು ಮತ್ತು ಉಪ ಲೋಕಾಯುಕ್ತರು ಎಂದಿಗೂ ಜಡ್ಜ್ ಆಗಿ ಲೋಕಾಯುಕ್ತದಲ್ಲಿ ಕಾರ್ಯನಿರ್ವಹಿಸಿಲ್ಲ ಸಹ ಎಂದಿಗೂ ಜಡ್ಜ್‌ಗಳ ರೀತಿಯಲ್ಲಿ ಕಾರ್ಯನಿರ್ವಹಿಸಿಲ್ಲ. ಜುಡಿಶಿಯಲ್ ಪವರ್ ಇಟ್ಟುಕೊಂಡು ಅವರುಗಳು ಯಾವ ಪ್ರಕರಣವನ್ನೂ ನಿರ್ವಹಿಸಿಲ್ಲ. The have not conducted it. They depend upon the complaint made by one person and they issue order that he is found guilty, take action. ಅದರ ಬಗ್ಗೆ ಈ ವಿಧೇಯಕದಲ್ಲಿ ಏನನ್ನೂ ಹೇಳಿಲ್ಲ. There fore, it is my sincere request to you, ಯಾವುದೋ ತರಾತುರಿಯಲ್ಲಿ ಲೋಕಾಯುಕ್ತ ವಿಧೇಯಕದಲ್ಲಿನ 3, 6 ಮತ್ತು 12ನೇ ಪ್ರಕರಣಗಳಿಗೆ ತಿದ್ದುಪಡಿಯನ್ನು ತಂದು ಮುಗಿಸುತ್ತಿದ್ದಾರೆ. ಲೋಕಾಯುಕ್ತರ ನೇಮಕಾತಿಯನ್ನು ಯಾವ ರೀತಿಯಲ್ಲಿ ಮಾಡಬೇಕು, ಇವರನ್ನು ಯಾವ ರೀತಿಯಲ್ಲಿ ಪದಚ್ಯುತಿಗೊಳಿಸಬೇಕು ಎನ್ನುವುದಷ್ಟೇ ವಿಚಾರವಲ್ಲ, ಈ ಭ್ರಷ್ಟಾಚಾರದಲ್ಲಿ ಯಾರ್ಯಾರು ಭಾಗಿಗಳಾಗಿದ್ದಾರೆ ಎನ್ನುವುದನ್ನು ಸಹ ನೋಡಬೇಕಾಗುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಅನೇಕ ಮುಗ್ಧಜನರು ಬಲಿಯಾಗಿದ್ದಾರೆ, ಇವತ್ತು ನ್ಯಾ॥ಭಾಸ್ಕರ್‌ರಾವ್ ಕೊಟ್ಟಿರುವ ಹೇಳಿಕೆಯನ್ನು ತಾವುಗಳು ಪತ್ರಿಕೆಗಳಲಲಿ ನೋಡಿರಬಹುದು. 'I.A.S. Officers, I.P.S. Officers, K.P.S. Officers went to the Lokayukta by closing their face and they have given money' ಎಂದು ಹೇಳಿದ್ದಾರೆ. ಇದನ್ನೆಲ್ಲ ನೋಡಬೇಕಾಗುತ್ತದೆ. ಇದೊಮದು ಗಂಭೀರವಾಗಿರುವ ವಿಚಾರವಾಗಿದೆ. ಆದ್ದರಿಂದ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳು ಇರುವಾಗ ಲೋಕಾಯುಕ್ತ ಸಂಸ್ಥೆಯ ಅವಶ್ಯಕತೆಯಿದೇ ಎನ್ನುವುದು ನನ್ನ ಪ್ರಶ್ನೆಯಾಗಿದೆ ಈ ದೇಶದಲ್ಲಿ ಸಂವಿಧಾನಬದ್ಧವಾಗಿ ಹೈಕೋರ್ಟ್, ಸುಪ್ರೀಂಕೋರ್ಟ್ ಮತ್ತು ಸೆಷನ್ ಕೋರ್ಟ್‌ಗಳು ಇವೆ. ಅಲ್ಲಿ ತನಿಖಾಧಿಕಾರಿಗಳು ಇರುವಾಗ ಈ ಸಂಸ್ಥೆಯ ಅಗತ್ಯತೆ ಇದೆಯೇ ಎನ್ನುವುದು ನನ್ನ ಮೂಲಭೂತವಾದ ಪ್ರಶ್ನೆಯಾಗಿದೆ. Fundamentally I ask this question to this House. Is it necessary? If you feel that there is

already a court, why are you creating all these things? For what purpose you are creating all these things? ಇವತ್ತು ಸರ್ಕಾರ ಲೋಕಾಯುಕ್ತ ವಿಧೇಯಕಕ್ಕೆ ತಂದಿರುವ ತಿದ್ದುಪಡಿಯೇ ಅಂತಿಮ ತಿದ್ದುಪಡಿಯಲ್ಲ, ಈ ತಿದ್ದುಪಡಿ ನಮಗೆ ತೃಪ್ತಿಯನ್ನು ತಂದಿಲ್ಲ. ಜನರು ಲೋಕಾಯುಕ್ತ ಸಂಸ್ಥೆಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರದ ಬಗ್ಗೆ ಗಲಾಟೆ ಮಾಡಿದ್ದಾರೆಂದು ಸರ್ಕಾರ ತರಾತುರಿಯಲ್ಲಿ ಈ ತಿದ್ದುಪಡಿಯನ್ನು ತಂದಿದೆಯೇ ಹೊರತು ಅಂತಿಮ ತಿದ್ದುಪಡಿಯ ಬಗ್ಗೆ ಯಾವುದೇ ಸ್ಪಷ್ಟೀಕರಣ ಇಲ್ಲ. After all we are legislators. ಈ ಸದನದ ಮೂಲಕ ಕಾನೂನುಗಳಿಗೆ ಅಂಗೀಕಾರವನ್ನು ಕೊಡುತ್ತೇವೆ. ಕೋರ್ಟಿನ ಮುಂದೆ ಹೋದರೆ ಅದು validity ಆಗಿರುತ್ತದೆಯೇ ಇಲ್ಲವೇ ಎನ್ನುವುದನ್ನು ನೋಡಿ ನಾವು ವಿಧೇಯಕಗಳಿಗೆ ಬಹಳ ತರಾತುರಿಯಲ್ಲಿ ತರಲಾಗಿದೆ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಬೇಕಾಗಿದೆ. ನಿನ್ನೆ ಕೆಳಮನೆಯ ಸಭಾಧ್ಯಕ್ಷರು 'ಶನಿಯನ್ನು ಬೇಗ ತೊಲಗಿಸಿ' ಎನ್ನುವ ಮಾತನ್ನು ಹೇಳಿದ್ದಾರೆ. ಆತ ಶನಿಯೋ ಮತ್ತೊಂದೋ, ಬೈಯುವುದರಿಂದ workout ಆಗುವುದಿಲ್ಲ. We have already given power to him ಈ ವಿಧೇಯಕಕ್ಕೆ ಎರಡೂ ಮನೆಗಳ ಅಂಗೀಕಾರವನ್ನು ಪಡೆದುಕೊಂಡು ಕೂಡಲೇ ಲೋಕಾಯುಕ್ತರನ್ನು ಪದಚ್ಯುತಿಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. Can you remove the Lokayukta immediately? ನ್ಯಾ॥ಭಾಸ್ಕರ್‌ರಾವ್ ಅವರಿಂದಾಗಿ ಸರ್ಕಾರ ಲೋಕಾಯುಕ್ತ ಕಾನೂನಿಗೆ ಬದಲಾವಣೆ ತರಲು ಹೊರಟಿದೆ. ಇದು subjective ಆಗಿದೆ What is your objectivety? Objectivity is that nobody should suffer by this law. ಆ ಉದ್ದೇಶ ಇದ್ದಿದ್ದರೆ ಯಾರೂ suffer ಆಗುತ್ತಿರಲಿಲ್ಲ. ಅನೇಕ ಜನ ಲೋಕಸಭೆ ಸದಸ್ಯರು, ವಿಧಾನಸಭಾ ಸದಸ್ಯರು, ಮಂತ್ರಿಗಳು, ಮುಖ್ಯಮಂತ್ರಿಗಳು ಇದರ ಹಿಡಿತಕ್ಕೆ ಸಿಕ್ಕಿಕೊಂಡು our character has been spolit. ಆಮೇಲೆ ನಿರಪರಾಧಿಗಳೆಂದು ಖಚಿತವಾದರೆ ಆದರಿಂದ ಏನು ಪ್ರಯೋಜನ? It we go to High Court, we are relieved. It says, `No case has been proved ಆದರೆ, ಜನರ ಮಧ್ಯೆ ನಮ್ಮ ಗೌರವ ಹೋಯಿತು. ಸುಮಾರು ಒಂದು ತಿಂಗಳು, ಮೂರು ತಿಂಗಳ ಕಾಲ ಅವರುಗಳನ್ನು ಜೈಲಿಗೆ ಕಳುಹಿಸಲಾಯಿತು. Whether our character has not been spolit by it? ಇದರಿಂದಾಗಿ ನಮ್ಮ character assassination ಆಗಿರುವುದನ್ನು ಯಾರು ವಾಪಸ್ಸು ಕೊಡುತ್ತಾರೆ? Therefore `fundamentally whether it is necessary to have a Lokayukta' ಎನ್ನುವುದು ನನ್ನ ಪ್ರಶ್ನೆಯಾಗಿದೆ. when there is a court in our country and that is the Supreme Court, constitutionally they are valid. ಸರ್ಕಾರ time being ಎಂದು ಲೋಕಾಯುಕ್ತ ಕಾನೂನಿಗೆ ತಂದಿರುವ ಈ ತಿದ್ದುಪಡಿಗಳನ್ನು ನಆನು ಸ್ವಾಗತಿಸುತ್ತಿದ್ದೇನೆ. But fundamenatally whether it is going to be viable or not . ಎನ್ನುವುದನ್ನು ಮತ್ತೊಮ್ಮೆ ಯೋಚನೆ ಮಾಡಿ ಈ ವಿಧೇಯಕವನ್ನು ತರಬೇಕೆನ್ನುವುದು ನನ್ನ ಸಲಹೆಯಾಗಿದೆ.

**(1–00 ಗಂಟೆ)**

**ಡಾ॥ ಎಂ.ಆರ್.ಹುಲಿನಾಯ್ಕರ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ತಾವು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ವಂದಿಸುತ್ತೇನೆ. ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತಕ್ಕೆ ಸಂಬಂಧಿಸಿದಂತೆ ನಾಲ್ಕು ಉದ್ದೇಶಗಳನ್ನಿಟ್ಟುಕೊಂಡು ಈ ಒಂದು ಮಸೂದೆಯನ್ನೇನು ತಂದಿದ್ದಾರೆ, ಇದನ್ನು ನಾನು ಸ್ವಾಗತಿಸುತ್ತಾ ಇದೊಂದು ಪರಿಪೂರ್ಣವಾದಂಥ ಮಸೂದೆ ಅಲ್ಲವೆಂದು ನಾನಾದರೂ ಭಾವಿಸುತ್ತೇನೆ. ಲೋಕಾಯುಕ್ತ ಸಂಸ್ಥೆಯನ್ನು ನಾವೇಕೆ ಪ್ರಾರಂಭ ಮಾಡಿದ್ದೇವೆ ಎನ್ನುವಂಥ ಉದ್ದೇಶವನ್ನು ನೋಡುತ್ತಿದ್ದರೆ, ಅಂದಿನ ಸರ್ಕಾರಗಳು ಆ ಒಂದು ಪರಿಮಿತಿಯನ್ನು ದಾಟಿ ನ್ಯಾಯಾಲಯಗಳಿಗೆ ಪೂರಕವಾಗಿ ಜನಸಾಮಾನ್ಯರ ಕುಂದು–ಕೊರತೆಗಳಿಗೆ ಸರಿಯಾದಂಥ ಉತ್ತರವನ್ನು ಕೊಡಬೇಕು ಎನ್ನುವಂಥ ಸದುದ್ದೇಶದಿಂದ 1983ರಲ್ಲಿ ನೀಡಿದ election promise ಪ್ರಕಾರ ಅಂದು ಶ್ರೀ ರಾಮಕೃಷ್ಣ ಹೆಗಡೆಯವರು ಒಂದು ಪಂಚಾಯತ್‌ರಾಜ್ ಮತ್ತೊಂದು ಲೋಕಾಯುಕ್ತಕ್ಕೆ ಸಂಬಂಧಿಸಿದಂತೆ ಪ್ರತಿಷ್ಠಿತ ಕಾಯ್ದೆಗಳಾಗಿ ಬಂದವು. ಜನ ಅದನ್ನು ಬಹಳಷ್ಟು ಸ್ವಾಗತ ಮಾಡಿದರು. ಕಳೆದ 30 ವರ್ಷಗಳಲ್ಲಿ ಅದರ ಉಪಯೋಗ ಮತ್ತು ದುರುಪಯೋಗಗಳನ್ನು ನಾವು ಕಂಡಿದ್ದೇವೆ. ಮೊದಲಿನ 15 ವರ್ಷಗಳನ್ನು ನೋಡಿದರೆ ಅದೊಂದು ಅಜ್ಞಾತ ವಾಸದ ಸ್ಥಿತಿಯಲ್ಲಿತ್ತು. ಲೋಕಾಯುಕ್ತದ ಬಗ್ಗೆ ನಮಗೆ ಸರಿಯಾದ ಕಲ್ಪನೆ ಇರಲಿಲ್ಲ. ಮುಂದಿನ ಅವಧಿ ಒಂದು ಸುವರ್ಣ

ಯುಗವೆಂದು ನಾವು ಭಾವಿಸಬೇಕು. ಜನ ಸಾಮಾನ್ಯವಾಗಿ ಆ ರೀತಿಯಾಗಿ ಭಾವಿಸುತ್ತಿದ್ದಾರೆ. ಲೋಕಾಯುಕ್ತದಲ್ಲಿ ಶ್ರೀ ಎಂ.ಎನ್.ವೆಂಕಟಾಚಲಯ್ಯನವರು ಮತ್ತು ಶ್ರೀ ಸಂತೋಷ ಹೆಗಡೆಯವರು ಇದ್ದಂಥ ಸಮಯದಲ್ಲಿ ಅವರು ವ್ಯಾಪಕವಾಗಿ ತನಿಖೆಯನ್ನು ಮಾಡಿದರು. ಬಹಳಷ್ಟು ಜನರ ವಿಶ್ವಾಸಾರ್ಹತೆಗೆ ಅದು ಒಂದು ಕಾರಣವಾಯಿತು. ಈಗಿನ ಅವಧಿಯಲ್ಲಿ ಇದೊಂದು ಅಧಃಪತನದ ಒಂದು ಸ್ಥಿತಿ ಎಂದು ನಾವಾದರೂ ಭಾವಿಸಬೇಕಾಗುತ್ತದೆ. ಇಂದು ಹಾದಿ–ಬೀದಿಯಲ್ಲಿ ಸಾಮಾನ್ಯ ಜನ, ಮಾಧ್ಯಮದವರು ಎಲ್ಲಿಗೆ ಹೋದರೂ ಲೋಕಾಯುಕ್ತದ ಬಗ್ಗೆ ಮಾತನಾಡುವಂಥಾದ್ದು, ಭ್ರಷ್ಟಾಚಾರದ ಬಗ್ಗೆ ಮಾತನಾಡುವಂಥಾದ್ದು, ಈ ಒಂದು ಸಂಸ್ಥೆ, ವ್ಯಕ್ತಿ ಎಲ್ಲವನ್ನು ಕಳಂಕಿತವಾಗಿ ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ.

ಇದರ ಜೊತೆಯಲ್ಲಿ ನಮ್ಮ ದೇಶದಲ್ಲಿ ಆರ್‌ಟಿಐ ಕಾಯ್ದೆ ಬಂದಾಗ ನಾವು ಬಹಳ ಸಂತೋಷ ಪಟ್ಟೆವು, ಪಾರದರ್ಶಕವಾದಂಥ ಆಡಳಿತ ಬರುತ್ತಿದೆ ಎಂದು ಹೆಮ್ಮೆ ಪಟ್ಟೆವು. ಆದರೆ yellow journalist ಏನು ಹುಟ್ಟಿಕೊಂಡರು. ಅವರು RTI grab ನಲ್ಲಿ ಕೆಲವರ ಬಗ್ಗೆ ಒಂದಷ್ಟು ಮಾಹಿತಿಗಳನ್ನು ಸಂಗ್ರಹ ಮಾಡಿ ಲೋಕಾಯುಕ್ತ ಸಂಸ್ಥೆಗೆ ಅರ್ಜಿಯನ್ನು ಹಾಕುವಂಥಾದ್ದು, ಅಲ್ಲಿರುವ ಪೊಲೀಸ್ ವ್ಯವಸ್ಥೆ ಜೊತೆ ಸೇರಿಕೊಂಡು ಬಹಳಷ್ಟು ಸಜ್ಜನರಿಗೆ, ಉತ್ತಮವಾದಂಥ ಜನರಿಗೆ ತೊಂದರೆಯನ್ನು ಕೊಟ್ಟಿದ್ದು, ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿಯೂ ಸಹ RTI activists ಒಂದು ಎಸಿ ರೂಂನಲ್ಲಿ ಕುಳಿತುಕೊಂಡು ಇಂಟರ್‌ನೆಟ್ ಮುಖಾಂತರ ಅನೇಕ ಜನರನ್ನು ಅವರ subordinates ಮಾಡಿಕೊಂಡು ಬಹಳಷ್ಟು ರಾಜಕಾರಣಿಗಳ, ಅಧಿಕಾರಿಗಳ ಮಾಹಿತಿಯನ್ನು ಪಡೆದುಕೊಂಡು negotiation ಮಾಡುವಂಥಾದ್ದು, ಅದು ಅಲ್ಲಿಗೆ settle ಆದರೆ ಸರಿ. ಇಲ್ಲಿ negotiation ಎಂದರೆ ಹಣಕಾಸಿನ ವ್ಯವಹಾರಗಳು. ಇಲ್ಲದೇ ಹೋದರೆ harass ಮಾಡುತ್ತಿದ್ದರು. ಲೋಕಾಯುಕ್ತ ಎಂದರೆ ಸಜ್ಜನರಿಗೆ ಮತ್ತು ನೀತಿವಂತರಿಗೆ ತೊಂದರೆಯನ್ನು ಕೊಡುವಂಥ ಒಂದು ಸಂಸ್ಥೆಯಾಗಿ ಕಳೆದ ಕೆಲವು ದಿವಸಗಳಿಂದ ಮಾರ್ಪಾಡಾಗಿದೆ. ಇದಕ್ಕೆ ಕೇವಲ ಲೋಕಾಯುಕ್ತ ಸಂಸ್ಥೆ ಒಂದೇ ಕಾರಣವಲ್ಲ. ಇದಕ್ಕೆ ಸರ್ಕಾರಗಳು ಸಹ ಕಾರಣವೆಂದು ನಾನಾದರೂ ಭಾವಿಸುತ್ತಿದ್ದೇನೆ. 1999 ರಿಂದ 2013–14ರವರೆವಿಗೂ ಎಷ್ಟು ಜನ ಹಿರಿಯ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಧಾಳಿ ಮಾಡಲು ಸರ್ಕಾರದ ಅನುಮತಿಯನ್ನು ತೆಗೆದುಕೊಂಡಿದ್ದಾರೆ. ಇದು ಯಾವುದನ್ನು ಯಾರಿಗೂ ಕೊಡಲಿಲ್ಲ. ಅಂದರೆ ಈ ಸಮಯದಲ್ಲಿ ಏನಾಯಿತು ಎಂದರೆ, ಅವರು ಆ ಜನರ ಜೊತೆಗೆ negotiation ಮಾಡಲಿಕ್ಕೆ, ಹಣಕಾಸಿನ ವ್ಯವಹಾರವನ್ನು ಮಾಡಲಿಕ್ಕೆ ನಾವು ಸಮಯವನ್ನು ಕೊಟ್ಟ ಹಾಗಾಯಿತು. ಲೋಕಾಯುಕ್ತದವರು ಎಷ್ಟು ಜನಗಳಿಗೆ ಸಂಬಂಧಿಸಿದಂತೆ ಧಾಳಿಯನ್ನು ಮಾಡಿದ್ದಾರೋ ಅದನ್ನು ಒಂದು ತಿಂಗಳು ಅಥವಾ ಎರಡು ತಿಂಗಳ ಅವಧಿಯಲ್ಲಿ ಅಥವಾ ನಿರ್ದಿಷ್ಟ ಅವಧಿಯಲ್ಲಿ ಯಾರ ಮೇಲೂ ಸಹ ಚಾರ್ಜ್‌ಶೀಟ್ ಹಾಕಲಿಲ್ಲ. ಅದರ ಅರ್ಥ ಅವರಿಗೆ ಸಮಯವನ್ನು ಕೊಟ್ಟು ಅಲ್ಲಿ negotiation ಮಾಡುವಂಥಾದ್ದು. ಹೀಗೆ ನಮ್ಮ ಸರ್ಕಾರಗಳು ಸಹಿತ ನಿಯಮಿತವಾಗಿ ಬದ್ಧತೆಯಿಂದ ಕಾರ್ಯ ಮಾಡದೇ ಇರುವ ಕಾರಣಕ್ಕಾಗಿ ಲೋಕಾಯುಕ್ತರು ಉಪ ಮಾರ್ಗಗಳನ್ನು ಕಂಡುಕೊಂಡು ಜನರಿಗೆ ಕಿರುಕುಳ ಕೊಡುವಂಥ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಈ ಎಲ್ಲಾ ಕಾರಣಗಳಿಂದಾಗಿ ಜನರಲ್ಲಿ ಆಕ್ರೋಶ ಮೂಡಿದೆ. ಯುವಕರ ಇದರ ಬಗ್ಗೆ ಇಂದು ಬೇರೆ ರೀತಿಯಲ್ಲಿ ವಿಚಾರ ಮಾಡುತ್ತಾರೆ. ಯಾರಾದರೂ ಸತ್ಯವನ್ನು ಮಾತನಾಡಿದರೆ ಅವರ ಹಿಂದೆ ಸಾವಿರಾರು ಜನ ಬೆನ್ನಟ್ಟಿ ಹೋಗುವಂಥ ಒಂದು ಸಮಯವನ್ನು ನಾವು ನೋಡುತ್ತಿದ್ದೇವೆ. ಏಕೆಂದರೆ ಜನರು ವಿದ್ಯಾವಂತರಾಗಿದ್ದಾರೆ, ಅವರಿಗೆ ತಾಂತ್ರಿಕ ಜ್ಞಾನ ಬಂದಿದೆ. ಬೇರೆ ರೀತಿಯಲ್ಲಿ ವಿಚಾರ ಮಾಡುವಂಥ ಯುವಕರು ನಮ್ಮ ಮಧ್ಯದಲ್ಲಿ ಇರುವುದರಿಂದ ಮತ್ತು ಆ ಕಾರಣದಿಂದಾಗಿ ಅಣ್ಣಾ ಹಜಾರೆಯವರು ಇಷ್ಟು ಜನಮನ್ನಣೆಯನ್ನು ಪಡೆದುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಅಂದರೆ ಸತ್ಯದ ಬಗ್ಗೆ ಜನರಿಗೆ ಒಳ್ಳೆಯ ಕಲ್ಪನೆ ಬರುವಂಥ ಸಮಯದಲ್ಲಿ ಈ ಮೋಸಗಳೆಲ್ಲಾ ಜನರ ಕ್ರೋಧವನ್ನು ಹೆಚ್ಚು ಮಾಡಿ ನಮಗೆ ಕಳೆದ ಎರಡು–ಮೂರು ತಿಂಗಳುಗಳಲ್ಲಿ ಸರ್ಕಾರದ ಕಡೆಯಿಂದ ಮುಜುಗರವಾಯಿತು. ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ನಾವು ಮುಜುಗರಕ್ಕೆ ಒಳಪಟ್ಟೆವು. ನಾವು ಎಷ್ಟು ಅಸಹಾಯಕರಾಗಿದ್ದೇವೆಂದರೆ, ನಾವು ಜನರ ಈ ಕೂಗಾಟ, ನೋವು ಇರಬಹುದು, ಇವೆಲ್ಲವನ್ನು ನೋಡಿಕೊಂಡು ಅಸಹಾಯಕರಾಗಿ ಇವರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ. ಆ ಪರಿಣಾಮವಾಗಿ ಸರ್ಕಾರ ಒಂದು ಮಸೂದೆಯನ್ನು ತಂದಿದೆ.

ಆದರೆ ಇದು ಪೂರ್ಣವಾಗಿರತಕ್ಕಂಥ ಒಂದು ಮಸೂದೆಯಲ್ಲ. ಈ ಮಸೂದೆಯನ್ನು ತರಲಿಕ್ಕೆ ನಮಗೆ ಸ್ವತಂತ್ರವಾದಂಥ ಅಧಿಕಾರ ಇರುವಂಥಾದ್ದು, ಬೇಕಾದರೆ ಸರ್ಕಾರ legal opinion ತೆಗೆದುಕೊಳ್ಳಲಿ. ಆದರೆ ಇದನ್ನು ನಾವು ಪುನಃ ಉಚ್ಚ ನ್ಯಾಯಾಲಯಕ್ಕೆ ಕಳುಹಿಸುವಂಥಾದ್ದು, ಅವರಿದನ್ನು nullify ಮಾಡುವಂಥಾದ್ದು ಆಗಬಾರದೆಂದು ನಾನಾದರೂ ಭಾವಿಸುತ್ತೇನೆ. ಲೋಕಾಯುಕ್ತ ಎಂದರೆ ಇದು ಕೇವಲ ಶಿಕ್ಷೆಯನ್ನು ವಿಧಿಸುವಂಥ ಒಂದು ಸಂಸ್ಥೆ ಎನ್ನುವಂಥ ಭಾವನೆ ಸರ್ಕಾರಕ್ಕೂ ಸಹ ಬಂದಿದೆ ಮತ್ತು ಅಧಿಕಾರಿಗಳಿಗೂ ಸಹ ಬಂದಿದೆ. ಇದು ಹಾಗೆ ಆಗಬಾರದು. ಏಕೆಂದರೆ ಈ ಸಂಸ್ಥೆಯ ಆಧಾರದ ಮೇಲೆ ಅನೇಕ ಇಲಾಖೆಗಳನ್ನು ನಾವು ಒಳ್ಳೆಯ ರೀತಿಯಲ್ಲಿ ನಡೆಸಿಕೊಳ್ಳಲಿಕ್ಕೆ ಸಹಾಯವಾಗುವಂಥ ವಾತಾವರಣವನ್ನು ನಿರ್ಮಾಣ ಮಾಡಲಿಕ್ಕಾದರೂ ನಾವು ಕೆಲವು ಕಾಯ್ದೆಗಳನ್ನು ತರಬೇಕಾಗುತ್ತದೆ. ಈಗಾಗಲೇ ಉಚ್ಚ ನ್ಯಾಯಾಲಯದಲ್ಲಿ ಒಂದು ವಿಜಿಲೆನ್ಸ್ ಸೆಲ್ ಇದೆ. ಅದು ನ್ಯಾಯಾಧೀಶರ ಚಟುವಟಿಕೆ ಮೇಲೆ, ಅವರ ಕಾರ್ಯವೈಖರಿ ಮೇಲೆ ಅಥವಾ ದೂರಿನ ಮೇಲೆ ತನಿಖೆಯನ್ನು ಮಾಡುವಂಥಾದ್ದು ಮತ್ತು ಕ್ರಮ ತೆಗೆದುಕೊಳ್ಳುವಂಥ ಒಂದು ಪ್ರಕ್ರಿಯೆ ನ್ಯಾಯಾಂಗ ವ್ಯವಸ್ಥೆಯಲ್ಲಿರುವುದರಿಂದ ಅಂತಹ ಒಂದು ಪ್ರಕ್ರಿಯೆಯನ್ನು ನಾವೂ ಸಹ ಲೋಕಾಯುಕ್ತ ಸಂಸ್ಥೆಗೆ ಅಳವಡಿಸಿದರೆ ಒಂದು ವಿಜಿಲೆನ್ಸ್ ಸಮಿತಿ ಅಥವಾ ಉಚ್ಚ ನ್ಯಾಯಾಲಯದಲ್ಲಿ ಏನು ವಿಜಿಲೆನ್ಸ್ ಸೆಲ್ ಇದೆ ಅದನ್ನು ವಿಸ್ತರಣೆ ಮಾಡಿ ಇವರನ್ನು ಸಹ ಅದರಡಿಯಲ್ಲಿ ತಂದರೆ ಇವರ ಚಟುವಟಿಕೆಗಳನ್ನು ನೋಡುವಂಥಾದ್ದು, observe ಮಾಡುವಂಥಾದ್ದು, ಇವರ ಮೇಲೆ disciplinary action ತೆಗೆದುಕೊಳ್ಳುವಂಥಾದ್ದು ಆಗಬೇಕು ಮತ್ತು ಅದರ ಜೊತೆಯಲ್ಲಿ ಜನರ ದೂರುಗಳನ್ನು ನೋಡುವಂಥಾದ್ದು ಸಹಿತ ಆಗಬೇಕಾಗುತ್ತದೆ. ಇದರ ಜೊತೆಯಲ್ಲಿ ಈ ಲೋಕಾಯುಕ್ತದಲ್ಲಿರುವವರು ಸತ್ಯಹರಿಶ್ಚಂದ್ರನ ಮುಂದುವರೆದ ಭಾಗದವರೇನೂ ಅಲ್ಲ. ಇವರು ಸಹ ಸಾಮಾನ್ಯ ಜನ. ಇವರು ಸರ್ಕಾರದ ಈ ನಿಬಂಧನೆಗಳಿಗೊಳಪಟ್ಟು, ಜನರಿಂದ ಆರಿಸಲ್ಪಟ್ಟ ಮುಖ್ಯಮಂತ್ರಿಗಳು, ಸಭಾಧ್ಯಕ್ಷರು, ಸಭಾಪತಿಯವರು, ವಿರೋಧ ಪಕ್ಷದ ನಾಯಕರುಗಳು ಇವರೆಲ್ಲರ ಒಪ್ಪಿಗೆಯನ್ನು ಪಡೆದುಕೊಂಡು ಆಯ್ಕೆಯಾದಂಥವರಿಗೆ ಒಂದು ಲಿಮಿಟೇಶನ್ ಇರುತ್ತದೆ. ಹೀಗಾಗಿ ಇವರಿಗೆ ನಿರ್ಬಂಧನೆಯನ್ನು ಮಾಡುವಂಥ ಕಾಯ್ದೆಗಳನ್ನು ಸಹ ನಾವು ರೂಢಿಸಬೇಕಾಗುತ್ತದೆ. ಅದರ ಜೊತೆಯಲ್ಲಿ ಈಗ ಏನಾಗುತ್ತಿದೆ ಎಂದರೆ, ಲೋಕಾಯುಕ್ತರು ಎಂದರೆ ವಯಸ್ಸಾದ ಮೇಲೆ, ಅವರು ನಿವೃತ್ತಿಯನ್ನು ಹೊಂದಿದ ನಂತರ ಒಂದು ತಂಗುದಾಣವಾಗಿ ನಿರ್ಮಾಣವಾಗುತ್ತಿದೆ. ಇದು ಹಾಗಾಗಬಾರದು. ಅದಕ್ಕಾಗಿ ಒಂದು ವಯೋಮಿತಿಯನ್ನು ಇಡಬೇಕು ಮತ್ತು ಅವರ ಹಿಂದಿನ track record ಅನ್ನು ಸಹ ನೋಡಬೇಕಾಗುತ್ತದೆ. ಇವೆಲ್ಲವನ್ನು ನಾವು ಗಣನೆಗೆ ತೆಗೆದುಕೊಂಡು ಮುಂಬರುವ ದಿನಗಳಲ್ಲಿ ಸವಿಸ್ತಾರವಾದಂಥ ಒಂದು ಲೋಕಾಯುಕ್ತ ವಿಧೇಯಕವನ್ನು ತರುವಂಥಾದ್ದು, ಜೊತೆಗೆ ನಾವಿದನ್ನು ಉಚ್ಚ ನ್ಯಾಯಾಲಯಕ್ಕೆ ಕೊಟ್ಟು ಅವರಿದನ್ನು nullify ಮಾಡುವಂಥಾದ್ದು ಆಗಬಾರದು. ಅಂತಿಮವಾಗಿ ಇದು ಎರಡೂ ಸದನಗಳಲ್ಲಿ ಆಗಬೇಕು. ಹೆಚ್ಚೆಂದರೆ Governor consent ಗೆ ಹೋಗುವುದು usual process ನಲ್ಲಿ ಆಗುತ್ತದೆ. ಅಲ್ಲಿಗೆ ಈ ಪ್ರಕ್ರಿಯೆ ಮುಗಿದರೆ ಒಳ್ಳೆಯದು ಎಂದು ನಾನಾದರೂ ಭಾವಿಸುತ್ತೇನೆ. ಒಂದು ವಿಜಿಲೆನ್ಸ್ ಸಮಿತಿಯನ್ನು ನಾವು ನೇಮಕ ಮಾಡಿಕೊಂಡು ಇವರ ಎಲ್ಲಾ ಚಟುವಟಿಕೆಗಳನ್ನು ಗಮನಿಸುವಂಥಾದ್ದು ಆಗಬೇಕು. Judicial system ನಲ್ಲಿರುವಂಥ ವ್ಯವಸ್ಥೆಯನ್ನು ನಾವು ಇಲ್ಲಿಯೂ ಸಹ ತರಬೇಕು. ಹಾಗೆಯೇ ಅಲ್ಲಿ ಎಕ್ಸ್‌ಪರ್ಟ್ಸ್ ಸಹ ಇರಬೇಕಾಗುತ್ತದೆ. ಲೋಕಾಯುಕ್ತ ಪೊಲೀಸರು ದೂರುಗಳು ಬಂದಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯ ಶಿಕ್ಷಣ ತಜ್ಞರ ಬಗ್ಗೆ ಕಾಮೆಂಟ್ ಮಾಡುತ್ತಾರೆ, ತನಿಖೆ ಮಾಡುತ್ತಾರೆ ಅಥವಾ ಇನ್ನಾವುದೊ ಒಂದು ಸಂಸ್ಥೆಯಲ್ಲಿ ತನಿಖೆಯನ್ನು ಮಾಡುತ್ತಾರೆ. ಆ ರೀತಿ ಆಗಬಾರದು. ಈ ಸಂಸ್ಥೆಗಳು ಸಹಿತ ಕೆಲವು ಎಕ್ಸ್‌ಪರ್ಟ್ಸ್‌ನ್ನು ಅಲ್ಲಿಗೆ ನಾವು ನೇಮಕ ಮಾಡಿ ಅವರಿಗೆ ಪ್ರಾಧಾನ್ಯತೆಯನ್ನು ಕೊಟ್ಟು ನಾವು ತನಿಖೆಯನ್ನು ಮಾಡಬೇಕಾಗುತ್ತದೆ. ಈ ರೀತಿ ಕೆಲವು ಆ ಮೂಲಾಗ್ರವಾದಂಥ ಬದಲಾವಣೆಗಳೊಂದಿಗೆ ಮತ್ತೊಂದು ಸಾರಿ ಈ ರೀತಿಯ ಮಸೂದೆಯನ್ನು ತಂದರೆ ಇದರಿಂದ ನಿಜವಾಗಿಯೂ ಸಹ ಜನರಿಗೆ ಅನುಕೂಲವಾಗುತ್ತದೆ ಮತ್ತು ನಮಗೆ ಆದರ್ಶಗಳು ಕಾಣಲಿಕ್ಕೆ ಸಿಗುತ್ತದೆ. RTI activities ಬಗ್ಗೆ ಇದರಲ್ಲಿ ಏನಾದರೂ ಮಾಡಲಿಕ್ಕೆ ಸಾಧ್ಯತೆ ಇದೆಯೇ ಎನ್ನುವುದನ್ನು ದಯಮಾಡಿ ಸರ್ಕಾರ ನೋಡಬೇಕು.

ಏಕೆಂದರೆ ಇದು ರಾಜಕಾರಣದಲ್ಲಿ ಮತ್ತೊಬ್ಬರ ತೇಜೋವಧೆಯನ್ನು ಮಾಡಲಿಕ್ಕೆ ಅಥವಾ ಕೆಲವೇ ಜನ ಇದೊಂದು ಉದ್ಯೋಗ ಎಂದುಕೊಂಡು ಅದೊಂದು ದಂಧೆಯನ್ನು ಮಾಡಲಿಕ್ಕೆ ಇದು ಉಪಯೋಗವಾಗುತ್ತಿದೆ.

ಎಷ್ಟು ಸಲ ಅವರನ್ನು ಕೇಳಬಹುದು, ಎಂಥವರನ್ನು ಕೇಳಬಹುದು, ಅವರ ಉದ್ದೇಶ ಏನಿದೆ, ಇಂಥದ್ದರ ಬಗ್ಗೆ ನಿರ್ಬಂಧ ಹಾಕಬೇಕು. ಲೋಕಾಯುಕ್ತರ ಜೊತೆ ಜೊತೆ ಇವರು ಕೆಲಸ ಮಾಡುತ್ತಿರುವುದರಿಂದ ಅದರ ಅವಶ್ಯಕತೆ ಬಹಳಷ್ಟು ಇದೆ ಎಂದು ಭಾವಿಸಿ ನನಗೆ ಅವಕಾಶ ಕೊಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಇವತ್ತು ನಾವು ಭ್ರಷ್ಟಾಚಾರ ನಿಯಂತ್ರಣಕ್ಕೆ ಸಂಬಂಧಪಟ್ಟಂತೆ ತಿದ್ದುಪಡಿಯನ್ನು ತಂದಿದ್ದೇವೆ. ಒಬ್ಬ ಮನುಷ್ಯನನ್ನು ಒಂದು ಸ್ಥಾನದಲ್ಲಿ ಕೂರಿಸಿದಾಗ ಸ್ಥಾನದ ಗೌರವವನ್ನು ಕಾಪಾಡುವ ವ್ಯಕ್ತಿತ್ವ ಅಲ್ಲಿ ಮುಖ್ಯವಾಗುತ್ತದೆ. ದುರಾದೃಷ್ಟವಶಾತ್ ಇವತ್ತಿನ ದಿವಸ ಆ ಸ್ಥಾನದ ಗೌರವವನ್ನು ಕಳೆದುಕೊಳ್ಳುವಂತಹ, ಸ್ವೇಚ್ಛಾಚಾರಿಯಾಗಿ ನಡೆದುಕೊಳ್ಳುವಂಥ ವ್ಯಕ್ತಿಗಳು ಬರುತ್ತಿರುವುದರಿಂದ ಸಮಾಜದ್ರೋಹದ ಕೆಲಸ ನಡೆಯುತ್ತಿದೆ. ಇದಕ್ಕೆ ತಾವು ಕಾನೂನು ತಿದ್ದುಪಡಿ ತಂದಿದ್ದೀರಿ. ಅದನ್ನು ನಾನು ಒಪ್ಪುತ್ತೇವೆ. ಮಾನ್ಯ ಸಭಾಪತಿಗಳೆ, ನಮ್ಮ ದೇಶದ ಕಾನೂನು ಹೇಗಿದೆ ಎಂದರೆ, ಅದು ರಬ್ಬರ್ ಇದ್ದ ಹಾಗೆ. ರಬ್ಬರ್ flexible ಆಗಿದ್ದು ಅದನ್ನು ಎಲ್ಲಿಯವರೆಗಾದರೂ ಎಳೆದುಕೊಂಡು ಹೋಗುತ್ತಿರಬಹುದು. ನೀವೆಷ್ಟೇ ಹುಷಾರಾಗಿ ಕಾನೂನು ಮಾಡಿದರೂ ಸಹ ಕಳ್ಳರು ತಪ್ಪಿಸಿಕೊಳ್ಳುವುದಕ್ಕೆ ಯಾವುದಾದರೂ ಒಂದು ಮೂಲೆಯಲ್ಲಿ ಅವಕಾಶ ಇದ್ದೇ ಇರುತ್ತದೆ. ಅದಕ್ಕೆ ನಾನು, ನಮ್ಮ ಕಾನೂನು ಒಂದು ರಬ್ಬರ್ ಇದ್ದ ಹಾಗೆ. Flexibility ಇದೆ ಎಂದು ಹೇಳಿದೆ. ಎಷ್ಟೇ ಕಣ್ಣಲ್ಲಿ ಕಣ್ಣಿಟ್ಟು ಮಾಡಿದರೂ ಸಹ ಕಳ್ಳರನ್ನು ಹಿಡಿಯವುದು ಬಹಳ ಕಷ್ಟವಾಗಿದೆ. ಆ ಸ್ಥಾನಕ್ಕೆ ಒಬ್ಬ ವ್ಯಕ್ತಿಯನ್ನು ಕೂರಿಸುವಾಗ ಬಹಳ ಎಚ್ಚರಿಕೆ ವಹಿಸಬೇಕಾಗುತ್ತದೆ. ಎಚ್ಚರಿಕೆಯಿಂದ ಮಾಡಿದಾಗ ಮಾತ್ರ ಆ ಸ್ಥಾನದ ಗೌರವ ಉಳಿಯುತ್ತದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ನಮ್ಮ ದೇಶದಲ್ಲಿ ಇವತ್ತು ಹಣಕ್ಕಾಗಿ ಏನನ್ನು ಬೇಕಾದರೂ ಮಾರಿಕೊಳ್ಳುತ್ತಿದ್ದೇವೆ. ದೇವರನ್ನು ಮಾರುತ್ತಿದ್ದೇವೆ, ಗಾಂಧಿಯನ್ನು ಮಾರುತ್ತಿದ್ದೇವೆ, ಮನುಷ್ಯನ ಕಿಡ್ನಿಗಳನ್ನು ಮಾರುವಂಥದ್ದು ಹೀಗೆ ದುರಾಸೆ ಎನ್ನುವುದು ನಮ್ಮ ಮನಸ್ಸಿನಲ್ಲಿ ಬಂದುಬಿಟ್ಟಿದೆ. ಇಂತಹ ಸಂದರ್ಭದಲ್ಲಿ ನಾವು ಕಠಿಣವಾದ ಕಾನೂನು ರೂಪಿಸುವ ಅವಶ್ಯಕತೆ ಇದೆ ಎಂದು ನಾನು ಉದಾಹರಣೆ ಕೊಟ್ಟೆ ಅಷ್ಟೆ. ನಮ್ಮ ಶಾಸಕಾಂಗದಲ್ಲಿ ನಡೆಯುವ ಕೆಲವು ಭ್ರಷ್ಟಾಚಾರಗಳನ್ನು exemption ಎಂದು ಬಿಟ್ಟುಬಿಡುತ್ತೇವೆ. ನಮ್ಮ ಕೈಕೆಳಗೆ, ನಮ್ಮ ಕಣ್ಣೆದುರಿಗೆ ನಡೆಯುವ ಭ್ರಷ್ಟಾಚಾರವನ್ನು .

**ಶ್ರೀ ಹೆಚ್.ಎಂ.ರೇವಣ್ಣ:–** ತಾವು ಮಾತನಾಡುತ್ತಾ, ಗಾಂಧಿಯನ್ನು ಮಾರುತ್ತಿದ್ದೇವೆ ಎಂದು ಹೇಳಿದಿರಿ. ಅದನ್ನು ಹೇಳಿ ಹಾಗೆಯೇ ಬಿಟ್ಟುಬಿಟ್ಟರೆ ಅದು ದಾಖಲೆಗೆ ಹೋಗುತ್ತದೆ. ಯಾರು, ಏನು, ಗಾಂಧಿಯನ್ನು ಎಲ್ಲಿ ಮಾರಿದ್ದಾರೆ ಅದನ್ನು ಹೇಳಿ. ಮಾರಿದ್ದಾರೆ ಎಂದರೇನು? ನಾನು ದಾರಿತಪ್ಪಿಸುತ್ತಿಲ್ಲ . . .

**(ಗೊಂದಲ)**

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಅದರ ಬಗ್ಗೆ ಹೇಳುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಗಾಂಧಿಯನ್ನು ಮಾರಿದರು ಎಂದು ಹೇಳುವುದು ಅಷ್ಟೊಂದು ಸಮಂಜಸ ಅಲ್ಲ. ಆದರೆ ಗಾಂಧಿಯವರ ಹೆಸರಿನಲ್ಲೇ ಭ್ರಷ್ಟಾಚಾರ ಮಾಡುತ್ತಿದ್ದಾರೆ ಎನ್ನುವುದು ನಿಮ್ಮ ವಾದವಾಗಿದೆ. ಬಹುಶಃ, ನಮ್ಮ ವಿಧಾನಸೌಧ ಕಟ್ಟಡದ ಪಕ್ಕದಲ್ಲಿ ಇರುವ ಗಾಂಧಿಯನ್ನು ಮಾಡುವಂಥದ್ದರಲ್ಲಿ ದುಡ್ಡು ಮಾಡಿದರು ಎನ್ನುವುದು ನಿಮ್ಮ ವಾದ ಅಲ್ಲವೇ? ಇದು ನಮ್ಮೆಲ್ಲರ ವಾದ ಕೂಡ ಆಗಿದೆ. . .

**ಡಾ: ಡಿ.ಎಸ್.ವೀರಯ್ಯ:–** ದಿಕ್ಕು ತಪ್ಪಿಸಬೇಡಿ, ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. . .

**ಶ್ರೀ ಆರ್.ಕೆ. ಸಿದ್ದರಾಮಣ್ಣ:–** ಅಂಥದ್ದೇನಾದರೂ ಇದ್ದರೆ ದಾಖಲೆ ಕೊಡಿ. ದಾಖಲೆ ಕೊಟ್ಟು ಮಾತನಾಡಿ. ಸುಮ್ಮನೆ ಈ ರೀತಿ ಉಲ್ಲೇಖ ಮಾಡುವಂಥದ್ದು ಸರಿಯಲ್ಲ.

**ಶ್ರೀ ವಿ.ಎಸ್. ಉಗ್ರಪ್ಪ:–** ಆಯಿತು, ಹಾಗಾದರೆ ಅದರ ಮೇಲೆ ಚರ್ಚೆ ಮಾಡೋಣ, ಬೇಕಾದರೆ ಸದನ ಸಮಿತಿ ಆಗಲಿ. ಈಗ ಹೇಗಾಗಿದೆ ಎಂದರೆ ನಮ್ಮ ಲೆಜಿಸ್ಲೇಚರ್‌ನಲ್ಲೇ ಕೆಲವೆಲ್ಲಾ ನಡೆಯುತ್ತಿದೆ. ನಾವು ಬೇರೆಯವರಿಗೆ ಹೇಳಬೇಕಾದರೆ ನಾವು ಶುದ್ಧವಾಗಿರಬೇಕಾಗುತ್ತದೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ನಾನೂ ಅದನ್ನೇ ಹೇಳುತ್ತಿದ್ದೇನೆ . . .

**ಶ್ರೀ ವಿ.ಎಸ್. ಉಗ್ರಪ್ಪ:–** ಗಾಂಧಿಯನ್ನು ಮಾರುತ್ತಿದ್ದೇವೆ ಎಂದು ಹೇಳಿದರು. ಹಾಗೆ ಹೇಳುವುದು ಬೇಡ. ಗಾಂಧಿಯವರ ಹೆಸರಿನಲ್ಲಿ ಭ್ರಷ್ಟಾಚಾರ ಆಗಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಈ ಭ್ರಷ್ಟಾಚಾರವನ್ನು ನಿಜಕ್ಕೂ ಯಾರು ಮಾಡಿದ್ದಾರೆ ಎನ್ನುವುದರ ಬಗ್ಗೆ ಗಮನಹರಿಸುವಂಥದ್ದು ಸೂಕ್ತ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಉಗ್ರಪ್ಪನವರೇ, ನಮ್ಮಲ್ಲೂ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಏನು ಹೇಳುತ್ತಿದ್ದೀರೋ ಅದರ ಬಗ್ಗೆ ಹೇಳಿ ಎಂದು ಕೇಳುತ್ತಿದ್ದೇವೆ. . . .

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಗಳೆ, ನಮ್ಮ ಕಣ್ಣೆದುರಿಗೆ ನಡೆಯುವಂತಹ ಭ್ರಷ್ಟಾಚಾರವನ್ನು ಶಾಸಕರಾದ ನಾವು ನೋಡಿಕೊಂಡು ಸುಮ್ಮನಿದ್ದೇವೆ. ಒಂದು ಉದಾಹರಣೆ ಹೇಳುತ್ತೇನೆ. ವಿಧಾನಸೌಧ ಕಟ್ಟಡದ ಒಂದು ಮೂಲೆಯಲ್ಲಿ, ಮಾನ್ಯ ಕೆಂಗೆಲ್‌ಹನುಮಂತಯ್ಯನವರ ಕಾಲದ ರೋಸ್‌ವುಡ್ ಫರ್ನಿಚರ್ಸ್ ಏನಿವೆ ಅವುಗಳೆಲ್ಲವನ್ನೂ ತೆಗೆದು ಈಚೆಗೆ ಬಿಸಾಕಿದ್ದಾರೆ. ಒಳ್ಳೊಳ್ಳೆ ಕಟ್ಟಡಗಳನ್ನು ಕಟ್ಟಿದ್ದರೂ ಅದನ್ನು ರಿನೋವೇಷನ್ ಮಾಡುತ್ತೇವೆ ಎಂದು ಕೋಟಿಗಟ್ಟಲೆ ಖರ್ಚು ಮಾಡುತ್ತಿದ್ದಾರೆ. ಹೊರಗಡೆ ನಡೆಯುವ ಭ್ರಷ್ಟಾಚಾರದ ಬಗ್ಗೆ ಕೇಳುತ್ತಿದ್ದೇವೆ ಆದರೆ ನಮ್ಮ ಕಣ್ಣೆದುರಿಗೆ ನಡೆಯುವಂಥದ್ದರ ಬಗ್ಗೆ ಕೇಳುತ್ತಿಲ್ಲ. ಭ್ರಷ್ಟಾಚಾರಕ್ಕೆ ಲಗಾಮು ಇರಬೇಕು ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಮಾನ್ಯ ಸಭಾಪತಿಗಳೆ, ವಿಧೇಯಕದ ಸೆಕ್ಷನ್.6ಕ್ಕೆ ಸಂಬಂಧಪಟ್ಟಂತೆ ಕನ್ನಡ ಮತ್ತು ಇಂಗ್ಲಿಷ್ ವರ್ಷನ್‌ನಲ್ಲಿರುವುದನ್ನು ಗಮನಿಸಬೇಕು. ಕನ್ನಡ ವರ್ಷನ್‌ನಲ್ಲಿ **"ಲೋಕಾಯುಕ್ತ ಅಥವಾ ಉಪಲೋಕಾಯುಕ್ತನನ್ನು ಅವನ ವಿಷಯದಲ್ಲಿ ರುಜುವಾತಾದ ದುರ್ವತನೆಯೆ ಮೇಲೆ"** ಎಂದಿದೆ. ಇಂಗ್ಲಿಷ್ ವರ್ಷನ್‌ನಲ್ಲಿ ***"6.Removal of Lokayukta or Upalokayukta.-****(1) The Lokayukta or an Upalokayukta shall not be removed from his office except by an order of the Governor…"* ಎಂದಿದೆ. ರುಜುವಾತದ ಆದಮೇಲೆ ಎನ್ನುವುದಕ್ಕೆ definition ಇಲ್ಲ. ದಯವಿಟ್ಟು ಗಮನಿಸಬೇಕು. ಆದರೆ ಮುಂದೆ ಇದೆ. ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ನೋಡಿದಾಗ ಅಲ್ಲಿ ಸಮನಾಗಿ ಬಂದಿಲ್ಲ. ಇದನ್ನು ಸರಿ ಮಾಡಿಕೊಳ್ಳಬೇಕಾದ ಅವಶ್ಯಕತೆ ಇದೆ ಎನ್ನುವುದು ನನ್ನ ಭಾವನೆ. ತಾವು ಅದರ ಬಗ್ಗೆ ಯೋಚನೆ ಮಾಡಿ. ಮತ್ತೆ, Retired Chief Justice or Supreme Court Judge ಎಂದು ಮೊದಲೇ ಆ್ಯಕ್ಟ್‌ನಲ್ಲಿದೆ. ಅದು ಹಾಗೆಯೇ ಇರಬೇಕು ಎನ್ನುವುದು ನನ್ನ ಅಭಿಪ್ರಾಯ. ಕಾರಣವೇನೆಂದರೆ, ನಮ್ಮ ಶಾಸಕರನ್ನು, ಮಂತ್ರಿಗಳನ್ನು, ಮುಖ್ಯಮಂತ್ರಿಗಳನ್ನೂ ಸೇರಿಸುವುದರಿಂದ ಆ ಸ್ಥಾನಕ್ಕೆ ಸುಪ್ರೀಂ ಕೋರ್ಟ್ ಜಡ್ಜ್ ಅಥವಾ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಾಗಿವಂಥವರು ಇರಬೇಕಾದುದು ಅವಶ್ಯಕವಾಗಿದೆ ಎನ್ನುವುದು ನನ್ನ ಅಭಿಪ್ರಾಯ. ಈ ನಿಟ್ಟಿನಲ್ಲಿ ಏನಾದರೂ ಯೋಚನೆ ಮಾಡುವುದಿದ್ದರೆ ಮಾಡಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಪುಟ್ಟಸ್ವಾಮಿಯವರೇ ತಾವೇನು ಕನ್ನಡ ಮತ್ತು ಇಂಗ್ಲಿಷ್ ಪ್ರತಿಗಳಲ್ಲಿ ವ್ಯತ್ಯಾಸ ಇದೆ ಎಂದು ಹೇಳಿದಿರೋ ಆ ವಾಕ್ಯ ಕೊನೆಯಲ್ಲಿ ಬಂದಿದೆ. . .

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಇದೆ, ಆದರೆ ಆ ಪ್ಯಾರಾದಲ್ಲಿ ಇಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಕೊನೆಯಲ್ಲಿ for such removal on the ground of rude or such behavior… ಎಂದಿದೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಅದು ಬೇರೆ ಕಡೆ ಇದೆ, ಆ ಪ್ಯಾರಾದಲ್ಲಿ ಇಲ್ಲ ಎಂದು ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಅದು word to word ನೋಡಿದಾಗ ಬರುತ್ತಿಲ್ಲ ಆದರೆ ಱಟಜಿಱ meaning will come.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಲೋಕಾಯುಕ್ತರನ್ನು ಅವರನ್ನು ತೆಗೆಯಬೇಕಾದರೆ misbehavior and incapability ಎಂದಿದೆ. Misbehaviour of Lokayukta ಇದರಲ್ಲಿ, ಲೋಕಾಯುಕ್ತರೇ ಕಾಯಿದೆಯನ್ನು ಕೆಲವು ಸಲ ಪಾಲನೆ ಮಾಡುವುದಿಲ್ಲ. ತಾವು ಒಂದು ಮಾತು ಹೇಳಿದಿರಿ. ಪುಸ್ತಕದ 9ಎ ನಲ್ಲಿ, ಸಾಮಾಜಿಕ ನ್ಯಾಯವನ್ನು ಕೊಡಬೇಕು ಎಂಬುದಿದೆ. ಇದುವರೆಗೆ ನಡೆಸಿರುವಂತಹ ಹಲವಾರು ಕೇಸ್‌ಗಳಲ್ಲಿ ಮಾನ್ಯ ಸಂತೋಷ್ ಹೆಗ್ಗಡೆಯವರೂ ಸೇರಿದಂತೆ ಸಾಮಾಜಿಕ ನ್ಯಾಯವನ್ನು ಕೊಡುವಂಥದ್ದರಲ್ಲಿ ವಿಫಲರಾಗಿದ್ದಾರೆ. ಅದು ಒಂದು ಕೋರ್ಟ್‌ನಲ್ಲಿ ಪ್ರಶ್ನೆಯಾಗಿ ಹೈಕೋರ್ಟ್‌ನಲ್ಲಿ quash ಆಗಿದೆ. ಲೋಕಾಯುಕ್ತ decision quash ಆಯಿತು. ಇದಕ್ಕೆ, 9ಎ ಪಾಲನೆ ಮಾಡಿಲ್ಲ ಎನ್ನುವುದು ಕಾರಣವಾಗಿದೆ.

ಆದ್ದರಿಂದ ಎಲ್ಲಾದರೂ ಒಂದು ಕಡೆ ಲೋಕಾಯುಕ್ತ ಆಕ್ಟ್‌ನಲ್ಲಿ provision ಏನಿದೆ, ಒಂದು ವಿಚಾರಣೆ ಮಾಡಬೇಕಾಗಿದ್ದರೆ, ಸಾಮಾಜಿಕ ನ್ಯಾಯ ಕೊಡಬೇಕಾಗಿದ್ದರೆ ನಾವು ಏನೇನು ಇದರಲ್ಲಿ lay down ಮಾಡಿದ್ದೆವೆ ಇವೆಲ್ಲವೂ ಸೇರಿಸಬೇಕಾಗಿತ್ತು ಎನ್ನುವುದು ನನ್ನ ಅಭಿಪ್ರಾಯ. 1984 ರಲ್ಲಿ ಈ ಆಕ್ಟ್‌ನ್ನು ತಂದಾಗ ನಾನು ಸದನದಲ್ಲಿ ಇದ್ದೆ. ನಾನು 1982ರಲ್ಲಿ ಎಂ.ಎಲ್.ಸಿ. ಆಗಿದ್ದೇ. ಅವತ್ತು ಕಾಂಗ್ರೆಸ್‌ನವರು ಕೂಡ wholehearted ಆಗಿ ಈ ವಿಧೇಯಕಕ್ಕೆ suport ಮಾಡಿದ್ದರು. ಅದಕ್ಕೆ ಕಾರಣವೇನೆಂದರೆ, ಭ್ರಷ್ಟಾಚಾರ ಹೋಗಬೇಕೆಂದು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ತಂದಿದ್ದಕ್ಕೆ ನಾವು ಗೌರವವನ್ನು ಕೊಟ್ಟಿದ್ದೇವೆ. ಆದ್ದರಿಂದ ಯಾವ ಲೋಕಾಯುಕ್ತ misbehavior ಮಾಡುತ್ತಾರೆಯೋ, misbehavior ಎಂದರೆ ತನ್ನ ಆಕ್ಟ್‌ನಲ್ಲಿರತಕ್ಕಂಥದ್ದನ್ನು ಪಾಲನೆ ಮಾಡದಿದ್ದಾಗ ಅದಕ್ಕೆ ನಿಗಾ ಇಡಬೇಕು.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ತೀರ್ಪು ಕೊಡುವುದರಲ್ಲಿ ಸಾಮಾಜಿಕ ನ್ಯಾಯ ಹೇಗೆ ಬರುತ್ತದೆ?

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ನಾನು ಮಂತ್ರಿಗಳಿಗೆ ಏನು ಹೇಳಿದೆ ಎಂದರೆ, ನಿಮ್ಮ ಮೇಲೆ ದೂರು ಬಂದರೆ ನಿಮಗೊಂದು ನೋಟಿಸ್ ಕೊಡಬೇಕು. ನಿಮ್ಮಿಂದ ವಿವರಣೆಯನ್ನು ತೆಗೆದುಕೊಳ್ಳಬೇಕು, ಆ ವಿವರಣೆಯನ್ನು examine ಮಾಡಬೇಕು. ಅದಾದ ಮೇಲೆ judgement ಕೊಡಬೇಕು. ಆ ರೀತಿ ಈ ಆಕ್ಟ್‌ನಲ್ಲೇ ಇದೆ. ಅದಕ್ಕಾಗಿಯೇ ನಾನು ಸಾಮಾಜಿಕ ನ್ಯಾಯ ಎಂದು ಹೇಳಲಿಲ್ಲ, ನ್ಯಾಯಾವನ್ನು ಕೇಳಿ ಎಂದು ಹೇಳಿದೆ.

**ಸಭಾಪತಿಯವರು:–** ಮೋಟಮ್ಮನವರೇ, crosstalk ಬೇಡ. ನಿಮಗೆ ಅವಕಾಶ ಕೊಟ್ಟಾಗ ನೀವು ಮಾತನಾಡಿ.

**ಶ್ರೀ ಎಸ್.ಆರ್. ಪಾಟೀಲ್:–** ಸಾಮಾನ್ಯ ನ್ಯಾಯ.

**Sri B.J. PUTTASWAMY :-** Natural Justice.

**Sri. S.R.PATIL:-** That is Natural Justice. Social Justice is different from Natural Justice.

**Sri B.J. PUTTASWAMY :-** Natural Justice. ಎಂದರೆ ಏನು? ಸ್ವಾಭಾವಿಕ ನ್ಯಾಯ.

**ಶ್ರೀ ಎಸ್.ಆರ್. ಪಾಟೀಲ್:–** ಸಾಮಾನ್ಯ ನ್ಯಾಯ ಒಂದನೆಯ ನಿಯಮವೆಂದರೆ Natural Justice.

**Sri B.J. PUTTASWAMY :-** ಮಾನ್ಯ ಸಭಾಪತಿಯವರೆ, Natural Justice. ಕೊಡಬೇಕು ಎನ್ನತಕ್ಕಂಥದ್ದು ಇಲ್ಲಿ ಇದೆ. Natural Justice ಅನ್ನು ಕೊಡದೆ ವಿಫಲರಾದಾಗ ಲೋಕಾಯುಕ್ತರ ಮೇಲೆ ಅದನ್ನು misbehavior ಮತ್ತು ಅಧಿಕಾರ ದುರುಪಯೋಗ ಎನ್ನುವುದನ್ನು ನಾವು point out ಮಡುವುದಕ್ಕೆ provision ಇರಬೇಕಾಗಿತ್ತು ಎನ್ನುವುದು ನನ್ನ ಅಭಿಪ್ರಾಯ. ಏಕೆಂದರೆ, ಅವರನ್ನು misbehavior ನೀವು ಎಂದರೆ ದೂರ

ಯಾರಿಗೆ ಕೊಡುವುದು? ದೂರು ಕೊಡಬೇಕು ಎಂದರೆ ಹೇಳಿದ್ದಾರೆ. ಈಗ ಆಕ್ಟ್ ನಲ್ಲಿ ಏನಿದೆ. ಮೊದಲನೆಯದಾಗಿ ದೂರು ಬರಬೇಕು. 35 ಎಂ.ಎಲ್.ಎ.ಗಳು ದೂರುಗಳನ್ನು ಸಭಾಕ್ಷರವರಿಗೆ, ಸಭಾಪತಿಯವರಿಗೆ ಕೊಡಬೇಕು. ಅವರು Resolution ಅನ್ನು ತರಬೇಕೋ ಬಿಡಬೇಕೋ ಎಂದು ಹೈಕೋರ್ಟ್‌ಗೆ ಕಳುಹಿಸಬೇಕು. ಹೈಕೋರ್ಟ್‌ನವರು judgement ಕೊಟ್ಟ ಮೇಲೆ ತಾನೆ ನಾವು Resolution ತರುವುದು? ಮಾನ್ಯ ಕಾನೂನು ಮಂತ್ರಿಯವರೇ, ನನು ಹೇಳಿದ್ದು ಸರಿಯೇ? ನಾವು ಮೊದಲನೆಯದಾಗಿ, 35 ಜನ ಸಭಾಧ್ಯಕ್ಷರಿಗೆ, ಸಭಾಪತಿಯವರಿಗೆ ಪತ್ರವನ್ನು ಕೊಡುತ್ತೇವೆ, ಅವರು ಕೊಟ್ಟ ಮೇಲೆ ಸಭಾಧ್ಯಕ್ಷರು, ಸಭಾಪತಿಯವರು ಹೈಕೋರ್ಟ್ ಜಡ್ಜ್‌ಗೆ refer ಮಾಡುತ್ತಾರೆ. ಅಲ್ಲಿ ನ್ಯಾಯಧಿಕರಣವಾಗಿ ಇದು eligiblity ಇದೆ ತಪ್ಪು ಮಾಡಿದ್ದಾರೆಂದು ಗೊತಾದ ಮೇಲೆ ನೀವು ಅಸೆಂಬ್ಲಿಗೆ ತರುತ್ತೀರಿ. ಇದು ಸರಿಯಲ್ಲವೇ? ಈ ರೀತಿ ನಾನು ಈ ವಿಧೇಯಕದ ಬಗ್ಗೆ ಅರ್ಥ ಮಾಡಿಕೊಂಡಿದ್ದೇನೆ. ಇದು ಆದಾಗ ಯಾರೋ ಒಬ್ಬರು ಲೋಕಾಯುಕ್ತದಲ್ಲಿ misbehavior ಮಾಡಿರುತ್ತಾರೆ, ದೂರನ್ನು ಯಾರಿಗೆ ಕೊಡಬೇಕು, ಲೋಕಾಯುಕ್ತರಿಗೆ ಕೊಡಬೇಕೆ, ಪಾಟಿ ಯಾರಿಗೆ ಕೊಡಬೇಕು? ನಾವು ಶಾಸಕರಿಗೆ ಬಂದಾಗ ಕೊಡುತ್ತೇವೆ. ಈ ಸಲ ಏನಾಯಿತು ಎಂದರೆ ನಮ್ಮ ಮಾಧ್ಯದವರಿಗೆ ನಾವು ಧನ್ಯವಾದ ಹೇಳಬೇಕು. ಅವರು ಇದನ್ನು ಹೆಚ್ಚಿಗೆ ಪ್ರಚಾರ ಮಾಡಿದರು ಮತ್ತು ಹೊರಗಡೆ ಸಾಮಾಜಿಕ ಹೋರಾಟಗಾರರು ಪ್ರತಿಭಟನೆ ಮಡಿದರು. ಆಗ ಇದು ಬೆಳಕಿಗೆ ಬಂತು. ಈಗ ದೂರನ್ನು ಎಲ್ಲಿ ಕೊಡಬೇಕೆಂದು ಈ ವಿಧೇಯಕದಲ್ಲಿ ಹೇಳಲಿಲ್ಲ.

**ಶ್ರೀ ಎಸ್.ಆರ್. ಪಾಟೀಲ್(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ದುರ್ವರ್ತನೆ ಎಂದರೆ ಲೋಕಾಯುಕ್ತರು, ಉಪ ಲೋಹಾಯುಕ್ತರು ಈಗ suppose outraging the modesty of a woman. ಅವರು ಅಲ್ಲಿ ಹೋದಾಗ ದುರ್ವರ್ತನೆ ಮಡಿದ್ದರೆ ಅದು notice ಬಂದುಬಿಡುತ್ತದೆ. ಯಾರು aggrieved party ಇರುತ್ತಾರೆ ಅವರು ನಾನು ಬೇಟಿಯಾದಂತಹ ಸಮಯದಲ್ಲಿ ಹೀಗೆ ನನ್ನ ಜೊತೆ ಲೋಕಾಯುಕ್ತರು, ಉಪಲೋಕಾಯುಕ್ತರು ದುರ್ವರ್ತನೆ ಮಾಡಿದರು ಎಂದು ಯಾವುದೇ ಒಂದು ಸಂದರ್ಭದಲ್ಲಿ ಅದು ದುರ್ವರ್ತನೆ ಆಗಿದೆ ಎಂದು notice ಬಂದ ಕೂಡಲೇ one-third Members of both the Houses either to the Chairman or to the Speakerಗೆ complaint ಕೊಡುತ್ತಾರೆ. ಮುಂದೆ ಅದು ಹೈಕೋರ್ಟ್ ಜಡ್ಜ್‌ಗೆ refer ಆಗುತ್ತದೆ. ಅವರು ದುರ್ವತ್ನೆ ಸಿದ್ದವಾಗಿದೆ ಎಂದ ನಂತರ one-third ನಲ್ಲಿ pass ಆಗಿ ಮುಂದೆ ರಾಜ್ಯಪಾಲರಿಗೆ ಹೋಗಿ ಅವರಿಗೆ impeachment ಆಗುತ್ತದೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಯಾರಿಗೆ ದೂರನ್ನು ಕೊಡಬೇಕು? ಲೋಕಾಯುಕ್ತರು ದುಡ್ಡು ಕೇಳುತ್ತಾರೆ, ದುರ್ವತ್ನೆ ಮಾಡುತ್ತಾರೆ, complaint whom we have to address. ಪಬ್ಲಿಕ್ ಯಾರಿಗೆ address ಮಾಡಬೇಕು? ವಿಧೇಯಕದಲ್ಲಿ ಎಲ್ಲದೆ? ಈ ವಿಧೇಯಕದಲ್ಲಿ ಲೋಕಾಯುಕ್ತರು ದರ್ವರ್ತನೆ ಮಡಿದರೆ ದೂರನ್ನು ಕೊಡುವುದಕ್ಕೆ ಯಾರಿಗೆ address ಮಾಡಬೇಕು ಎನ್ನುವುದು ಎಲ್ಲಿದೆ ಎಂದು ನಾನು ಪ್ರಶ್ನೆ ಕೇಳುತ್ತಿದ್ದೇನೆ. ದೂರನ್ನು ಯಾರಿಗೆ ಕೊಡಬೇಕು?

**ಶ್ರೀ ಎಸ್.ಆರ್. ಪಾಟೀಲ್:–** ಸಂಬಂಧಿಸಿದ ಪೊಲೀಸ್ ಸ್ಟೇಷನ್‌ಗೆ ಕೊಡಬೇಕು.

**ಸಭಾಪತಿಯವರು:–** ದೂರನ್ನು ಯಾರಿಗೆ ಕೊಡಬೇಕು? to whom we should it be addressed?

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಕಾನೂನು ಮಂತ್ರಿಗಳೇ, ತಾವೇ ಹೇಳಿ. ದೂರನ್ನು ಯಾರಿಗೆ ಅಡ್ರೆಸ್ ಮಾಡಬೇಕು.

**ಸಭಾಪತಿಯವರು:–** ಮಾನ್ಯ ಸಚಿವರಿಗೆ ಅರ್ಥವಾಗಿದೆ ಎಂದು ಕಾಣುತ್ತದೆ. ಯಾರಿಗೂ ಒಬ್ಬರಿಗೆ ತೊಂದರೆ ಆಯಿತು. ಅವರಿಗೆ ದೂರು ಕೊಡಬೇಕೆಂದು ಅನಿಸಿತು. ಅವರು ದೂರನ್ನು ಯಾರಿಗೆ ಕೊಡಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅದರ ಬಗ್ಗೆ ದಯಮಾಡಿ ಸಚಿವರ ಹೇಳಬೇಕು.

**ಶ್ರೀ ಟಿ.ಬಿ. ಜಯಚಂದ್ರ:–** ಮಾನ್ಯ ಸಭಾಪತಿಯವರೇ, ಉತ್ತರ ಹೇಳುವಾಗ ಹೇಳುತ್ತೇನೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಅದನ್ನು ಉತ್ತರ ಹೇಳುವಾಗ ಹೇಳಿ. ಈ ವಿಧೇಯಕದಲ್ಲಿ ದೂರನ್ನು ಯಾರಿಗೆ ಕೊಡಬೇಕು ಎನ್ನತಕ್ಕಂಥದ್ದು ಇಲ್ಲ. ಇದಕ್ಕೆ provision ಯಾವ ರೀತಿ ಮಾಡಿದ್ದೀರಿ ಎಂಬುದನ್ನು ಹೇಳಬೇಕು. ಪುನಃ Chief Justiceಗೆ ಮಾಡಿ ಎಂದು ಹೇಳಿದ್ದೀರಿ. ಅಲ್ಲಿ ಹೋಗಿ 90 ದಿವಸ ಆದಮೇಲೆ ಅವರು Judgement ಕೊಡಲಿಲ್ಲ, ಅದನ್ನು Suo motu accept ಮಾಡಿ ಸಭಾಧ್ಯಕ್ಷರು, ಸಭಾಪತಿಯವರು resolution ಮಡುವುದಕ್ಕೆ ಅವಕಾಶ ಕೊಡಬೇಕಾಗಿತ್ತು. 90 ದಿವಸದಲ್ಲಿ Judgement ಬರಲಿಲ್ಲವೆಂದರೆ ಅವರು ಇನ್ನು ಆರು ತಿಂಗಳು ಕಾಲಾವಕಾಶ ಕೊಡಿ ಎಂದು ಕೇಳುತ್ತಾರೆ. ಏಕೆಂದರೆ, ಜಡ್ಜ್‌ಗಳು ಅವರು ಎಲ್ಲಾ ಒಂದೇ ಜಾತಿ. ಆದ್ದರಿಂದ ಅವರವರಿಗೆ cooperation ಮಾಡಿದಾಗ ಅವರು ಆರು ತಿಂಗಳೋ ವರ್ಷವೋ ತೆಗೆದುಕೊಂಡು ಹೋದರೆ, ಈಗ ನಮ್ಮ ಭಾಸ್ಕರ್‌ರಾವ್ ಅಂಥವರು ಬಮದರೆ ಏನು ಮಾಡುತ್ತೀರಿ? ಅದಕೋಸ್ಕರ ನಾನು ಹೇಳತಕ್ಕಂಥದ್ದು ಇಲ್ಲಿ ಒಂದು ಷರತ್ತು ಹಾಕಿಲ್ಲ. 90 ದಿವಸ ಆದಮೇಲೆ ಆ ಷರತ್ತುಗಳು ಹೋಯಿತು Next, the Speaker and Chairman can proceed with the resolutions of the House. ಇದನ್ನು ಮಾಡೇಕಾಗಿತ್ತು ಎನ್ನುವುದು ನನ್ನ ಸಲಹೆ. ಏಕೆಂದರೆ, ನೀವು ಸಲಹೆಯನ್ನು ಕೇಳಿದ್ದೀರಲ್ಲಾ ಅದಕ್ಕೆ ಸಲಹೆ ಕೊಡುತ್ತಿದ್ದೇನೆ. ಮತ್ತೊಂದು, ಸಭಾಧ್ಯಕ್ಷರು, ಸಭಾಪತಿಯವರು ಮತ್ತು Advocate General, ಈ ಮೂರು ಜನರು ಇದ್ದಾಗ ಅವೇ ಈ charges ಸರಿ ಇದೆಯೋ ಇಲ್ಲವೋ ಎನ್ನುವುದನ್ನು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿದ್ದಾರೆ ಹೈಕೋರ್ಟ್ ಜಡ್ಜ್ ಗಿಂತ ಉತ್ತಮವಾಗಿತ್ತು ಎನ್ನುವುದು ನನ್ನ ಅಭಿಪ್ರಾಯ, ಆಗ ನಮ್ಮ ಸದನಕ್ಕೆ, ನಮ್ಮ ಶಾಸನಸಭೆಯ ಅಧಿಪತಿಗಳು ಸಭಧ್ಯಕ್ಷರು ಮತ್ತು ಸಭಾಪತಿಗಳಿಗೆ ನಾವು ಗೌರವ ಕೊಟ್ಟ ಹಾಗೆ ಆಗುತ್ತಿತ್ತು. ಅವರು ಮತ್ತು Advocate General, ಅವರ ಸಮ್ಮುಖದಲ್ಲಿ ಈ ದೂರುಗಳನ್ನು ತೀರ್ಮಾನ ಮಾಡಿ ನಾವೇ ತೆಗೆದುಕೊಂಡು ಈ ಸದನದಲ್ಲಿ resolutions ಮಾಡುವುದಕ್ಕೆ ಅವಕಾಶ ಮಡಿದ್ದರೆ ಚೆನ್ನಾಗಿತ್ತು ಎನ್ನುವುದು ನನ್ನ ಅಭಿಪ್ರಾಯ. ನಾನು ಎರಡು ಸಲಹೆಗಳನ್ನು ಕೊಟ್ಟಿದೇನೆ. ನಮ್ಮ ಆಕ್ಟ್‌ನಲ್ಲಿ protection ಎಂದು ಇದೆ. ಲೋಕಾಯುಕ್ತದಲ್ಲಿ ಕೆಲಸ ಮಾಡತಕ್ಕಂಥ ಸಿಬ್ಬಂದಿಗೆ protection ಇದೆ ಕಾಯಿದೆಯಲ್ಲಿ " No suit, prosecution, or other legal proceedings shall lie against Lokayukta or Upalokayukta or against any officers employee agency or person referred in Section 15 in respect of anything which is done in gogod faith" ಎಂದು ಹೇಳಲಾಗಿದೆ ಲೋಕಾಯುಕ್ತರ ಬಗ್ಗೆ ನಾವು ಕಾಯಿದೆ ತಂದಿದ್ದೇವೆ, ಲೋಕಾಯುಕ್ತರು ಅಧಿಕಾರಿಗಳ ಮೂಲಕ ಲಂಚವನ್ನು ತೆಗೆದುಕೊಂಡಾಗ ಆಗ ಅಧಿಕಾರಿಗಳು ಜವಾಬ್ದಾರರಲ್ಲವೆ? ನಾನಲ್ಲ ಎಂದು ಹೇಳುತ್ತಾರೆ. ಇದರಲ್ಲಿ ಅಧಿಕಾರಿಗಳ ಬಗ್ಗೆ ನೀವೇನು ತಂದಿಲ್ಲವಲ್ಲಾ? Why there is no suit against the Officials. ಅಧಿಕಾರಿ ತಪಪು ಮಾಡಿದ ಮೇಲೆ ಅದಕ್ಕೆ ಶಿಕಷೆ ಆಗಬೇಕು ಲೋಕಾಯುಕ್ತ ದಿಂದ ಭ್ರಷ್ಟಾಚಾರವನ್ನು ತೊಳೆಯಬೇಕು, corruption free ಮಾಡಬೇಕೆಂದು ಹೋರಟಾಗ ಅಧಿಕಾರಿಗಳಿಗೆ ನೀವು ಈ ರೀತಿಯ ರಕ್ಷಣೆ ಕೊಟ್ಟರೆ ಹೇಗೆ? ಅಲ್ಲಿರತಕ್ಕಂಥ ಅಧಿಕಾರಿಗಳೇ ಭ್ರಷ್ಟಾಚಾರ ಮಾಡುತ್ತಿರತಕ್ಕಂಥದ್ದು. ಇದು ಏಕೆ no suit ನನಗೆ ಎಂದು ಬಂದು ಎಂದರೆ, ವಿ.ಪಿ.ಎಂ.ಸ್ವಾಮಿ ಮೇಲೆ clean chit ಕೊಟ್ಟರು ಎಂದು ನಾನು ದೂರನ್ನು ತೆಗೆದುಕೊಮಡು ಹೋದೆ. ಆಗ ಲೋಕಾಯುಕ್ತರೇ ನನಗೆ ಹೇಳಿದರು. ನಮ್ಮ ಅಧಿಕಾರಿಗಳ ಮೇಲೆ ನೀವು ದೂರನ್ನು ಕೊಡುವುದಕ್ಕೆ provision ಇಲ್ಲ ಆ enquiry ಯನ್ನು delete ಮಾಡಬೇಕೆಂದು ನನಗೆ ಹೇಳಿದರು. ಆಗ ನಾನು delete ಮಾಡುವುದಕ್ಕೆ ಒಪ್ಪಲಿಲ್ಲ. ಆಗ ನಾನು ಈ Section ನೋಡಿದೆ. ಅಧಿಕಾರಿಗಳಿಗೆ protection ಎಂದು ಇದೆ. ಇದು ಇದ್ದಾಗ ಅಧಿಕಾರಿಗಳು ರಾಜರೋಷವಾಗಿ ಅವರು ಭ್ರಷ್ಟಚಾರ ಮಾಡುವುದಕ್ಕೆ ಆಕ್ಟ್‌ನಲ್ಲಿ protection ಇದೆ. ದಯವಿಟ್ಟು ಇದಕ್ಕೇನಾದರೂ remedy ಅನ್ನು ಕಂಡು ಹಿಡಿಯಬೇಕು ಎನ್ನುವಂಥದ್ದು. ಇಷ್ಟನ್ನು ಹೇಳಿ ನಾನು ತಂದಿರುವಂತಹ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಭ್ರಷ್ಟಾಚಾರ ನಿಮೂಲನೆ ಆಗಬೇಕು, ಏಕೆಂದರೆ ನಮ್ಮ ಇಡೀ planning ಏನಿದೆ. ಅಭಿವೃದ್ಧಿ ಎನ್ನುವುದು ಸಂಪೂರ್ಣ ನಾಶವಾಗುತ್ತಿದೆ. ಒಂದಲ್ಲ ಒಂದು ರಿತಿ ಭ್ರಷ್ಟಾಚಾರಗಳು ಜಾಸ್ತಿಯಾಗುತ್ತಿರುವುದರಿಂದ ಎಂತಹ ಕಠಿಣ ಶಿಕ್ಷೆಯನ್ನು ತಂದರೂ ಕೂಡ ಶೂಟ್ ಮಾಡಿ ಅವರನ್ನು ಕೊಲ್ಲಬಹುದು ಎಂದು ತಂದರೂ ಕೂಡ ಒಪ್ಪಿಕೊಳ್ಳಬಹುದು. ಇದಕ್ಕೆ ಕಾರಣವೇನೆಂದರೆ, ಇವತ್ತು ಮೂಲಭೂತವನ್ನೇ ನಮ್ಮ ಸರ್ಕಾರದ ಏನು planning ಇದೆ ಅದನ್ನು ಸಂಪೂರ್ಣವಾಗಿ ನಾಸ

ಮಾಡುತ್ತಿರುವಂಥದ್ದು ಮತ್ತು ಸಾರ್ವಜನಿಕರಲ್ಲಿ ನಂಬಿಕೆ ಬರಬೇಕು. ಆದ್ದರಿಮದ ಕಠಿಣ ಶಿಕ್ಷ ವಿಧಿಸುವುದನ್ನು ತಂದರೆ ಒಳ್ಳೆಯದು. ನಾನು ಇನ್ನು ಬಲಪಡಿಸುವಂತಹ ಮೂರ್‍ನಾಲ್ಕು ಸಲಹೆಗಳನ್ನು ಕೊಟ್ಟಿದ್ದೇನೆ. ಇದಕ್ಕೆ ದಯವಿಟ್ಟು ಮಾನ್ಯ ಸಚಿವರು ಉತ್ತರ ಹೇಳುವಾಗ ಹೇಳಬೇಕೆಂದು ಮನವಿ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಮಾತನಾಡುತ್ತೇನೆ.

**ಸಭಾಪತಿಯವರು:–** ನೀವು ಕೊನೆಯಲ್ಲಿ ಮಾತನಾಡುತ್ತೆನೆಂದು ಹೇಳಿದ್ದೀರಲ್ಲಾ? ನಾನು ಪಟ್ಟಿಯೊಳಗೆ ನಿಮ್ಮ ಹೆಸರು ಮೇಲೆ ಬರೆದಿದ್ದೆ. ನಾವು ಆಯಾಯ ಪಾಟಿಯ ಲೆಕ್ಕದಲ್ಲಿ ಅವರು ಕೊಟ್ಟಿರತಕ್ಕಂಥ ಪಟ್ಟಿಯ ಆಧಾರದ ಮೇಲೆ ನಾನು list ಮಾಡಿದ್ದೇನೆ. ನೀವು ಆಮೇಲೆ ಮಾತನಾಡುತ್ತನೆ ಎಂದು ಹೇಳಿದ್ದಕ್ಕೆ ನಇಮ್ಮ ಹೆಸರನ್ನು ಕೊನೆಯಲ್ಲಿ ಹಾಕಿದ್ದೇನೆ.

**ಶ್ರೀ ಇ. ಕೃಷ್ಣಪ್ಪ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ತಮಗೆ ವಂದಿಸುತ್ತೇನೆ. **ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ, 2015** ಇದನ್ನು ಇವತ್ತು ನಮ್ಮ ಮೇಲ್ಮನೆಯಲ್ಲಿ ಮಂಡಿಸಿದ್ದಾರೆ. ಇದು ತುಂಬಾ ಹರ್ಷ ಪಡುವಂತಹ ವಿಷಯವಲ್ಲವೆಂದೆನೆಸುತ್ತದೆ.

**ಶ್ರೀ ಟಿ.ಬಿ. ಜಯಚಂದ್ರ:–** ಮಾನ್ಯ ಸಭಾಪತಿಯವರೇ, ಇನ್ನು ಮಧ್ಯಾಹ್ನ, ವಿಧಾನಸಭೆಯಿಂದ ಕ್ಲಯರ್ ಆದಂತಹ ಕೆಲವು ಬಿಲ್ಸ್‌ಗಳು ಬರುತ್ತಿವೆ. ಹಾಗಾಗಿ, ದಯಮಾಡಿ, ಇವತ್ತು ತಂದಿರುವಂತಹ ತಿದ್ದುಪಡಿಗೆ ಸೀಮಿತವಾಗಿ ಸಲಹೆ ಕೊಟ್ಟರೆ ಬಹಳ ಒಳ್ಳಯದಾಗುತ್ತದೆ.

**ಸಭಾಪತಿಯವರು:–** ನಾನು ಸಹ ಬೆಳಿಗ್ಗೆಯಿಂದ ಅದೇ ವಿಷಯವನ್ನು ಹೇಳುತ್ತಿದ್ದೇನೆ. ಒಬ್ಬರಿಗೆ ತಿದ್ದುಪಡಿ ಮೇಲೆ ಮಾತನಾಡುವುದಾದರೆ, ಈ ವಿಷಯ ಏತಕ್ಕೆ ಬಂತು ಎನ್ನವುದು ಎಲ್ಲರಿಗೂ ಗೊತ್ತಿರುವಂತೆ ಈ ಸದನದಲ್ಲಿ ಅಲ್ಲಿನ ಭ್ರಷ್ಟಾಚಾರದ ಬಗ್ಗೆ ಸಾಕಷ್ಟು ಸುದೀರ್ಘವಾಗಿ ಚರ್ಚೆಯಾಗಿದೆ. ಅದಕ್ಕಾಗಿ ಇಲ್ಲಿಗೆ ಬಂದಿದೆ. ತಂದಿರುವಂತಹ ತಿದ್ದುಪಡಿಯ ಮೂಲ ಉದ್ದೇಶ ಏನಿದೆ, ಅದಕ್ಕೆ ಪೂರಕವಾಗಿದೆಯೋ, ತಪ್ಪದ್ದರೆ ತಿದ್ದುಕೊಳ್ಳುವ ನಿಟ್ಟಿನಲ್ಲಿ ಸಲಹೆಗಳನ್ನು ಕೊಡುವುದಾಗಿದೆ. ತಾವು 15 ನಿಮಿಷಗಳಲ್ಲಿ ಮಾತನಾಡಿದರೆ ಎಲ್ಲರಿಗೂ ಮಾತನಾಡಲಿಕ್ಕೆ ಅವಕಾಶ ಸಿಕ್ಕುತ್ತದೆ.

**ಶ್ರೀ ಇ. ಕೃಷ್ಣಪ್ಪ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅಲ್ಲಿ ಇರತಕ್ಕಂತಹ ಅದಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಈ ವಿಧೇಯಕದಲ್ಲಿ ಅವಕಾಶವಿಲ್ಲ. ಎನ್ನುವುದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಯುತ ಪುಟ್ಟಸ್ವಾಮಿಯವರು ಹೇಳಿದು. ನಾನು ಈ ನಿಟ್ಟಿನಲ್ಲಿ ಏನು ಹೇಳುವುದಕ್ಕೆ ಹೋರಟಿದ್ದೇನೆಂದರೆ ಈಗಾಗಲೇ ಮಾಧ್ಯಮಗಳಲ್ಲಿ ಹೇಳಿರುವಂತೆ ಲೋಕಾಯುಕ್ತರನ್ನು ದುರ್ಬಲಗೊಳಿಸುವುದಕ್ಕೆ ಸರ್ಕಾರ ಸಜ್ಜಾಗಿದೆ, ಜನಪ್ರಿನಿಧಿಗಳು ಸಜ್ಜಾಗಿದ್ದಾರೆನ್ನುವ ಒಂದು ವ್ಯಾಪಕ ಪ್ರಚಾರ ಟಿ.ವಿ. ಮಾಧ್ಯಮಗಳಲ್ಲಿ ತಾವು ನೋಡುತ್ತಿರಬಹುದು.

ಸನ್ಮಾನ್ಯ ಸಭಾಪತಿಯವರೆ, ಇದನ್ನು 1984 ರಲ್ಲಿ ಮಾಡುವಾಗ ಲೋಕಾಯುಕ್ತ ಎನ್ನುವುದು ತುಂಬಾ ಗೌರವಯುಕ್ತವಾಗಿತ್ತು. ಆಂದರೆ, ಜಡ್ಜ್ ಗಳು ನಿವೃತ್ತಿಯಾಗಿ 10 ವರ್ಷಗಳಾದ ಮೇಲೆ ಮತ್ತೊಷ್ಟು ಗೌರವಯುತವಾಗಿ ಇರುತ್ತಾರೆನ್ನುವ ಕಾರಣಕ್ಕಾಗಿ ಅವರುಗಳನ್ನು ಆ ಒಂದು ಸ್ಥಾನದಲ್ಲಿ ಕೂರಿಸಿದರು. ಈಗ ಯಾರೋ ಒಬ್ಬರು ಬಾಸ್ಕರ್ ರಾವ್ ಎನ್ನುವ ಒಬ್ಬ ನೀಚ ಅಧಿಕಾರಿ ಬಂದರೆಂದು ಹೇಳಿದಾಕ್ಷಣ ಅದಕ್ಕೆ ತಿದ್ದುಪಡಿ ತುವುದಕ್ಕಿಂತ ಅದರ ಮೌಲ್ಯದ ಬಗ್ಗೆ ಅವರಿಗೆ ಅರಿವು ಮೂಡಿಸಿದ್ದರೆ ನಾವು ಅವರಿಗೆ ನಾವು ಒತ್ತಾಯ ಮಾಡಬೇಕಾಗಿರಲಿಲ್ಲ, ನಾವು ಇದಕ್ಕೆ ತಿದ್ದುಪಡಿ ತರಬೇಕಾಗಿರಲಿಲ್ಲ. 1984 ರ ಹಿಂದೆ vigilance ಎಂದು ಇತ್ತು. ಈಗ ಇರುವಂತಹ ವ್ಯವಸ್ಥೆ ರಾಜ್ಯದ ಆಡಳಿತ ಮಡುವುದಕ್ಕೆ ಕಡಿಮೆಯಾಗುತ್ತದೆ, ಇದಕ್ಕೆ ಹೆಚ್ಚು ಶಕ್ತಿ ತುಂಬಬೇಕೆಂದು ಹೇಳಿ 1984 ರಲ್ಲಿ ಹೆಗಡೆಯವರು ಲೋಕಾಯುಕ್ತ ವ್ಯವಸ್ಥೆಯನ್ನು ತಂದರು. ಕಳೆದ 30 ವರ್ಷಗಳ ಹಿಂದೆ ಅಧಿಕಾರಿಗಳು ಈ ಮಟ್ಟಕ್ಕೆ ಬರುತ್ತಾರೆನ್ನುವ ಕಲ್ಪನೆ ಅವರಿಗಿರಲಿಲ್ಲ. ಇವತ್ತು ಬಮದು ಬಿಟ್ಟಿದೆ.

ಈಗ ನಾವು ಇದಕ್ಕೆ ತಿದ್ದುಪಡಿ ಮಾಡುವುದಕ್ಕೆ ಹೊಟಿದ್ದೇವೆ. ಈ ತಿದ್ದುಪಡಿಯಿಂದ ಖಂಡಿತವಾಗಿಯೂ ಒಳ್ಳೆಯದಾಗುತ್ತದೆ ಎಂದರೆ ಸಂತೋಷವಾಗಿ ನಾವು ಒಪ್ಪಿಕೊಳ್ಳೋಣ.

ಸನ್ಮಾನ್ಯ ಸಭಪತಿಯವರೆ, ಅವರ ಕೆಳ ಅಧಿಕಾರಿಗಳನ್ನು ಈ ವಿಚಾರದಲ್ಲಿ ತರುವುದಕ್ಕಾಗುವುದಿಲ್ಲವೆಂದು ಈಗಾಗಲೇ ಹೇಳಿದ್ದಾರೆ. ಇವರ್ಯಾರೂ ತಪ್ಪು ಮಡಿರುವುದಿಲ್ಲ. ಕೆಳಗಿನ ಅಧಿಕಾರಿಗಳಾಗಲಿ, ಲೋಕಾಯುಕ್ತರಾಗಲಿ, ಯಾರು ತಪ್ಪು ಮಾಡಿರುವುದಿಲ್ಲ. ಯಾತು ತಪ್ಪು ಮಾಡಿದ್ದಾರೆ? ಅವರ ಮಕ್ಕಳು, ದಳ್ಳಾಳಿಗಳು, ಮಗದೊಬ್ಬರು. ಅವರನ್ನು ಏನು ಮಾಡುತ್ತೀರಿ? ನಾನು ಈ ವಿಚಾರವಾಗಿ ವ್ಯವಸ್ಥೆಯಿಂದ ಹೇಳಲಿಕ್ಕೆ ಬಯಸುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ, ನಮ್ಮ ಸಕಾರದಲ್ಲಿ ಅಧಿಕಾರಿಗಳು ಒಂದು ಕಡೆ ಇದ್ದರೆ, ಅವರ ಮಕ್ಕಳು ಇನ್ನೊಂದು ಕಡೆ ರೋಲ್ ಮಾಡುತ್ತಿದ್ದಾರೆ. ರಾಜಕಾರಣಿಗಳು ಒಂದು ಕಡೆ ಇದ್ದರೆ, ಅವರ ಮಕ್ಕಳು ಇನ್ನೋಮದು ಕಡೆ ರೋಲ್ ಮಾಡುತ್ತಿದಾರೆ. ಇದಕ್ಕೆ ಏನು ಕಡಿವಾಣ ಮಾಡುತ್ತೀರಿ? ಭ್ರಷ್ಟಾಚಾರದ ವಿಷಯದಲ್ಲಿ ಲೋಕಾಯುಕ್ತ ಒಂದನ್ನು ಗುರಿ ಮಾಡಿ, ಲೋಕಯುಕ್ತರು, ಲೋಕಾಯುಕ್ತರು ಎನ್ನುವ ಪದವನ್ನು ಬಳಸಿ. ಅದು ಒಂದೇ ಕಡೆ ಭ್ರಷ್ಟಚಾರ ನಡೆಯುತ್ತಿದೆ ಎಂದು ಹೇಳುತ್ತಾರಲ್ಲಾ. ನಮ್ಮ ಘನ ಮುಖ್ಯಮಂತ್ರಿಗಳ ಜೊತೆಯಲಿ Intelligence ಎನ್ನುವುದು ಒಂದು ಇದೆ. ಸನ್ಮಾನ್ಯ ಸಭಪತಿಯವರೆ, ಅದು ಇರುವುದು ಏತಕ್ಕೆ? ಆ Intelligence report ಇವರಿಗೆ ಯಾವುದು ಬಂದಿಲ್ಲವೇ? ಈಗ ಲೋಕಾಯುಕ್ತದ್ದು ಇರಬಹುದು, ನಮ್ಮ ಅಧಿಕಾರಿಗಳು, ಹತ್ತಾರು ಜನ ಐ.ಎ.ಎಸ್, ಅಧಿಕಾರಿಗಳು, ಮತ್ತೊಂದು. ಮಗದೊಂದು ಹೋಗಿದ್ದಾರೆ, ಬಂದಿದ್ದಾರೆಂದು ಹೇಳಿ, ಮಾಧ್ಯಮಗಳಲ್ಲಿ ಇಷ್ಟೊಂದು ಏನು ಹೇಳುತ್ತೀದ್ದಾರೆ, ಇದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿರುವುದಿಲ್ಲವೇ? ಬಂದಿದ್ದರೆ, ಅದಕ್ಕೆ ಅವರೇನು ಉತ್ತರ ಕೊಡುತ್ತಾರೆ? ನಾನು ಏತಕ್ಕೆ ಈ ವಿಷಯವನ್ನು ಹೇಳುತ್ತಿದ್ಧೇನೆಂದರೆ ಈ ವಿಧೇಯಕವನ್ನು ನಾವು ತಂದಿದೇವೆ, ಇನ್ನುಮುಂದೆ ಭ್ರಷ್ಟಾಚಾರ ನಡೆಯುವುದಿಲ್ಲ, ಆಡಳಿತ ಸುಧಾರಣೆಯಾಗುತ್ತದೆ ಎಂದು ನಾವು ತಿಳಿದುಕೊಂಡರೆ ನಮಗಿಂತಲೂ ಬೇರೆ ಮೂರ್ಖರಿಲ್ಲ ಎನ್ನುವುದು ನನ್ನ ಭಾವನೆ.

ಸನ್ಮಾನ್ಯ ಸಭಪತಿಯವರೆ, ನಾವು ಕೇಂದ್ರೀಕೃತವಾಗಿ ಲೋಕಾಯುಕ್ತದ ಭ್ರಷ್ಟಾಚಾರದ ಬಗ್ಗೆ ತೋರಿಸುತ್ತಿದ್ದೇನೆ. ಇಲ್ಲಿ ಕಾರ್ಯಾಂಗ ಶಾಸಕಾಂಗ ಎಂದು ಇದೆ. ಈ ಕಾರ್ಯಾಂಗ ಮತ್ತು ನ್ಯಾಯಾಂಗವನ್ನು ಬಲಪಡಿಸುವಂತಹದ್ದು ನಮ್ಮ ಶಾಸಕಾಂಗದ ಕೆಲಸ. ಈಗ ನಾವು ಅವರನ್ನು ಎಲ್ಲಿ ಕುಂಠಿತನ ಮಾಡಬಹುದು ಎನ್ನುವುದನ್ನು ಮಾಡುತ್ತಾ ಹೋದರೆ, ಅವರು ಮತ್ತೊಷ್ಟು ಸೋಮಾರಿಗಳಾಗಿ, ತಮ್ಮ ಕೆಳಸ ಮಾಡುವುದನ್ನು ಬಿಡುತ್ತಾರೆ. ಮಾನ್ಯ ಸಭಾಪತಿಗಳಿಗೆ ಒಂದು ವಿಚಾರ ಗೊತ್ತಿಲ್ಲದೆ ಇರಬಹುದು. ಈ ರಾಜ್ಯದ ಅತ್ಯುನ್ನತ ಒಬ್ಬ ಪೊಲೀಸ್ ಆಫೀಸರ್, ಈ ಸಂದರ್ಭದಲ್ಲಿ ಈ ಬಗ್ಗೆ ಬೇಕಾದರೆ ಒಮದು ರೆಕಾರ್ಡ್ ತೋರಿಸುತ್ತೇನೆ.

**ಸಭಾಪತಿಯವರು:–** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ನಾನು ಹೇಳುವುದನ್ನು ಸರಿಯಾಗಿ ಕೇಳಿಸಿಕೊಳ್ಳಿ ಈಗ ಲೋಕಾಯುಕ್ತರನ್ನು ಪದಚ್ಯುತಿ ಮಾಡಿಸುವುದಕ್ಕೆ. ಅವರನ್ನು ಕಿತ್ತು ಹಾಕುವುದಕ್ಕೆ ನೀವೆಲ್ಲರೂ ಸೇರಿ ಪ್ರಯತ್ನ ಮಾಡಿದ್ದೀರಿ.

**(ಗೊಂದಲ)**

**ಶ್ರೀ ಇ. ಕೃಷ್ಣಪ್ಪ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಲೋಕಾಯುಕ್ತರೊಬ್ಬರು ಭ್ರಷ್ಟರಾದರೆ, ಅವರನ್ನು ಕಿತ್ತು ಹಾಕುವಂತಹ ಕೆಲಸವನ್ನು ಈಗಲೇ ಮಾಡಿಬಿಡಿ. ಲೋಕಾಯುಕ್ತರೊಬ್ಬರಿಂದಲೇ ಈ ಕೆಲಸ ಆಗುವುದಿಲ್ಲ ಈ ಲೋಕಾಯುಕ್ತ ವ್ಯವಸ್ಥೆಯಲ್ಲಿ ಎಲ್ಲವನ್ನು ಒಳಗಡೆ ತರಬೇಕು.

**ಸಭಾಪತಿಯವರು:–** ಆಯಿತು, ದಯಮಾಡಿ ಕುಳಿತುಕೊಳ್ಳಿ. ನೋಡಿ, ನಾವೆಲ್ಲರೂ ಚರ್ಚೆ ಮಾಡಿದ್ದೇವೆ. ಪ್ರಯತ್ನ ಮಾಡಿದ್ದೇವೆ. ಈ ಲೋಕಾಯುಕ್ತರನ್ನು ಪದಚ್ಯುತಿಗೊಳಿಸಬೇಕೆಂದು 34 ಜನ ಗೌರವಾನ್ವಿತ ಸದಸ್ಯರುಗಳು ನನಗೆ ಹಸಿ ಮಾಡಿಕೊಟ್ಟಿದ್ದೀರಿ. ಅದಕ್ಕೆ ಇರತಕ್ಕಂತಹ ಕಾನೂನು ಅಡ್ಡ ಬಂತು. 1983–84 ರಲ್ಲಿ ನಾವೇ ಮಾಡಿಕೊಂಡಂತಹ ಕಾನೂನು ಅಡ್ಡ ಬಂತು. ಅವರನ್ನು ಕಿತ್ತು ಹಾಕಲಿಕ್ಕೆ ಬರುವುದಿಲ್ಲ. ಹಾಗಾಗಿ, ಅ

ಅಡಚಣೆಯನ್ನು ನಿವಾರಣೆ ಮಾಡಿಕೊಳ್ಳುವುದಕ್ಕಾಗಿ ಕಾನೂನಿಗೆ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಈಗ ನಮ್ಮ ಎದುರಿಗೆ ಇರುವಂತಹದ್ದು ಏನೆಂದರೆ, ಲೋಕಾಯುಕ್ತರನ್ನು ನಾವು ತೆಗೆದು ಹಾಕುವುದಕ್ಕೆ ನಮಗೆ ಕಾನೂನಿನಲ್ಲಿ ಇದ್ದಂತಹ ಅಡೆತಡೆಗಳನ್ನು ಸಡಿಲ ಮಾಡಿಕೊಳ್ಳಬೇಕಾಗಿದೆ. ಈ ಸದನದ 34 ಜನ ಗೌರವಾನ್ವಿತ ಸದಸ್ಯರುಗಳು ಬರೆದುಕೊಟ್ಟಂತಹ ಅರ್ಜಿಗೆ ಕಾನೂನಿನೊಳಗೆ ಇರುವ ಪ್ರಕಾರ ಏನೂ ಬೆಲೆ ಇಲ್ಲದಂತಾಗಿತ್ತು. ಹಾಗಾಗಿ ನಾನು ಅದನ್ನು ಇಲ್ಲಿ ಹೇಳಬೆಕಾಯಿತು. ಆ ಕಾನೂನಿನ ಆಡೆತಡೆಗಳನ್ನು ನಿವಾರಣೆ ಮಾಡುವುದಕ್ಕಾಗಿ ಸರ್ಕಾರ ನಮ್ಮ ಮುಂದೆ ಈ ತಿದ್ದುಪಡಿಯನ್ನು ತಂದೆದೆ. ಈಗ ತಂದಿರುವಂತಹ ತಿದ್ದುಪಡಿಯಿಂದ ಆ ಅಡೆತಡೆ ನಿವಾರಣೆ ಆಗುತ್ತದೋ ಇಲ್ಲವೋ ಎನ್ನು ಬಗ್ಗೆ ಚರ್ಚೆಯಾಗುತ್ತಿದೆ. ಆಗುವಂತಿದ್ದರೆ ನಿಮ್ಮ ಅಭಿಪ್ರಾಯ, ಇದರಿಂದ ಆಗುವಿದಲ್ಲವೆನನ್ನುವ ಬಗ್ಗೆ ನಿಮ್ಮ ಅಭಿಪ್ರಾಯ. ಇದಕ್ಕೆ ಸರ್ಕಾರ ಏನು ಮಾಡಬೇಕೆನ್ನುವುದನ್ನು ಹೇಳಿದರೆ ಸಾಕು. ಭ್ರಷ್ಟಾಚಾರದ ಬಗ್ಗೆ, ಲೋಕಾಯುಕ್ತರ ಬಗ್ಗೆ, ಆ ವಿಷಯದ ಬಗ್ಗೆ, ಈ ವಿಷಯದ ಬಗ್ಗೆ ಈಗ ಚರ್ಚೆ ಅಪ್ರಸ್ತುತ. ದಯಮಾಡಿ ಚರ್ಚೆ ಮಾಡುವುದು ಬೇಡ. ಈ ತಿದುಪಡಿ ಬಗ್ಗೆ ಮಾತ್ರ ಮತನಾಡಿ.

**ಶ್ರೀ ಇ. ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೆ, ಲೋಕಾಯುಕ್ತರ ಬಗ್ಗೆ ಈ ತಿದ್ದುಪಡಿಯನ್ನು ಏನು ತಂದಿದ್ದಾರೆ, ಲೋಕಾಯುಕ್ತರ ಲೋಪದೋಷ ಎಂದು ಎಲ್ಲಿಯೂ ಸಹ ಇದುವರೆವಿಗೂ ಚರ್ಚೆಯಾಗಿಲ್ಲ. ಅಲ್ಲಿ ಲೋಪದೋಷ ಇರುವಂತಹದ್ದು, ಅಲ್ಲಿ ಇರುವಂತಹ ಕೆಳಗಿನ, ಪಕ್ಕದ ಅಧಿಕಾರಿಗಳು. . .

**ಸಭಾಪತಿಯವರು:–** ಶ್ರೀಯುತ ಕೃಷ್ಣಪ್ಪನವರೆ, ನಾನು ಹೇಳುವುದನ್ನು ತಾವು ಏತಕ್ಕೆ ತೆಗೆದುಕೊಳ್ಳುತ್ತಿಲ್ಲ. ನಾನು ನಿಮಗೆ ಹೇಳಲಿಲ್ಲವೇ? ಆಯಿತು ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಇ. ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೆ, ಈಗ ಎಲ್ಲಿ ವ್ಯವಸ್ಥೆ ಕೆಟ್ಟಿದೆ, ಅದನ್ನು ಒಳಪಡಿಸಬೇಕೇ ಹೊತು, ಲೋಕಾಯುಕ್ತ ಪರಿಸ್ಥಿತಿ ಒಂದೇ ಅಲ್ಲ, ಅದರ ಕೆಳಗಡೆ ಇರುವಂತಹದ್ದೆಲ್ಲವನ್ನೂ ಸರಿಪಡಿಸಿದರೆ ಮಾತ್ರ ಈ ಭ್ರಷ್ಟಾಚಾರ ನಿರ್ಮೂಲನೆ ಆಗುತ್ತದೆಯೇ ಹೊರತು, ಯಾವುದೇ ಒಂದನ್ನು...

**ಸಭಾಪತಿಯವರು:–** ಭ್ರಷ್ಟಾಚಾರ ಬಗ್ಗೆ ಚರ್ಚೆ ಮಾಡುತ್ತಿಲ್ಲ.

**ಶ್ರೀ ಇ. ಕೃಷ್ಣಪ್ಪ:–** ಆಯಿತು, ತಿದ್ದುಪಡಿಯೇ ಆಗಲಿ, ಲೋಕಾಯುಕ್ತರನ್ನು ಪದಚ್ಯುತ್ತಿಗೊಳಿಸುವುದು ಏತಕ್ಕಾಗಿ? ಭ್ರಷ್ಟಾಚಾರಕ್ಕಗಿ ತಾನೇ. ಬ್ರಷ್ಟಾಚಾರದ ವಿಷಯದಲ್ಲಿ ಲೋಕಾಯುಕ್ತರನ್ನು ಪದಚ್ಯುತಿಗಳಿಸಲಿಕ್ಕೆ ಈ ತಿದ್ದುಪಡಿಯನ್ನು ತಂದಾಗ ಅದಕ್ಕೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನು ಇದರಲ್ಲಿ ಸೇರಿಸಬೇಕು. ಅದಕ್ಕೋಸ್ಕತ ಈ ತಿದ್ದುಪಡಿಯನ್ನು ಮಾರ್ಪಾಡು ಮಾಡಿ ಅದಕ್ಕೆ ಶಕ್ತಿಯನ್ನು ಕೊಡಬೇಕೆನ್ನುವುದು ನಮ್ಮ ಉದ್ದೇಶವಾಗಿದೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಈ ತಿದ್ದುಪಡಿಗೆ ಆಗಿ confine ಮಾತನಾಡುವುದಕ್ಕೆ ಹೇಳಿ. ಈ ತಿದ್ದುಪಡಿ ವಿಷಯದಲ್ಲಿ ಚರ್ಚೆ ಪ್ರಾರಂಭವಾಗಿ ಇಲ್ಲಿಗೆ ಸುಮಾರು ಒಮದುವರೆ ಗಂಟೆಯಾಯಿತು.

**ಸಭಾಪತಿಯವರು:–** ಸಭಾನಾಯಕರು, ನಾನು ಅವರನ್ನು ಕಂಟ್ರೋಲ್ ಮಾಡುತ್ತೇನೆ. ತಾವು ಮಧ್ಯೆ ಬಾಯಿ ಹಾಕಬೇಡಿ.

**ಶ್ರೀ ಆರ್.ಕೆ. ಸಿದ್ದರಾಮಣ್ಣ(ಸ್ಥಳೀಯ ಸಂಸ್ಥೆಗಳು):–** ಮಾನ್ಯ ಸಭಾಪತಿಯವರೆ, ತಾವು ಹೇಳಿದಹಾಗೆ ಸರ್ಕಾರ ತಂದಿರತಕ್ಕಂತಹ ಈ ವಿಧೇಯಕದಲ್ಲಿ ಲೋಕಾಯುಕ್ತರನ್ನು ಪದಚ್ಯುತಿಗೊಳಿಸುವುದು. ಅವರನ್ನು ಆ ಪದದಿಂದ ಹೊರಗಡೆ ಹಾಕುವುದಕ್ಕೆ ಈಗಿನ ಕಾಯದೆಯಲ್ಲಿ ಏನಿದೆ, ಅದರ ಪ್ರಕಾರ ನಮಗೆ ಸಾದ್ಯವಾಗುವುದಿಲ್ಲ, ಎನ್ನುವಂತಹ ಕಾರಣಕ್ಕೋಸ್ಕರ ಚರ್ಚೆಗೆ ಬಂದಮಥಹ ಸಂದರ್ಭದಲ್ಲೂ ಕೂಡ ನಾನು ಪ್ರಸ್ತಾಪ ಮಡಿದ್ದೆ. ಇದನ್ನು ಸರಳಗೋಳಿಸತಕ್ಕಂತಹ ಅವಶ್ಯಕತೆ ಇದೆ, ಸರಳಗೋಳಿಸತಕ್ಕಂತಹದ್ದಕ್ಕೆ ಅವಕಾಶ ಎಲ್ಲಿದೆ ಎಂದು ಕೇಳಿದರೆ ಲೋಕ್ ಪಾಲ್ ಕಾಯಿದೆಯಲ್ಲಿ ಅದು ಇದೆ. ಎನ್ನುವಂತಹ ಅಂಶವನ್ನು ಸರ್ಕಾರದ ಗಮನಕ್ಕೆ

ಚರ್ಚೆಯ ಸಂದರ್ಭದಲ್ಲಿ ತರತಕ್ಕಂತಹ ಪ್ರಯತ್ನವನ್ನು ಎಲ್ಲೆ ಜೊತೆಗೆ ನಾನು ಸಹ ಮಾಡಿದ್ದೆ. ಆ ಪ್ರಕಾರ ಇದು ಬಂದಿದೆ. ಈಗ ನಾವು ಗಮನಿಸಬೇಕಾಗಿರುವುದು ಏನೆಂದರೆ, ಈಗ ನಾವು ತಂದಿರುವಂತಹ ತಿದ್ದುಪಡಿಯಲ್ಲಿ ಸಾಧ್ಯಾ ಇದೆಯೇ? ಕೇವಲ ಯಾವುದೋ ಒಬ್ಬ ವ್ಯಕ್ತಿಯನ್ನು ಗಮನದಲ್ಲಿಟ್ಟುಕೊಂಡು ನಾವು ಮಾಡುವಂತಹದ್ದು ಸೂಕ್ತವಾದಂತಹ ಕೆಲಸ ಅಲ್ಲ. ಕೇವಲ ನಾವು ಇವತ್ತಿನ ದಿವಸ ನಮ್ಮ ಕಣ್ಣು ಮುಂದೆ ಈಗ ಇರತಕ್ಕಂತಹ ಲೋಕಾಯುಕ್ತರು ಇದ್ದಾರೆ, ಅವರನ್ನು ತೆಗೆಯುವುದು ಹೇಗೆ ಎನ್ನುವುದಕ್ಕೆ ಈ ತಿದ್ದುಪಡಿಯನ್ನು ತರುತ್ತಿದ್ದೇವೆ ಎನ್ನುವಂತಹ ಭನೆಯನ್ನಿಟ್ಟುಕೊಂಡರೆ ಅದು ಸರಿ ಹೋಗುವುದಿಲ್ಲ. ಈಗ ಇರತಕ್ಕದ್ದರಲ್ಲಿ ನನಗೆ ಅನಿಸುವುದು ಇಲ್ಲಿ ಸೆಕ್ಷನ್ 6 ಕ್ಕೆ ವಿಷಯಕ್ಕೆ ಮಾತ್ರ ನಾನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಹಳೆಯ ಸೆಕ್ಷನ್ 6ನ್ನು ಪೂರ್ತಿಯಾಗಿ ತೆಗೆಯುತ್ತಿದ್ದೀರಿ. ಆದರೆ ಬದಲಿಗೆ ಇನ್ನೊಂದು ಸೆಕ್ಷನ್ 6ಅನ್ನು ಸೇರಿಸುತ್ತಿದ್ದೀರಿ. ಇದರೊಳಗೆ ಇರತಕ್ಕಂತಾದ್ದು ಎನು ಎಂದು ಹೇಳಿದರೆ, ನಾವು ಒಂದು ಪ್ರಸ್ತಾವನೆಯನ್ನು ಇಲ್ಲಿ ಮಾಡಬೇಕಾಗುತ್ತದೆ. ಇಲ್ಲಿ ಪ್ರಸ್ತಾವನೆಯನ್ನು ಮಾಡಬೇಕೆಂದರೆ ತಾವು ಇಲ್ಲಿ ಇಟ್ಟಿರತಕ್ಕಂತಾದ್ದರಲ್ಲಿ ಮೂರನೇ ಒಂದು ಭಾಗವೆಂದು ಇದೆ (ಒನ್ ಥರ್ಡ್) ಅಂದರೆ ನಮ್ಮ ಸದನದ ಸದಸ್ಯರ ಸಂಖ್ಯೆಯನ್ನು ತೆಗೆದುಕೊಂಡರೆ ನಾವು ಒಟ್ಟು 75 ಜನರು ಇದ್ದೇವೆ ಈ ಪೈಕಿ ಒನ್ ಥರ್ಡ್ ಎಂದರೆ 25 ಆಗುತ್ತದೆ. ಕೆಳ ಮನೆಯ ಸದನದಲ್ಲಿ ಒನ್ ಥರ್ಡ್ ಎಂದರೆ 75 ಆಗುತ್ತದೆ. ಇಲ್ಲಿ 25 ಆಗುತ್ತದೆ. ಈಗ ಇರತಕ್ಕಂತಹಾದ್ದರಲ್ಲಿ ಜಡ್ಜಸ್ ಎನ್‌ಕ್ವೈರಿ ಆಕ್ಟ್ 1968 ರಲ್ಲಿ ಇದೆ. ಅಲ್ಲಿ ಲೋಕಸಭೆ ಮತ್ತು ರಾಜ್ಯ ಸಭೆಯ ಬಗ್ಗೆ ಪ್ರಸ್ತಾಪ ಆಗಿರತಕ್ಕಂತಾದ್ದು ಇದೆ. ಅಲ್ಲಿ ಒಬ್ಬ ಸುಪ್ರೀಂ ಕೋರ್ಟಿನ ಮತ್ತು ಹೈಕೋರ್ಟಿನ ಜಡ್ಜ್ ಅನ್ನು ತೆಗೆಯುವಂತಹ ಸಂದರ್ಭದೊಳಗೆ ಎಷ್ಟು ಜನ ಸಹಿ ಮಾಡಬೇಕು ಎಂದು ಹೇಳುವುದಾದರೆ, ಲೋಕಾಸಭೆಯ 100 ಜನ ಸದಸ್ಯರು ರಾಜ್ಯ ಸಭೆಯ 50 ಜನ ಸದಸ್ಯರುಗಳು ಸಹಿ ಮಾಡಬೇಕಾಗುತ್ತದೆ. ಇಷ್ಟು ಜನರು ಸಹಿ ಮಾಡಿದರೆ ಸಾಕಾಗುತ್ತದೆ. ಹಾಗಾಗಿ ಅಲ್ಲಿಯ ರೇಷೋಯೋವನ್ನು ಇಟ್ಟುಕೊಂಡರೆ ಅದು ಐದನೆ ಒಂದು (ಒನ್ ಥರ್ಡ್) ಭಾಗದಷ್ಟಾಗುತ್ತದೆ. ಒನ್ ಪೀಫ್ತ್ ಎಂದು ಇಟ್ಟುಕೋಳ್ಳಬೇಕಾಗುತ್ತದೆ. ನಾನು ಅದರ ವಿವರಕ್ಕೆ ಹೋಗುವುದಿಲ್ಲ. ಒನ ಫಿಫ್ತ್ ಪ್ರಸ್ತಾವ ಬರಬೇಕು ಎನ್ನುವುದಕ್ಕಿಂತ ಹೆಚ್ಚಾಗಿ ಅದನ್ನು ಒನ್ ಫಿಫ್ತೆ ಗೆ ಇಳಿಸುವುದಕ್ಕೆ ಸಧ್ಯವಾಗುತ್ತದೆಯೇ? In tune with the Judgees (Enquiry)Act 1968 ಏನು ಇದೆ ಅದನ್ನು ಒನ್ ಫಿಫ್ತ್ ಗೆ ಇಳಿಸತಕ್ಕಂತಾದ್ದು ಒಳ್ಳೆಯದು. ಮುಂದೆ ಈ ಪ್ರಸ್ತಾವ ಬಂದ ಮೇಲೆ ಏನು ಎನ್ನುವುದನ್ನು ಸೆಕ್ಷನ್ 3 ರಲ್ಲಿ ಹೇಳುತ್ತಿದ್ದೀರಿ. ಅಲ್ಲಿ ಪ್ರಸ್ತಾವ ಬಂದ ತಕ್ಷನವೇ ಸಭಾಪತಿಗಳು ಏನು ಮಾಡಬೇಕಾಗುತ್ತದೆ ಎಂದು ಕೇಳಿದರೆ, ಕನ್ಸಲ್ಟೇಷನ್ನಿನ ಅವಶ್ಯಕತೆ ಇದೆ ಎಂದು ಹೇಳುವುದಾದರೆ, ಕನ್ಸಲ್ಟ್ ಮಾಡಬೇಕಾಗುತ್ತದೆ. ಅಥವಾ ಯಾವುದಾದರೂ ಮೆಟೀರಿಯಲ್ಸ್ ಇದ್ದರೆ ಅದನ್ನು ಗಮನಿಸಬೇಕಗುತ್ತದೆ ಎಂದು ಎರಡೂ ಕೂಡ ಇದರಲ್ಲಿ ಇದೆ. ಆದರೆ ನನ್ನದೇನೂ ಎಂದರೆ, ಇಲ್ಲಿ ಪ್ರಸ್ತಾವದ ಮೇಲೆ ಚರ್ಚೆಗೆ ಅವಕಾಶವಿಲ್ಲ. ತಾವು ತಂದಿರತಕ್ಕಂಥಾದ್ದರಲ್ಲಿ ಚರ್ಚೆಗೆ ಅವಕಾಶವಿಲ್ಲ. ಆದರೆ ಅದು ಸರಿಯಾಗುವುದಿಲ್ಲ. ಅದು ದಾಖಲೆಗೆ ಹೋಗಬೇಕಾಗುತ್ತದೆ. ಇಂತಹ ಸಂದರ್ಭದೊಳಗೆ, ಸದನ ಇಂತಹವರ ಮೇಲೆ ಇಂತಹ ಪ್ರಸ್ತಾವನೆಯನ್ನು ತಂದಿತ್ತು ಎಂಬುದು ಸದನದ ಕಾಖಲೆಗೆ ಹೋಗಬೇಕಾಗುತ್ತದೆ. ಆದರೆ ಇದರ ಪ್ರಕಾರ ಅದು ಕಾಖಲೆಗೆ ಹೋಗುವುದೇ ಇಲ್ಲ. ಇದನ್ನು ನಾವು ಇಲ್ಲಿ ಏಕೆ ತಂದಿದ್ದೇವೆ ಎನ್ನುವುದನ್ನು ಹೇಳಬೇಕಾಗುತ್ತದೆ. ಸುಮ್ಮಸುಮ್ಮನೆ ತರುವುದಕ್ಕಾಗುವುದಿಲ್ಲ. ನಮ್ಮ ಹತ್ತಿರ ಮೆಟೀರಿಯಲ್ ಇದ್ದರೆ ಮಾತ್ರ ತರುವುದಕ್ಕೆ ಸಾಧ್ಯಾವಾಗುತ್ತದೆ. ನಾವು ಒಂದು 25 ಜನ ಒನ್ ಥರ್ಡ್ ಸಹಿ ಹಾಕುತೇವೆ. ಅದಕ್ಕೋಸ್ಕರ ಇದನ್ನು ಮಉಂದುವರೆಸಬೇಕು ಎನ್ನುವಂಥಾದ್ದು, ಮತ್ತು ಇದನ್ನು ಏಕೆ ತಂದಿದೇವೆನ್ನುವುದನ್ನು ಇಲ್ಲಿ ರೆಕಾರ್ಡ್ ಮಾಡಬೇಕಾಗುತ್ತದೆ. ಆದರೆ ಇಲ್ಲಿ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಆದರೆ ಇದು ನೇರವಾಗಿ ಎಲ್ಲಿಗೆ ಹೋಗುತ್ತದೆ ಎಂದೆ, ಒಂದು ಪ್ರಸ್ತಾವವನ್ನು ಕೊಟ್ಟ ತಕ್ಷಣವೇ ಸಭಾಪತಿಯವರು ಕನ್ಸಲ್ಟೇಷನ್ ಅನ್ನು ಮಾಡುತ್ತಾರೆ. ಕನ್ಸಲ್ಟೇಷನ್ ಜೊತೆಗೆ, ನಆವೇನಾದರೂ ಮೆಟೀರಿಯಲ್ಸ್ ಅನ್ನು ಕೊಟ್ಟರೆ ಅ ಮೆಟೀರಿಯಲ್ಸ್ ಅನ್ನು ಗಮನಿಸುತ್ತಾರೆ. ಅವೆರಡರ ಆಧಾರದ ಮೇಲೆ ಅವರು ನೇರವಾಗಿ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಿಗೆ ರವಾನೆ ಮಾಡುತ್ತಾರೆ. ಇದು ಇಲ್ಲಿ ಇತರಕ್ಕಂತಾದ್ದಾಗಿದೆ. ಇದರೋಳಗೆ ಇಲ್ಲಿ ಒಂದು ಅವಕಾಶ ಬೇಕೇನೋ ಎಂದು ನನಗನ್ನಿಸುತ್ತಿದೆ. ಇಲ್ಲಿ ರೆಫರ್ ಆದ ಮೇಲೆ ಇರತಕ್ಕಂತಾದ್ದು ಏನು ಎನ್ನುವುದು. ಮತ್ತು ಇಲ್ಲಿ ರೆಫರ್

ಆಗುವುದಕ್ಕಿಂತ ಮುಂಚೆಯೇ ಇನ್ನೊಂದನ್ನು ನಾವು ಗಮನಿಸಬಹುದಾ ಅಥವಾ ಇನ್ನೋದನ್ನು ಸೇರಿಸಬಹುದಾ ಎಂದು ಅನ್ನಿಸುತ್ತಿದೆ. ಈ ಇನ್‌ವೆಸ್ಟಿಗೇಷನ್ ಎಲ್ಲಿಂದ ಪ್ರಾತಂಭವಾಗುತ್ತದೆ ಅಂದರೆ ರೆಫರ್ ಆದ ಮೇಲೆ ಚೀಫ್ ಜಸ್ಟೀಸ್ಸೇ ಅಥವಾ ಅದಕ್ಕೆ ಒಬ್ಬ ಹೈಕೋಟಿನ ನ್ಯಾಯಾಧೀಶರು ನಿಯುಕ್ತಿ ಆದ ಮೇಲೆ ವಿಚಾರಣೆ ಪ್ರಾರಂಭ ಆಗುತ್ತದೆ. ಇಲ್ಲಿ ನಾವು ವಿಚಾರಣೆಗೆ 90 ದಿವಸಗಳ ಕಾಲಾವಕಾಶವನ್ನು ಪ್ರಸ್ತಾಪ ಮಾಡುತ್ತಿರುತ್ತಾರೆ. ರಿಟರ್ನ್ ಸ್ಟೇಟ್‌ಮೆಂಟಿಗೆ ಅವಕಾಶ ಕೊಡಬೇಕೆನ್ನುವುದು, ನ್ಯಾಚುರಲ್ ಜಸ್ಟೀಸ್ ಡಿಮ್ಯಾಮಡ್ ಆಗಿದೆ. ಸಾಮಾನ್ಯವಾಗಿ ಯಾರ ಮೇಲೇ ಅಪಾದನೆ ಬಂದಂತಹ ಸಂದರ್ಭದೊಳಗೆ ತಕರಾರು ಹಾಕುವುದಕ್ಕೆ ಅವಕಾಶ ಕೊಡಬೇಕು. ಅಲ್ಲಿಗೆ ಹೋಗುವತನಕ ಈ ತಕರಾರನ್ನು ಹಾಕುವುದಕ್ಕೆ ಅಲ್ಲಿ ಏಕೆ ಅವಕಾಶ ಕೊಡಬೇಕು? ಇಲ್ಲಿ ಸಭಾಪತಿಯವರಿಗೆ ಬಂದ ತಕ್ಷಣ ಇಲ್ಲೇ ಮಾಡಬಹುದು. ಮಾನ್ಯ ಬಿ.ಜೆ. ಪುಟ್ಟಸ್ವಾಮಿಯವರು ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿದರು. ಅದನ್ನು ಇಲ್ಲೇ ರಿಟನ್ ಸ್ಟೇಟ್‌ಮೆಂಟ್ ಅನ್ನು ಅವರು ಕೊಡತಕ್ಕಂತಹ ಮೆಟೀರಿಯಲ್ಸ್ ಅನ್ನು ಅವರಿಗೆ ಕೊಟ್ಟು ಈ ಬಗ್ಗೆ ನಿಮ್ಮದೇನಾದರೂ ತಕರಾರು ಇದ್ದರೆ ಹಾಕಬೇಕಾಗುತ್ತದೆ ಎನ್ನುವುದನ್ನು ಹೇಳಿ. ಅ ಮೆಟೀರಿಯಲ್ ಮತ್ತು ಈ ತಕರಾರು ಎರಡನ್ನೂ ಒಟ್ಟಿಗೆ ಇಟ್ಟು ನೀವು 90 ದಿನದೊಳಗೆ ಮಾಡಿ ಎಂದರೆ ಆಗುತ್ತದೆ. ಇಲ್ಲದೇ ಹೋದರೆ ಇಲ್ಲಿ ಇರತಕ್ಕಂತಹ ನಾವು ಕಾಟಂಪ್ಲೇಟ್ ಮಡತಕ್ಕಂತಹ ನ್ಯಾಚುರಲ್ ಜಸ್ಟೀಸ್ ಇದೆಯಲ್ಲಾ ಇದು ಬಹಳ ಲೀನಿಯೆಂಟ್ ಆಗಿದೆ. ಏಕೆಂದರೆ ಇಲ್ಲಿ 90 ದಿನಗಳೊಳಗೆ ಈ ವ್ಯವಹಾರ ಮುಗಿಯುವಂತಹ ಯಾವುದೇ ಲಕ್ಷಣ ಕೂಡ ಕಾಣಿಸುತ್ತಿಲ್ಲ. ಅದರ ಜೊತೆಗೆ ಒಬ್ಬ ವಕೀಲರನ್ನು ನೇಮಕ ಮಾಡುವುದಕ್ಕೂ ಕೂಡ ಇಲ್ಲಿ ಅವಕಾಶ ಮಾಡಿದ್ದೇವೆ. ನನಗೂ ಕೂಡ ಗೊತ್ತಿದೆ. ನಾನೂ ಕೂಡ ಒಬ್ಬ ವಕೀಲನಾಗಿ ನಾವು ಯಾವುದಾದರೂ ವಕಾಲತ್ತನ್ನು ಹಾಕಿದಂತಹ ಸಂದರ್ಭದೊಳಗೆ ನಮ್ಮ ಬಾಕಿ ಎಲ್ಲಾ ಇಂಟರೆಸ್ಟ್ ದೂರ ಆಗುತ್ತದೆ. ನನ್ನ ಕಕ್ಷಿದಾರರನ್ನು ಯಾವ ರೀತಿ ಅಲ್ಲಿ ಉಳಿಸಬೇಕೆನ್ನುವುದು ಮಾತ್ರ ಉಳಿಯುತ್ತದೆ. ಹಾಗಾಗಿ ವಕೀಲರಾಗಿ ಎನು ಮಾಡಬೇಕೋ ಆ ಕರ್ತವ್ಯವನ್ನು ನಾವು ನಿರ್ವಹಿಸಬೇಕಾಗುತ್ತದೆ. ನ್ಯಾಚುರಲ್ ಜಸ್ಟೀಸ್ ಇದರ ಹೆಸರಿನಲ್ಲಿ ಕೊಟ್ಟಿರತಕ್ಕಂತಹ ಸಮಯಾವಕಾಶ ಏನು ಇದೆ ಇದು ತಂಬಾ ಜಾಸ್ತಿಯಾಗಿದೆ. ಇದನ್ನು ಎಲ್ಲಿಯಾದರೂ ಲಿಮಿಟ್ ಮಾಡುವುದಕ್ಕೆ ಸಾಧ್ಯವಿದೆಯೇ ಎನ್ನುವುದನ್ನು ನೋಡಬೇಕು. ನಾವು ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿದ್ದೇವೆ. ಎಷ್ಟು ಪವರ್ ಅನ್ನು ಅವರಿಗೆ ಕೊಟ್ಟಿದ್ದೇವೆಂದರೆ, ಅ ಇನ್‌ವೆಸ್ಟಿಗೇಟಿಂಗ್ ಅಧಿಕಾರಿಗೆ, ಚೀಫ್ ಜಸ್ಟಿಸ್‌ಗೆ ಕೋರ್ಟಿಗೆ ಇರತಕ್ಕಂತಹ ಪವರ್ಸ್ ಅನ್ನು ಕೊಟ್ಟಿದ್ದೇವೆ. ಕೋಡಿ ತೊಂದರೆ ಏನೂ ಇಲ್ಲ. ಇನ್‌ವೆಸ್ಟಿಗೇಷನ್ ಆಗಬೇಕಾದರೆ ಇವನ್ನೆಲ್ಲಾ ಕೊಡಬೇಕಾಗುತ್ತದೆ. ಒಂದು ಸಿವಿಲ್ ಕೋರ್ಟಿಗೆ ಇರತಕ್ಕಂತಹ ಪವರ್ಸ್ ಅನ್ನು ಅವರಿಗೆ ಕೊಟ್ಟಿದ್ದೇವೆ. ಇದು 90 ದಿನದೊಳಗೆ ಮುಗಿಯತಕ್ಕಂತಹ ವ್ಯವಹಾರ ಇದು ಅಲ್ಲ. 90 ದಿವಸದೊಳಗೆ ಇದನ್ನು ಮುಗಿಸುವುದಕ್ಕೆ ಸಾಧ್ಯಾವೇ ಇರತಕ್ಕಂಥಾದ್ದಾಗಿದೆ. ಇದಕ್ಕೆ ಏನಾದರೂ ಒಂದು ದಾರಿಯನ್ನು ನಾವೇ ಕಂಡುಕೊಳ್ಳಬೇಕಾಗುತ್ತದೆ. ಇನ್ನೋಮದು ಒಳ್ಳೆಯ ಸಂಗತಿಗಳನ್ನು ಇದರಲ್ಲಿ ಸೇರಿಸಿದ್ದೇವೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಇಲ್ಲವೆಂದು ಅಲ್ಲ. ಒಂದು ಸಾರಿ ಪ್ರಸ್ತಾವ ಬಂದ ತಕ್ಷಣವೇ ಯಾರ ವಿರುದ್ಧ ಪ್ರಸ್ತಾವ ಬಂದಿದೆಯೋ ಅವರು ಅಲ್ಲಿ ಕಾರ್ಯವನ್ನು ನಿರ್ವಹಿಸುವ ಹಾಗಿಲ್ಲ. ಅನ್ನುವಂಥಾದ್ದು natural justice ಒಂದು ಇದೆ. ಇದರ ರಕ್ಷಣೆ ಇದೆ ಇಲ್ಲವೆಂದು ಅಲ್ಲ. ಆದರೆ ಉಳಿಯುತ್ತದೆ. ಇನ್ನೋಮದು ನಿಯುಕ್ತಿ ಮಾಡುವುದಕ್ಕೆ ನಮಗೆ ಬರುವುದಿಲ್ಲ. ಹಾಗಾಗಿ ಇದರ ವ್ಯವಹಾರ 90 ದಿವಸದೊಳಗೆ ಬಗೆಹರಿಯಬೇಕೆಂದು ಹೇಳಿದರೆ ಇನ್ನೊಂದಿಷ್ಟು ಆಗಬೇಕು. ಇಲ್ಲಿ ಇಷ್ಟೊಂದು ಡೀಟೇಲ್ ಅನ್ನು ಸೇರಿಸುವ ಅವಶ್ಯಕತೆ ಇರಲಿಲ್ಲ. ಸಿಂಪಲ್ ಆಗಿ ಹೇಳಿ ಮುಗಿಸಿ ಬಿಡಬೇಕಾಗಿತ್ತು. ಏಕೆಂದರೆ ತಾವು ದಯಮಾಡಿ ಸೆಕ್ಷನ್ 37 ಲೋಕಪಾಲ್ ನಲ್ಲಿ ನೋಡಿ ಬಹಳ ಸಿಂಪಲ್ ಆಗಿ ಇದೆ. ಈ ಪ್ರೊಸೀಜರ್ ಅನ್ನು ಇಲ್ಲಿ ಕಾಂಟಂಪ್ಲೋಟ್ ಮಾಡಬೇಕಾದ ಅವಶ್ಯಕತೆ ಇರಲಿಲ್ಲ. ಅದಕ್ಕೆ ಬೇಕಾಗಿರತಕ್ಕಂತಹ ಪ್ರೋಸೀಜರ್ ಅನ್ನು ಸಬ್ ರೂಲ್ಸ್ ಅನ್ನು ಬೇರೆ ಯಾವುದಾದರೂ ರೀತಿಯೊಳಗೆ ತಾವು ತರಬಹುದಾಗಿತ್ತು 90 ದಿವಸದೊಳಗೆ ಯಾವುದೇ ಒಬ್ಬ ಲೋಕಾಯುಕ್ತರನ್ನು ತೆಗೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಈ ವಿಧೇಯಕ ಅಲ್ಲಿಂದ ಬಂದಿದೆ. ನಾವು ಇದನ್ನು ಪಾಸ್ ಮಾಡಿಕೊಡಲೇಬೇಕಾಗಿದೆ. ನಮ್ಮ ನಾಯಕರು ನಾವು ಪಾಸ್ ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಒಟ್ಟಾರೆ ಇಲ್ಲಿ ಚರ್ಚೆ ನಡೆಯತಕ್ಕಂತಹ ರೀತಿಯೊಳಗೆ ಲೋಕಾಯುಕ್ತಕ್ಕೆ ಒಂದು ಕಾಯಕಲ್ಪ

ಬೇಕಾಗಿದೆ. ಲೋಕಾಯಿಕ್ತ ಸಂಸ್ಥೆ ಇರಬೇಕು. ಆದರೆ ಅದರ ಅಧಿಕಾರಗಳು ಈ ರೀತಿ 30 ವರ್ಷಗಳ ಅವಧಿಯೊಳಗೆ ದುಪಯೋಗ ಆಗುತ್ತಿರತಕ್ಕಮತಹ ಸಂದರ್ಭಗಳನ್ನು ನೋಡಿದ್ದೇವೆ. ಮಾನ್ಯ ಪುಟ್ಟಸ್ವಾಮಿಯವರು ಪ್ರಸ್ತಾಪ ಮಾಡಿದರು. ಯಾವ ರೀತಿ ವರ್ತನೆ ಮಾಡುತ್ತಾರೆ ಎಂದರೆ, ಒಂದು ರೀತಿಯಾದಂತಹ ಸೂಪರ್ ಪವರ್ ರೀತಿಯೊಳಗೆ ಇರಬೇಕಾಗಿಲ್ಲ. ಅವರು ಸೂಪರ್ ಪವರ್ ಆಗಬೇಕಾದಂತಹ ಅವಶ್ಯಕತೆ ಇಲ್ಲ. ಎಷ್ಟರ ಮಟ್ಟಿಗೆ ಅಂದರೆ, ನ್ಯಾಚುರಲ್ ಜಸ್ಟೀಸ್ ಅನ್ನು ಫಾಲೋ ಮಾಡದೇ ಇದ್ದರೂ ಕೂಡ, ನಾವು ಮಡಬೇಕಾಗಿಲ್ಲ ಎಂದು ಒಂದು ಕಡೆಯಲ್ಲಿ ಹೇಳುತ್ತಾರೆ. ಮಾನ್ಯ ಸಂತೋಷ ಹೆಗಡೆಯವರು ಗಣಿಗಾರಿಕೆಗೆ ಸಂಬಂಧಪಟ್ಟಂತಹ ಎರಡು ವರದಿಯನ್ನು ಕೊಟ್ಟಿದ್ದಾರೆ. ಆ ಎರಡೂ ವರದಿಯನ್ನು ನಾನು ಓದಿದ್ದೇನೆ. ಆದರೆ ಅದನ್ನು ಇಲ್ಲಿ ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ. ಅದರಲ್ಲಿ ಒಂದು ಕಡೆಯಲ್ಲಿ ನಾನು ನೋಟೀಸ್ ಕೊಡಬೇಕಾದ ಅವಶ್ಯಕತೆ ಇಲ್ಲವೆಂದು ಒಂದು ಕಡೆಯಲ್ಲಿ ಹೇಳುತ್ತಾರೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಇದನ್ನು ಹೈಕೋರ್ಟಿನಲ್ಲಿ ಪ್ರಶ್ನೆ ಮಾಡಲಾಗಿ ಅದು ಕ್ವಾಶ್ ಆಗಿದೆ.

**ಶ್ರೀ ಆರ್.ಕೆ. ಸಿದ್ದರಾಮಣ್ಣ:–** ಪ್ರಶ್ನೆ ಆಗುವುದು ಬೇರೆ. ಇಲ್ಲಿ ನಾವು ಒಬ್ಬ ಲೋಕಾಯುಕ್ತರನ್ನು ತೆಗೆಯಬೇಕಾದರೆ, ನ್ಯಾಚುರಲ್ ಜಸ್ಟೀಸ್ ಅನ್ನು ಎಷ್ಟು ಎಳೆದುಕೊಂಡು ಹೋಗಬಹುದೋ ಅಷ್ಟು ಎಳೆದುಕೊಂಡು ಹೋಗುತ್ತವೆ. ಆದರೆ ಅದೇ ಲೋಕಾಯುಕ್ತರು ಸಂದರ್ಭ ಬಂದಾಗ ಅವರು ನಆನು ನೋಟೀಸ್ ಕೊಡಬೇಕಾದ ಅವಶ್ಯಕತೆ ಇಲ್ಲ ಎಂದು ಬರೆಯುತ್ತಾರೆ. ಲೀಗಲ್ಲೀ ಅದು ಸರಿ ಇರಬಹುದು. ಆದರೆ ನಾನು ಕೊಡಬೇಕಾಗಿಲ್ಲ ಎಂಬ ಮಾತನನು ಇಲ್ಲಿ ಹೇಳಿದ್ದಾರೆ. ಆ ಮಾತನ್ನು ನಾನು ಇಲ್ಲಿ ಉಲ್ಲೇಖ ಮಾಡಬೇಕಾದ ಅವಶ್ಯಕ್ತೆ ಇಲ್ಲ. ಇನ್ನೋಂದು ಕೂಡ ಇದೆ. ಮಾನ್ಯ ಸಭಾಪತಿಗಳೇ ಈ ಸದನದಲ್ಲಿ ಮತ್ತು ಆ ಸದನದಲ್ಲಿ ಆದಂತಹ ಚರ್ಚೆಯನ್ನು ನೋಡಿದೆ. ಸುದೈವ ಎಂದು ಅನ್ನಿಸುತ್ತದೆ. ಆ ಚೆರ್ಚೆಯ ಸಂದರ್ಭದಲ್ಲಿ ಮಾನ್ಯ ಶಾಣಪ್ಪನಂಥಹವರು, ಮಾನ್ಯ ಪುಟ್ಟಸ್ವಾಮಿಯಂಥಹವರು, ಮಾನ್ಯ ಹೊರಟ್ಟಿಯವರು ಇಂಥಹವರೆಲ್ಲರೂ ಕೂಡ ಇದ್ದಾರೆ. ಇದನ್ನು ನಾನು ನೋಡಿದೆ. ಈ ಚರ್ಚೆಯನ್ನು ನೋಡಿದಾಗ ಈ ಸಂದರ್ಭ ಬರುತ್ತದೆ ಎಂದು ಈ ಚರ್ಚೆಯಲ್ಲಿ ಭಾಗವಹಿಸಿದಂತಹ ಯಾರೂ ಕೂಡ ಬಂದಿಲ್ಲ. ಪ್ರೋ ಎ.ಲಕ್ಷೀಸಾಗರ್ ಅವರು ಮತ್ತು ಮಾನ್ಯ ಕೆ.ಹೆಚ್. ರಂಗನಾಥ್ ಅವರು ಕೂಡ ಈ ಚರ್ಚೆಯೊಳಗೆ ಭಾಗವಹಿಸಿದ್ದನ್ನು ನೋಡಿದ್ದೇನೆ. ಈ ರೀತಿಯಾದಂತಹ ಒಂದು ಸಂದರ್ಭ ಸೃಷ್ಟಿಯಾಗುತ್ತದೆ ಎಂದು ಹೇಳಿ ಅವರ್‍ಯಾರು ಕೂಡ ಕಲ್ಪನೆಯನ್ನು ಮಾಡಿರಲಿಲ್ಲ. ಹಾಗಾಗಿ ಒಂದು ವಿಚಿತ್ರವಾದ ಕಾಲಘಟ್ಟ, ವಿಚಿತ್ರವಾದ ಸಂದರ್ಭದೊಳಗೆ ಇರುವ ಕಾರಣಕ್ಕೋಸ್ಕರ ಇದಕ್ಕೆ ಒಂದು ರೀತಿಯಾಗಿ ಕಾಯಕಲ್ಪದ ಅವಶ್ಯಕತೆ ಇದೆ. ಅದು ಯಾವ ರೀತಿ ಎಂದು ನಮ್ಮ ನಾಯಕರಾದ ಮಾನ್ಯ ಈಶ್ವರಪ್ಪನವರು ಪ್ರಸ್ತಾಪ ಮಾಡಿದರು. ಬೇರೆ ಬೇರೆ ಸದಸ್ಯರುಗಳೂ ಕೂಡ ಪ್ರಸ್ತಾಪ ಮಾಡಿದರು. ಒಟ್ಟಾರೆ ಇದು ಬೇಕಾಗಿದೆ. ಈ ಒಂದು ಸಂಸ್ಥೆಯನ್ನು ನಾವು ಉಳಿಸಿಕೊಳ್ಳಬೇಕಾಗಿದೆ. ಆದರೆ, ಸಂಸ್ಥೆಗೆ ಹೆಚ್ಚಿನ ಅಧಿಕಾರ ಕೊಡಬೇಕಾದ ಅವಶ್ಯಕತೆ ಇಲ್ಲ. ತಪ್ಪು ಯಾರು ಮಾಡಿದ್ದಾರೆಂದು ಅವರು ಗುರುತಿಸಲಿ, ಬೇಡ ಎಂದು ನಾನು ಹೇಳುವುದಿಲ್ಲ. ಬಿಲ್ ಬಗ್ಗೆ ನಾನು ಹೇಳುವುದನ್ನು ಹೇಳಿದ್ದೇನೆ. ಆದರೆ ಇಲ್ಲಿ ವಿಷಯ ಪ್ರಸ್ತಾಪ ಆಗಿರುವುದರಿಂದ ಕಡಿಯದಾಗಿ ಇದಕ್ಕೆ ಏನು ಕಾಯಕಲ್ಪ ಮಾಡಬೇಕೆಂದು ಮಾತ್ರ ಹೇಳಬಯಸುತ್ತೇನೆ. ಇದು ಅಪ್ರಸ್ತುತ ಎಂದು ನಾನು ಭಾವಿಸುವುದಿಲ್ಲ. ನಮ್ಮಲ್ಲಿ ಎರಡು ಗಣಿ ವರದಿಗಳು ಇವೆ. 2008ರ ಡಿಸೆಂಬರ್ ನಲ್ಲಿ ಸಂತೋಷ ಹೆಗ್ಗಡೆಯವರ ಮೊದಲನೆಯ ವರದಿ ಬಂತು. ಅದರಲ್ಲಿನ ಪುಟ ಸಂಖ್ಯೆ 268ನ್ನು ನೋಡಿ. ಅದರಲ್ಲಿ ಒಂದು ದೊಡ್ಡ ಪಟ್ಟಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಮಾಜಿ ಮುಖ್ಯಮಂತ್ರಿಗಳ ಹೆಸರುಗಳನ್ನು ಪ್ರಸ್ತಾಪ ಮಾಡಿದ್ದಾರೆ. ಎರಡನೇ ವರದಿಯಲ್ಲಿ ಕೂಡ ಮಾಜಿ ಮುಖ್ಯಮಂತ್ರಿಗಳ ಹೆಸರುಗಳನನು ಪ್ರಸ್ತಾಪ ಮಾಡಿದ್ದಾರೆ. ಎರಡನೇ ವರದಿಯಲ್ಲಿ ಕೂಡ ಮಾಡಿ ಮುಖ್ಯಮಂತ್ರಿಗಳು ಮತ್ತು ಹಾಲಿ ಮುಖ್ಯಮಂತ್ರಿಗಳ ಪ್ರಸ್ತಾಪವನ್ನು ಮಾಡಿದ್ದರೆ. ಏಕೆಂದರೆ ನಾವು ಎಲ್ಲೋ ಒಂದು ಕಡೆ ಅವರಿಗೆ ಅಧಿಕಾರವನ್ನು ಕೊಟ್ಟು ಬಿಡುವುದು, ಏನು ಬೇಕಾದರು ಬರೆಯಬಹುದು ಎನ್ನುವಂಥ ಒಂದು ಅಧಿಕಾರವನ್ನು ಕೊಟ್ಟು ಬಿಡುವುದು, ಏನು ಬೇಕಾದರು ಬರೆಯಬಹುದು ಎನ್ನುವಂಥ ಒಂದು ಮಾನಸಿಕತೆಯಲ್ಲಿ ಲೋಕಾಯುಕ್ತರು ಇರುವಂಥದ್ದು. ಇಲ್ಲಿ ಪುಟ ಸಂಖ್ಯೆ 268ರಲ್ಲಿ ಮಾಜಿ ಮುಖ್ಯಮಂತ್ರಿಗಳಾಗಿದ್ದಂಥ ಶ್ರೀ ಎನ್.ಧರ್ಮಸಿಂಗ್ ರವರ ಬಗ್ಗೆ ಬರೆಯುತ್ತಾರೆ. ಅವರ ಕಡೆಯಿಂದ ಈ ಗಣಿ

ವ್ಯವಹಾರದಿಂದ ಲಾಸ್ ಆಗಿದೆ ಎಂದರೆ 23ಕೋಟಿ 22 ಲಕ್ಷ ಎಂದು ಬರೆಯುತ್ತಾರೆ. ಮತ್ತು ಕಾಂಪಿಟೆಂಟ್ ಅಥಾರಿಟಿಗೆ ಡೈರೆಕ್ಟ್ ಮಾಡುತ್ತಾರೆ. 'Initiate approparіate proceedings against Sri Dharma Singh, former Chief Minister, for the loss caused by hi.' ಎಂದು ಇದರೊಳಗೆ ಹೇಳುತ್ತರೆ. ಅದೇ ಸಂತೋಷ ಹೆಗಡೆಯವರು ಎರಡನೇ ವರದಿಯಲ್ಲಿ..

**ಸಭಾಪತಿಯವರು:–** ಈಗ ಏನಾಗಬೇಕೆಂದು ಮಾತ್ರ ಹೇಳಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಈಗ ವಿಷಯಕ್ಕೆ ಸೀಮಿತವಾಗಿ ಮಾತನಾಡಿ. ಈಗ ಸಂತೋಷ ಹೆಗ್ಗಡೆಯವರು ಕೊಟ್ಟಿರತಕ್ಕಂಥ ವರದಿಯನ್ನು ಪೂರ್ತಿಯಾಗಿ ಓದುತ್ತ ಹೋದರೆ ಹೇಗೆ?

**(ಗೊಂದಲ)**

**ಶ್ರೀ ಆರ್.ವಿ. ವೆಂಕಟೇಶ್(ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಪತಿಯವರೆ, ಇಲ್ಲಿ ಚರ್ಚೆ ಮಾಡಿ ಎಂದರೆ ರಾಜಕೀಯ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಅಶ್ವಥ್‌ನಾರಾಯಣ:–** ಮಾನ್ಯ ಸಭಪತಿಯವರೆ, ಚರ್ಚೆಯನ್ನು ಮಾಡುವಾಗ ಕೆಲವೊಂದು ವಿಚಾರಗಳನ್ನು ಹೇಳಿದರೆ ತಪ್ಪೇನಿದೆ?

**(ಗೊಂದಲ)**

**ಸಭಾಪತಿಯವರು:–** ಒಬ್ಬರಿಗಿಂತ ಹೆಚ್ಚಿಗೆ ಸದಸ್ಯರು ಮಾತನಾಡಿರುವುದು ದಾಖಲೆ ಮಾಡಬೇಡಿ. ಅದು ದಾಖಲೆಗೆ ಹೋಗತಕ್ಕದ್ದಲ್ಲ. ದಯಮಾಡಿ ಎಲ್ಲರು ಕುಳಿತುಕೊಳ್ಳಿ. ಅಶ್ವಥ್ ನಾರಾಯಣರವರೆ, ರೇವಣ್ಣರವರೆ ಕುಳಿತುಕೊಳ್ಳಿ. ಡಿಸೋಜರವರೆ ಕುಳಿತುಕೊಳ್ಳಿ. ನಿಮಗೆ ಒಳ್ಳೆಯದಾಗುವುದಿಲ್ಲ. ನೀವು ಸಹ ಪ್ರತಿ ಬಾಹಿ ಹೇಳಿಸಿಕೊಳ್ಳಬಾರದು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಪತಿಯವರೆ, ಅವರು ತುಂಬಾ ಸ್ಪಷ್ಟವಾಗಿ ಅವರು ಬಿಲ್ ಮೇಲೆ ಬರುತ್ತಿದ್ದಾರೆ. ಅದು ಗೆರೆ ಹಾಕಿದ ಹಾಗೆ ಮಾತನಾಡಬೇಕೆಂದು ಹೇಳಿದರೆ ಕಷ್ಟ ಆಗುತ್ತದೆ. ಅದರ ಜೊತೆಗೆ ಅವರು ಎರಡು ನಿಮಿಷದಲ್ಲಿ ಮುಗಿಸುತ್ತೇನೆಂದು ಕೂಡ ಹೇಳುತ್ತಿದ್ದಾರೆ. ದಯಮಾಡಿ ಇಷ್ಟೊಂದು ಸದರ ಕೊಡಬೇಡಿ ಅವರು ಎರಡು ನಿಮಿಷದಲ್ಲಿ ಮುಗಿಸುತ್ತೇನೆಂದು ಹೇಳಿದ್ದಾರೆ. ಮುಗಿಸುತ್ತಾರೆ.

**ಶ್ರೀ ಆರ್.ಕೆ. ಸಿದ್ದರಾಮಣ್ಣ:–** ಮಾನ್ಯ ಸಭಾಪತಿಯವರೆ, ಇಲ್ಲಿ 2011 ಕೊಟ್ಟಂಥ ಎರಡನೇ ವರದಿ ಕೂಡ ಇದೆ. ನಾನು ಇದನ್ನೆಲ್ಲಾ ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ನಾವು ಪೂರ್ತಿ ಚರ್ಚೆಯನ್ನು ಭಾಸ್ಕರ್‌ರಾವ್ ರವರ ಮೇಲೆಲೇ ಮಾಡುತ್ತಿದೇನೆಂದರೆ ನಾವು ಭಾಸ್ಕರ್‌ರಾವ್ ರವರು ಮುಂದೆ ಬೇರೆ ಬೇರೆ ವೇಷಗಳಲ್ಲಿ ಬರುವುದಿಲ್ಲವೆಂದು ಮೇಲೆ ವಿಶ್ವಾಸ ಇಟ್ಟಿದ್ದೇವೆ ಅವರು ಒಂದು ಕಡೆ ಆಕ್ಷನ್ ತೆಗೆದುಕೊಳ್ಳಿ ಎಂದು ಬರೆಯುತ್ತಾರೆ. ಅದೇ ಸಂತೋಷ ಹೆಗ್ಗಡೆಯವರು ಇನ್ನೊಂದು ಕಡೆ in case of Sri H.D. Kumara Swamy, former Chief Minister of Karnataka, ' Since he is not holding public post under the State, on action is recommended' ಎಂದು ಬರೆಯುತ್ತಾರೆ. 'No action is recommended' ಎಂದು ಬರೆಯುತ್ತಾರೆ. ನಾನು ಇದರೋಳಗೆ ಮುಂದೆ ಹೋಗುವುದಿಲ್ಲ. ನಾನು ಇನ್ನೋಂದು ಹೆಜ್ಜೆ ಮುಂದೆ ಹೋದರೆ ಈ ಸದನವೇ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಆಗಿದ್ದಂಥ ಮುಖ್ಯಮಂತ್ರಿ ಒಬ್ಬನೇ ವ್ಯಕ್ತಿ, ಒಂದೇ ಕೇಸ್, ಒಂದೇ ರೀತಿಯಾದಂಥ ವ್ಯವಹಾರಗಳು, ಒಂದರಲ್ಲಿ ರಿಕವರಿ ಮಾಡಿ ಎಂದು ಬರೆಯುತ್ತಾರೆ. ಇನ್ನೊಂದರಲ್ಲಿ 'No action is required' ಎಂದು ಬರೆಯುತ್ತಾರೆ.

**ಶ್ರೀ ಆರ್.ವಿ. ವೆಂಕಟೇಶ್(ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಪತಿಯವರೆ, ಕೊರ್ಟ್ ಅಲ್ಲ, ಇಲ್ಲಿ ಬಿಲ್ ಮೇಲೆ ಚರ್ಚೆಯಾಗಲಿ. ಕೋರ್ಟಿನಲ್ಲಿ ವಾದ ಮಾಡುವ ರೀತಿ ವಾದ ಮಾಡುತ್ತಾ ಹೊದರೆ ಹೇಗೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಅದರ ಮೇಲೆ ಆಕ್ಷನ್ ಆಗಿದೆ. ಬೇಲ್ ತೆಗೆದುಕೊಂಡಿದ್ದಾರೆ, ಎಲ್ಲಾ ಆಗಿ ಹೋಗಿದೆ, ಈಗ ಅದರ ಬಗ್ಗೆ ಚರ್ಚೆ ಮಾಡಿದರೆ ಹೇಗೆ?

**(ಗೊಂದಲ)**

**ಸಭಾಪತಿಯವರು:–** ಯಾವುದು ದಾಖಲೆಗೆ ಹೋಗುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ಆಯಿತು ಈಗ ಅವರು ಮುಗಿಸುತ್ತಾರೆ. ಎಲ್ಲರು ಕುಳಿತುಕೊಳ್ಳಿ.

**ಶ್ರೀ ಆರ್.ಕೆ. ಸಿದ್ದರಾಮಣ್ಣ:–** ಮಾನ್ಯ ಸಭಪತಿಯವರೆ, ನಾನು ಇಲ್ಲಿ ಕೇವಲ ಭಾಸ್ಕರ್ ರಾವ್ ರವರನ್ನು ಗಮಗದಲ್ಲಿಟ್ಟುಕೊಂಡು ಈ ತಿದ್ದುಪಡಿಗಳನ್ನು ತರುವಂಥದ್ದು, ಲೋಕಾಯುಕ್ತ ಕಾಯಿದೆಯನನು ಕಾಯಕಲ್ಪ ಮಾಡುವಂಥದ್ದನ್ನು ಹೇಳುತ್ತಿಲ್ಲ. ಸಂದರ್ಭಗಳು ಹೇಗೆ ಹೇಗೆ ಬರುತ್ತವೆಂದು ಹೇಳುತ್ತಿದ್ದೇನೆ. ಯಾರ ಮೇಲೆ ಏನು ಬೇಕಾದರು, ಖುಷಿ ಬಂದ ಹಾಗೆ ಬರೆಯಬಹುದೇ? ಈ ರೀತಿಯಾಗಿರತಕ್ಕಂಥ ನಡವಳಿಕೆಗಳನ್ನು ಬಹಳ ಗಂಭೀರವಾಗಿ ಗಮನಿಸಬೇಕಾಗುತ್ತದೆ. ಹಾಗಾಗಿ ಕಳೆದ 30 ವರ್ಷಗಳಲ್ಲಿ ಲೋಕಾಯುಕ್ತರಿಂದ ಬಂದಿರತಕ್ಕಂಥ ಎಲ್ಲಾ ವರದಿಗಳನ್ನು ನಾವು ಪರಿಶೀಲನೆ ಮಾಡಬೇಕಾಗುತ್ತದೆ. ಯಾರು ಯಾರಿಗೆ ಯಾವ ರೀತಿ ಇವೊತ್ತಿನ ದಿನ ಅಧಿಕಾರದಲ್ಲಿದ್ದಂಥ ಸಂದರ್ಭದೊಳಗೆ ಏನು ಮಾಡಿದ್ದಾರೆ ಕೂಡ ಯೋಚನೆ ಮಾಡತಕ್ಕಂಥದ್ದು ಆ ಲೋಕಾಯುಕ್ತರಿಂದ ನಮ್ಮ ಮೇಲೆ ಯಾವುದು ಬರದೆ ಇರುವ ಹಾಗೆ ನೋಡಿಕೊಳ್ಳುವುದಕ್ಕೆ ನಾನು ಏನು ಮಾಡಬೇಕು ಅದನ್ನು ನಾನು ಮಾಡುತ್ತೇನೆ. ಆ ಪ್ರಯತ್ನಗಳನ್ನು ನಾನು ಮಾಡುವುದಿಲ್ಲವೆಂದು ಹೇಳಲಿಕ್ಕೆ ಬರುವುದಿಲ್ಲ. ಅದಕ್ಕೋಸ್ಕರ ಆ ಪ್ರಯತ್ನಗಳನ್ನು ನಾನು ಮಾಡುವುದಿಲ್ಲವೆಂದು ಹೇಳಲಿಕ್ಕೆ ಬರುವುದಿಲ್ಲ. ಅದಕ್ಕೋಸ್ಕರ ಈಗ ತಂದಿರತಕ್ಕಂಥ ತಿದ್ದುಪಡಿ ಏನಿದೆ ಇದು ಇದರಲ್ಲಿ ನಾನು ನ್ಯಾಚುರಲ್ ಜಸ್ಟೀಸ್ ಅನ್ನು ಏನು ಏಳೆದುಕೋಂಡು ಹೋಗಿದ್ದೇವೆ ಅದರ ಅವಶ್ಯಕತೆ ಇಲ್ಲ. ಅಷ್ಟು ದೊಡ್ಡದಾಗಿ ಎಳೆದುಕೊಂಡು ಹೋಗತಕ್ಕಂಥ ಅವಶ್ಯಕತೆ ಇಲ್ಲ. ಹಾಗಾಗಿ ಅದನ್ನು ಇನ್ನೊಂದು ಸ್ವಲ್ಪ ಕಂಡೆನ್ಸ್ ಮಾಡುವುದಕ್ಕೆ ಸಾಧ್ಯ ಆದರೆ ಮಾಡಿ.

ಈಗ ಸಮಗ್ರವಾಗಿ ಲೋಕಾಯುಕ್ತರ ಬಗ್ಗೆ ಯೋಚನೆ ಮಾಡತಕ್ಕಂಥ ಕಾಲ ಬಂದಿದೆ. ಅದಕ್ಕೆ ತಜ್ಞರ ಸಮಿತಿ ಅಥವಾ ಸದನ ಸಮಿತಿ ಅನ್ನುತೀರೊ ಯಾವುದಾದರೋಂದು ಸಮಿತಿಯ ಮೂಲಕ ಆ ಕಾರ್ಯದ ಮರುಪರಿಶೀಲನೆ ನಾವು ಇವೊತ್ತಿನ ದಿವಸ ಮಾಡಬೇಕಾಗಿದೆ. ಮತ್ತು ಸರಿಯಾದಂಥ ಸಂದೇಶವನ್ನು ಜನರಿಗೆ ಕೊಡಬೇಕಾಗಿದೆ. ಈ ರೀತಿಯಲ್ಲಿ ಕೆಲಸ ಮಾಡುವಂಥ ಸಂದರ್ಭ ನಾವು ಇವೊತ್ತಿನ ದಿವಸ ಸೃಷ್ಟಿ ಮಾಡಬೇಕಾಗಿದೆ. ಆದ್ದರಿಂದ ಈ ತಿದ್ದುಪಡಿ ಅಷ್ಟೇ ಇವೊತ್ತು ಸಾಕಾಗುವುದಿಲ್ಲವೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತೇನೆ.

**ಶ್ರೀ ಐವನ್ ಡಿ'ಸೋಜ(ನಾಮ ನಿರ್ದೇಶಕರು):–** ಮಾನ್ಯ ಸಭಾಪತಿಯವರೆ, ಅವಕಾಶ ನೀಡಿದಕ್ಕಾಗಿ ವಂದಿಸುತ್ತ ನನ್ನ ಮತುಗಳನ್ನು ಪ್ರಾರಂಭ ಮಾಡುತ್ತೇನೆ. ಈ ಲೋಕಾಯುಕ್ತ ತಿದ್ದುಪಡಿಯನ್ನು ಏನು ಮಾನ್ಯ ಸಚಿವರು ತಂದಿದ್ದಾರೆ ಅದನ್ನು ನಆನು ಸ್ವಾಗತ ಮಾಡುತ್ತೇನೆ. ಈ ಲೋಕಾಯುಕ್ತ ಕಾಯಿದೆಗೆ ತಿದ್ದುಪಡಿ ಬೇಕೆಂದು ನಾವು ಅನೇಕ ಸಂದರ್ಭಗಳಲ್ಲಿ, ಅನೇಕ ದಿನಗಳಿಂದ ನಾವು ಹೋರಾಟವನ್ನು ಮಾಡಿಕೊಂಡು ಬರುತ್ತಿದ್ದೇವೆ. ಈ ಕಾನೂನಿನಲ್ಲಿರತಕ್ಕಂಥ ಪ್ರಮುಖವಾದ ಅಂಶಗಳನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಈ ಕಾಯಿದೆಯ ಸೆಕ್ಷನ್ 3ರಲ್ಲಿ ಲೋಕಾಯುಕ್ತರ ನೇಮಕಾತಿಯ ಬಗ್ಗೆ ಇದೆ. ಅವರ ಕ್ವಾಲಿಫಿಕೆಶನ್ ಬಗ್ಗೆ ಇದೆ. ಅವರು ಚೀಫ್ ಜಸ್ಟೀಸ್ ಆಗಿರಬೇಕು/ಹೈಕೋರ್ಟ್ ಜಡ್ಜ್ ಆಗಿರಬೇಕು/ಅವರ ಸರ್ವಿಸ್ ಹತ್ತು ವರ್ಷ

ಇರಬೇಕೆಂದು ಇದೆ. ಈ ಕಾನೂನಿನ ಹಿಂದೆ ಹೋಗಿರುವ ಕಾರಣಕ್ಕಾಗಿಯೇ ನಾವು ಇವೊತ್ತು ಈ ಒಂದು ಪರಿಸ್ಥಿತಿಗೆ ಬರುವಂಥದ್ದಾಗಿದೆ. ಒಂದು ವೇಳೆ 10 ವರ್ಷ ಕೊಟ್ಟು Chief Justice ಆಗಬೇಕು ಎಂದು ಹೇಳುವಂಥದ್ದು ಅಥವಾ ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರಾಗಬೇಕು ಎಂದು ಇರುವುದರಿಂದ ಇಂಥವರನ್ನು ಹುಡುಕಿದರು ಸಿಗದೇ ಇರುವ ಕಾರಣ ಯಾರೋ ಒಬ್ಬರನ್ನು ಹುಡುಕಿ ತಂದು ಲೋಕಾಯುಕ್ತರನ್ನಾಗಿ ಮಾಡಿದ್ದೇ ಇ ಒಮದು entire epsisode ಗೆ ಕಾರಣವಾಗಿದೆ. ಹಾಗಾಗಿ ಈಗೇನು ಸನ್ಮಾನ್ಯ ಸಚಿವರು ಕ್ವಾಲಿಫಿಕೇಷನ್ ಐದು ವರ್ಷ ಎಂದು ಮಾಡಿದ್ದಾರೆ. ಉಪ ಲೋಕಾಯುಕ್ತರಾಗುವುದಕ್ಕೆ ಐದು ವರ್ಷಗಳು ಕೂಡ ಬೇಕಾಗಿಲ್ಲ. Chief Justice of any High Court ಎಂದು ಹೇಳಿದರೆ ಸಾಕು ಎನ್ನುವಂಥದ್ದು ನನ್ನ ಸಲಹೆಯಾಗಿದೆ. ಅದೇ ರೀತಿಯಲ್ಲಿ ಸೆಕ್ಷನ್ 6(6)ನಲ್ಲಿ ಎನ್‌ಕ್ವೈರಿ ಮಾಡಿ ವರದಿಯನ್ನು ಕೊಡುವುದಕ್ಕೆ 90 ದಿವಸಗಳೆಂದು ಹೇಳಿದ್ದಾರೆ. ಒಹುಶಃ 90 ದಿವಸಗಳೆಂದು ಏನು ಹೇಳಿದ್ದಾರೆ 90 ದಿವಸಗಳಲ್ಲಿ ಎನ್‌ಕ್ವೈರಿಯನ್ನು ಮಾಡಿ ಮುಗಿಸುವುದಕ್ಕೆ ಆಗದೇ ಇರುವಂತಹ ಸಂದರ್ಭದಲ್ಲಿ ಏನು ಮಾಡಬೇಕು ಎನ್ನುವುದರ ಬಗ್ಗೆ ಈ ಒಂದು ಕಾನೂನಿನಲ್ಲಿ ಉಲ್ಲೇಖವಿಲ್ಲ. 90 ದಿವಸಗಳು ಮುಗಿದ ಮೇಲೆ automatically report would be given or not? What would be the next action?s ಎನ್ನುವಂಥದ್ದು ಕೂಡ ಈ ಆ್ಯಕ್ಟ್ ಒಳಗಡೆ ಬರಬೇಕಾಗಿತ್ತು ನಾವು 90 ದಿವಸಗಳಲ್ಲಿ ಎನ್‌ಕ್ವೈರಿಯನ್ನು ಮಾಡಿ ವರದಿಯನ್ನು ಕೊಡಬೇಕೆಂದು ಹೇಳಿದ್ದೇವೆ ಅಲ್ಲಿ ಸಿವಿಲ್ ಕೋರ್ಟ್‌ನ ಅಧಿಕಾರಿಯನನು ಕೊಟ್ಟಿದ್ದೇವೆ. ಮುಗಿಸುವುದಕ್ಕೆ ಕಷ್ಟಸಾಧ್ಯವಗಿರುತ್ತದೆ. ಅಲ್ಲಿ ವಕೀಲರುಗಳು ಆಗುವುದಕ್ಕೆ ಅವಕಾಶ ಕೊಟ್ಟಿರುವುದರಿಂದ ಇದು ನಿಧಾನವಾಗುವಂತಹ ಸಾಧ್ಯತೆ ಇರುತ್ತದೆ. 90 ದಿವಸಗಳಲ್ಲಿ ಅವರು ವರದಿಯನ್ನು ಕೊಡದೇ ಇದ್ದರೆ ಮುಂದೆ ಏನ ಎನ್ನುವುದರ ಬಗ್ಗೆ ಸನ್ಮಾನ್ಯ ಸಚಿವರಿಂದ ಮಾಹಿತಿಯನ್ನು ಬಯಸುತ್ತಿದ್ದೇನೆ. ಆದರೆ ಸೆಕ್ಷನ್ 6(14)ನಲ್ಲಿ ಯಾವಾಗಿನಿಂದ ಉಭಯ ಸದನಗಳಲ್ಲಿ ಅವರುಗಳ ಮೇಲೆ ದೂರುಗಳು ಬಂದಾಗ ಯಾವಾಗ ಪ್ರೋಸಿಡಿಂಗ್ಸ್ ಪ್ರಾರಂಭವಾಗುತ್ತದೆ ಅಂದಿನಿಂದ ಲೋಕಾಯುಕ್ತರನ್ನು ಅಫೀಷಿಯಲ್ ಡ್ಯೂಟಿಯಿಂದ ಮುಂದುವರೆಯುವುದಕ್ಕೆ ನಿರ್ಬಂಧನೆಯನ್ನು ಹಾಕಿದ್ದಾರೆ. ನಾನು ಈ ಸದನದ ಮುಖಾಂತರ ಸಚಿವರನ್ನು ಕೇಳುವುದೇನೆಂದರೆ, ಆ 6(14) ಒಳಗಡೆ ಅವರಿಗೆ ಲೋಕಾಯುಕ್ತ ಅಥವಾ ಸಂದರ್ಭಾನುಸಾರವಾಗಿ ಉಪಲೋಕಾಯುಕ್ತರ ವಿರುದ್ದ ರಾಜ್ಯ ವಿಧಾನ ಮಂಡಲದಲ್ಲಿ ಸದನ ಅಥವಾ ಸದನಗಳ ಮುಂದೆ ಆತನ ಪದಚ್ಯುತಿಗಾಗಿ ಗೊತ್ತುವಳಿಯನ್ನು ಮಂಡಿಸಿರುವಾಗ ಹಾಗು ರಾಜ್ಯ ವಿಧಾನ ಮಂಡಲ ಸದನ ಅಥವಾ ಸದನಗಳ ಮುಂದೆ ಆತನ ಪದಚ್ಯುತಿಗಾಗಿ ಗೊತ್ತುವಳಿ ಇತ್ಯರ್ಥದಲ್ಲಿರುವಾಗ ಆತನು ತನ್ನ ಕರ್ತವ್ಯವನ್ನು ನಿರ್ವಹಿಸುವುದಿರಿಂದ ತಡೆಯುವುದರ ಬದಲು suspended ಎಂದು ಮಾಡುವುದಕ್ಕೆ ಸಾಧ್ಯವೇ? ಎನ್ನುವುದರ ಬಗ್ಗೆ ಮಾನ್ಯ ಸಚಿವರು ಉತ್ರವನ್ನು ಹೇಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ, ಯಾವಾಗ ಸದನಕ್ಕೆ ದೂರು ಬಂದು 25 ಸದಸ್ಯರುಗಳು ಸಹಿ ಮಾಡಿ ದೂರು ಕೊಟ್ಟು ಕೂಡಲೇ ಆ ಒಂದು ಪ್ರಕ್ರಿಯೆ ಜಾರಿಗೆ ಬಂದರೆ, ಬಹುಶಃ ಕಾನೂನಿಗೆ ಸ್ವಲ್ಪ ಬಲ ಬಂದಂತಾಗುತ್ತದೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುತ್ತಿದ್ದೇನೆ. ಉಳಿದ ಎಲ್ಲಾ ವಿಚಾರಗಳು ಈಗಾಗಲೇ ಎಲೆ ಎಲೆಯಾಗಿ ಹಿರಿಯ ಸದಸ್ಯರುಗಳು ಚರ್ಚೆ ಮಾಡಿದ್ದಾರೆ. ನಾನು ಮತ್ತೆ ಅದೇ ವಿಷಯವನ್ನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಈ ಕಾನೂನಿನ ಒಳಗಡೆಯಿಂದ ನಮ್ಮ ಮುಂದೆ ಇರತಕ್ಕಂತಹ ಲೋಕಾಯುಕ್ತರನ್ನು ಹೇಗಾದರು ಮಾಡಿ ಅವರು ರಾಜೀನಾಮೆಯನ್ನು ಕೊಡದೇ ಇರುವುದರಿಂದ removal procedure ತೆಗೆದುಕೊಂಡು ಬರುವುದಕ್ಕೆ ಸರ್ಕಾರ ಹೊರಟಿದೆ. ಇದು ಸ್ವಾಗತಾರ್ಹವಾದುದ್ದು. ಈ ಕಾನೂನು ಬೇಕಾಗಿರತಕ್ಕಂಥದ್ದು. ಇಡೀ ಕರ್ನಾಟಕದ ಜನತೆ ಇದನ್ನು ಬಯಸಿದ್ದಾರೆ. ಅದರೂ ಕೂಡ ಬೇಸರವಿದೆ. ಅತ್ಯಂತ ಉತ್ತಮವಾಗಿರುವಂತಹ ಕಾನೂನು 1984ರಲ್ಲಿ ಸನ್ಮಾನ್ಯ ಬಸವರಾಜ ಹೊರಟ್ಟಿಯವರು ಸದನದಲ್ಲಿದ್ದು ತಯಾರು ಮಾಡಿದಂತಹ ಅಂತಹ ಕಾನೂನಿಗೆ ಈಗ ತಿದ್ದುಪಡಿಯನ್ನು ತರುವುದರ ಮೂಲಕ ಒಬ್ಬ ಲೋಕಾಯುಕ್ತರನ್ನು ತೆಗೆಯುವಂಥದ್ದಾಯಿತು ಎನ್ನುವಂತಹ ನಿರ್ಧಾರಕ್ಕೆ ಈ ಸದನ ಬಂದಿರತಕ್ಕಂಥದ್ದು ಸ್ವಲ್ಪ ಬೇಸರದ ಸಂಗತಿ ಎನ್ನುವುದನ್ನು ತಮ್ಮ ಮುಖಾಂತರ ಹೇಳಿ. ಈ ತಿದ್ದುಪಡಿಯನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ಗೋ. ಮಧುಸೂದನ್(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈಗ ಸರ್ಕಾರ ತೆಗೆದುಕೊಮಡು ಬಂದಿರುವಂತಹ ಕಾಯ್ದೆಗಗೆ ಏನು ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದೆ. ಇದು ಒಂದು

ಸಂಕಟದ ತಿದ್ದುಪಡಿ ಏನೆಂದರೆ. ನಮ್ಮ ಸಂಕಟವನ್ನು ಭ್ರಷ್ಟಾಚಾರದಲ್ಲಿ ಏನು ಜನ ಸಿಲುಕಿದ್ದಾರೆ, ಅನುಭವಿಸುತ್ತಿದ್ದಾರೆ. ಅದನ್ನು ಲೋಕಾಯುಕ್ತರು ಪಾರು ಮಾಡಬೇಕೆಂದು ನಾವು ಲೋಕಾಯುಕ್ತರ ಕಾಯ್ದೆಯನ್ನು ತೆಗೆದುಕೊಂಡು ಬರಲಾಗಿತ್ತು. ಲೋಕಾಯುಕ್ತರೆ ಭ್ರಷ್ಟಾಚಾರವನ್ನು ಮಾಡುತ್ತಿರುವುದರಿಂದ ಬಹುಶಃ ಸಂಕಟದಲ್ಲಿರುವಂತಹ ಸಂಕಟದ ಒಂದು ತಿದ್ದುಪಡಿ ವಿಧೇಯಕವನ್ನು ಇವತ್ತಿನ ದಿವಸ ಸರ್ಕಾರ ತೆಗೆದುಕೊಂಡು ಬಂದಿದೆ. ಇದನ್ನು ಏನು ಸರ್ಕಾರ ಸಂತೋಷದಿಂದ ತೆಗೆದುಕೊಂಡು ಬಂದಿರುವಂತಹ ತಿದ್ದುಪಡಿ ವಿಧೇಯದವಲ್ಲ. ದುಃಖದಿಂದ ತಂದಿರುವಂತಹ ತಿದ್ದುಪಡಿ ವಿಧೇಯಕ. ಹೆಮ್ಮೆಯಿಂದ ತೆಗೆದುಕೊಂಡು ಬಂದಿರುವಂತಹ ತಿದ್ದುಪಡಿ ವಿಧೇಯಕವಲ್ಲ ಎಲ್ಲಿಯೋ ಒಂದು ಕಡೆ ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಒಂದು ಕಪ್ಪು ಚುಕ್ಕೆ ಬಂದಿದೆಯಲಾ ಎಂದು ಹೇಳಿ ಬಹಳ ನೋವಿನಿಂದ ತೆಗೆದುಕೊಂಡು ಬಂದಿರುವಂತಹ ತಿದ್ದುಪಡಿ ವಿಧೇಯಕ. ಆದರೆ ಇದರಲ್ಲಿ ನಾವು ಅಂದುಕೊಂಡೋ ನಾವು ಎಷ್ಟರ ಮಟ್ಟಿಗೆ ಜೀವನದ ಮೌಲ್ಯಗಳು ಕಡಿಮೆಯಾಗುತ್ತಿದೆ. ಎನ್ನುವುದಕ್ಕೆ ಲೋಕಾಯುಕ್ತ ಬಿಲ್ ಅನ್ನು ತೆಗೆದುಕೊಂಡು ಬಂದಾಗ ಕರ್ನಾಟಕ ಲೋಕಾಯುಕ್ತರು ಆಗಬೇಕಾದಂತಹ ವ್ಯಕ್ತಿ ಒಬ್ಬ ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರಾಗಿರಬೇಕು ಇಲ್ಲ ಎಂದರೆ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಾಗಿರುವಂತಹ ವ್ಯಕ್ತಿಯಾಗಿರಬೇಕು ಎನ್ನುವುದು ನಮ್ಮ ಅಪೇಕ್ಷೆಯಾಗಿತ್ತು. Now we had to lower the standards. 10 ವರ್ಷ ಇದ್ದರೆ ಸಾಕು ಎಂದು compromise ಮಾಡಿಕೊಳ್ಳುವ ಸ್ಥಿತಿ ಬರುತ್ತಿದೆ. ಏಕೆ ಎಂದರೆ, ನಮಗೆ ವ್ಯಕ್ತಿಗಳು ಸಿಗುತ್ತಿಲ್ಲ ಎಂದರೆ, ನಮ್ಮ ಸಮಾಜದ ಈ ಒಂದು ಮೌಲ್ಯ ಕುಸಿಯುತ್ತಿದೆ ಎನ್ನುವಂತಹ ಧ್ಯೋತಕ. ಅಷ್ಟು ಒಂದೇ ಅಲ್ಲ. ಎರಡನೇಯದಾಗಿ ಒಂದು ಐದು ವರ್ಷ ಇದ್ದರೆ ಸಾಕು ಯಪಲೋಕಾಯುಕ್ತರಾಗಲು ಎಂದು ಹೇಳಿದ್ದೇವೆ It is further still lowering the standards. moral standards. ethical standards ಅಥವಾ experience ಎಲ್ಲದರಲ್ಲಿಯೂ ನಾವು compromise ಮಾಡಿಕೊಳ್ಳುತ್ತಿದ್ದೇವೆಂದು ಅರ್ಥ ಅದೆಲ್ಲದಕ್ಕಿಂತಲೂ ಹೆಚ್ಚಾಗಿ ಕಳೆದ ಬಾರಿ ಕಂಟಿನ್ಯೂಸ್ ಆಗಿ ಲೋಕಾಯುಕ್ತರಾಗುವುದಕ್ಕೆ ಯಾರ್‍ಯಾರ ಹೆಸರನ್ನು ಹೇಳುತ್ತೇವೆ ಅವರೆಲ್ಲರ ಮೇಲೆ ಪತ್ರಿಕೆಯಲ್ಲಿ ಅಪಾಧನೆಗಳಿವೆ ಎಂದು ವರದಿಯಾಯಿತು. ಅವರು ಬಿಟ್ಟು ಅವರು ಯಾರು ಎನ್ನುವಂತಹ ಎನ್ನುವಂಥದ್ದನ್ನು ನಾವು ನೆನೆಪು ಇಟ್ಟುಕೊಳ್ಳಬೇಕದಂತಹ ಸಂಗತಿ. ಆಗ ಒಬ್ಬ ಸಿಕ್ಕಿಬಿಟ್ಟರಲಾಪ್ಪ ಸೂರ್ಯ ಎಂದು ನಾವು ಹಿಡಿದುಕೊಂಡು ಬಂದೇವು. ಆಮೇಲೆ ಗೊತ್ತಾಯಿತು ಇದು ಸೂರ್ಯವಲ್ಲ ಇದು ರಾಹು ಎಂದು ಹೇಳಿ. ಇದರಲ್ಲಿ ಸಿಂಪಲ್ ಮೆಜಾರಿಟಿ ಬೇಟ ಅದನ್ನು ನೀವು 2/3 ಮೆಜಾರಿಟಿ ಎಂದು ಹೇಳಿದ್ರಿ. ಅದರ ಬಗ್ಗೆಯೂ ಕೂಡ ಚರ್ಚೆ ನಡೆಯಿತು. ಒಂದು ಸಂಗತಿಯನ್ನು ಹೇಳುವುದಾದರೆ ಇವತ್ತಿನ ಪರಿಸ್ಥಿತಿಯಲ್ಲಿ ಯೋಜನೆಯನ್ನು ಮಾಡುತ್ತಿದ್ದೇವೆ. ಸಿಂಪಲ್ ಮೆಜಾರಿಟಿ ಸಾಕೋ ಅಥವಾ 2/3 ಮೆಜಾರಿಟಿ ಬೇಕು ಅಥವಾ ಯಾವುದು ಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಒಂದು ರೀತಿಯಲ್ಲಿ ಯೋಚನೆ ಮಾಡಿದ್ದು ಎಲ್ಲಿ ಎಂದು ಕರ್ನಾಟಕ ರಾಜ್ಯ ಆಗಿಹೋಗಿಬಿಟ್ಟರೆ ದೆಹಲಿಯಲ್ಲಿ ಆಪ್ ಗೆ ಸಿಕ್ಕಂತಹ ಬೆಂಬಲ ನಮ್ಮ ರಾಜ್ಯದಲ್ಲಿ ಯಾವುದಾದರು ಒಂದು ಪಾರ್ಟಿಗೆ ಸಿಕ್ಕಿಬಿಟ್ಟರೆ ಆಗ ಆಡಳತ ಪಕ್ಷ ಎಂದು ಯಾವುದು ಬರುತ್ತದೆ ಎಲ್ಲರನ್ನು ಕಿತ್ತು ಹಾಕಿ, ಅವರಿಗೆ ಬೇಕಾದಂತಹ ವ್ಯವಸ್ಥೆಯನ್ನು ನಿರ್ಮಾಣ ಮಡಿಕೊಂಡು ಬಿಡುತ್ತದೆ. ಸಂಪೂರ್ಣವಾದಂತಹ ಅಧಿಕಾರವನ್ನು ಶಾಸಕಾಂಗಕ್ಕೆ ತೆಗೆದುಕೊಂಡು ಬಿಟ್ಟರೆ ಆಗ ಬಹುಶಃ ನ್ಯಾಯಾಂಗದ ಮೇಲೆ, ಕಾರ್ಯಾಂಗದ ಮೇಲೆ ಲೋಕಾಯುಕ್ತರ ಮೇಲೆ ಎಲ್ಲರ ಮೇಲೆಯೂ ಸಹಾ ಈ ಒಂದು ಆಡಳಿತ ಪಕ್ಷ ಎನ್ನುವಂಥದ್ದು ಸವಾರಿ ಮಾಡುವಂತಹ ಸ್ಥಿತಿ ನಿರ್ಮಾಣವಾಗಿ ಬಿಡುತ್ತದೆ. ಈಗ ದೆಹಲಿ ಆಪ್ ಆದರಿಂತಹ ರೀತಿಯಲ್ಲಿ ಆಗಿಬಿಟ್ಟರೆ ಸರ್ಕಾರ ಎಲ್ಲರ ಮೇಲೆಯೂ ಸವಾರಿ ಮಾಡಿಬಿಡಬಹುದು. ಅದಕ್ಕೋಸ್ಕರವಾಗಿ ನೀವು ಏನು ಇದಕ್ಕೆ judicial binding ನ್ನು ತೆಗೆದುಕೊಮಡು ಬಂದಿದ್ದೀರಿ. The matter will be referred to High Court and the Chief Justice of the High Court is responsible for giving this ಎಂದು ಹೇಳಿ. ಅದರಲ್ಲಿ ಒಂದು ಒಳ್ಳೆಯ ಕೆಲಸವನ್ನು ಏಕೆ ಮಾಡಿದ್ದೀರಿ ಎಂದರೆ, the same Justice will be responsible for norminating this man as Lokayukta also. ಹಾಗಾಗಿ ಎಲ್ಲಿಯೋ ಒಂದು ಕಡೆ ಅವರ ಮೇಲೆನೈತಿಕವಾದಂತಹ ಜವಾಬ್ದಾರಿಯು ಇದೆ. ಕಾನೂನು ಮಟ್ಟದ ಜವಾಬ್ದಾರಿಯು ಇದೆ ಎನ್ನುವಂಥದ್ದು. ಇದರಲ್ಲಿ ನಮ್ಮ ಸ್ನೇಹಿತರಾದಂತಹ ಶ್ರೀ ಸಿದ್ದರಾಮಣ್ಣನವರು ಕರೆಕ್ಟ್ ಆಗಿ ಹೇಳಿದ್ದಾರೆ. ಇಷ್ಟೇಲ್ಲಾ

ನಗರದಲ್ಲಿ ಎಲ್ಲಾ ಕಡೆ.. ರಾಜ್ಯದಲ್ಲಿ ಎಲ್ಲಾ ಲೋಕಾಯುಕ್ತರ ಬಗ್ಗೆ ಚರ್ಚೆಯಾಯಿತು ಆದರೆ ನಾವು ನೋಟೀಸ್ ಕೊಟ್ಟ ನಂತರದಲ್ಲಿಯೂ ಸಹಾ ತಾವು ಕಾನೂನಾತ್ಮಕವಾಗಿ ಇಲ್ಲಿ ಲೋಕಾಯುಕ್ತರ ಬಗ್ಗೆ ಚರ್ಚೆ ಮಾಡುವ ಹಾಗಿಲ್ಲ ಎಂದು ಹೇಳಿ ನಮಗೆ ಚರ್ಚೆ ಮಡುವುದಕ್ಕೆ ಅವಕಾಶವನ್ನು ಕೊಡಲಿಲ್ಲ. ಆಮೇಲೆ ಆ ನೋಟೀಸ್ ಅನ್ನು ವಾಪಸ್ಸು ತೆಗೆದುಕೊಂಡ ಮೇಲೆ ಅಥವಾ ನೀವು ಅದನ್ನು ರಿಜೆಕ್ಟ್ ಮಾಡಿದ ಮೇಲೆ ನಮಗೆ ಮಾತನಾಡುವುದಕ್ಕೆ ಕಾನೂನು ಪ್ರಕಾರವಾಗಿ ಅವಕಾಶವನ್ನು ಕೊಟ್ಟಿರುವುದು. ಏಕೆಂದರೆ ಕಾನೂನು ಪ್ರಕಾರವಾಗಿ ನಿಮ್ಮ ಕೈಗಳನ್ನು ಕಟ್ಟಿ ಹಾಕಿದೆ. ಕಾನೂನು ಪ್ರಕಾರವಾಗಿ ನೀಡು ನಡೆದುಕೊಳ್ಳಬೇಕು. You are also bound and your hands were tied. ಆದರೆ ಇಲ್ಲಿ ನೋಟಿಸ್ ಕೊಟ್ಟ ತಕ್ಷಣವೇ ಚರ್ಚೆ ಮಡುವುದಕ್ಕೆ ಅವಕಾಶವನ್ನು ಕೊಡಬೇಕು ಎನ್ನುವಂತಹ ಒಂದು clause ಅನ್ನು ನೀವು ಸೆಕ್ಷನ್ 6(3) ಏನಿದೆ ಅದರಲ್ಲಿ it has to be amended. A debate shoulsd be allowed at this stage ಆಗ ಮಾತ್ರ ಆ ಚರ್ಚೆಯಾಗಿ ಆ ಚರ್ಚೆಯಾದ ನಂತರ Chairman can consult any Judicious luminary ಯಾರನ್ನು ಬೇಕಾದರು ನೀವು consult ಮಾಡಿ, ಬೇರೆ ಸುಪ್ರೀಂ ಕೋರ್ಟ್ ಅಡ್ವಕೇಟ್, ಬೇರೆ ಬೇರೆಯವರನ್ನು ಬೇಕಾದರೆ ಮಾಡಿ. ಆದರೆ ಸದನದಲ್ಲಿ ಯಾರು ನಾವು ಈ ವಿಷಯವನ್ನು ಚರ್ಚೆ ಮಾಡಬೇಕೆಂದು ತೆಗೆದುಕೊಂಡು ಬಂದಿರುತ್ತೇವೆ ನಮಗೆ ಏಕೆ ಈ ವಿಷಯವನ್ನು ಸದನದಲ್ಲಿ ಚರ್ಚೆ ಮಾಡಬೇಕೆಂದು ತೆಗೆದುಕೊಂಡು ಬಂದಿದ್ದೇವೆ ಎನ್ನುವುದರ ಬಗ್ಗೆ ಛೇರ್‌ಗೆ ಕನ್ವಿನ್ಸ್ ಮಡುವುದಕ್ಕೆ ಒಂದು ಚರ್ಚೆ ಮಾಡುವಂತಹ ಅವಶ್ಯಕತೆ ಖಂಡಿತ ಇದೆ. ಅದು ಚರ್ಚೆಯಾಗಬೇಕು. ಕೊನೆಗೆ ನಾನು ಬರುತ್ತಿದೆ. ಈ ಸೆಕ್ಷನ್ 6(5) ನಲ್ಲಿ ಸರ್ಕಾರದವರು ಏನು ತೆಗೆದುಕೊಂಡು ಬಂದಿದ್ದಾರೆಂದರೆ, a reasonable opportunity of presenting a written stantement of defence within such time as may be specifiled in this behalf by the Chief Justice of the High Court of Karnataka or the other Judge of High Court so nominated ಅದರಲ್ಲಿ reasonable time ಎನ್ನುವಂಥದ್ದು ನಮ್ಮ ಕೋರ್ಟ್‌ಗಳಲ್ಲಿ ಬಹಳ ಕಷ್ಟ ಈಗ Yakub Memon ಗೆ ಸಂಬಂಧಿಸಿದ ಪ್ರಕರಣ 22 ವರ್ಷಗಳು ನಡೆಯಿತು. ಇಷ್ಟಾದರೂ ಕೂಡ reasonable time ಎಂದು ಅನೇಕ ಅಡ್ವೋಕೇಟ್‌ಗಳಿಗೆ ಅನ್ನಿಸುತ್ತದೆ. ಪಾಪ ಸುಪ್ರೀಂ ಕೋರ್ಟ್‌ನವರನ್ನು ಅರ್ಧ ರಾತ್ರಿಯಲ್ಲಿ ಎಬ್ಬಿಸಿ ಬೆಳಗಿನ ಜಾವ 5ಗಂಟೆಯವರೆಗೆ ವಾದವನ್ನು ನಮ್ಮ ದೇಶದಲ್ಲಿ ಮಾಡಿದ್ದಾರೆ. ಆದ್ದರಿಂದ what is reasonable? What is not reasonable? ಅದು ಅವರ discretion ಗೆ ಬಿಡುವುದರ ಬದಲು within there days. within seven days, within twenty four hours. why con't you specify?

ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಸಚಿವರು ಈ ಬಗ್ಗೆ ಗಮನ ಹರಿಸಬೇಕಾಗುತ್ತದೆ. ಇಲ್ಲದಿದ್ದರೆ reasonable ಎಂದಾಗ reasonable ಅನಿಸಿದು ನನಗೆ unreasonable ನನಗೆ unreasonable ಅನಿಸಿದ್ದು ನಿಮಗೆ reasonable ಆಗಬಹುದು. So specify a period as to within one week he has to submit a written reply. Otherwise, it is deemed ಎಂದೇಕೆ ಅದನ್ನು ನಿವು ಹೇಳಬಾರದು?

**ಶ್ರೀ ಕೆ.ಜೆ.ಜಾರ್ಜ್(ಗೃಹಸಚಿವರು):–** ಸನ್ಮಾನ್ಯ ಮಧುಸೂದನ್ ರವರೇ, ನಾವು ಡಿ.ಕೆ.ರವಿ ಅವರ ಪ್ರಕಣದಲ್ಲಿ ಸಿ.ಬಿ.ಐ. ಅವರಿಗೆ 3 ತಿಂಗಳಲ್ಲಿ ತನಿಖೆ ಮಾಡಿ ಮುಗಿಸಬೇಕೆಂದು ತಿಳಿಸಿದಾಗ ಅ ರೀರಿ ಕಂಡೀಷನ್ ಹಾಕುವುದಾದರೆ ನಾವು ಆ ಪ್ರಕರಣ ಬಗ್ಗೆ ತನಿಖೆಯನ್ನು ತೆಗೆದುಕೊಳ್ಳವುದಿಲ್ಲ ಎಂದು ವಾಪಸ್ ಕಳುಹಿಸಿದರು. ನಾವು ಚೀಫ್ ಜಸ್ಟೀಸ್ ಗಳಿಗೆ ಹೇಳುವಾಗ ಒಂದು ವಾರದಲ್ಲಿ ಮಾಡಿ, ಇನ್ನೊಂದು ವಾರದಲ್ಲಿ ಮಾಡಿ ಎಂದು ನಮ್ಮ ಕೆಳಗಿನವರಿಗೆ...

**ಶ್ರೀ ಗೋ. ಮಧುಸೂದನ್:–** ನಾವು ಕೇಳುತ್ತಿರುವುದು, ಆರೋಪಿತವಾದಂತಹ ವ್ಯಕ್ತಿಗೆ written statement submit ಮಾಡುವುದಕ್ಕೆ.

**ಶ್ರೀ ಕೆ.ಜೆ.ಜಾರ್ಜ್(ಗೃಹಸಚಿವರು):–** ನಾವು ನಮ್ಮ subordinates ಗೆ ಬೇಕಾದರೆ ಹೇಳಬಹುದೇ ಹೊರತು ಚೀಫ್ ಜೆಸ್ಟೀಸ್ ರವರಿಗೆ ಕಳುಹಿಸುವಾಗ ಆ ರೀತಿಯಲ್ಲಿ ಒಂದು ವಾರಕ್ಕೆ ಮಡಿ, ಇನ್ನೊಂದು ವಾರದಲ್ಲಿ ಮಾಡಿ ಎಂದು ಹೇಳುವುದಕ್ಕಾಗುವುದಿಲ್ಲ.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೆ, ಕೊನೆಯದಾಗಿ Section 14 reads thus;ಇದರಲ್ಲಿ "***(14) tae Lokayuktha or Upalokayuktha,as the case may be, against whom a motion is moved before the House or the Houses of the State Legislature for his removal is precluded from discharge of his duties..."*** ಎಂದು ಹೇಳಲಾಗಿದೆ. ಬಹಳ ಸಂತೋಷ, ಇದರಲ್ಲೇನಾಗುತ್ತದೆ ಎಮದರೆ, ಆ ವ್ಯಕ್ತಿ ಆರೋಪ ಬಂದ ತಕ್ಷಣವೇ he almost ceases to be Lokayuktha. ಒಂದು ಲೆಕ್ಕದಲ್ಲಿ suspension ಎಂದು ನಾವು ಹೇಳಬಹುದು. ಆದರೆ, ಅಷ್ಟಕ್ಕೆ ಇದು ನಿಲ್ಲುವುದಿಲ್ಲ, ಆರೋಪ ಬೆಳಕಿಗೆ ಬರುವುದಕ್ಕೆ ಮುಂಚಿನಿಂದಲೂ ಆ ವ್ಯಕ್ತಿ ಇಂಥದ್ದರಲ್ಲಿ ತೊಡಗಿಕೊಂಡಿರುತ್ತಾನೆ. ಆದರೆ ನಾವು ಆ ವ್ಯಕ್ತಿ ದುಕೊಂಡಿರುವಂತಹ ತೀರ್ಮಾನಗಳೇನಿರುವೆ. ಆ ತೀರ್ಮಾನಗಳನ್ನು annul ಮಾಡುವುದಕ್ಕೆ ಈ provision ನಲ್ಲಿ ಎಲ್ಲಿಯೂ ಆವಕಾಸ ಇಲ್ಲವೇ ಇಲ್ಲ. ಅಂದೆ ಈ ವಿಚಾರವನ್ನೇಕೆ ನಾವು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಈ ಯಾವ ವ್ಯಕ್ತಿಯ ಮೇಲೆ ನಾವು ಆರೋಪ ಮಾಡಿದ್ದೇವೆ, ಆ ವ್ಯಕ್ತಿ ಬಂಡಲ್‌ಗಳಗಟ್ಟಲೆ ಕಡತಗಳನ್ನು ಕಾರ್ ಡಿಕ್ಕಿಯಲ್ಲಿ ತುಂಬಿಕೊಂಡು ತೆಗೆದುಕೊಂಡು ಹೊಗಿದ್ದಾನೆ. ಹೀಗಾಗಿ ಈ ಹಿಂದಿನ ದಿನಾಂಕವನ್ನು ನಮೂದಿಸಿ ಎಷ್ಟು ಕಡತಗಳನ್ನು pass ಮಾಡುತ್ತಾರೆಯೋ, ಯಾರನ್ನು prosecute ಮಾಡುತ್ತಾರೆಯೋ, ಯಾರನ್ನು ಇವರು exonerate ಮಾಡುತ್ತಾರೆಯೋ ಗೊತ್ತಿಲ್ಲ. ಹಳೆಯ ದಿನಾಂಕಗಳನ್ನು ನಮೂದಿಸಿ ಮಾಡುವಂತಹ ಅವಕಾಶಗಳಿವೆ. ಆ ಕಾರಣಕ್ಕಾಗಿ ನಾನು ಹೇಳುತ್ತಿರುವುದೇನೆಂದರೆ, ಯಾವ ವ್ಯಕ್ತಿಯ ಮೇಲೆ ಆರೋಪ ಬರುತ್ತದೆ ಅ ವ್ಯಕ್ತಿ, ನಮ್ಮಲ್ಲೀಗ ಯಾವುದಾದರೂ ವ್ಯಕ್ತಿ ಆಕಸ್ಮಾತ್ ರಾಜಿನಾಮೆ ಕೊಡುವಂತಹ ಸ್ಥಿತಿ ಬಂತೆಂದರೆ ಅವರು ಆ ಕೊನೆಯ ದಿನಗಳಲ್ಲಿ ತೆಗೆದುಕೊಳ್ಳುವಂತಹ decision can be reviewed ಅಥವಾ it has to be reviewed ಎನ್ನುವಂತಹ ಸ್ಥಿತಿ ಇದೆ. ಅದಕ್ಕೋಸ್ಕರವಾಗಿ ಈ ವಿಷಯವನನು ಮಾಡಲೇಬೇಕಾದಂತಹ ಅವಶ್ಯಕತೆ ಇದೆ.

ನಿರ್ದಿಷ್ಟವಾಗಿ ಈ ವಿಷಯದ ಬಗ್ಗೆ ಏಕೆ ಅವಶ್ಯಕತೆ ಇದೆ ಎಂದರೆ, 1ನೇ ತಾರೀಖು ಈ ವ್ಯಕ್ತಿಯ ಮಗನ ಮೇಲೆ ಎಫ್.ಐ.ಆರ್. ಲಾಡ್ಜ್ ಆಯಿತು. ಆದರೆ 8ನೇ ತಾರೀಖು ಇದೇ ವ್ಯಕ್ತಿ ಭಾಸ್ಕರ ರಾವ್ ನಮ್ಮ ರಾಜ್ಯದ ಮುಖ್ಯಮಂತ್ರಿಗಳ ಮೇಲಿದ್ದಂತಹ 2 ಆರೋಪಗಳನ್ನು exonerate ಮಾಡಿದ್ದಾರೆ ಲಾಲ್ ಬಾಗ್ ಸಿದ್ದಾಪುರದ್ದು ಮತ್ತು ಬನಶಂಕರಿಯ 5ನೇ ಹಂತದ್ದು. ಹಾಗಾಗಿ ನನಗನಿಸುತ್ತಿರುವುದು ಎಲ್ಲಿಯೋ ಒಂದು ಕಡೆ natural justice demands. A man who is tainted ಆತ ತೆಗೆದುಕೊಂಡಂಥದ್ದು tainted ಎಂದು ತೀರ್ಮಾನವಾದ ನಂತರ ಆ ವ್ಯಕ್ತಿ ಏನೇನು decision ತೆಗೆದುಕೊಳ್ಳುತ್ತಾರೆ it has to be annulled. ಅದಕ್ಕೆ ಬೇಕಾದಂತಹ ಒಂದು ನಿಲುವನ್ನು ಈ ಮಸೂದೆಯಲ್ಲಿ ತರಬೇಕೆಂಬುದು ನನ್ನ ವಿನಂತಿಯಾಗಿದೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಎರಡು ಆರೋಪಗಳನ್ನು exonerate ಮಾಡಿದ್ದಾರೆ ಎಂದು ಮಾನ್ಯ ಮಧುಸೂದನ್ ರವರು ತಿಳಿಸಿದರು. Is there any materials to establish it?

**ಸಭಾಪತಿಯವರು;–** ಮಾನ್ಯ ಮಧುಸೂದನ್‌ರವರು ಅವರ ಅಭಿಪ್ರಾಯವನ್ನು ಹೇಳಿದ್ದಾರೆ, ಅವರು ಏನು ಬೇಕಾದರೂ ಹೇಳುತ್ತಾರೆ, ಅವರು ಹೇಳಿದ್ದೆಲ್ಲವನ್ನೂ ಸರ್ಕಾರ ಮಡಿಬಿಡುತ್ತದೆಯೇ ನೀವು ಹೇಳಿದ್ದನ್ನೇ ಮಾಡುವುದಿಲ್ಲ, ಅವರು ಹೇಳಿದ್ದನ್ನು ಮಾಡಿಬಿಡುತ್ತಾರೆಯೇ?

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳ ಮೇಲಿದ್ದಂತಹ 2 ಆರೋಪಗಳನ್ನು close ಮಾಡಿದ್ದಾರೆ ಎಂದು ಇವರು baseless allegations ಮಾಡುವುದು ಎಷ್ಟರಮಟ್ಟಿಗೆ ಸರಿಯಾಗುತ್ತದೆ?

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೆ, ಅದು baseless allegations ಆದರೆ ನಾನು ನನ್ನ ಹೆಳಿಕೆಯನ್ನು ವಾಪಸ್ ತೆಗೆದುಕೊಳ್ಳುತ್ತೇನೆ. ಆ ತರಹದ್ದು ಅವರು ಮಾಡಿಲ್ಲ ಎನ್ನುವುದಾದರೆ, I am the happiest man.

**ಸಭಾಪತಿಯವರು:–** ಆಯಿತು ಕುಳಿತುಕೊಳ್ಳಿ ಈಗ ಮಾನ್ಯ ಉಗ್ರಪ್ಪನವರು ಮಾತನಾಡುತ್ತಾರೆ.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೆ, ಅಕಸ್ಮಾತ್ ಅವರು 90 ದಿನಗಳಲ್ಲಿ ಮಾಡಲಿಲ್ಲ ಎಂದರೆ ಅದಕ್ಕೆ ಏನು?

**ಸಭಾಪತಿಯವರು:–** ಆಯಿತು, ಸಾಕು. ಅವರು ಮಾತನಾಡುವುದು ರೆಕಾರ್ಡ್‌ಗೆ ಹೋಗುವುದಿಲ್ಲ. ಅವರ ಸಮಯ ಮುಗಿಯಿತು. ಈಗ ಉಗ್ರಪ್ಪನವರು ಮಾತನಾಡುತ್ತಾರೆ.

**ಶ್ರೀ ಗೋ. ಮಧುಸೂದನ್:–** ಅಯ್ಯೋ, ಬೇಡ ಬಿಡಿ. ಅಷ್ಟು ದುಃಖ ಇದ್ದರೆ ನಾನು ಮಾತನಾಡುವುದಿಲ್ಲ, ನೀಲ್ಲಿಸುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಸನ್ಮನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ನಾನು ಅಭಾರಿಯಾಗಿದ್ದೇನೆ. ಸರ್ಕಾರ ತಂದಿರುವ ಲೋಕಾಯುಕ್ತ(ತಿದ್ದುಪಡಿ) ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. ಈ ಸಂದರ್ಭದಲ್ಲಿ ನಾವು ಒಂದು ವಿಚಾರವನ್ನು ಗಮನಿಸಬೇಕಾಗುತ್ತದೆ. ಬಹುಶಃ ನಮ್ಮ ಕರ್ನಾಟಕದ ಇತಿಹಾಸದಲ್ಲಿ ಲೋಕಾಯುಕ್ತ ಸಂಸ್ಥೆಯ ಮೇಲೆ ಚಚೆ ಮಾಡಿ ಅದರ ಮೂಲಕ ಈ ರಾಜ್ಯದಲ್ಲಿ ನಡೆಯುವಂತಹ ಭ್ರಷ್ಟಾಚಾರಕ್ಕೆ ಕಡಿವಾಡ ಹಾಕುವುದಕ್ಕೆ ಯಾವುದಾದರೂ ಸಂದರ್ಭದಲ್ಲಿ ಹೆಚ್ಚು ಅವಕಾಶ ಸಿಕ್ಕಿದ್ದರೆ ಅದು ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಎಂದು ಹೇಳಬಹುದು. ಅದರ ನಂತರ ಭ್ರಷ್ಟಾಚಾರ ಮತ್ತು ಈ ಲೋಕಾಯುಕ್ತ ಸಂಸ್ಥೆಗೆ ಕಾಯಕಲ್ಪ ಮಾಡುವುದಕ್ಕೆ ಯಾವುದಾದರೂ ಸಂದರ್ಭದಲ್ಲಿ ಮತ್ತೊಂದು ಅವಕಾಸ ಸಿಕ್ಕಿದ್ದರೆ ಅದು ಈಗ ಸನ್ಮಾನ್ಯ ಸಿದ್ದರಾಮಯ್ಯನವರ ಅವಧಿಯಲ್ಲಿ ಎನ್ನುವಂತಹ ಮಾತನ್ನು ನಾನು ಈ ಸಂಧರ್ಭದಲ್ಲಿ ಹೇಳಬಯಸುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ಇರಲಿ, ಅವರ ಅಭಿಪ್ರಯಾವನ್ನು ಅವರು ಹವಿಳುತ್ತಿದ್ದಾರೆ. ನಿಮ್ಮ ಅಭಿಪ್ರಾಯವನ್ನು ನೀವು ಹೇಳಿದ್ದೀರಿ.

**ಶ್ರೀ ಇ. ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೆ, ನಾವು ಹೇಳುವಾಗ ಆ ಅಭಿಪ್ರಾಯ ನಿಮಗೆ ಬೇಕಿಲ್ಲ, ಈ ವಿಧೇಯಕಕ್ಕೆ ಸಂಬಂಧಿಸಿದಂತೆ ಮಾತ್ರ ಮಾತನಾಡಿ ಎಂದು ಹೇಳುತ್ತೀರಿ. ಆದರೆ ಬೇರೆಯವರಿಗೆ ಮಾತ್ರ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ತಾವು ಅವಕಾಶ ಕೊಡುತ್ತಿದ್ದೀರಿ. ಈ ತಾರತಮ್ಯ ಏಕೆಂಬುದು ನಮಗೆ ಗೊತ್ತಾಗುತ್ತಿಲ್ಲ. ನಾವೇನಾದರೂ ಮಧ್ಯದಲ್ಲಿ ಎದ್ದುನಿಂತರೆ ತಾವು ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಕೊಡುವದಿಲ್ಲ.

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್):–** ಮಾನ್ಯ ಸಭಾಪತಿಯವರೆ, ಈ ವಿಚಾರವಾಗಿ ಈಗಾಗಲೇ ಸುಮಾರು 4 ದಿವಸಗಳಿಂದ ಚರ್ಚೆ ನಡೆದಿದೆ. ಪುನಃ ಈ ಚರ್ಚೆಯ ಅವಶ್ಯಕತೆ ಇದೆಯೇ? ದಯವಿಟ್ಟು ಈ ಮಸೂದೆಯನ್ನು ಪಾಸ್ ಮಾಡಿ. ಏತಕ್ಕೆ ಬೇಕು ಈ ಚರ್ಚೆ, ಈಗಾಗಲೇ ಸಮಯ ಮಧ್ಯಾಹ್ನ 02:15 ಗಂಟೆಯಾಗಿದೆ.

**ಸಭಾಪತಿಯವರು:–** ಅದನ್ನೇ ನಾನು ಹೇಳುತ್ತಿರುವುದು. ಮಾನ್ಯ ಉಗ್ರಪ್ಪನವರೇ ತಾವು ತಮ್ಮ ಮಾತುಗಳನನು ಅದಷ್ಟು ಬೇಗನೆ ಮುಗಿಸಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಈ ಮಸೂದೆಯ ಮುಖಾಂತರ ಸೆಕ್ಷನ್ 3, 6 ಮತ್ತು 12ಈ ರೀತಿ ಒಟ್ಟು 3 ಸೆಕ್ಷನ್‌ಗಳಿಗೆ ತಿದ್ದುಪಡಿಯನ್ನು ಸರ್ಕಾರ ತಂದಿದೆ. ಈ ಸಂದರ್ಭದಲ್ಲಿ ನಮಗೆ ಎದುರಾಗಿರುವಂತಹ ಸಮಸ್ಯೆಗಳೇನು? ಈ ಸಂಸ್ಥೆ ಯಾವ ಹಿನ್ನೆಲೆಯಲ್ಲಿ ಆಸ್ತಿತ್ವಕ್ಕೆ ಬಂದು ಅದರ ಪ್ರಕಾರ ನಡೆದುಕೊಂಡಿದೆಯೇ ಈ ಬಗ್ಗೆ ಪ್ರಶ್ನೆ ಹಾಕಿಕೊಂಡರೆ ಆ ರೀತಿ ನಡೆದುಕೊಂಡಿಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಈ ಸಂಸ್ಥೆಯ ಮಹತ್ವ ಎಷ್ಟಿದೆ ಎಂದರೆ, ಅದನ್ನು ತರುವಂತಹ ಸಂದರ್ಭದಲ್ಲಿ ಕಾರಣಗಳಲ್ಲಿ ಏನು ಹೇಳಲಾಗಿದೆ. ಎಂದರೆ, ***" The Administative Reforms***

***Commission had recommended for setting up of the institution of Lokayuktha for the purpose of improving the standards of public administration by looking into complaints against administrative actions including cases of corruption, favorittism and official insiscipline in administrative machinery "*** ಎಂದು ಹೇಳಲಾಗಿದೆ. ಇದನ್ನೇನಾದರೂ ಸಹ ಈ ಹಿನ್ನೆಲೆಯಲ್ಲಿ ಲೋಕಾಯುಕ್ತರು ವರದಿಯನ್ನು ಕೊಟ್ಟರೆ ಅದರ ಪರಿಣಾಮ ಏನು? ***" Where after investigation into a complation against a public servant in prima facie true and makes a declaration that the post held by him and the public servant concerned, if he is a Chief Minister, or any other minister or a Member of Legislative Council including us shall resign his office"*** ಹಾಗಾಗಿ ನಾನು ಹೇಳೂತ್ತಿರುವುದೇನೆಂದರೆ, ಅರ್ಹತೆಗಳ ಬಗ್ಗೆ ಸೆಕ್ಷನ್ 3ರಲ್ಲಿ ಏನು prescribe ಮಾಡಿದ್ದಾರೆ, ಅದರ ಹಿನ್ನೆಲೆಯಲ್ಲಿ ಆರ್ಟಿಕಲ್ 124 ಮತ್ತು 127ನಲ್ಲಿ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರಾಗುವಂಥವರಿಗೆ ಅರ್ಹತೆಗಳೆಂದರೆ, 10 ವರ್ಷ ಲಾಯರ್ ಗಿರಿ ಮಾಡಿರುವವರಿಗೆ ಅಥವಾ Jurist ಆಗಿದೆ ಸಾಕು ಎನ್ನುವಂಥದ್ದಿದೆ. ಸೆಕ್ಷನ್ 3 ನಲ್ಲಿ ಕ್ವಾಲಿಫಿಕೇಶನ್ ಏನು prescribe ಮಾಡಿದ್ದಾರೆ, ಆ prescribe ಆಗಿರುವಂತಹ ಹಿನ್ನಲೆಯಲ್ಲಿ ಆರ್ಟಿಕಲ್ 124 ಅಂಡ್ 127 ಪ್ರಕಾರ ಹೈಕೋರ್ಟ ಮತ್ತು ಸುಪ್ರೀಂ ಕೋರ್ಟ ಜಡ್ಜಸ್ ಆಗುವಂಥವರಿಗೆ ಕ್ವಾಲಿಫಿಕೇಶನ್ 10 ಲಾಯರ್ ಆಗಿ ಕೆಲಸ ಮಾಡಿದ್ದರೆ ಅಥವಾ Jurist ಆಗಿದ್ದಾರೆ ಸಾಕು ಎಂದು ಇದೆ. ಅದರೆ ಇಲ್ಲಿ ಏನಾಗಿದೆ ಎಂದರೆ. ಇಲ್ಲಿ ಯಾರು ಹತ್ತು ವರ್ಷಗಳ ಕಾಲ ಹೈಕೋರ್ಟನಲ್ಲಿ ಜಡ್ಜ್ ಆಗಿದ್ದಾರೆ. he is eligible to become a Lokayukta. ಯಾರು 5 ವರ್ಷ ಹೈಕೋರ್ಟನಲ್ಲಿ ಜಡ್ಜ್ ಆಗಿ ಕೆಲಸ ಮಾಡಿದ್ದರೆ ಅವರು he is eligible to become Upalokayukta ಎಂದು ಇದೆ.

ಮಾನ್ಯ ಸಭಾಪತಿಯವರೆ, ಇಲ್ಲಿ ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡಬಯಸುತ್ತೇನೆ, ಇವತ್ತು ಯಾರು ಹೈಕೋರ್ಟ್ ಜಡ್ಜ್ ಇದ್ದಾರೆ ಅವರಿಗೆ ಸಿಗಬೇಕಾದರೆ retirement benefits 7 ವರ್ಷ ಸೇವೆ ಸಲ್ಲಿಸಿದ್ದರೆ ಮಾತ್ರ ಅವರಿಗೆ retirement benefits ಸಿಗುತ್ತದೆ. ಇಲ್ಲವೆಂದರೆ ಇಲ್ಲ. ಅದಕ್ಕೋಸ್ಕರ ನನ್ನ ಸಲಹೆ ಏನೆಂದರೆ, ಉಪ ಲೋಕಾಯುಕ್ತರಿಗೆ ಏನು 5 ವರ್ಷ ಇದೆ, ಅದನ್ನು 7 ವರ್ಷ ಮಾಡುವಂಥದ್ದು ಸೆಕ್ಷನ್ 3ಗೆ ಅವಶ್ಯಕತೆ ಇದೆ ಎಂದು ಹೇಳಬಯಸುತ್ತೆನೆ. ಇನ್ನು ಸೆಕ್ಷನ್ 12ರ ಬಗ್ಗೆ ನಾನೇನು ಕಾಮೆಂಟ್ ಮಾಡುವುದಕ್ಕೆ ಹೋಗುವುದಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್;–** ಮಾನ್ಯ ಸಭಾಪತಿಯವರೇ, ಈ ವಿಧೇಯಕರ ಬಗ್ಗೆ ನಮ್ಮವರು ಮಾತನಾಡುವುದು ಇದೆ. ಅವರಿಗೆ ಅವಕಾಶ ಕೊಟ್ಟಿಲ್ಲ. ಮೊದಲು ಅವರು ಮಾತನಾಡಬೇಕಾಗಿತ್ತು. ನಮ್ಮವರ ಮಾತನಾಡುವುದಕ್ಕೆ ಕಾಯುತ್ತಾ ಕುಳಿತಿದ್ದಾರೆ, ಆದರೆ ಅವರಿಗೆ ಅವಕಾಶ ಸಿಗುತ್ತಿಲ್ಲ. ಅವರಿಗಿಂತ ಜಾಸ್ತಿ ನಾವು ಈ ವಿಧೇಯಕದ ಬಗ್ಗೆ ಮಾತನಾಡಬೇಕು.

**(ಗೊಂದಲ)**

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಅವರು ಮಾತನಾಡುವಾಗ ನಾವು ಸುಮ್ಮನೆ ಕುಳಿತುಕೊಂಡು ಕೇಳಿಸಿಕೊಳ್ಳಲಿಲ್ಲವೇ? ಆದರೆ ನಾವು ಮಾತನಾಡುವಾಗ ಏಕೆ ಈ ರೀತಿ ಮಾಡುತ್ತಾರೆಂದು ಅರ್ಥವಾಗುತ್ತಿಲ್ಲ.

**ಶ್ರೀ ವೈ.ಎ ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಅವರದೇ ಸರ್ಕಾರ ಬಿಲ್ಲನ್ನು ತಂದಿದೆ. ಹಾಗಾಗಿ ಅವರಿಗೆ ಎಲ್ಲಾ ವಿಚಾರಗಳು ತಿಳಿದಿದೆ.

**(ಗೊಂದಲ)**

**ಸಭಾಪತಿಯವರು:–** ನೀವ್ಯಾರು ಕುಳಿತುಕೊಳ್ಳುವ ಮೂಡಿನಲ್ಲಿ ಇಲ್ಲವೇ?

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್):-** ಮಾನ್ಯ ಸಭಾಪತಿಯವರೆ, ನಾವು ಬಿಲ್ ಪಾಸ್ ಮಾಡಿಕೊಡುವುದಕ್ಕೆ ರೆಡಿ ಇದ್ದೇವೆ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಇನ್ನು 5 ನಿಮಿಷದಲ್ಲಿ ಮುಗಿಸುತ್ತೇನೆ.

**ಸಭಾಪತಿಯವರು:-** ಬೇಗ ಮುಗಿಸಿ, ನೀವು ಬೇಕೆಂದೆ ಮಾಡುತ್ತಿದ್ದೀರಿ. ನಿಮಗೆ ಸರ್ಕಾರಕ್ಕೆ ಸಾಹಾಯ ಮಾಡಬೇಕೆಂಬ ಮನಸ್ಸೇ ಇಲ್ಲವೇ?

**(ಗೊಂದಲ)**

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್):-** ನಿಮಗೆ ಬಿಲ್ ಪಾಸ್ ಮಾಡುವುದು ಬೇಡವೇ? ಬೇಡದಿದ್ದರೆ ಬಿಡಿ, ನಾವು ರೆಡಿ ಇದ್ದೇವೆ. ಸಾಕು ಮಾತನಾಡುವುದನ್ನು ನಿಲ್ಲಿಸಿ.

**(ಗೊಂದಲ)**

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ಇದು ತುಂಬಾ ಅತಿಯಾಯಿತು. ಅವರು ಒಂದಷ್ಟು ಅಮೆಂಡ್ ಮೆಂಟ್ ಹೇಳಲಿ, ಇವರು ಮಾತನಾಡುವುದನ್ನು ನಾವುಗಳು ಕೇಳಲಿಲ್ಲವೇ? ಹಾಗಾದರೆ ಯಾರೂ ಮಾತನಾಡಲೇ ಬಾರದಾಗಿತ್ತು.

**(ಗೊಂದಲ)**

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಈಗೇನು Section 6 ರಲ್ಲಿ ತಂದಿದ್ದಾರೆ, ಇದರ ಪ್ರಕಾರ ಇದರಲ್ಲಿ ಇರತಕ್ಕಂತಹ ಸಮಸ್ಯೆ ಏನಿದೆ, ಈ ಸಮಸ್ಯೆಗೆ ಇದು ಪರಿಹಾರ ಆಗುವುದಕ್ಕೆ ಸಾಧ್ಯತೆ ಇಲ್ಲ. ಲೋಕಾಯುಕ್ತರಾಗಲಿ, ಉಪ ಲೋಕಾಯುಕ್ತರಾಗಲಿ ಅಥವಾ ಅಲ್ಲಿರತಕ್ಕಂತಹ ಅಧಿಕಾರಿಗಳಾಗಲಿ ಪರಿಹಾರ ಮಾಡುವುದಕ್ಕೆ ಸಾಧ್ಯತೆ ಇಲ್ಲ.

**ಶ್ರೀ ಇ. ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೆ, ತಿದ್ದುಪಡಿ ಮಾಡುವುದಕ್ಕೆ ಸರ್ಕಾರಕ್ಕೆ ಸಭ್‌ಮೀಟ್ ಮಾಡುವುದಕ್ಕೆ ಹೇಳಿ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, 90 ದಿವಸದಲ್ಲಿ ವರದಿ ಬರುವುದಕ್ಕೂ ಸಾಧ್ಯತೆ ಇಲ್ಲ. ಹಾಗೂ ಒಬ್ಬರು ನ್ಯಾಯಾಧೀಶರಾಗಿರುವುದರಿಂದ ವರದಿ ನಿಷ್ಪಕ್ಷಪಾತವಾಗಿರುತ್ತದೆಯೆಂದು ಹೇಳುವುದಕ್ಕೆ ಸಾಧ್ಯವಿಲ್ಲ ನನಗನ್ನಿಸುವುದೇನೆಂದರೆ ಅಲ್ಲಿ ಮೂರು ಜನರ ಜಡ್ಜಸ್‌ದು Collegium ಇದೆ. ಎರಡನೆಯದು.

**ಸಭಾಪತಿಯವರು:-** ಸಾಕು ಬಿಡಿ.

**ಶ್ರೀ ನಾರಾಯಣಾ ಸಾ ಭಾಂಡಗೆ:-** ಮಾನ್ಯ ಸಭಾಪತಿಯವರೆ, ಬಿಲ್ ಪಾಸ್ ಮಾಡಿ.

**(ಗೊಂದಲ)**

**ಶ್ರೀ ವಿ.ಎಸ್. ಉಗ್ರಪ್ಪ:-** ಎರಡನೆಯದಾಗಿ, ಇವತ್ತಿನ Act ಅನ್ನು repeal ಮಾಡುವಂಥದ್ದು, ಹೊಸ Act ನ ತರುವಂಥದ್ದಕ್ಕೆ ಲೋಕಾಯುಕ್ತರು, ಉಪ ಲೋಕಾಯಕ್ತರು, ಅಧಿಕಾರಿಗಳು ಎಲ್ಲರೂ ಹೊಗುವುದಕ್ಕೆ ಸಾಧ್ಯತಿಎ ಇದೆ. ಇದರ ಮೂಲಕ ಭ್ರಷ್ಟಾಚಾರವನ್ನು ತರುವುದಕ್ಕೆ ಸಾಧ್ಯತೆ ಇದೆ. ಅ ದಿಕ್ಕಿನಲ್ಲಿ ಸರ್ಕಾರದ ಚಿಂತನೆ ಸಾಗಿದೆಯೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಟಿ.ಬಿ. ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾತಪಿಯವರೆ, ಕಳೆದ ಒಂದು ತಿಂಗಳಿನಿಂದಲೂ ಕೂಡ ಲೋಕಾಯುಕ್ತರ ವಿಚಾರದಲ್ಲಿ ಎರಡೂ ಮನೆಯಲ್ಲಿಯೂ ಕೂಡ ಧ್ವನಿಯನ್ನು ಎತ್ತಿದ್ದಾರೆ.

**ಶ್ರೀ ಇ. ಕೃಷ್ಣಪ್ಪ:–** ಮಾನ್ಯ ಸಚಿವರೆ, ತಿದ್ದುಪಡಿ ಬಗ್ಗೆ ನಮ್ಮಲ್ಲಿ ಯಾರದೂ ಆಕ್ಷೇಪಣೆ ಇಲ್ಲ. ಮಾನ್ಯ ಉಗ್ರಪ್ಪನವರು ಒಪ್ಪಿದ್ದಾರೋ ಇಲ್ಲವೋ ಕೇಳಿ. ಅವರ ಸಲಹೆ ಮೇರೆಗೆ ನೀವು ಮಂಡನೆ ಮಾಡಿದರೆ ಸಾಕು.

**ಶ್ರೀ ಎಸ್ ನಾಗರಾಜು (ಸಂದೇಶ್ ನಾಗರಾಜ್):–** ನೀವು ತಿದ್ದುಪಡಿ ತಂದಿರುವುದು ಅವರಿಗೆ ಇಷ್ಟ ಇಲ್ಲದಿರುವುದರಿಂದ, ದಯವಿಟ್ಟು ಅವರ ಅನುಮತಿಯನನು ತೆಗೆದುಕೊಂಡು ಮಾಡಿ.

**ಸಭಾಪತಿಯವರು:–** ಮಾನ್ಯ ಸಚಿವರಿಗೆ ಮಾತನಾಡುವುದಕ್ಕೆ ಬಿಡಿ.

**ಶ್ರೀ ಟಿ.ಬಿ. ಜಯಚಂದ್ರ:–** ಮಾನ್ಯ ಸಭಾತಪಿಯವರೆ, ಮುಕ್ತವಾಗಿ, ಪಕ್ಷಾತೀತವಾಗಿ ಚರ್ಚೆ ಆಗಬೇಕು ಎಂಬ ಉದ್ದೇಶದಿಂದಲೇ ನಾವೆಲ್ಲರೂ ಮುಕ್ತವಾಗಿ, ಪಕ್ಷಾತೀತವಾಗಿ ಚರ್ಚೆ ಅಭಿಪ್ರಾಯ ಕೊಡುವುದರಲ್ಲಿ ಏನೇನು ತಪ್ಪಿಲ್ಲ, ಕೊಡಲಿ ಈಗ ಮೊದಲು ಮುಖ್ಯವಾಗಿ ಈ ಚರ್ಚೆಯ ಹಿನ್ನೆಲೆಯಲ್ಲಿ ಸೀಮಿತವಾಗಿರುವಂತಹ 3 ಅಮೆಂಡ್‌ಮೆಂಟನ್ನು ತಂದಿದ್ದೇನೆ. ಅದನ್ನು ಬಿಟ್ಟರೆ ಬೇರೆ ಯಾವ ವಿಷಯವನ್ನೂ ಸಹ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಬಹುತೇಕವಾಗಿ ಇಲ್ಲಿ ಮಾತನಾಡಿದಂತಹ ಎಲ್ಲರೂ ಕೂಡ ಕೆಲವು ಸಲಹೆಗಳನ್ನು ಕೊಟ್ಟರು. ನಾವೇನು ಸೆಕ್ಷನ್ 3, ಸೆಕ್ಷಣ್ 6 ಮತ್ತು ಸೆಕ್ಷನ್ 12ಕ್ಕೆ ಅಮೆಂಟ್ ಮೆಂಟ್ ತಂದಿರುವುದರಲ್ಲಿ ಕೆಲವು ಬದಲಾವಣೆಗಳನ್ನು ಮತ್ತು ಕೆಲವು ಅನುಮಾನಗಳನ್ನು ವ್ಯಕ್ತಪಡಿಸಿದರು. ಅದನ್ನು ಬಿಟ್ಟರೆ ಮಹುತೇಕ ಮಾತನಾಡಿದಂತಹ ಎಲ್ಲಾ ಸದಸ್ಯರೂ ಕೂಡ ಇದನ್ನು ಬಿಟ್ಟು ಮಾಡುತ್ತಾ, ಆ ಬಗ್ಗೆಯೇ ಇವತ್ತು ಪ್ರಶ್ನೆ ಕೇಳುವಂತಹ ಎಲ್ಲಾ ಸದಸ್ಯರೂ ಕೂಡ ಇದನ್ನು ಬಿಟ್ಟು ಬೇರೆ ರೀತಿಯಲ್ಲಿ ಅಂದರೆ ಬೇರೆ ಬೇರೆ ಉಲ್ಲೇಖಗಳನನು ಮಾಡುವಂತಹ ಸಂದರ್ಭಗಳನ್ನು ಸೃಷ್ಟಿ ಮಡುತ್ತಾ, ಆ Act ಬಗ್ಗೆಯೇ ಇವತ್ತು ಪ್ರಶ್ನೆ ಕೇಳುವಂತಹ ರೀತಿಯಲ್ಲಿ ಚರ್ಚೆಯಾಯಿತು. ಬಹುಶಃ ಇದಕ್ಕೆ ಏನಾದರೂ relief ಸಿಗುತ್ತದೆಯೇ, ಸೆಕ್ಷನ್ 6ರಲ್ಲಿ ತಂದಿರುವಂಥದ್ದಕ್ಕೆ ಹಳೇಯದು ಇದಕ್ಕೂ ಏನು ವ್ಯತ್ಯಾಸವಿದೆ? ಎಲ್ಲಿ relief ಕೊಡಲು ಸಾಧ್ಯಾವಾಗುತ್ತದೆ? ಎಷ್ಟು ತಿಂಗಳು ಆಗಿಹೋಗುತ್ತದೆ ಎಂದು ಇದೆಲ್ಲವೂ ವ್ಯಾಖ್ಯಾನವಾಯಿತು. ಆದುದರಿಂದ ನಾವು ಏನೆ ಮಾಡಬೇಕಾದರೂ ಕೂಡ ಒಂದು ಕಾನೂನು ಮಾಡಬೇಕಾದರೆ ಸಂವಿಧಾನದ ಚೌಕಟ್ಟಿನಲ್ಲಿಯೇ ಮಾಡಬೇಕು. ಹಾಗೂ ಕೋರ್ಟುಗಳು ಕೊಡುವಂತಹ ಅದೇಶಗಳು ಮತ್ತು ಇತಿಮಿತಿಯಲ್ಲಿಯೇ ನಾವು ಕಾನೂನುಗಳನ್ನು ಮಾಡಬೇಕಾಗತ್ತದೆ. ಬಹುಶಃ ನಾವೇನಾದರು ಕಾನೂನು ಮಾಡಿ, ನಾಳೆ ದಿವಸ ಅದು ಹೈಕೋರ್ಟಿನಲ್ಲಿಯಾಗಲಿ ಅಥವಾ ಸುಪ್ರೀಂ ಕೋರ್ಟಿನಲ್ಲಾಗಲಿ ಛಾಲೆಂಚ್ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಅದಕ್ಕೋಸ್ಕರ ಕಾನೂನು ಮಾಡುವಾಗ ಅತ್ಯಂತ ಜಾಗರೂಕತೆಯಿಂದ ಕಾನೂನು ಮಾಡಬೇಕಾಗುತ್ತದೆ. ತಾವುಗಳು ಕೆಲವು ಸಲಹೆಗಳನ್ನು ಕೊಟ್ಟಿದ್ದೀರಿ. ಅದರಲ್ಲಿ ಬಹಳ ಮುಖ್ಯವಾದುದು ಏನೆಂದರೆ, ನೀವು ಸಮಗ್ರವಾಗಿರುವಂತಹ ಸಂದರ್ಭದಲ್ಲಿ ಇದಕ್ಕೆ ಲೋಕಾಯುಕ್ತವನ್ನು immediate ಆಗಿ relief ಕೊಡಬೇಕೆಂದು ಹೇಳಿದಾಗ, repeal ಮಾಡುಂಥದ್ದು ಸೂಕ್ತವೆಂದು ಅಭಿಪ್ರಾಯಕ್ಕೆ ಬಂದ ಹಿನ್ನೆಲೆಯಲ್ಲಿ ಅನೇಕ ಮಾನ್ಯ ಸದಸ್ಯರು repeal ಮಾಡಿ ಎಂದು ಸಲಹೆ ಕೊಟ್ಟರು ಬಹಳಷ್ಟು ಜನ ಮಾನ್ಯ ಸದಸ್ಯರುಗಳು ಅದನ್ನು repeal ಮಾಡಿದರೆ ಅದು vacuum create ಆಗುತ್ತದೆ ಆ ಕಾರಣಕ್ಕಾಗಿ ಬೇಡ, ಸೀಮಿತವಾಗಿರುವಂಥದ್ದಕ್ಕೆ ನೀವು ಏನು ತಂದಿದ್ದೀರಿ ಅದಕ್ಕೆ ಸೀಮಿತಗೊಳಿಸಿ, ತದನಂತರ ಅದಕ್ಕೆ ಸಮಗ್ರವಾದಂತಹ ಒಂದು ಮಸೂದೆಯನ್ನು ತನ್ನಿ ಎಂದು ಸಲಹೆಗಳನ್ನು ಕೊಟ್ಟರು. ನಾನು ಈ ಸಂದರ್ಭದಲ್ಲಿ ಒಮದು ಮಾತನ್ನು ಹೇಳಬಯಸುತ್ತೇನೆ. ಏನೆಂದರೆ, 29 ವರ್ಷಗಳ ಹಿಂದೆ ತಂದಂತಹ ಈ ಕಾಯಿದೆಯ ಹಿನ್ನೆಲೆಯಲ್ಲಿ ಈ ಕಾಯಿದೆ ತಂದಮೇಲೆ ಆಗಿರುವಂತಹ ಬದಲಾವಣೆಗಳೇನು? ಮಾನ್ಯ ಸಿದ್ದರಾಮಣ್ಣನವರೇ, ಅದನ್ನೂ ಕೂಡ ನಾವು ನೋಡಬೇಕಾಗುತ್ತದೆ. ಇವತ್ತು ಮಾನ್ಯ ಶಾಣಪ್ಪನವರು ಇಲ್ಲ. ನಾವು ಯಾವ ಕಾಯಿದೆಯನ್ನು ತಂದಿರುವುದು? 1947ರಲ್ಲಿ ಈ ಕಾಯಿದೆ ಇತ್ತು.

**(2–30 ಗಂಟೆ)**

1947ರಲ್ಲಿ ಈ ಕಾಯಿದೆಯನ್ನು ತರಲಾಯಿತು. 1964ರಲ್ಲಿ ಇದಕ್ಕೆ ತಿದ್ದುಪಡಿಯನ್ನು ತರಲಾಯಿತು. 1988ರಲ್ಲಿ Prevention of Corruption ತಂದು 1947ರಲ್ಲಿ ಇದ್ದಂತಹ ಕಾಯಿದೆಯನ್ನು ನಿರಶನಗೊಳಿಸಿ 1998ರಲ್ಲಿ ಹೊಸ ಕಾಯಿದೆಯನ್ನು ತರಲಾಯಿತು. ಇದು ಎಷ್ಟು ಪವರ್ ಫುಲ್ ಆಗಿತ್ತು ಎನ್ನುವುದನ್ನು ನಾವು ಯಾರು ಯೋಚನೆ

ಮಾಡುತ್ತಿಲ್ಲ. ಲೋಕಾಯುಕ್ತಕ್ಕೆ ನಾವು ಕೊಟ್ಟಿರುವಂತಹ ಅಧಿಕಾರ ಏನು ಎಂದರೆ, it is under the Prevention of Corruption Act. They are exercising powers under the Prevention of Corruption Act ಈಗ ನಮಗೆ confusion ಆಗಿರುವುದು ಏಕೆ ಎಂದರೆ whether it is under the or under the Karnataka Lokayukta Act ಅಂತಹ defferentiation ನು ಯಾರು ಮಾಡುತ್ತಿಲ್ಲ. ಇಡೀ ದೇಶದಲ್ಲಿ ಏನು ಇದೆ ನ್ನು Prevention of Corruption Act ನು administer ಮಾಡುವ ಸಂದರ್ಭದಲ್ಲಿ ಲೋಕಪಾಲ ಮಾದರಿಯಲ್ಲಿ ಅದಕ್ಕೆ ತನ್ನದೆ ಆದ ಬೇರೆ ಸಂಸ್ಥೆಗಳು ಇವೆ, ಅವು ನಿಯಂತ್ರಣ ಮಾಡುತ್ತಿವೆ. ಅದು ಪವರ್‌ಫುಲ್ ಆಗಿದೆ ಎಂದರೆ ಸೆಕ್ಷನ್ 2(ಸಿ)ನಲ್ಲಿ ಮುಖ್ಯಮಂತ್ರಿಯಿಂದ ಹಿಡಿದು ಕಟ್ಟಕಡೆಯ ಮನುಷ್ಯನವರೆಗೆ 'public sevant' ಎಂದು ಮಾಡಬೇಕಾದಾಗ ಅದಕ್ಕೆ ವ್ಯಾಖ್ಯಾನ ಮಾಡಿದ್ದಾರೆ. 'Public servent' ಎಂದರೆ ಏನು, ಯರು ಎಂದು 'Public servent' ನ ಜವಾಬ್ದಾಯಿ ಏನು ಎಂದರೆ ಸಾರ್ವಜನಿಕ ನೌಕರ ತನ್ನ ಅಧಿಕೃತ ಕರ್ತವ್ಯದ ನಿಮಿತ್ತ ಕಾನೂನು ರೀತಿಯಲ್ಲಿ ಪಡೆಯಬೇಕಾದ ಸಂಭಾವನೆಯನ್ನು ಹೊರತುಪಡಿಸಿ ಹೆಚ್ಚಿನ ಸಂಬಳವನ್ನು ಪಡೆಯುವುದಾಗಲಿ, ಪಡೆಯಲು ಇಚ್ಚಿಸುವುದಾಗಲಿ ಅಥವಾ ಪ್ರಯತ್ನಿಸುವುದಾಗಲಿ ಶಿಕ್ಷಾರ್ಹ ಅಪರಾಧ. ಇದು Prevention of Corruption Act ನಲ್ಲಿದೆ. ಸಾರ್ವಜನಿಕ ನೌಕರ ತಾನು ನಿರ್ವಹಿಸಿದ ಕಾರ್ಯಕ್ಕೆ ಸಂಬಂಧಿಸಿದಂತೆ ಬೆಲೆಬಾಳುವ ಸ್ವತ್ತು ಪಡೆದುಕೊಂಡಲಿ, ಪಡೆಯಲು ಒಪ್ಪಿದಲ್ಲಿ ಅಥವಾ ಪ್ರಯತ್ನಿಸಿದಲ್ಲಿ ಪುಸಲಾಯಿಸಲು ಯಾವುದೇ ವ್ಯಕ್ತಿ ಲಂಚ ಪಡೆದಲ್ಲಿ ಶಿಕ್ಷಾರ್ಹ ಅಪರಾಧ. ಸಾರ್ವಜನಿಕ ನೌಕರ ತನ್ನ ಅದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿದಲ್ಲಿ ಮತ್ತು ಸಮಾಧಾನಕರ ಲೆಕ್ಕ ನೀಡಿದಿದ್ದಲ್ಲಿ ಈ ಕೃತ್ಯವು ಶಿಕ್ಷಾರ್ಹ ಅಪರಾಧ. ಈ ಎಲ್ಲದಕ್ಕೂ 5 ವರ್ಷ, 7ವರ್ಷ ಶಿಕ್ಷೆ ಇದೆ. This is a most effective Act?. ಈ ಲೋಕಾಯುಕ್ತ ಕಾಯಿದೆ ಬಂದಿರುವುದು 1984ರಲ್ಲಿ . 29 ವರ್ಷವಾಯಿತು. 29ವರ್ಷದಲ್ಲಿ ಇದಕ್ಕೆ ತಿದ್ದುಪಡಿ ತರಬೇಕು ಎನ್ನುವ ಚಿಂತನೆ ಯಾವತ್ತು ಬಂದಿರಲಿಲ್ಲ. ಇವತ್ತು ಬಂದಿದೆ, ಅಂತಹ ಪರಿಸ್ಥಿತಿ ನಮ್ಮ ಮುಂದೆ ಬಂದು ನಿಂತಿದೆ. ಆದರೆ ಒಂದು ಮಾತನ್ನು ಹೇಳಬಯಸುತ್ತೇನೆ, ಮಾನ್ಯ ಸದಸ್ಯರು ಚರ್ಚೆಯ ಹಿನ್ನೆಲಿಯಲ್ಲಿ ಯೋಚನೆ ಮಾಡಬೇಕಾಗುತ್ತದೆ. 84ರ ಕಾಯಿದೆಗೆ ಬದಲಾವಣೆ ತರುವುದಕ್ಕಿಂತ ಮುಂಚೆ ಏನೇನು ಬದಲಾವಣೆಯಾಗಿದೆ ಕಳದ 29 ವರ್ಷಗಳಲ್ಲಿ ಎನ್ನುವುದನ್ನು ನೋಡಬೇಕು. ಆಡಳಿತದಲ್ಲಿ ಪಾರದರ್ಶಕತೆ. ಚರುಕುತನ ತರುವುದಕ್ಕಾಗಿ ಮಾಹಿತಿ ಹಕ್ಕು ಕಾಯಿದೆ 2005, ನಿಯಮ ಬಂತು. ಮಾನವ ಹಕ್ಕು ಸಂರಕ್ಷಣಾ ಕಾಯಿದೆ, ಸಕಾಲ ಅಧಿನಿಯಮ, ಕಾಯಿದೆ. ಈ ಎಲ್ಲಾ ಕಾಯಿದೆಗಳು ಬರುವುದರ ಜೊತೆಗೆ 1998ರ ಕೂಡಾ ಬಂತು. ಇಡೀ ದೇಶದಲ್ಲಿ ಎಲ್ಲಿಯು ಲೋಕಾಯುಕ್ತಕ್ಕೆ ಇಷ್ಟೊಂದು ಅಧಿಕಾರವನ್ನು ಕೊಟ್ಟಿರುವುದಿಲ್ಲ. Prevention of Corruption Act ಕೂಡ ಬಂತು . ಇಡೀ ದೇಶದಲ್ಲಿ ಎಲ್ಲಿಯು ಲೋಕಾಯುಕ್ತಕ್ಕೆ ಇಷ್ಟೊಂದು ಅಧಿಕಾರವನ್ನು ಕೊಟ್ಟಿರುವುದಿಲ್ಲ. Prevention of Corruption Act ನಲ್ಲಿ ಬರುವಂಹ offences ಗಳನ್ನು try ಮಾಡುವುದು ವರಿಗೆ ಕೊಟ್ಟಿರುವ ಹಿನ್ನೆಲೆಯಲ್ಲಿ ಇದು most effective ಎಂದು ಲೋಕಾಯುಕ್ತ ಕಾಯಿದೆಯಲ್ಲಿ ಏನು ಇಲ್ಲ, ಅದರಲ್ಲಿ action, inaction, favoritism, corruption ಎಲ್ಲವೂ ಇದೆ. ' Corruption' ಬಗ್ಗೆ Prevention of Corruption Act ನಲ್ಲಿಯೂ ಇದೆ. ನಾನು ಏಕೆ ಇದನ್ನು ಪೂರಕವಾಗಿ ಹೇಳುತ್ತೇನೆ ಎಂದರೆ, ಗೌರವಾನ್ವಿತ ಮಾನ್ಯ ಸದಸ್ಯರು ಇದರ ಬಗ್ಗೆ ಯೋಚನೆ ಮಾಡಬೇಕು. ಅನಿವಾರ್ಯತೆ ಇದೆ. ಮಾನ್ಯ ಹುನಾಯ್ಕರ್ ಮಾತನಾಡುವಾಗ ಅವರು ಹೇಳಿದರು, ಈ activists ಗಳೆಲ್ಲರು ಒಂದಾಗಿ ಬಿಡುತ್ತಾರೆ, ನಮ್ಮ ಅಧಿಕಾರವನ್ನು ಅವರಿಗೆ ಕೊಟ್ಟು, ಅವರು ಹೇಳುವ ಹಾಗೆ ಕೇಳಬೇಕಾದ ಪರಿಸ್ಥಿತಿ ಬಂದಿದು, ಸ್ವೇಚಾಚಾರಿಯಾಗ ಅಧಿಕಾರ ಚಲಾಯಿಸುತಿದ್ದಾರೆ ಎಂದು ಮಾನ್ಯ ಶಾಣಪ್ಪನವರು ಮಾತನಾಡುತ್ತಾ ಹೇಳಿದರು. ನಾವು ಅಧಿಕಾರ ಕೊಟ್ಟಿರುವುದು ಒಳ್ಳೆಯ ಕೆಲಸ ಮಾಡಲಿ ಎಂದು, ಅವರು ವಿವೇಚನೆಯಿಂದ ಕೆಲಸ ಮಾಡಬೇಕು. ಒಂದು ಕಡೆ ಸಂಸ್ಥೆ ಇನ್ನೊಂದು ಕಡೆ ವ್ಯಕ್ತಿಗಳು. ಇಂತಹ ಪ್ರಶ್ನೆ ಬಂದಾಗ ಏನು ಮಾಡಬೇಕು ಎಂದು ಮಾನ್ಯ ಪುಟ್ಟಸ್ವಾಮಿಯವರು ಒಂದು ಪ್ರಶ್ನೆಯನ್ನು ಕೇಳಿದರು. ಬಹುಷಃ incapacity, ಇಂತಹ ಪ್ರಶ್ನೆ ಬಂದರೆ, ನೀವು ಯಾವಾಗ ಬೇಕಾದರೂ ಒಬ ಸಾಮಾನ್ಯ ವ್ಯಕ್ತಿ ಕೂಡ ಲೋಕಾಯುಕ್ತರ ಮೇಲೆ ದೂರು ದೊಡಲು ಅವಕಾಶವಿದೆ. ಶ್ರೀಮತಿ ಸೋನಿಯಾ ನಾರಂಗರವರು ಮಾಡಿರುವ ರೀತಿಯಲ್ಲಿ ಒಬ್ಬ ಸಾಮಾನ್ಯ ವ್ಯಕ್ತಿಯು ದೂರು ಕೊಡುವ ಅಧಿಕಾರವಿದೆ. Prosecution ಮಾಡುವಾಗ permission ತೆಗೆದುಕೊಳ್ಳುವುದು ಆ ಪ್ರಶ್ನೆ ಬೇರೆ. ಎಲ್ಲರೂ ವ್ಯಕ್ತಪಡಿಸಿರುವ ಭಾವನೆಗಳಿಗೆ ನಾನು ಸಮಗ್ರವಾಗಿ

ಉತ್ತರ ಕೊಡಲು ಆಗುತ್ತಿಲ್ಲ. ತಾವು ಕೊಟ್ಟಿರುವ ಸಲಹೆಗಳನ್ನು ಅಳವಡಿಸಿಕೊಳ್ಳಲು ನಾವು ತೆರೆದ ಮನಸ್ಸಿನಲ್ಲಿ ಇದ್ದೇವೆ. ಈಗ ಸಿಮೀತವಾಗಿ ತಂದಿರುವುದು. ಜನರ ಮನಸ್ಸಿನಲ್ಲಿರುವ ಅನುಮಾನವನ್ನು ಅಂದರೆ ನೀವೆ ಮಾಡಿರುವ ಕಾನೂನಿನಲ್ಲಿ ಇವತ್ತು ಒಬ್ಬ ಲೋಕಾಯುಕ್ತ ಭ್ರಷ್ಟ ಎಂದು ಆದಾಗ ಆತನನ್ನು ತೆಗೆಯಲು ಅವಕಾಶವಿಲ್ಲ ಎಂದು ಆದಾಗ ನಮ್ಮ ನೈತಿಕತೆಯನ್ನು ಪ್ರಶ್ನೆ ಮಾಡಲು ಅವಕಾಶವಾಗುತ್ತದೆ ಎನ್ನುವ ಕಾರಣಕ್ಕಾಗಿ ಈ ಮೂರು ವಿಚಾರದಲ್ಲಿ High Court Judge ರವರಿಗೆ 10 ವರ್ಷಎಂದು ಏಕೆ ತಂದಿದ್ದೀರಿ ಎಂದು ಕೇಳಿದ್ದೀರಿ Supreme Court Judge gets first priority. ಎರಡನೆಯ ಪ್ರಯಾರಿಟಿ Chief Justice of a High Court ಆದರೆ ಕರ್ನಾಟಕ ರಜ್ಯದಲ್ಲಿ ಇಬ್ಬರು ಸಿಗುತ್ತಿಲ್ಲ. ಆ ಕಾರಣಕ್ಕಾಗಿ ಭಾಸ್ಕರ್ ರಾವ್ ಅಲ್ಲಿಂದ ಬಂದಿರುವದು. ನಮ್ಮ ರಾಜ್ಯದಲ್ಲಿ Supreme Court Judge retired Chief Justice ಹೆಚ್ಚಿನವರು ಇಲ್ಲಾ. Human Rights Commission ಗೆ ಕಳೆದ 5ವರ್ಷದಿಂದ ಹುಡುಕುತ್ತಿದ್ದೇವೆ ಒಬ್ಬರು ಸಿಗುತ್ತಿಲ್ಲ. ಬೇರೆ ರಾಜ್ಯದವರನ್ನು ತರಬಹುದು ಎಂದರೆ ಯಾರು ಬರುತ್ತಿಲ್ಲ. ಯಾರು ಸಿಗದೆ ಇರುವ ಸಂದರ್ಭದಿಂದ ಅದನ್ನು 10 ವರ್ಷ ಎಂದು ಮಾಡಲಾಗಿದೆ. ಕರ್ನಾಟಕದಿಂದ ಬಂದವರು 10 ವರ್ಷ ಮಾಡಿದವರು ಒಳ್ಳೆಯ ಆಡಳಿತಗಾರರು ಅಲ್ಲ ಎನ್ನುವ ಪ್ರಶ್ನೆಯಲ್ಲ. ಅವರಲ್ಲಿ 10 ವರ್ಷ ಎಂದು ಇಟ್ಟಿದ್ದೇವೆ. ಆದರೆ ಆದ್ಯತೆಗಳು ಇದೆ ಇರುತ್ತವೆ. Supreme Court Judge ಆಗಿರುವವರಿಗೆ ಆಯ್ಕೆ ಮಾಡುವಾಗ Chief Justice of a High Court ಆಗಿರುವವರಿಗೆ ಆದ್ಯತೆ ಕೊಡುತ್ತಾರೆ. ಅವರ್‍ಯಾರು ಸರಿ ಇಲ್ಲ ಎನ್ನುವ ಅನಿವಾಯ್ತೆ ಬಂದಾಗ ನಾವು ಇಲ್ಲ 10 ವರ್ಷಎಂದು ಮಾಡಿದ್ದೇವೆ 10 ವರ್ಷ ಎಂದರೆ ಕರ್ನಾಟಕದವರನ್ನು ಮಾತ್ರವಲ್ಲ ಹೊರಗಿನವರನ್ನು ತೆಗೆದುಕೊಳ್ಳಲು ಬರುತ್ತದೆ. ಕೆಲವು 5 ವರ್ಷಕ್ಕೆ ಇಳಿಸಬೇಕು, ಇಲ್ಲಾ ತೆಗೆದು ಹಾಕಬೇಕು ಎನ್ನುವ ಸಲಹೆಗಳನ್ನು ಕೊಟ್ಟಿದೀರಿ. ಅದರ ಜೊತೆಗೆ Section 6 of the Karnataka Lokayukta Act ನ ಅಡಿಯಲ್ಲಿ ಪದಚ್ಯುತಿ ಗೊಳಿಸಬೇಕಾದ ಸಂದರ್ಭದಲ್ಲಿ ಮೂರು ತಿಂಗಳಲ್ಲಿ ಆಗುವುದಿಲ್ಲ. ಅವಕಾಶವನ್ನು ಜಾಸ್ತಿ ಕೊಟ್ಟಾಗಿದೆ. ಎಲ್ಲವು ಉಪಯುಕ್ತವಾದ ಸಲಹೆಗಳನ್ನು ನೀಡಿದ್ದೀರಿ. ಇದರ ಜೊತೆಗೆ ನಾನು ತಂದಿರುವುದು ಜನರಿಗೆ ಇದರಿಂದ ಒಂದು ಸಂದೇಶ ಹೊಗಬೇಕು. ಈ ಸದನದ ಸಾರ್ವಭೌಮತೆಯನ್ನು ಪ್ರಶನೆ ಮಾಡುವಂತಹ ರೀತಿಯಲ್ಲಿ ಲೋಕಾಯುಕ್ತದವರು ವತ್ನೆ ಮಾಡುವ ಸಂದರ್ಭದಲ್ಲಿ, ಅಲ್ಲಿ ಭ್ರಷ್ಟಾಚಾರದ ಆರೋಪ ಕೇಳಿ ಬರುತ್ತಿರುವ ಸಂದರ್ಭದಲ್ಲಿ ಕಿತ್ತು ಹಾಕುವಂತಹ ಅಧಿಕಾರವಿದೆ, ಅದಕ್ಕೆ ನಾವು ಸಮರ್ಥರಾಗಿದ್ದೇವೆ ಎನ್ನುವುದನ್ನು ತೋರಿಸಿಕೊಡಬೇಕಾದ ಅನಿವಾರ್ಯತೆ ಇದೆ. ನಿಮ್ಮೆಲ್ಲರ ಭಾವನೆಗಳನ್ನು ಕೇಳಿದ ಮೇಲೆ ಒಂದು ಸಮಗ್ರವಾದ ತಿದ್ದುಪಡಿಯನ್ನು ತರುವಂತಹ ಅನಿವಾರ್ಯತೆ ಈ ರಾಜ್ಯದ ಮುಂದೆ ಇದೆ ಲೋಕಪಾಲ ಮಾದರಿ ತನ್ನಿ ಎಂದು ಮಾನ್ಯ ಸಿದ್ದರಾಮಣ್ಣನವರು ಚೆನ್ನಾಗಿ ಹೇಳಿದರು. ಲೋಕಪಾಲ ಮಾದರಿ ಎಲ್ಲ ವಲಯದಲ್ಲಿ ಚರ್ಚೆಯಾಯಿತು. ಮಾನ್ಯ ಸಂತೋಷ ಹೆಗಡೆಯವರು ಭಾಗವಹಿಸಿದ್ದರು, ಕ್ರೇಜಿವಾಲರವರು, ಅಣ್ಣಾ ಹಜಾರೆ ಇವರೆಲ್ಲರು ಚರ್ಚೆ ಮಾಡಿ ಸಮಗ್ರವಾಗಿ ಸಿಂಪಲ್ ಆಗಿ ಮಾನ್ಯ ಸಿದ್ದರಾಮಣ್ಣನವರು ಕಾನೂನನ್ನು ಚೆನ್ನಾಗಿ ಓದಿಕೊಂಡಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ. Probably, the Lokpal Act is a best legislation. ಬರುವ ಒಂದೊಂದು wording ಕೂಡ ನಾವು interpret ಮಾಡಲು ಅವಕಾಶವೆ ಇಲ್ಲ. ಆ ರೀತಿ ಇದೆ. ತಾವು ಸಲಹೆ ಕೊಟಿರುವ ಹಿನ್ನೆಲೆಯಲ್ಲಿ ನೋಡಿದಾಗ ಆ ಮಾದರಿಯಲ್ಲಿ ಕಾನೂನು ತರುವ ಅನಿವಾರ್ಯತೆ ಇದೆ. ಇಷ್ಟಕ್ಕೆ ನಾವು ಸಿಮೀತವಾಗಲು ಬರುವುದಿಲ್ಲ. ಇದು ಕೇವಲ ಇವತ್ತಿನ ಸಂದರ್ಭಕ್ಕೆ ಅನುಸಾರವಾಗಿ ತಂದಿರುವುದು. ಸಮಗ್ರವಾದ ಕಾಯಿದೆ ತಂದಿರುವ ಸಂದರ್ಭದಲ್ಲಿ ನಮ್ಮೆಲ್ಲರ ಸಲಹೆಗಳನ್ನು ಪಡೆಯಲಾಗುತ್ತದೆ.

ಕಾರಣ ಏನೆಂದರ ಇ ಭ್ರಷಾಚಾರವನ್ನು ನಿಗ್ರಹಿಸಿತಕ್ಕ ಸಂದರ್ಭದಲ್ಲಿ ಅದಕೋಸ್ಕರವೇ ಸೃಷ್ಟಿ ಮಾಡತಕ್ಕ ಸಂಸ್ಥೆ ಪಾದರ್ಶಕವಾಗಿರಬೇಕು. ಬಹಳ ಎತ್ತರದ ಸಂಸ್ಥೆಯಾಗಿರಬೇಕು. ಜನರು ನಂಬುವ ಹಆಗೆ ಇರಬೇಕು. ಆಡಳಿತದಲ್ಲಿ ಚುರುಕು ಮುಟ್ಟಿಸುವಂತಹ ಸಂಸ್ಥೆಯಾಗಿರಬೇಕು. ಅಂತಹ ರೀತಿಯ ಕಾಯಿದೆ ಮತ್ತು ಸಂಸ್ಥೆಯನ್ನು ಹುಟ್ಟುಹಾಕವ ಪರಿಸ್ಥಿತಿ ಇದೆ. ಇವತ್ತು ಸೀಮಿತವಾದ 3 ವಿಚಾರಗಳಿಗೆ ಅನುಮತಿ ಕೊಡಿ, ಅದಷ್ಟು ಕೂಡಲೇ ಅಂದರೆ ಇನ್ನು ಒಂದು ತಿಂಗಳ ಒಳಗಾಗಿ ತಮ್ಮೆಲ್ಲರ ಸಲಹೆಯನ್ನು ಪಡೆದು ಒಂದು ಕಾನೂನನ್ನು ತರಲಾಗುವುದು. ನಾನು ಹೊಸದಾಗಿ ಪಾಲಿಮೆಂಟ್‌ನ ಮಾದರಿಯಲ್ಲಿ ಒಂದು Consultative Committee ಯನ್ನು

ಮಾಡಿದ್ದೇನೆ. ಕಾನೂನನ್ನು ರಕ್ಷಣೆ ಮಾಡಬೇಕಾದಾಗ ವಿರೋಧ ಪಕ್ಷದ ಎಲ್ಲಾ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾನೂನನ್ನು ಮಾಡಬೇಕಾಗುತ್ತದೆ. ಬಹುಶಃ ಯಾವುದೇ ಒಂದು ಕಾನೂನನ್ನು ಮಾಡಬೇಕಾದಾಗ ವಿರೋಧ ಪಕ್ಷದವರ ಜೊತೆಗೆ public reactions ಅನ್ನು ಕೂಡ ಪಡೆಯಬೇಕಾಗುತ್ತದೆ. public reactions ಇಲ್ಲದೇ ಯಾವುದೇ ಕಾನೂನನ್ನು ಮಾಡಿದರೆ ಅದು ಸರಿಯಾದಂತಹ ಕಾನೂನು ಆಗುವುದಿಲ್ಲ. ಏಕೆಂದರೆ ನಾವು ಈ ಸದನದಲ್ಲಿ ಮಾಡಿದಂತಹ ಕಾನೂನನ್ನು ಪಾಲಿಸಬೇಕಾದವರು ಜನರು, ಅದಕ್ಕಾಗಿಯೇ ಜನರು ಒಪ್ಪುವಂತಹ ಕಾನೂನನ್ನು ಪಾಲಿಸಬೆಕಾಗುತ್ತದೆ. ಆ ಕಾರಣದಿಂದಲೇ ನಿಮ್ಮೆಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲವೇ ದಿವಸಗಳಲ್ಲಿ, ನಾನು ತಿಂಗಳು ಎಂದು ಕೂಡ ಹೇಳುವುದಕ್ಕೆ ಹೋಗುವುದಿಲ್ಲ, ನಾಳೆಯಿಂದಲೇ ಈ ಕೆಲಸವನ್ನು ಪ್ರಾರಂಭ ಮಾಡಿ, ಕೆಲವೇ ದಿವಸಗಳಲ್ಲಿ ತಮ್ಮೆಲ್ಲರ ನಮ್ಮ ಅಧಿಕಾರ ಏನಿದೆ ಎನ್ನುವುದನ್ನು ಜನರಿಗೆ ತೋರಿಸಬೇಕಾಗಿರುವ ಹಿನ್ನಲೆಯಲ್ಲಿ ಮತುತ ಭ್ರಷ್ಟರಿಂದ ಕೂಡಿರುವ ಸಂಸ್ಥೆಗೂ ಕೂಡ ಎಚ್ಚರಿಕೆ ಹೋಗಬೇಕಾಗುತ್ತದೆ ಎನ್ನುವ ಕಾರಣದಿಂದ ಸಂಸ್ಥೆ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾಗಿ ವ್ಯಕ್ತಿಗಳು ಕೂಡ ಇರಬೇಕಾಗುತ್ತದೆ. ಹಾಗಿಲ್ಲವೇ ಈ ವಿಚಾರ ಇಂದು ಇಡೀ ದೇಶದಲ್ಲಿ ಚರ್ಚೆ ಆಗುತ್ತಿದೆ. ಒಂದು ದಿವಸ ಇದು ಒಳ್ಳೆಯ ಕಾಯಿದೆ ಎಂದಾಯಿತು. ಕಾಯಿದೆ ಒಳ್ಳೆಯದಿದ್ದರೂ ಸಹ ವ್ಯಕ್ತಿಗಳು ನಡೆದುಕೊಂಡಿರುವುದನ್ನು ನೋಡಿದಾಗ ಎಲ್ಲೋ ಒಂದು ಕಡೆಗೆ ದೇಶದ್ಯಾಂತ ಒಂದು ಕೆಟ್ಟ ಸಂದೇಶ ಹೋಗಿದೆ. ಅದನ್ನು ಸರಿಪಡಿಸಬೇಕಾದ ಅನಿವಾರ್ಯತೆ ಇದೆ. ಅದಕ್ಕಾಗಿಯೇ ಈ 3 ವಿಷಯಗಳಿಗೆ ಸಂಬಂಧಿಸಿದಂತೆ ಈ ತಿದ್ದುಪಡಿಯನ್ನು ತರಲಾಗಿದೆ. ಅದಕ್ಕೆ ಈ ಸದನ ಒಪ್ಪಿಗೆ ನೀಡಬೇಕೆಂದು ಕೇಳಿಕೋಳ್ಳುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಪತಿಗಳೇ, ಮಾನ್ಯ ಸಚಿವರು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದಾರೆ, ಸಂತೋಷ ಇದು ತುರಂತವಾಗಿ ಆಗವೇಕೆನ್ನುವುದಕ್ಕೆ ಒಂದು ಸದನದಲ್ಲಿ ಪರಿಣಿತರು ಯಾರ್ಯಾರು ಇದ್ದಾರೆ, ಅದನ್ನು ಗಮನಿಸಿ ಅವರನ್ನು ಕರೆಯಬೇಕು. ಲೋಕಸಭೆಯಲ್ಲಿರಬಹುದು, ಅಥವಾ ಕರ್ನಾಟಕ ರಾಜ್ಯದವರು ಸುಪ್ರೀಮ್ ಕೋರ್ಟ್‌ನಲ್ಲಿ ನ್ಯಾಯಾಧೀಶರಾಗಿರಬಹುದು, ಈ ರೀತಿಯವರು ಇಟ್ಟುಕೊಂಡು ಎಷ್ಟು ದಿವಸಗಳಲ್ಲಿ ಸಭೆ ಕರೆಯುತ್ತಾರೆ ಎನ್ನುವುದನ್ನು ಮೊದಲು ತಿಳಿಸಬೆಕು. ಎರಡನೆಯದಾಗಿ ಆ ಬಿಲ್ ಅನ್ನು ಪಾಸ್ ಮಾಡುವುದಕ್ಕೆ ನವೆಂಬರ್ ಮತ್ತು ಡಿಸೆಂಬರ್ ತಿಂಗಳಿನ ತನಕ ಕಾಯುವುದು ಬೇಡ ಇದಕ್ಕಾಗಿಯೇ ವಿಶೇಷವಾಗಿ ಒಂದು ವಿಧಾನಮಂಡಲದ ಅಧಿವೇಶನ ಕರೆಯಿರಿ. ಈ ಭೂತದಿಂದ ನಾವು ಪಾರಾಗಬೇಕಾದರೆ ಇದನ್ನು ಮಾಡಬೇಕಾಗುತ್ತದೆ, ಏಕೆಂದರೆ ಒಬ್ಬ ವ್ಯಕ್ತಿ ಮಾಡಿದ ತಪ್ಪಿನಿಮದ ಕರ್ನಾಟಕ ರಾಜ್ಯ ಸರ್ಕಾರಕ್ಕೆ, ವಿರೋಧ ಪಕ್ಷಕ್ಕೆ ಮತ್ತು ರಾಜ್ಯದ ಅವರೂವರೆ ಕೋಟಿಗೂ ಸಹ ಕೆಟ್ಟ ಹೆಸರು ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಸಹ ಈಗ ಸದನದಲ್ಲಿರುವುದರಿಂದ ಈ ವಿಚಾರಕ್ಕಾಗಿಯೇ ಒಂದು ವಿಧಾನಮಂಡಲದ ವಿಶೇಷ ಅಧಿವೇಶನ ಕರೆಯಬೇಕೆಂದು ಕೇಳಿಕೊಳ್ಳುತ್ತೇನೆ. ಈ ಮೂಲಕ ರಾಜ್ಯದ ಜನತೆಗೆ ಒಂದು ಸಂದೇಶ ಹೋಗಲಿ. ಈ ನ್ನು ಯಾವಾಗ ಕರೆಯುತ್ತೀರಿ? ಈ ಕಾಯಿದೆಯನ್ನು ಮಾಡುವ ಸಲುವಾಗಿ ವಿಧಾನಮಂಡಲದ ವಿಶೇಷ ಅಧೀವೇಶನ ಯಾವಾಗ ಕರೆಯಲಾಗುದೆನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಸಚಿವರು):–** ಮಾನ್ಯ ಸಭಪತಿಗಳೇ, ನಾನು ಈಗಾಗಲೇ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ನಾನು ನಾಳೆಯಿಂದಲೇ ಒಂದು ಮಸೂದೆಯನ್ನು ತಯಾರು ಮಾಡಿ, ಅದಕ್ಕೆ ತಮ್ಮೆಲ್ಲರ ಒಪ್ಪಿಗೆಯನ್ನು ಪಡೆಯುವ ಪ್ರಾಯತ್ನವನ್ನು ನಾನು ಮಾಡುತ್ತೇನೆ. ಅದಷ್ಟು ಬೇಗ ಎನ್ನುವ ಮಾತನ್ನು ಸಹ ಹೇಳಿದ್ದೇನೆ. ಇದಕ್ಕಾಗಿ ನವೆಂಬರ್ ತಿಂಗಳಿನ ತನಕ ಕಾಯುವ ಅವಶ್ಯಕತೆ ಇಲ್ಲ. ಈ ಕಾಯಿದೆಯ ಮಹತ್ವನ್ನು ಅರ್ಥ ಮಾಡಿಕೊಂಡೆ ವಿಧಾನಸಭಾಧ್ಯಕ್ಷರನ್ನು ಮತ್ತು ತಮ್ಮ ಮನವೊಲಿಸಿ ಉಭಯ ಸದನಗಳನ್ನು ಎರಡು ದಿವಸಗಳ ಕಾಲ ಮುಖ್ಯಮಂತ್ರಿಗಳು ಮುಂದಕ್ಕೆ ಹಾಕಿದರು. ಇದಕ್ಕಾಗಿಯೇ ಒಂದು ವಿಶೇಷ ಸದನವನ್ನು ಕರೆಯಲಾಗುವುದು. ಇದಕ್ಕೆ ಸರ್ಕಾರ ಹಿಂದೆಮುಂದೆ ನೋಡುವುದಿಲ್ಲ. ಬಹುಶಃ ಬಿಬಿಎಂಪಿ ಚುನಾವಣೆ ಆದ ಮೇಲೆ ಸೆಪ್ಟೆಂಬರ್ ತಿಂಗಳಿನಲ್ಲಿ ವಿಶೇಷ ಅಧಿವೇಶನ ಕರೆದು ಈ ಮಸೂದೆಯನ್ನು ಜಾರಿಗೆ ತರಲಾಗುವುದು. ಆ ಸಂದರ್ಭದಲ್ಲಿ ತಮ್ಮೆಲ್ಲರ ಸಲಹೆಗಳ ವಿಶ್ವಾಸ ಪಡೆದು ಕಾಯಿದೆ ಜಾರಿಗೆ ತರಲಾಗುವುದು.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"2015ರ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸ್ಪಟ್ಟಿತು**

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.

**ಖಂಡ 2 ರಿಂದ 4ರವರೆಗೆ**

**ಸಭಾಪತಿಯವರು:–** "ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸ್ಪಟ್ಟಿತು**

(ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ್ಕೆ ಸೇರಿಸಲಾಯಿತು)

**ಪ್ರಸ್ತಾವ ಅಂಗೀಕಾರ**

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಸಚಿವರು)ಮುಖ್ಯಮಂತ್ರಿಗಳ ಪರವಾಗಿ:–** ಮಾನ್ಯ ಸಭಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2015ರ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ "2015ರ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**6. ಪ್ರಕಟಣೆ**

**ಸಭಾಪತಿಯವರು:–** ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕ: 31–07–2015 ರಂದು ಕರ್ನಾಟಕ ರಾಜ್ಯ ಸಇವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೇಳಿರುತ್ತಾರೆ.

ಸದನವನ್ನು ಸಂಜೆ 4 ಗಂಟೆಯವರೆಗೆ ಮುಂದೂಡಲಾಗುವುದು.

**(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2 ಗಂಟೆ 47 ನಿಮಿಷಕ್ಕೆ ಮುಂದೂಡಲ್ಪಟ್ಟು, ಪುನಃ ಸಂಜೆ 4 ಗಂಟೆ 25 ನಿಮಿಸಗಳಿಗೆ ಸಮಾವೇಶಗೊಂಡಿತು)**

**7. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**ಕಾರ್ಯದರ್ಶಿ(ಕ.ವಿ.ಪ):–** ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2015ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

**8. ಶಾಸನ ರಚನೆ**

**ವಿಧೇಯಕದ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ವಿಧೇಯಕ 2015**

**ಶ್ರೀ ಕಿಮ್ಮನೆ ರತ್ನಾಕರ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2015 ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕಿಮ್ಮನೆ ರತ್ನಾಕರ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಪತಿಯವರೆ, ಕಳೆದ ಅಧಿವೇಶನದಲ್ಲಿ ಈ ವಿಧೇಯಕವನ್ನು ಮಂಡಿಸಿ ಒಪ್ಪಿಗೆಯನ್ನು ಪಡೆದುಕೊಂಡಿದ್ದೇವು. ಆ ಸಂದರ್ಭದಲ್ಲಿ ಮೇಲ್ಮನೆಯಲ್ಲಿ ಮತ್ತು ಕೆಳಮನೆಯಲ್ಲಿ ಈ ವಿಧೇಯಕಕ್ಕೆ ಸಂಬಂಧಿಸಿದಂತೆ ಎರಡು ತಿದ್ದುಪಡಿಗಳನ್ನು ಮಾಡುತ್ತೇನೆ ಎಂದು ಒಪ್ಪಿಗೆಯನ್ನು ಸೂಚಿಸಿದ್ದೆ ಆ ಸಂದರ್ಭದಲ್ಲಿ ಎರಡು ಪದಗಳ ಕೈಬಿಟ್ಟು ಹೋಗಿದ್ದವು. ಅದನ್ನು ಮಾಡಿ ಮೇಲ್ಮನೆಯಲ್ಲಿಯೂ ಸಹ ನಾನು ಒಪ್ಪಿಗೆಯನ್ನು ಕೊಟ್ಟಿದ್ದೆ. ಆದರೆ ವಿಧೇಯಕದಲ್ಲಿ ಅದು ಒಳಗೊಂಡಿರಲಿಲ್ಲ. ಅದೇ ರೀತಿ ಕೆಳಮನೆಯಲ್ಲಿಯೂ ಸಹ ಇದಕ್ಕೆ ಒಪ್ಪಿಗೆಯನ್ನು ಕೊಟ್ಟಿದೆ, ಆದರೆ ವಿಧೇಯಕದಲ್ಲಿ ಅದು ಒಳಗೊಂಡಿರಲಿಲ್ಲ. ವಿಧೇಯದಕ್ಲಿ ಏನು ಒಳಗೊಂಡಿರಲಿಲ್ಲವೋ ಅದಕ್ಕೆ ಸದನದಲ್ಲಿ ಒಪ್ಪಿಗೆಯನ್ನು ಕೊಟ್ಟಿದ್ದೆ. ಅದನ್ನು ಸರಿಪಡಿಸಿ ಎರಡನೇ ತಿದ್ದುಪಡಿ ವಿಧೇಯಕವನ್ನು ತಂದಿದ್ದೇನೆ. ಇದರ ಬಗ್ಗೆ ಎಲ್ಲಾ ಗೌರವಾನ್ವಿತ ಸದಸ್ಯರಿಗೂ ಸಹ ಮಾಹಿತಿ ಇದೆ. ಈ ಸಮಸ್ಯೆಗೆ ಸಂಬಂಧಿಸಿದಂತೆ ಮಾನ್ಯ ಬಸವರಾಜ ಹೊರಹಟ್ಟಿಯವರು ಸಹ ಹಕ್ಕುಚ್ಯುತಿಯಾಗುತ್ತದೆ. ಇದಕ್ಕೆ ಒಪ್ಪಿಗೆಯನ್ನು ಕೊಟ್ಟರೂ ಕೂಡ ಇದನ್ನು ಮಾಡಲಿಲ್ಲವೆನ್ನುವ ಪ್ರಸ್ತಾನೆಯನ್ನು ಸದನದಲ್ಲಿ ತಂದಿದ್ದರು. ನಾನಿದನ್ನು ಮಂಡಿಸಿ ತಂದಿದ್ದೇನೆ. ಇದರಲ್ಲಿ ಯಾವುದೇಒಂದು ಗೊಂದಲವಿಲ್ಲ. ಸದನದಲ್ಲಿ ಈಗಾಗಲೇ ಚರ್ಚೆಯಾಗಿ ಒಪ್ಪಿಗೆಯಾಗಿರುವುದನ್ನು ತಂದಿರುವುದರಿಂದ ಗೌರವನ್ವಿತ ಸದಸ್ಯರು ಇದಕ್ಕೆ ಒಪ್ಪಿಗೆಯನ್ನು ಕೊಡುತ್ತಾರೆಂದು ನಾನು ಭಾವಿಸುತ್ತೇನೆ. ಸ

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರು ಇದರ ಬಗ್ಗೆ ಏನೂ ಚರ್ಚೆ ಬೇಡ ಎಂದರು. ಆದರೆ ಚರ್ಚೆ ಮಾಡಲೇಬೇಕೆಂದು ಅದಕ್ಕೆ ನಾನು ಅವಕಾಶವನ್ನು ಕೊಡುತ್ತೇನೆ. ವಿಧೇಯಕದ ಬಗ್ಗೆ ಮಾತನಾಡುವುದಕ್ಕೆ ಬೇಡವೆಂದು ನಾನು ಎಂದು ಎಲ್ಲಿಯೂ ಹೇಳಿಲ್ಲ, ಹೇಳುವುದು ಇಲ್ಲ. ಆದರೆ ಶಿಕ್ಷಕರ ವರ್ಗಾವಣೆಗೆ ಸಂಬಂಧಪಟ್ಟಂತೆ ಮಾತ್ರ ವಿಧೇಯಕ ಇರುವುದರಿಂದ ವರ್ಗಾವಣೆ ಬಗ್ಗೆ ಮಾತ್ರ ಮಾತನಾಡಬೇಕು.

**ಶ್ರೀ ಬಿ.ರಾಮಕೃಷ್ಣ:–** ಮಾನ್ಯ ಸಭಾಪತಿಯವರೆ, ಈಗಾಗಲೇ ಹೇಳಿರುವ ವಿಚಾರವನ್ನೇ ಪುನಃ ಹೇಳುವುದು ಬೇಡ.

**ಸಭಾಪತಿಯವರು:–** ಅದೇ ಅಂಶವನ್ನು ನಾನು ಹೇಳುತ್ತಿದ್ದೇನೆ. ನೀವುಗಳು ಮಾತನಾಡುವುದಕ್ಕೆ ನಾನು ಬೇಡವೆಂದು ಹೇಳುವುದಿಲ್ಲ. ನಮ್ಮಲ್ಲಿ ಒಂದು ಸಣ್ಣ ಪದ್ಧತಿ ಏನು ಬಂದಿದೆ ಎಂದರೆ, ಶಿಕ್ಷಕರ ವರ್ಗಾವಣೆ ಎಂದ ತಕ್ಷಣ ಶಿಕ್ಷಕರು, ಶಿಕ್ಷಣ, ಅಲ್ಲಿರತಕ್ಕಂಥ ವ್ಯವಸ್ಥೆ, ಕಾಲೇಜು, ಪ್ರೌಢ ಶಾಲೆ ಬಗ್ಗೆ ಎಲ್ಲಾ ಚರ್ಚೆ ಅಥವಾ ಇಡೀ ಶಿಕ್ಷಣ ಇಲಾಖೆಯ ಬಗ್ಗೆ ತಾವುಗಳು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ನಾನು ಮಧ್ಯದಲ್ಲಿ ಬಾಯಿ ಹಾಕಿದರೆ

ನಿಮಗೆ ಮುಜುಗರವಾಗುತ್ತದೆ. ಮಾನ್ಯ ಸವಿವರು ತಂದಿರತಕ್ಕಂಥ ವಿಧೇಯಕವನ್ನು ತಾವುಗಳು ಓದಿದ್ದೀರಿ ಎಂದು ಭಾವಿಸುತ್ತೇನೆ. ವಿಧೇಯಕಕ್ಕೆ ಸೀಮಿತವಾಗಿ ಮಾತನಾಡಿ. ಪ್ರಾಸಂಗಿಕವಾಗಿ ಒಂದೆರಡು ಮಾತುಗಳನ್ನು ಆ ಕಡೆ. ಈ ಕಡೆ ಹೇಳಿದರೆ ನಾನೇನು ಅಡ್ಡ ಬರುವುದಿಲ್ಲ. ಆದರೆ ನಾನು ಸಾಮಾನ್ಯವಾಗಿ ನೋಡಿದ ಹಾಗೆ ಒಂದು ವಿಧೇಯಕ ಬಂದರೆ ಸಂಬಧಪಟ್ಟ ಇಲಾಖೆಯ ಬಗ್ಗೆ, ಸಾಧ್ಯಾವಾದರೆ ಇಡೀ ಸರ್ಕಾರದ ಬಗ್ಗೆ ಚರ್ಚೆ ಪ್ರಾರಂಭವಾಗುತ್ತದೆ. ದಯಮಾಡಿ ವಿಧೇಯಕಕ್ಕೆ ಸೀಮಿತಗೊಳಿಸಿ ಮಾತನಾಡುವುದಾದರೆ ಮಾತನಾಡಿ

**ಶ್ರೀ ಎಸ್.ವ್ಹಿ. ಸಂಕನೂರ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಧನ್ಯವಾದಗಳು 2015 ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ(ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ವಿಧೇಯಕವನ್ನೇನು ತಂದಿದ್ದಾರೆ, ಇದನ್ನು ನಾನು ಸ್ವಾಗತಿಸುತ್ತೇನೆ. ಅದರ ಜೋತೆಗೆ ನಾನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರನ್ನು ಅಭಿನಂದಿಸಲು ಬಯಸುತ್ತೇನೆ.

ಅಭಿನಂದಿಸಲಿಕ್ಕೆ ಕಾರಣವೇನೆಂದರೆ, ಈ ತಿದ್ದುಪಡಿಯಿಂದ ರಾಜ್ಯದಲ್ಲಿ ಸಾವಿರಾರು ಶಿಕ್ಷಕರಿಗೆ ಅನುಕೂಲವಾಗುತ್ತದೆ. ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಈ ವಿಧೇಯಕವನ್ನು ಮಂಡಿಸಿದ ಸಂದರ್ಭದಲ್ಲಿ, ಅದರಲ್ಲಿದ್ದ ಲೋಪದೋಷಗಳನ್ನು ಹೇಳಿದ್ದೆವು ತಕ್ಷಣ ಇದಕ್ಕೆ ತಿದ್ದುಪಡಿ ತಂದಿದ್ದಾರೆ. ಅವರು ಏನು ವಚನ ಕೊಟ್ಟಿದ್ದರೋ ಅದರಂತೆ ನಡೆದುಕೊಂಡಿದ್ದಾರೆ. ಆದ್ದರಿಂದ ವಿಶೇಷವಾಗಿ ಅವರನ್ನು ಅಭಿನಂದಿಸಬಯಸುತ್ತೇನೆ. ತಿದ್ದುಪಡಿ ತುವಂಥ ಸಂದರ್ಭದಲ್ಲಿ ನಾವು ಇನ್ನೊಂದು ವಿಚಾರವಾಗಿ ಮನವಿ ಮಾಡಿಕೊಂಡಿದ್ದೇವು. Mutual Transfer ಏನಿದೆ, ಇದು lifetime ನಲ್ಲಿ ಒಂದೇ ಸಲ ಎಂದು ನಿಯಮ ಇದೆ. ಇದನ್ನು ತಿದ್ದುಪಡಿ ಮಾಡಬೇಕೆಂದು ಮನವಿ ಮಾಡಿದ್ದೇವು ಏಕೆಂದರೆ ಸರ್ಕಾರಕ್ಕೆ ಇದರಿಂದ ಏನೂ ತೊಂದರೆ ಇಲ್ಲ. ಅಲ್ಲಿಂದ ಒಬ್ಬ ಸೈನ್ಸ್ ಟೀಚರ್ ಇಲ್ಲಿಗೆ ಬರುತ್ತಾನೆ, ಇಲ್ಲಿಂದ ಒಬ್ಬ ಸೈನ್ಸ್ ಟೀಚರ್ ಅಲ್ಲಿಗೆ ಹೋಗುತ್ತಾನೆ ಅಷ್ಟೇ ಯಾವುದೂ ತೊಂದರೆ ಆಗುವುದಿಲ್ಲ. ಅದೂ ಅಲ್ಲದೇ lifetime ಒಂದೇ ಸಲ ಇದಕ್ಕೆ ಅವಕಾಶ ಇದೆ. ಇದನ್ನು ತಿದ್ದುಪಡಿ ಮಾಡಿ ಎಂದು ಮನವಿ ಮಾಡಿಕೊಂಡಿದ್ದೇವು. ಇದರಿಂದ ತೊಂದರೆಯಿಲ್ಲ. ಬರುವಂತಹ ದಿನಮಾನದಲ್ಲಿ ಈ ರೀತಿ ತಿದ್ದುಪಡಿ ತರುವುದು ಅವಶ್ಯಕವಾಗಿರುತ್ತದೆ. Mutual Transfer ಏಕೆ ಮಾಡಿಲ್ಲ? ದಯವಿಟ್ಟು ಮುಂದಿನ ದಿನಗಳಲ್ಲಿ ಈ ತಿದ್ದುಪಡಿ ತರುತ್ತಾರೆ ಎಂದು ಭಾವಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಅರುಣ ಶಹಪುರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಶಿಕ್ಷಣ ಸಚಿವರು ವರ್ಗಾವಣೆ ಕಾಯಿದೆಗೆ ಎರಡು ತಿದ್ದುಪಡಿಗಳನ್ನು ತಂದಿದ್ದಾರೆ ಇದನ್ನು ಸ್ವಾಗತಿಸುತ್ತೇನೆ. ಆದರೆ ಎರಡೇ ತಿದ್ದುಪಡಿ ತಂದಿದ್ದಾರೆ ಎನ್ನುವ ಅಸಮಾಧಾನವನ್ನು ಸ್ಪಷ್ಟವಾಗಿ ದಾಖಲು ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಮಾನ್ಯ ಸಂಕನೂರರವರು, Mutual Transfer ನಲ್ಲಿ ಏನೂ ಸಮಸ್ಯೆಯಿಲ್ಲ ಎಂದು ಹೇಳಿದ್ದರು, ಒಬ್ಬ ಶಿಕ್ಷಕ ಅಲ್ಲಿಂದ ಇಲ್ಲಿಗೆ ಬರುತ್ತಾನೆ, ಇಲ್ಲಿಂದ ಅಲ್ಲಿಗೆ ಹೋಗುತ್ತಾನೆ. ದಯವಿಟ್ಟು ಆ Mutual ಗೂ ಕೂಡ ಜೀವನದಲ್ಲಿ ಒಂದೇ ಬಾರಿ ಎನ್ನುವಂಥದ್ದನ್ನು relax ಮಾಡಿ, ಇನ್ನೊಂದು ಬಾರಿ ಕೊಡಬಹುದು ಎನ್ನುವುದನ್ನು ಸೇರಿಸಬೇಕು. 2ನೇ ಸಲಹೆಯಾಗಿ ನಿಮಗೆ ಹೇಳಬಯಸುವುದೇನೆಂದರೆ, ಈಗೇನು ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆ ಎಂದು ಹೇಳಿದ್ದೀರಿ, ಇವರಿಗೆ 1 ಪರ್ಸೆಂಟೇಜ್ ಕೊಡುತ್ತೀರಾ? ಅಥವಾ ಎಷ್ಟು ಪರ್ಸೆಂಟೇಜ್ ಎನ್ನುವುದರ ಬಗ್ಗೆ clear ಆಗಬೇಕಾಗಿತ್ತು. ಮಾನರಯ ಸಭಾಪತಿಗಳೆ, Counselling ಮೂಲಕ ವರ್ಗಾವಣೆ ಆಗಬೇಕು. ಆದರೆ relieve ಯಾರು ಮಾಡಬೇಕು? ಇದು ಕಾನೂನಿನಲ್ಲಿ ಇಲ್ಲ. 2 ವರ್ಷದ ಹಿಂದೆ, 3 ವರ್ಷದ ಹಿಂದೆ ವರ್ಗಾವಣೆ ಕಾನೂನಿನ ಅಡಿಯಲ್ಲಿ ವರ್ಗಾವಣೆಗೊಂಡು, ವರ್ಗಾವಣೆಯ ಆದೇಶವನ್ನು ತೆಗೆದುಕೊಂಡು ಬಿಇಓ ಕಚೇರಿಗೆ ಹೋಗಿ ಶಾಲೆಗೆ ಹೋದರೆ relieve ಮಾಡುವ ಪರಿಸ್ಥಿತಿ ಇಲ್ಲ. ಅದಕ್ಕೆ ಪರಿಹಾರ ಏನು? ತಮಗೆ ಗೊತ್ತಿದೆ, ಖಾನಾಪುರ ತೋಲ್ಲೂಕಿನಲ್ಲಿ 3 ವರ್ಷದ relieve ಅನ್ನು ಒಂದೇ ವರ್ಷ.. ಅಂದರೆ ಒಬ್ಬ ಬಿಇಓ retire ಆಗಬೇಕಾದರೆ ಅವರನ್ನು relieve ಮಾಡಲು ಹೋಗಿ ಕೋರ್ಟ್ ಆದೇಶದ ಮೇಲೆ 3 ವರ್ಷದ ವರ್ಗಾವಣೆಯನ್ನು ಮೊನ್ನೆ relieve ಮಾಡುವ ಪರಿಸ್ಥಿತಿ ಬಂತು. ಹಾಗಾದರೆ relieve ಮಾಡುವುದಕ್ಕೆ ಕಾನೂನಿನಲ್ಲಿ ಯಾವ ಅವಕಾಶ ಕಲ್ಪಿಸಿದ್ದೀರಿ? ಅದಕ್ಕೆ ಏನು ಸಮಯ ಮಿತಿಯನ್ನು ಹಾಕಿದ್ದೀರಿ

ಎನ್ನುವುದನ್ನು ಸೇರಿಸಬೇಕು ಎಂದು ಕೇಳಿಕೊಳ್ಳುತ್ತೇನೆ, Sarva Shiksha Abhiyan ಮತ್ತೆ ಅಡಿಯಲ್ಲಿ ನೇಮಕವಾದ ಶಿಕ್ಷಕರಿಗೆ ವಗಾವಣೆ ಕಾನೂನಿನಲ್ಲಿ ಯಾವುದೇ ಪರಿಹಾರ ಇಲ್ಲ. ನನಗೆ ಒಂದಷ್ಟು TGT (Trained Graduate Teacher) ಬಗ್ಗೆ ತಾವು ಸ್ವಲ್ಪ ಹೇಳಬೇಕು. ಪ್ರಾಥಮಿಕ ಮತ್ತು ಪ್ರೌಢದ ಮಧ್ಯೆ ಒಂದು ಮಾಡುತ್ತಿದ್ದೀರಿ ಎನ್ನು ಮಾಹಿತಿ ನನಗೆ ಗೊತ್ತಾಗಿದೆ. ಇದು ಎಷ್ಟರ ಮಟ್ಟಿಗೆ ಸತ್ಯ ಹೇಳಬೇಕು. ಇವರನ್ನು ಯಾವ cadre ಎಂದು ನಿಗದಿ ಮಾಡುತ್ತೀರಿ? ಈಗಾಗಲೇ TGT ಶಿಕ್ಷಕರು ನಮ್ಮಲ್ಲಿ High School scale ತೆಗೆದುಕೊಳ್ಳುವವರಿದ್ದಾರೆ. ಅವರ ಅನ್ನು ಕಡಿಮೆ ಮಾಡಿ TGTಯಲ್ಲಿ ಮುಂದುವರೆಸುತ್ತೀರಾ ಅಥವಾ High School scale ಇದೆ ಎಂದು High School ನಲ್ಲಿ ವಿಲೀನಗೊಳಿಸುತ್ತೀರಾಂ ಅವರನ್ನು ವಿಲೀನಗೊಳಿಸುವುದಾದರೆ ಆ ಜಿಲ್ಲೆಗಳಲ್ಲಿ ಖಾಲಿ ಹುದ್ದೆಗಳಿವೆಯೇ? ನೀವು ಇಷ್ಟೆಲ್ಲ ವರ್ಗಾವಣೆ ಕಾನೂನು 3 ಪರ್ಸೆಂಟೇಜ್ ಎಂದು ಮಾಡಿದರೂ ಈ ಪರ್ಸೆಂಟೇಜ್ ಮಾಡಿರುವಂಥದ್ದು sub to availability. ಅಲ್ಲಿ ಖಾಲಿ ಹುದ್ದೆಗಳು ಇದ್ದರೆ ಮಾತ್ರ ಶಿಕ್ಷಕರಿಗೆ ಅವಕಾಶ. ಅಲ್ಲಿ availability. ಇಲ್ಲದೇ ಇದ್ದರೆ ಆ ಶಿಕ್ಷಕನಿಗೆ ಏನೂ ಅವಕಾಶ ಇಲ್ಲ. ನನಗೆ ನಿನ್ನೆ ರಾಯಚೂರಿನಿಂದ ದೂರವಾಣಿ ಮಾಡಿದ್ದರು. ತಾವೂ ಕೂಡ ಹೋಗಿ ಬಂದು ಒಳ್ಳೆಯ ಕೆಲಸ ಮಾಡಿದ್ದೀರಿ. 70–80 ಜನ, ಜನಕ್ಕೂ ಸಿಗುವುದಿಲ್ಲ, ನಮ್ಮ ಗತಿ ಏನು? ಹೀಗೆ ಕುಳಿತುಕೊಂಡರೆ 15 ವರ್ಷ ನಮಗೆ ವರ್ಗಾವಣೆ ಸಿಗುವುದಿಲ್ಲ ಎಂದು ಗೋಳಾಡಿದರು. ಇಲ್ಲಿ ಪ್ರಶ್ನೆ ಏನೆಂದರೆ TGT ಶಿಕ್ಷಕರಿಗೆ ಏನು ಪರಿಹಾರ ಕೊಡುತ್ತೀರಿ? ಒಂದು ಸಂಗತಿಯನ್ನು ತಾವು ತಕ್ಷಣ ಹೇಳಬೇಕಾಗುತ್ತದೆ. ಆದೇನೆಂದರೆ, ಹೆಚ್ಚುವರಿ ಪ್ರಕ್ರಿಯೆ. ಒಂದು ಕಡೆ ವರ್ಗಾವಣೆ ಪ್ರಕ್ರಿಯೆ ಆಗಿ, notification ಆಗಿ provisional list ಪ್ರಕಟ ಮಾಡಿದ್ದೀರಿ. ಇನ್ನೊಂದು ಕಡೆ ಶಾಲೆಯಲ್ಲಿ ಹೆಚ್ಚುವರಿ ಶಿಕ್ಷಕರನ್ನು ಹೆಚ್ಚುವರಿ ಮಾಡಿ ಯಾವ ಶಾಲೆಗೆ ಕಳುಹಿಸಬೇಕು ಎಂದು ಕಳುಹಿಸುತ್ತಾರೆ. ಹಾಗಾದರೆ ಈ provisional list ನಲ್ಲಿ ಇರುವವರಿಗೆ ಅಲ್ಲಿ ಸ್ಥಳ ಸಿಗುವುದಿಲ್ಲ. ಅವರಿಗೆ ಅನ್ಯಾಯವಾಗುತ್ತದೆ. ಈ ವರ್ಗಾವಣೆ ಪ್ರಕ್ರಿಯೆ ಮುಗಿಯುವವರೆಗೆ ಹೆಚ್ಚುವರಿ ಪ್ರಕ್ರಿಯೆಯನ್ನು ನಿಲ್ಲಿಸಿ ಅದನ್ನು ಮುಂದೂಡವಂತಹ ಕೆಲಸ ಮಾಡಬೇಕು. ಎರಡನೆ ಸಂಗತಿ ಏನೆಂದರೆ, ಈ TGT ಶಿಕ್ಷಕರಿಗೆ ಏನೊಂದು ಪರಿಹಾರವನ್ನು ಕೊಡುತ್ತಿದ್ದೀರೋ ಅದೇರೀತಿ ಅನುದಾನರಹಿತ ಶಿಕ್ಷಕರನ್ನು ಸೇರಿಸುವ ನಿಟ್ಟಿನಲ್ಲಿ ತಾವೇನು ಮಾಡುತ್ತೀರಿ ಎನ್ನುವುದಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡುವ ಬದಲಿಗೆ ಈ ಆ್ಯಕ್ಟ್‌ನಲ್ಲಿ ಎಲ್ಲಾ ಸಂಗತಿಗಳನ್ನು ಸೇರಿಸುವ ಕೆಲಸ ಮಾಡಬೇಕು ಎಂದು ಅಗ್ರಹ ಮಾಡುತ್ತೇನೆ.

**ಶ್ರೀ ರಾಮಚಂದ್ರಗೌಡ(ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಶಾಲಾ ಶಿಕ್ಷಕರಿಗೂ ಹಾಗೂ ಸರ್ಕಾರಿ ನೌಕರರಿಗೆ ಬಹಳ ವ್ಯತ್ಯಾಸ ಇದೆ. ಶಾಲಾ ಶಿಕ್ಷಕರು ಹಳ್ಳಿಯ ಶಾಲೆಗೆ ಹೋಗುವಾಗ ಅಲ್ಲಿ ಅವರಿಗೆವಾಸ ಮಾಡುವುದಕ್ಕೆ ಜಾಗ ಇರುವುದಿಲ್ಲ. ಯಾವಾಗ ವಾಸ ಮಾಡುವುದಕ್ಕೆ ಜಾಗ ಇರುವುದಿಲ್ಲವೋ ಅಲ್ಲಿ ಉಳಿದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಹೋಗುವುದಕ್ಕೆ ಮತ್ತು ಬರುವುದಕ್ಕೆ ಕಷ್ಟವಾಗುತ್ತದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಏಕೆಂದರೆ, ಶಾಲೆಗಳು ಗ್ರಾಮಾಂತರದಲ್ಲಿ ಬಹಳ ದೂರದಲ್ಲಿರುತ್ತವೆ. ಅವರು taluk headquarters or hobli headquarters ನಲ್ಲಿ ಹೋಗುವುದಕ್ಕೆ–ಬರುವುದಕ್ಕೆ ಸಮಯ ಸಾಕಾಗುವುದಿಲ್ಲ. ನಾವು ಒಂದು ಸಲ ಹೀಗೆ ಮಾತನಾಡುತ್ತಿದ್ದೇವು. ಬೆಳಿಗ್ಗೆ 8 ಗಂಟೆಗೆ ಶಾಲೆ ಇದ್ದರೆ ಆ ಶಿಕ್ಷಕ ಬೆಳಿಗ್ಗೆ 5 ಗಂಟೆಗೆ ಹೊರಡಬೇಕಾಗುತ್ತದೆ. ಅದು ಬಿಟ್ಟು ಬೇರೆ ಬಸ್ಸು ಇರುವುದಿಲ್ಲ. ಒಂದುವೇಳೆ 9 ಗಂಟೆಗೆ ಹೊರಟರೆ ಅವನು ಶಾಲೆಗೆ 11 ಗಂಟೆಗೆ ತಲುಪುತ್ತಾನೆ. ಸಾಯಂಕಾಲ ಆ ಶಿಕ್ಷಕ ವಾಪಸ್ಸು ಬರಬೇಕಾದರೆ 3 ಗಂಟೆಗೆ ಬಸ್ಸು ಇರುತ್ತದೆ ಅಥವಾ ಸಾಯಂಕಾಲ 7 ಗಂಟೆಗೆ ಬಸ್ ಇರುತ್ತದೆ. ಅವನು ಯಾವಾಗ ಹೋಗುತ್ತಾನೆ, ಯಾವಾಗ ಬರುತ್ತಾನೆ ಗೊತ್ತಾಗುವುದಿಲ್ಲ, ಇಂತಹ ಕಷ್ಟಗಳನ್ನು ಶಿಕ್ಷಕರು ಅನುಭವಿಸುತ್ತಿದ್ದಾರೆ. ನೀವು ಒಂದು clause ಇಟ್ಟುಕೊಳ್ಳಬೇಕಾಗಿತ್ತು. ಮಾನವೀಯತೆಯ ಆಧಾರದ ಮೇಲೆ ಮಾಡುವುದಕ್ಕೆ ನಿಮ್ಮ ಹತ್ತಿರ ಒಂದು ಅಸ್ತ್ರ ಇಟ್ಟುಕೊಳ್ಳಬೇಕಾಗಿತ್ತು. ಸರ್ಕಾರ ತನ್ನ ಕೈಗೆ ತಾನೇ ಕೋಳ ಹಾಕಿಕೊಳ್ಳಬಾರದು. ನಮ್ಮ ಕೈಗೆ ಕೊಂಡಿ ಹಾಕಿಕೊಂಡರೆ ನಾಳೆ ಯಾರಿಗೂ ಸಹಾಯ ಮಾಡುವುದಕ್ಕೆ ಆಗುವುದಿಲ್ಲ. ಕಾನೂನು ಮಾಡುವಾಗ ಸ್ವಲ್ಪಮಟ್ಟಿಗೆ ನಿಮ್ಮಲ್ಲಿ ಅಧಿಕಾರ ಇಟ್ಟುಕೊಳ್ಳಬೇಕಾಗಿತ್ತು. ಹಾಗೆ ಇಟ್ಟುಕೊಳ್ಳದೇ ಹೋದರೆ ಮಾನವೀಯತೆಯ ಆಧಾರದ ಮೇಲೆ ಮಾಡುವುದಕ್ಕಾಗುವುದಿಲ್ಲ, ಆಗ ನೀವು ಕಾನೂನನ್ನು ಮುಂದಿಡುತ್ತೀರಿ. ಅವನು ಶಾಲೆಗೆ ಹೋಗುವುದಿಲ್ಲ.

ಶಿಕ್ಷಕರನ್ನು ಬದಲಾವಣೆ ಮಾಡಬೇಕಾದರೆ ವಿದ್ಯಾರ್ಥಿಗಳ ಅಭಿಪ್ರಾಯ ಪಡೆಯಬೇಕು. ಈ ಶಿಕ್ಷಕ ಬೇಕೋ ಬೇಡವೋ. ಆತ ಪಾಠ ಚೆನ್ನಾಗಿ ಮಾಡುತ್ತಾರೋ ಇಲ್ಲವೋ ಕೇಳಬೇಕು. ಆ ಶಿಕ್ಷಕ ಹೋದರೆ ಮಕ್ಕಳಿಗೆ ಸಾಕಾಗಿ ಹೋಗಿಬಿಡುತ್ತದೆ, ಇದನ್ನು ಅನುಭವಿಸಿದ್ದೇವೆ, ನಾವು ನೋಡಿದ್ದೇವೆ. ವಿದ್ಯಾರ್ಥಿಗಳ ಅಭಿಪ್ರಾಯ ತೆಗೆದುಕೊಳ್ಳುವ ವ್ಯವಸ್ಥೆ ಇರಬೇಕು. ಇಲ್ಲದೇ ಹೋದರೆ ಬಹಳ ಕಷ್ಟವಾಗುತ್ತದೆ. ಶಾಲೆಗಳಲ್ಲಿ ಸಮಿತಿಗಳಿರುತ್ತವೆ. ಆ ಸಮಿತಿಯ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ನಾವು ಶಾಲಾ ಅಭಿವೃದ್ಧಿ ಸಮಿತಿಯನ್ನು ಏಕೆ ಮಾಡುತ್ತೇವೆ? ಸುಮ್ಮನೆ ಯಾರಿಗೋ ಒಬ್ಬರನ್ನು ಅಧ್ಯಕ್ಷನನ್ನಾಗಿ ಮಾಡುವುದಕ್ಕೆ ಈ ವ್ಯವಸ್ಥೆ ಮಾಡಿದ್ದೇವೆಯೇ?ಇಲ್ಲ. ಆ ಶಾಲೆಯ ನಿರ್ವಹಣೆ ಮಾಡುವುದಕ್ಕೋಸ್ಕರ ನಾವು ಮಾಡುತ್ತೇವೆ. ಅವನಿಗೂ ಸ್ವಲ್ಪ ಜವಾಬ್ದಾರಿ ಇರಬೇಕು. ಈ ಅಂಶಗಳನ್ನು ಪರಿಗಣಿಸಿದ್ದರೆ ಉತ್ತಮವಾದ ಈ ವಿಧೇಯಕ ಆಗ ಅತ್ಯುತ್ತಮವಾಗಿರುತ್ತಿತ್ತು ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಈ ತಿದ್ದುಪಡಿಯನ್ನು ನಾನು ಸ್ವಾಗತ ಮಾಡುತ್ತೇನೆ. ನಾನು ಮತ್ತು ತಾವು ಸಚಿವರಿದ್ದಾಗ ಈ ವರ್ಗಾವಣೆ ನೀತಿ ಪ್ರಾರಂಭವಾಯಿತು. ಪತ್ರಿಕೆಯವರು, ಶಿಕ್ಷಕರ ವರ್ಗಾವಣೆಯಲ್ಲಿ ಒಂದು ವರ್ಷಕ್ಕೆ ಅದರಿಂದ ಏಳು ಕೋಟಿ ರೂಪಾಯಿಗಳ ಭ್ರಷ್ಟಾಚಾರ ಆಗುತ್ತಿದೆ, ಅವರು ಇಲ್ಲೇ ಸುತ್ತಮುತ್ತ ಇರುತ್ತಾರೆ, ಶಾಸಕರ ಭವನದಲ್ಲಿರುತ್ತಾರೆ, ವಿಧಾನಸೌಧದಲ್ಲೇ ಇರುತ್ತಾರೆ ಎಂದು ಒಂದು ಲೇಖನ ಬರೆದಿದ್ದರು. ನಾವು ಅ ಎಲ್ಲಾ ಪತ್ರಿಕಾ ವಿತ್ರರಿಗೆ, ಇಷ್ಟು ಭ್ರಷ್ಟಾಚಾರ ಆಗುತ್ತದೆ ಎಂದು ರಸೀತಿ ಬುಕ್ ಇಟ್ಟುಕೊಂಡಿದ್ದೀರಾ ಎಂದು ಕೇಳಿದಾಗ, ಅವರು ಬಾಯಿಗೆ ಬಂದ ಹಾಗೆ ಬೈಯ್ದಿದ್ದರು. ಅವರು ನನಗೆ ಟೇಟ್ ತಂದು ಹಚ್ಚಿ ತೋರಿಸಿದರು. ವರ್ಗಾವಣೆಗೆ ಯಾರ್‍ಯಾರ ಕಡೆ ಎಷ್ಟು ದುಡ್ಡು ತೆಗೆದುಕೊಂಡಿದ್ದರು, ಏನೇನು ಮಾಡಿದ್ದರು ಎಂಬುದನ್ನು ತೋರಿಸಿದರು. ಆ ಹಿನ್ನೆಲೆಯಲ್ಲಿ ಬಹಳ ಪ್ರಯತ್ನ ಮಾಡಿ ಈ ನೀತಿಯನ್ನು ತಂದಿದ್ದೇವು. ಆಗ ಮಾನ್ಯ ವಿಜಯಭಾಸ್ಕರ್ ರವರು ಇಲಾಖೆಯ ಕಾರ್ಯದರ್ಶಿಗಳಾಗಿದ್ದರು, ಮಾನ್ಯ ವದನ್‌ಗೋಪಾಲ್‌ರವರು ಕಮಿಷನರ್ ಆಗಿದ್ದರು. ಬಹಳ ಪ್ರಯತ್ನವನ್ನು ಮಾಡಿ ಈ ವಿಧೇಯಕವನ್ನು ತಂದಿದ್ದೇವು. ಇದು ಬಹಳಷ್ಟು ಮಂದಿಗೆ ನೆಮ್ಮದಿಯನ್ನು ಕೊಟ್ಟಿದೆ. ಕೆಲವರಿಗೆ ಸಾಹಯ ಆಗಿಲ್ಲ. ಎ, ಬಿ, ಸಿ ಎಂದು 3 Zone ಮಾಡಿದ್ದೇವೆ. ಎ ವಲಯ ಎಂದರೆ ಸಿಟಿ. ಬಿ ವಲಯ ಎಂದರೆ ಸಿಟಿಯಿಂದ 15 ಕಿ.ಮೀ ಒಳಗೆ. ಮತ್ತು ಸಿ ವಲಯ ಎಂದರೆ 15 ಕಿ.ಮೀ ದಾಟಿ ದೂರ ಇರುವಂಥದ್ದು. ಹಿಂದೆ ನೇಮಕಾತಿ ಆಗುತ್ತಿದ್ದಾಗ ರ್‍ಯಾಂಕ್ ಪ್ರಕಾರ ಬರುತ್ತಿತ್ತು. 90, 89, 87, 86 ತೆಗೆದುಕೊಂಡವರ ಪೈಕಿ, ಯಾರು 90 ತೆಗೆದುಕೊಂಡಿರುತ್ತಾರೋ ಅವರನ್ನು ಎಲ್ಲಿ ಹೋಗುತ್ತಿಯಾ ಎಂದು ಕೇಳಿದಾಗ ಅವರು ಸಿಟಿಯಲ್ಲಿನ ಮುಖ್ಯ ರಸ್ತೆಯಲ್ಲಿರಬಹುದಾದ ಶಾಲೆಗೆ ಹಾಕಿಕೊಡಬೇಕೆಂದು ಕೇಳುತ್ತಿದ್ದರು. Merit ಇದ್ದಂಥವರು ಪಟ್ಟಣದ ಮಕ್ಕಳಿಗೆ ಕಲಿಸಬೇಕು. Merit ಇಲ್ಲದೇ ಇರುವವರು ಹಳ್ಳಿ ಮಕ್ಕಳಿಗೆ ಕಲಿಸಬೇಕು ಎಂದಿತ್ತು. First appointment, the gold medalist should serve in C-zone only ಇದೆಲ್ಲಾ ಆಗಿ ಒಂದು ವರ್ಷ ಎರಡು ವರ್ಷ ಹಳ್ಳಿಗಳಲ್ಲಿ ಜಾಗವೇ ಸಿಗಲಿಲ್ಲ. ಗುಲ್ಬರ್ಗಾದಿಂದ ಹಿಡಿದು ಎಲ್ಲೂ ಸಿಗಲಿಲ್ಲ. ಮುಂದೆ ಏನಾಯಿತು ಎಂದರೆ ನಿವೃತ್ತಿಯಾದ ಹಾಗೆ ನೇಮಕಾತಿ ಆಗಲಿಲ್ಲ. 2007 ರಿಂದ ಇಲ್ಲಿಯವರೆಗೆ ಒಬ್ಬ ಶಿಕ್ಷಕರ ಹುದ್ದೆ ನೇಮಕಾತಿಯಾಗಿಲ್ಲ. ನಾವು ಇದ್ದಾಗ 31–05–2010 ರವರೆಗೆ ನಿವೃತ್ತಿಯಾಗಿ ಖಾಲಿ ಇದ್ದಂತಹ ಹುದ್ದೆಗಳಿಗೆ ಆರ್ಥಿಕ ಇಲಾಖೆಯಿಂದ ನಾವು ಅನುಮತಿ ತೆಗೆದುಕೊಂಡು 48,313 ಜನ ಶಿಕ್ಷಕರನ್ನು ನೇಮಕಾತಿ ಮಾಡಿದ್ದೇವು. ಪ್ರೈಮರಿ, ಸೆಕೆಂಡರಿ ಸೇರಿ 29,000 ಹುದ್ದೆಗಳು ಖಾಲಿ ಇವೆ. 29,000 ಹುದ್ದೆಗಳು ನೇಮಕಾತಿ ಆಯಿತು ಎಂದರೆ 29,000 ನೇಮಕಾತಿಯಾದವರೆಲ್ಲಾ ಸಿ ವಲಯಕ್ಕೆ ಹೋಗುತ್ತಾರೆ. ಸಿ ಗೆ ಹೋದರೆ ಅಲ್ಲಿದ್ದಂಥವರು ಬಿ ವಲಯಕ್ಕೆ ಬರುತ್ತಾರೆ, ಬಿ ವಲಯದವರು ಎ ವಲಯಕ್ಕೆ ಬರುತ್ತಾರೆ, ಪತಿ–ಪತ್ನಿಯರೆಲ್ಲಾ ಸೇರುತ್ತಾರೆ. ನೇಮಕಾತಿಯಾದ ಮೇಲೆ ವರ್ಗಾವಣೆ ದೊಡ್ಡ ಸುದ್ದಿಯಾಗಿ ದಿನಾ ಜನರು ಪತ್ರಿಕೆಯಲ್ಲಿ ಓದುತ್ತಲೇ ಇರುತ್ತಾರೆ. ಇವತ್ತು 29,000 ಜನರು ನೇಮಕಾತಿಯಾದರೆ ನನ್ನ ಲೆಕ್ಕದ ಪ್ರಕಾರ 2012ಕ್ಕೆ ಅವರೆಲ್ಲಾ ಎಲ್ಲೆಲ್ಲಿ ಕೇಳುತ್ತಾರೆ ಅಲ್ಲಿಗೆ 90 ಪರ್ಸೆಂಟ್ ಆಗಬೇಕಾಗಿತ್ತು ಅದು ಆಗಲಿಲ್ಲ. 29,000 ನೇಮಕಾತಿ ಮಾಡಿದರೆ ಅವೆಲ್ಲರೂ ಬರುತ್ತಾರೆ. ಅದಕ್ಕೆ ಸರ್ಕಾರ ತಕ್ಷನ ನೇಮಕಾತಿ ಮಾಡಿದರೆ ವರ್ಗಾವನೆಯ ಗೊಂದಲ ಪೂರ್ಣವಾಗಿ ಹೋಗುತ್ತದೆ ಎನ್ನುವ ಮಾನ್ಯ ರಾಮಚಂದ್ರಗೌಡರು ಹೇಳಿದರು, ಮಕ್ಕಳನ್ನು ಕೇಳಿದರೆ

ಇವರು ಬೇಡ, ಇವರು ಬೇಕು ಎಂದು ಹೇಳುತ್ತಾರೆ. ಹಳ್ಳಿಯಲ್ಲಿ ಲೈಂಗಿಕ ಕಿರುಕುಳದ ವಿಚಾರ ಬಂದಾಗ ಸ್ಥಳೀಯರು ರಾಜಕೀಯದವರನ್ನು ಹಿಡಿದುಕೊಂಡು ಎಲ್ಲಾ ಶಿಕ್ಷಕರ ಮೇಲೆ ಕೇಸ್ ಹಾಕಿಬಿಟ್ಟರು. ನೇಮಕಾತಿಯಾದ ನಂತರ ಖಂಡಿತವಾಗಿಯೂ ಗೊಂದಲ ಆಗುವುದಿಲ್ಲ. ಅವರು ಹೇಳಿರುವುದು ನಿಜ, ಹಳ್ಳಿಗಳಲ್ಲಿ ಶಿಕ್ಷಕರ 36–38 ಕಿ.ಮೀ ಕೋಟಿ ರೂಪಾಯಿಗಳಲ್ಲಿ ಗುರುಸದನ ಎಂದು ಮಾಡಿದರು. ಗುರುಸದನ ಎಂದರೆ ಪಂಚಾಯಿತಿ ಮಟ್ಟದಲ್ಲಿ 5–6 ಮನೆಗಳನ್ನು ಕಟ್ಟಬೇಕು. 7ನೆ ತರಗತಿಯವರೆಗೆ ಇದ್ದಂತಹ ಶಾಲೆಗಳಲ್ಲಿ 6 ಮನೆಗಳನ್ನು ಕಟ್ಟಬೇಕು, ಅದಕ್ಕಿಂತ ಕಡಿಮೆ ಇದ್ದರೆ 4–5 ಮನೆಗಳನ್ನು ಕಟ್ಟಬೇಕು ಮತ್ತು ರಾಜೀವ್ ಗಾಂಧಿ ಹೌಸಿಂಗ್ ಸೊಸೈಟಿಯಲ್ಲಿ ಜಾಗ ತೆಗೆದುಕೊಂಡು ಮಾಡಬೇಕೆಂದು 29 ಕೋಟಿ ರೂಪಾಯಿ ಹಣವನ್ನು ಅವತ್ತು ಆರ್ಥಿಕ ಇಲಾಖೆಯವರು ಬಿಡುಗಡೆ ಮಾಡಿದರು. ಕೆಲವು ಕಡೆ ಆಗಿದೆ, ಕೆಲವು ಕಡೆ ಆಗಿಲ್ಲ. ಅದು ಎಷ್ಟು ಹೊತ್ತಿಗೆ ಆಗಬೇಕಾಗಿತ್ತು. ಎಂಟು ವರ್ಷಗಳಿಂದ ಇವತ್ತಿನವರೆಗೂ ಆಗಿಲ್ಲ. ಇದಾದರೆ ಖಂಡಿತವಾಗಿಯೂ ಸರಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವಂಥವರಿಗೂ ಅದರ ಅನುಕೂಲ ಕಲ್ಪಿಸಿದ್ದೀರಿ. ಅದಕ್ಕೆ ನಾನು ಮಾನ್ಯ ಸಚಿವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಆದಷ್ಟು ಬೇಗನೆ ನೇಮಕಾತಿಯಾದರೆ ವರ್ಗಾವಣೆಗೆ ಒಂದು ಕೊನೆ ಬೀಳುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ನಮ್ಮ ಜೊತೆ ಮಾತುಕತೆ ಮಾಡಿದಾಗ ಸನ್ಮಾನ್ಯ ಸಚಿವರು ಯಾವ್ಯಾವ ವಿಷಯಗಳನ್ನು ಒಪ್ಪಿಕೊಂಡಿದ್ದರು ಅವೆಲ್ಲವನ್ನು ತರುವಂತಹ ಪ್ರಯತ್ನ ಮಾಡಿದ್ದಾರೆ. ಇದರಲ್ಲಿ ಒಂದು ವಿಚಾರ ಬಿಟ್ಟು ಹೋಗಿದೆ. ಅದೇನೆಂದರೆ, ನಮ್ಮ ಪ್ರೈಮರಿ ಶಾಲೆಯಿಂದ ಹೈಸ್ಕೂಲ್‌ಗೆ ಯಾರು ಬಡ್ತಿಯನ್ನು ಹೊಂದಿ ಶಿಕ್ಷಕರು ಬಂದಿರುತ್ತಾರೆ ಅವರು ಹೈಸ್ಕೂಲ್ ಗೆ ನಾಎಮಾತಿ ಲೆಕ್ಕದಲ್ಲಿ ಆಗುತ್ತದೆ. ಅವರಿಗೆ ಮೊದಲ ನೇಮಕಾತಿ ಆಗುತ್ತದೆ. ಆದರೆ ಅವರು ಆಗಲೇ ಸಿ ವಲಯದಲ್ಲಿ ಅನೇಕ ವರ್ಷಗಳ ಕಾಲ ಕೆಲಸ ಮಾಡಿಕೊಂಡು ಬಂದಿರುವವರಿರುತ್ತಾರೆ. ನಾವು ಅವರನ್ನು ಮತ್ತೆ ಸಿ ವಲಯಕ್ಕೆ ಅವಕಾಶ ಮಾಡಿಕೊಡಬೇಕೆನ್ನುವ ಚರ್ಚೆಯಾಗಿತ್ತು. ಪ್ರಾಥಮಿಕ ಶಾಲೆಯಿಂದ ಬಡ್ತಿಯನ್ನು ಹೊಂದಿ ಹೈಸ್ಕೂಲ್ ಗೆ ಬಂದಿರುವಂತಹ ಶಿಕ್ಷಕರಿಗೆ ಅದೊಂದು ತಿದ್ದುಪಡಿಯನ್ನು ಮಾನ್ಯ ಸಚಿವರು ತರಬೇಕಾಗಿತ್ತು ಎಂದು ನಾನು ಈ ಸಮಯದಲ್ಲಿ ಮಾನ್ಯ ಸಚಿವರಿಗೆ ಜ್ಞಾಪಕ ಮಾಡುತ್ತಿದ್ದೇನೆ. ತಿದ್ದುಪಡಿ ಮಾಡುವುದನ್ನು ಬಿಟ್ಟು ನಿಯಮಾವಳಿಯಲ್ಲಾದರು ಮಾಡುವುದಕ್ಕೆ ಸಾಧ್ಯಾವಾಗುವುದಾದರೆ ಈ ವರ್ಷದಲ್ಲೇ ಅವರಿಗೆ ಅನುಕೂಲವಾಗುತ್ತದೆ. ಅದನ್ನು ದಯಮಾಡಿ ಮಾನ್ಯ ಸಚಿವರು ಮಾಡಿಕೊಡಬೇಕು. ಅವರು ಬಹಳ ವರ್ಷಗಳ ಕಾಲ ಹಳ್ಳಿಯಲ್ಲಿ ಕೆಲಸಮಾಡಿರುತ್ತಾರೆ. ಅವರಿಗೆ ಎ ವಲಯಕ್ಕೆ, ಬಿ ವಲಯಕ್ಕೆ ಬರುವುದಕ್ಕೆ ಅನುಕೂಲವಾಗುತ್ತದೆ ಎಂದು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ಈ ವಿಧೇಯಕವನ್ನು ಸ್ವಾಗತ ಮಾಡುತ್ತಾ ಎರಡು–ಮೂರು ಸಣ್ಣಪುಟ್ಟ ಬೇಟಿಕೆಗಳನ್ನು ಅವರು ಉಲ್ಲೇಖ ಮಾಡಿದರು. ಆದರೆ ಮುಂದೆ ತೆಗೆದುಕೊಂಡು ಹೋಗಿಲ್ಲ ಎಂದು ನಾನು ತಿಳಿದುಕೊಳ್ಳುತ್ತೇನೆ. ವರ್ಗಾವಣೆ ಮಾಡಬೇಕಾದರೆ ಪ್ರಮೋಟರ್ಸ್‌ಗೆ ಕೇಡರ್ ಬದಲಾವಣೆಯಾಗುತ್ತದೆ. ಅವರ ಹಿಂದಿನ ಸರ್ವಿಸ್‌ನ್ನು consider ಮಾಡುವುದಿಲ್ಲ. ಅವರು ಕೇಡರ್ ಬದಲಾವಣೆಯಾಗಿದೆ ಎನ್ನುವ ಕಾರಣಕ್ಕಾಗಿ ಮತ್ತೆ ಹೊಸದಾಗಿ ಪ್ರಾರಂಭ ಮಾಡಬೇಕು. ಮಾನ್ಯ ಸಚಿವರು ಚರ್ಚೆ ಮಾಡುವಾಗ ಇದನ್ನು ಒಪ್ಪಿಕೊಂಡಿದ್ದರು. ಈ ಸಲ ಏಕೊ implement ಆಗಿಲ್ಲ. ಅದನ್ನು ದಯವಿಟ್ಟು ಪರಿಗಣಿಸಿಬೇಕು. ಎರಡನೆಯದು ವಿದವೇಯರಿಗೆ ಅವಕಾಶ ಕೊಟ್ಟಿದ್ದಾರೆ. ಕೆಲವರು ವಿಧುರರು ಇದ್ದಾರೆ. ಅವರು ಪಾಪ ಮಕ್ಕಳನ್ನು ನೋಡಿಕೊಳ್ಳಬೇಕು. ಹಾಗಾಗಿ ತಾರತಮ್ಯ ಮಾಡಬೇಡಿ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅವರಿಗೂ ಅದೇ ಸಮಸ್ಯೆಗಳಿವೆ. ಮಕ್ಕಳನ್ನು ನೋಡಿಕೊಳ್ಳಬೇಕು, ದೂರ ಎಲ್ಲೋ ಹಾಕಿಬಿಡುತ್ತಾರೆ, ಅವರಿಗೂ ಒಂದು ವಿಶೇಷವಾದ ಅವಕಾಶ ಕೊಡಬೇಕು. ಆದೇಶದಲ್ಲಿ ವಿಧವೆ ಅಥವಾ ವಿಧುರ ಎಂದು ಸೇರಿಸಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅಂಗವಿಕಲರಿಗೆ ವಿಶೇಷವಾಗಿ ಬೇರೆ ಅವಕಾಶ ಇದೆ. ಅಂಗವಿಕಲರಿಗೆ ಆರೋಗ್ಯ, ವಿಶೇಷ ಆರೋಗ್ಯ ಇವೆಲ್ಲಾ ಸಂಗತಿಗಳು ಬೇರೆಯೇ ಇದೆ. TGT (Trained Graduate Teacher) ಯವರಿಗೆ ಈ ನಿಯಮ ಅನ್ವಯ ಮಾಡುತ್ತಿಲ್ಲ. ಅವರು ಉಲ್ಲೇಖ ಮಾಡಿದರು. TGT

ಯವರು ಸಮಸ್ಯೆ ಅನುಭವಿಸುತ್ತಿದ್ದಾರೆ. ಅವರು ಹೆಚ್ಚುವರಿಯಾದರೆ ಮಾತ್ರ ಎಲ್ಲೋ ಒಂದು ಕಡೆ ಹಾಕುವುದನ್ನು ಬಿಟ್ಟರೆ ಅವರಿಗೆ ಏನು ಅವಕಾಶ ಆಗುತ್ತಿಲ್ಲ. ಅವರಿಗೆ ಸಮಸ್ಯೆಗಳಿವೆ. TGT ಯವರ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಅನುಕೂಲ ಮಾಡಿಕೊಡಬೇಕು.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, Three-Tier system ಆಯಿತು ಎಂದರೆ ಈ TGT ಎಲ್ಲಾ ಸಾಲುವಾಗುತ್ತದೆ. ಈಗಾಗಲೇ 2009 ರಲ್ಲಿ ಮಾಧ್ಯಮಿಕ ಶಿಕ್ಷಣ ಅಭಿಯಾನವನ್ನು ಒಪ್ಪಿಕೊಂಡು ಬಂದಿದ್ದಾರೆ. ಅದನ್ನು ಇನ್ನು ಮಾಡಿಲ್ಲ. 5ನೇ ತರಗತಿಯವರೆಗೆ ಲೋಯರ್ ಪ್ರೈಮರಿ, 6,7,8, ರವರೆಗೆ ಹೈಯರ್ ಪ್ರೈಮತಿ, 9,10,11 ರವರೆಗೆ ಹೈಯರ್ ಸೆಕೆಂಡರಿ. Three-Tier system ಬಂದರೆ ಈ ಸಮಸ್ಯೆಗಳು ಬರುವುದಿಲ್ಲ. ಅದನ್ನು ಸರ್ಕಾರ ಮಾಡಬೇಕು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ಅವರು ಉಲ್ಲೇಖ ಮಾಡಿದರು. ಆದರೆ Three-Tier system ಬಗ್ಗೆ ಇನ್ನು ಸ್ಪಷ್ಟವಾಗಿಲ್ಲ. ಅದೇನು ಎಂದು ಗೊತ್ತಿಲ್ಲ. ತೆಗೆದುಕೊಂಡು ಬಂದು ಇನ್ನೊಂದು ಗುಂಪನ್ನು ಸೃಷ್ಟಿ ಮಾಡಿ ಗೊಂದಲದಲ್ಲಿದ್ದಾರೆ. ಹಾಗಾಗಿ ದಯವಿಟ್ಟು ಅವರಿಗೂ ಒಂದು ಅವಕಾಶ ಕೊಡಬೇಕೆನ್ನುವುದು ನನ್ನ ಕೊನೆಯ ಸಲಹೆ. ಇದನ್ನು ಬಹಳ ಸಲ ಚರ್ಚೆ ಮಾಡಿದ್ದೇವೆ. ಈಗ ಅವರು ಬದಲಾವಣೆ ತೆಗೆದುಕೊಂಡು ಬಂದರೂ ಕೂಡ ಯಾರಿಗೆಲ್ಲಾ ಬೇಡಿಕೆ ಇದೆ. ಅವರಿಗೆಲ್ಲಾ 100 ಪರ್ಸೆಂಟ್ ಕೊಡುವುದಕ್ಕೆ ಖಂಡಿತ ಸಾಧ್ಯವಿಲ್ಲ. ಆದರೆ ಒಂದು ಸಲ ನೇಮಕಾತಿ ಪ್ರಕ್ರಿಯೆಯನ್ನು ಪೂರೈಸಿದರೆ ಈ ಹಲವು ವರ್ಷಗಳ ಬೇಡಿತ ಏನಿದೆ ಒಂದು ಸಲ ಸೆಟಲ್ ಮಾಡಿದರೆ ನಮ್ಮ ಶಿಕ್ಷಕರು ಸ್ವಲ್ಪ ತೃಪ್ತಿಯಲ್ಲಿರುತ್ತಾರೆ. ಅದನ್ನು ಮಾಡುವುದಕ್ಕೆ ಸಾಧ್ಯವಿದೆ. ಸ್ವಲ್ಪ ದೊಡ್ಡ ಮನಸ್ಸು ಮಾಡಿ ಒಂದು ಸಲ ಟ್ರಾನ್ಸ್‌ಫರ್ ಅದಾಲತ್ ಮಾಡಿದರೆ ಯಾರು ಅಂಗವಿಕಲರು, ವಿಧವೆಯರು, ವಿಧುರರು, ಗಂಡ–ಹೆಂಡತಿ ಪ್ರಕರಣ ಇದೆ ಈ ಎಲ್ಲಾ ಸಂಗತಿಗಳನ್ನು ಪರಿಗಣಿಸಿಕೊಂಡು ಮಾಡುವುದಕ್ಕೆ ಸಾಧ್ಯಾವಾದರೆ ಮತ್ತೆ ಮುಂದೆ ಈ ನೇಮಕಾತಿ ಪ್ರಕ್ರಿಯೆಗಳು ಮುಗಿದ ತಕ್ಷಣ ಈ ಸಮಸ್ಯೆಗಳು ಬರುವುದಿಲ್ಲ. ಮಾನ್ಯ ಸಚಿವರು ಸರ್ಕಾರಿ ನೌಕರರಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಈಗ ಅನುದಾನಿತದವರಿಗೆ ಮಾಡಿಕೊಟ್ಟಿದ್ದಾರೆ. ಯಾರು ನಲ್ಲಿ ಕೆಲಸ ಮಾಡುತ್ತಿದ್ದಾರೆ, ಬೇರೆ ಕಡೆಗಳೆಲ್ಲಾ ಅವಕಾಶ ಇದೆ. ಅದೇನಾದರೂ ಮಡುವುದಕ್ಕೆ ಸಾಧ್ಯವಿದೆಯೇ? ಏಕೆಂದರೆ, ಗಂಡ ಹೆಂಡತಿ ದೂರ ಇದ್ದುಕೊಂಡು ಅವರ ಮನಸ್ಸಿಗೆ ಸಮಾಧಾನ ಮಾಡಿಕೊಂಡು ನಿತ್ಯ ನಿರಂತರ ನಾವು ಒಟ್ಟಾಗಬೇಕೆಂದು ಇರಬೇಕಾದರೆ, ನಾವು ಅಂಥವರಿಗೆ ಅವಕಾಶ ಮಾಡಿಕೊಡದಿದ್ದರೆ ನಿರಂತರವಾಗಿ ಅಸಮಾಧಾನದಲ್ಲಿರುತ್ತಾರೆ. ಹಾಗಾಗಿ ಇದನ್ನು ಪರಿಗಣಿಸುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ಹೇಳಿ ಈ ವಿಧೇಯಕವನ್ನು ಸ್ವಾಗತಿಸಿ ಈ ವರ್ಷವೇ ಈ ಎಲ್ಲಾ ಸಂಗತಿಗಳನ್ನು ಇಂಪ್ಲಿಮೆಂಟ್ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಪ್ರೊ:ಪಿ.ವಿ.ಕೃಷ್ಣಭಟ್ಟ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ನನಗಿಂತ ಪೂರ್ವದಲ್ಲಿ ಮಾತನಾಡಿರುವಂಥವರು ಅನೇಕ ಸಂಗತಿಗಳನ್ನು ಹೇಳಿದ್ದಾರೆ. ಅದನ್ನು ಪುರುಚ್ಚರಿಸುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ಮೊಟ್ಟ2 ಮೊದಲನೆಯ ಸಮಸ್ಯೆ ಎಂದರೆ ವರ್ಗಾವಣೆಗೆ ಬಾಧಕವಾಗಿರುವಂಥದ್ದು ದೊಡ್ಡಸಂಖ್ಯೆಯಲ್ಲಿ ಉದ್ದೆಗಳು ಖಾಲಿ ಇರುವುದು. ಇದನ್ನು ಭರ್ತಿ ಮಾಡುವ ನಿಟ್ಟಿನಲ್ಲಿ ಸಚಿವರ ತ್ರೀವ್ರ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ಬಯಸುತ್ತೇನೆ. ಈ ಹುದ್ದೆಗಳನ್ನು ಭರ್ತಿ ಮಾಡಿದ್ದರೆ ವರ್ಗಾವಣೆಯ ಸಮಸೆ ಕೂಡ ಬಹಳ ಮಟ್ಟಿಗೆ ಬಗೆಹರಿಯುತ್ತದೆ. ಆ ನಿಟ್ಟಿನಲ್ಲಿ ಪ್ರಯತ್ನ ಶೀಘ್ರವಾಗಿ ಕೈಗೊಳ್ಳಬೇಕು. ಎರಡನೆಯದು, ಆತನ ಸೇವೆಯಲ್ಲಿ, ಈ ವಿಧೇಯಕದಲ್ಲಿ ಎಲ್ಲಾ ಕಡೆ 'ಆತನ' ಎಂದು ಮಾತ್ರ ಇದೆ. ಆತನ ಮತ್ತು ಆತಳ ಅಥವಾ ಆಕೆಯ ಇದ್ದರೆ ಒಳ್ಳೆಯದು. ಸೇವೆಯಲ್ಲಿ ಒಂದು ಬಾರಿಗಿಂತ ಹೆಚ್ಚು ಇಲ್ಲದಂತೆ ಎಂದು ಹೇಳಿದ್ದಾರೆ. ಇಡೀ ಸೇವಾವಧಿಯಲ್ಲಿ ಮುಖ್ಯವಾಗಿ ಎರಡು ಘಟ್ಟಗಳಲ್ಲಿ ಈ ರೀತಿಯ ಅವಶ್ಯಕತೆಗಳು ಹೆಚ್ಚಾಗಿ ಬರುತ್ತವೆ. ಪ್ರಾರಂಭದ ಹಂತದಲ್ಲಿ ವಿಶೇಷವಾಗಿ ಮದುವೆಯಾದಾಗ, ಗಂಡ ಎಲ್ಲಿಯೋ ಇರುತ್ತಾನೆ, ಹೆಂಡತಿ ಎಲ್ಲೋ ಇರುತ್ತಾಳೆ. ಮದುವೆಯಾದ ಸಂದರ್ಭದಲ್ಲಿ ಅವರಿಗೆ ಸಂಸ್ಕಾರಿಕ ಕಾರಣಗಳಿಗೋಸ್ಕರವಾಗಿ ಒಟ್ಟಿಗೆ ಇರಬೇಕಾಗಿರುಂಥದ್ದು ಇರುತ್ತದೆ. ಎರಡನೆಯದು, ಸ್ವಲ್ಪ ವೃದ್ಧಾಪ್ಯದಲ್ಲಿ. ಹಾಗಾಗಿ ಒಂದು ಬಾರಿಗಿಂತ ಎಂದು ಹೇಳಿರುವುದನ್ನು ವಿಸ್ತರಿಸಿ

ಮಿತಿಯನ್ನು ಹಾಕಬಹುದು. ಸರ್ವಿಸ್ ನ ಕೊನೆಯ 10 ವರ್ಷದ ಅವಧಿಯಲ್ಲಿ ಎಂದು ಯಾವುದಾದರು ಷರತ್ತನ್ನು ಹಾಕಬಹುದು. ಆ ರೀತಿ ಮಾಡಿ ಅದನ್ನು ವಿಸ್ತರಿಸತಕ್ಕಂಥದ್ದು ಸೂಕ್ತವಾಗುತ್ತದೆಂದು ನಾನು ಭಾವಿಸುತ್ತೇನೆ. ಅನುದಾನಿತ ಶಾಲಯ ಅಧ್ಯಾಪಕರನ್ನು ಕುರಿತು ಈಗಾಗಲೇ ಹೇಳಿದ್ದಾರೆ. ನಾನು ಅದನ್ನು ಪುನರುಚ್ಚರಿಸುತ್ತೇನೆ. ಈ ಉಳಿದ ಸಂಗತಿಗಳ ಜೊತೆಗೆ ನಾನು ಧ್ವನಿಗೂಡಿಸುತ್ತಾ ಈ ಎರಡು ಸಂಗತಿಗಳನ್ನು ಇದರಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ವಿಧೇಯಕದ (5) ರಲ್ಲಿ ಶಿಕ್ಷಕನನ್ನು, ಆತನ ಕೋರಿಕೆಯ ಮೇರೆಗೆ, ಕೌನ್ಸಲಿಂಗ್ ಪ್ರಕ್ರಿಯೆಯ ಮೂಲಕ, ಜ್ಯೇಷ್ಠತೆ ಘಟಕದ ಹೊರಗೆ ಆತನ ಸಂಗಾತಿಯ, ಇಲ್ಲಿ ಆತನ ಅಥವಾ ಆಕೆಯ ಎಂದು ಆಗಬೇಕು ಅಥವಾ ಪತಿ–ಪತ್ನಿ ಎಂದು ಆಗಬೇಕು. ವಿಧೇಯಕದಲ್ಲಿ 'ಆತನ' ಎಂದು ಇದೆ. ಆತನ ಎಂದರೆ ನಾಳೆ ಅಧಿಕಾರಿಗಳು ಏನು ಮಾಡುತ್ತಾರೆಂದರೆ 'ಆತನ' ಎಂದು ಇದೆ. ಆತನ ಎಂದರೆ ಪರಿಗಣಿಸುತ್ತಾರೆ. ಆದ್ದರಿಂದ, ಆತನ/ಆಕೆಯ ಎಂದು ಮಾಡಿಕೊಳ್ಳಬೇಕು. ಆತನ ಎನ್ನುವ ಬದಲಿಗೆ ಪತಿ–ಪತ್ನಿಯರು, ಗಂಡ–ಹೆಂಡತಿಯರು ಎಂದು ಸೇರಿಸಬೇಕು. ಆತನ ಎಂದರೆ, ನಮ್ಮಲ್ಲಿ ಕೆಲವು ಅಧಿಕಾರಿಗಳು ಏನು ಮಾಡುತ್ತಾರೆಂದರೆ....

**ಸಭಾಪತಿಯವರು:–** ನಮ್ಮ ಅದಿಕಾರಿಗಳು ಯಾವ ರೀತಿಯಲ್ಲಿ ಆಟ ಆಡುತ್ತಾರೆಂದು ಎಲ್ಲರಿಗೂ ಗೊತ್ತಿರುವ ವಿಚಾರ. ಆತನ, ಆಕೆಯ ಎಂದು ಎರಡನ್ನು ಸೇರಿಸಿಬಿಡಿ.

**ಶ್ರೀ ಬಸವರಾಜ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಲ್ಲಿ ನನ್ನ ಪ್ರಶ್ನೆ ಏನೆಂದರೆ ತಾವು ಈಗ ವರ್ಗಾವಣೆ ಪಾಲಿಸಿಯಲ್ಲಿ ಕೌನ್ಸಿಲಿಂಗ್ ಏನು ಮಾಡುತ್ತಿದ್ದೀರಿ ಕೌನ್ಸಿಲಿಂಗ್‌ನಲ್ಲಿ ಯಾರು ಎಲ್ಲಿ ಬೇಕಾದರೂ, ಯಾವ ಸ್ಥಳ ಬೇಕಾದರೂ, ಅಲ್ಲಿಗೆ ಹೋಗಲಿಕ್ಕೆ ಸಾಧ್ಯ ವಿನಹಃ ಯಾರಿಗೂ ಹೋಗಲಿಕ್ಕೆ ಸಾಧ್ಯವಿಲ್ಲದ ಸ್ಥಳಗಳಿಗೆ ಯಾವ ಟೀಚರ್ ಕಳುಹಿಸುತ್ತೀರಿ ಎನ್ನುವುದು ನನ್ನ ಪ್ರಶ್ನೆಯಾಗಿದೆ ಸಾಧ್ಯವಿಲ್ಲದ ಸ್ಥಳಗಳಿಗೆ ಯಾವ ಟೀಚರ್ ಕೃಷ್ಣಭಟ್ ರವರು ಹೇಳಿದ ಹಾಗೆ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು ಪ್ರತ್ರೇಕ ವಿಚಾರ. ಅದು ತಮಗೆ ಅರ್ಥವಾಗಿರಬೇಕು. ಬಹಳ ಕಾಲ ಹುದ್ದೆಗಳು ಏನು ಖಾಲಿ ಇರುತ್ತವೆ, ಅವುಗಳನ್ನು ಭರ್ತಿ ಮಾಡಬೇಕಾದರೆ ಯಾವಾಗ ಸಮಯ ಬರುತ್ತದೋ, ಯಾವಾಗ ಮಾಡುತ್ತೀರೋ ಎನ್ನವುದು ಗೊತ್ತಿಲ್ಲ. ಆದರೆ, remote places ಕಡೆ ಯಾರು ಹೋಗುವುದಿಲ್ಲ. ಎಂದಾಗ ಅಲ್ಲಿಗೆ ಯಾರನ್ನು ಕಳುಹಿಸುತ್ತೀರಿ ಎನ್ನುವ ಪ್ರಶ್ನೆ ಬರುತ್ತದೆ. ಹಾಗಾಗಿ, ನೀವು ಎನೇ options ತೆಗೆದುಕೊಂಡರೂ ಸಹ ನಿಮ್ಮ options ಇರಬೇಕು. ಕೆಲವು ಟೀಚರ್ಸ್‌ಗಳು ಒಂದೇ ಕಡೆ, ಸಿಟಿ ಜಾಗದಲ್ಲಿಯೇ ಇರುತ್ತಾರೆ. ಹೋಬಳಿ ಕೇಂದ್ರ ಸ್ಥಳದಲ್ಲಯೇ ಇರುತ್ತಾರೆ. ಗ್ರಾಮ ಪಂಚಾಯಿತಿ ಕೇಂದ್ರ ಸ್ಥಳದಲ್ಲಿಯೇ ಯಾರು ಇರುತ್ತಾರೆ, ಅವರನ್ನು remote places ಕಳುಹಿಸುವಂತಹ ಕೆಲಸ ನಿಮ್ಮಂದ ಕೂಡ ಆಗಬೇಕಾಗಿದೆ. ಅದಕ್ಕೆ ಅವರು oblige ಮಾಡಬೇಕಾಗುತ್ತದೆ. ಯಾವಾಗಲೂ ಸಹ ಅವರು ಸೂಕ್ತವಾದ ಸ್ಥಳದಲ್ಲಿಯೇ ಇರಬೇಕು. ಅನುಕೂಲವಾದ ಜಾಗದಲ್ಲಿಯೇ ಇರಬೇಕೆಂದು ಹೇಳಿ, ಈ ಕೌನ್ಸಿಲಿಂಗ್‌ನಲ್ಲಿ ನನಗೆ ಗೊತ್ತಿರುವಂತೆ options ಕೇಳುತ್ತಾರೆ. ಎರಡನೇ options ಎಂದರೆ ಗಂಡ–ಹೆಂಡತಿ ಎಂದು ಕೇಳುತ್ತಾರೆ. ಮೂರನೇ options ಎಂದರೆ ಮನೆಯಲ್ಲಿ ತುಂಬಾ ವಯಸ್ಸಾದ ಜನರು ಇರುತ್ತಾರೆ, ಅನಾರೋಗ್ಯದಿಂದ ನರಳುತ್ತಿದ್ದಾರೆ. ಅವರಿಗೆ ನೆರವು ಕೊಡಬೇಕೆಂದು ಹೆಳಿ options ಕೇಳುತ್ತಾರೆ. ಹಿಂದಿನ ಕಾಯಿದೆಯಲ್ಲಿಯೇ ಹೇಳಿರುವಂತೆ ಅದಕ್ಕೆ ವೈದ್ಯರುಗಳಿಂದ ಅನಾರೋಗ್ಯದಿಂದ ಬಳಲುತ್ತಿರುವ ಬಗ್ಗೆ ಪ್ರಮಾಣಪತ್ರ ಬೇಕು, ಅವರಿಗೆ ಏನು ಕಾಯಿಲೆ ಬಂದಿದೆ, ಅವರು ಆ ಸ್ಥಳದಲ್ಲಿ ಟ್ರೀಟ್ ಮೆಂಟ್ ತೆಗೆದುಕೊಳ್ಳಲಿಕ್ಕೆ ಸಾಧ್ಯ ಇದೆಯೋ ಇಲ್ಲವೋ ಅದನ್ನೆಲ್ಲಾ ನೀವು ಷರತ್ತುಗಳನ್ನು ಹಾಕಿದರೆ, ಅವರು ಚಾಪೆ ಕೆಳಗಡೆ ತೂರಲಿಕ್ಕೆ ಹೋದರೆ, ನೀವು ರಂಗೋಲಿ ಕೆಳಗಡೆ ತೂರಲಿಕ್ಕೆ ನಿಮಗೆ ಗೊತ್ತಿದೆ. ಹಿಂದಿನ ಬಾರಿ ಮೆಡಿಕಲ್ ಸಟಿಫಿಕೇಟ್‌ಗಳನ್ನು ಎಲ್ಲೆಲ್ಲಿ ತೆಗೆದುಕೊಂಡು ಬಂದರೆಂದು ತಮನೆ ಗೊತ್ತಿದೆ. ಯಾದಗಿರಿ ತಾಲ್ಲೂಕಿನಲ್ಲಿ ತುಂಬಾ ಜನರು ಮೆಡಿಕಲ್ ಸರ್ಟಿಫಿಕೇಟ್ ತೆಗೆದುಕೊಂಡು ಅನುಕೂಲತೆ ಪಡೆಯಲಿಕ್ಕೆ ಪ್ರಯತ್ನ ಮಾಡಿದರು ಅದಕ್ಕಿಂತ ಹೆಚ್ಚಾಗಿ ಯಾವುದೇ ಟೀಚರ್ಸ್‌ಗೆ ಹೆತ್ತವರ ಆರೋಗ್ಯವನ್ನು ಕಾಪಾಡಬೇಕು, ಅವರ ಸೇವೆಯನ್ನು ಮಾಡಬೇಕೆನ್ನುವ ನಿಜ ಸಂಗತಿ ಇದ್ದು.

ಆ ವಿಷಯ ಗೊತ್ತಾದರೆ, ಅವರಿಗೆ ಅವರು ಬಯಸುವ ಸ್ಥಳಗಳಿಗೆ ವರ್ಗಾವಣೆ ಮಾಡುವುದು ತುಂಬಾ ಒಳ್ಳೆಯದು. ಎರಡನೆಯದಾಗಿ bed-ridden parents ಯಾರು ಇರುತ್ತಾರೆ, ಅಂತಹವರಿಗಂತೂ ಅವರು ಮಗಳಾಗಿರಲಿ, ಮಗ ಆಗಿರಲಿ, ಟೀಚರ್ಸ್ ಆದವರೂ ಅವರು ಅವರ ಊರಿಗೆ ಬಂದು ಹತ್ತಿರ ಜಾಗಕ್ಕೆ ಹಾಕಿಕೊಟ್ಟರೆ, ಅವರ ಸೇವೆ ಮಾಡಲಿಕ್ಕೆ ಅನುಕೂಲವಾಗುತ್ತದೆ. ಅದನ್ನು ಪ್ರಾವಿಜನ್ ಮಾಡಿಕೊಳ್ಳಿ ಎನ್ನುವುದು ನನ್ನ ಒಂದು ಪ್ರಾರ್ಥನೆ. remote places ನೀವೇ options ಇಟ್ಟುಕೊಂಡು ಬಹಳ ವರ್ಷಗಳ ಕಾಲ ಸಿಟಿಯಲ್ಲಿ, ಹೋಬಳಿ ಕೇಂದ್ರ ಸ್ಥಾನದಲ್ಲಿ ಓಡಾಡುವಂತಹವರನ್ನು ತೆಗೆದು ಅಲ್ಲಿಗೆ ಹಾಗಬೇಕು. ಅವರನ್ನು ಹಾಕಿದರೆ ಅವರು ಹಳ್ಳಿಗಳಲ್ಲಿ ಕೆಲಸ ಮಾಡಬೆಕು.

**ಶ್ರೀ ಸಿ.ಹೆಚ್. ವಿಜಯಶಂಕರ:–** ಮಾನ್ಯ ಸಭಾಪತಿಯವರೆ, ಇಲ್ಲಿ ಆತನ ಮತ್ತು ಆಕೆಯ ಎಂದು ಹೇಳುವುದು ಸೂಕ್ತವಾಗುವುದಿಲ್ಲ. ಏಕೆಂದರೆ, ಶಿಕ್ಷಕರ ಮತ್ತು ಬೇರೆ ಯಾರದ್ದೇ ವಿಚಾರದಲ್ಲಿ ಏಕವಚನ ಪ್ರಯೋಗ ಇಲ್ಲಿ ಆಗುತ್ತದೆ. ನಾನು ತಮ್ಮ ಮೂಲಕ ಮಾನ್ಯ ಶಿಕ್ಷಣ ಸಚಿವರಲ್ಲಿ ಮನವಿ ಮಾಡುವುದೇನೆಂದರೆ ಸ್ವತಃ ಇವರು ಶಿಕ್ಷಕರು. ಈಗ ಪುರುಷ ಶಿಕ್ಷಕ, ಮಹಿಳಾ ಶಿಕ್ಷಕಿ ಎನ್ನುವ ಶಬ್ದಗಳನ್ನು ಬಳಕೆ ಮಾಡುವಂತಹದ್ದು ಸೂಕ್ತವೆಂದು ನಾನು ಭಾವಿಸುತ್ತೇನೆ.

**ಶ್ರೀ ಎಸ್. ಉಗ್ರಪ್ಪ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತಾ, Clause-1 & 2 of Section 6, ಇವುಗಳಿಗೆ ಕ್ಲಾಸ್–1 ತಿದ್ದುಪಡಿಯನ್ನು ತಂದಿದ್ದಾರೆ. Clause-1 ರಲ್ಲಿ ಮೊದಲು 3 ವರ್ಷಗಳು ಇತ್ತು. ಈಗ 5 ವರ್ಷಗಳನ್ನು ಮಾಡಿದ್ದಾರೆ. 3 ವರ್ಷಗಳು ಇದ್ದರೆ ಏನು ಸಮಸ್ಯೆ ಇದೇ? ನೋಡಿ, original Act ನಲ್ಲಿ "Where both the spouses are government servants and the teachers have served for at least 3 years." 3 ವರ್ಷಗಳ ಬದಲಿಗೆ ಇಲ್ಲಿ 5 ವರ್ಷಗಳನ್ನು ಮಾಡಿದ್ದಾರೆ. 3 ವರ್ಷಗಳು ಇದ್ದಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಆದಂತಹ ತೊಂದರೆಗಳೇನು? ನನು Statement of Objects and Reasons ನೋಡಿದೆ They have not assigned any sort of reasons. ಅದನ್ನು 3 ವರ್ಷಗಳಿಂದ 5 ವರ್ಷಗಳಿಗೆ ಬದಲಾವಣೆ ಮಾಡಬೇಕಾದರೆ there must bae some difficulties. ಅದ್ಯಾವುದು ಸಮಸ್ಯೆಗಳು ಎನ್ನುವುದು ಒಂದು ವಿಚಾರ. ಸಬ್‌ಕ್ಲಾಸ್–1 ರಲ್ಲಿ ಬಹುಶಃ ಪ್ರತ್ಯೇಕವಾಗಿ proviso ಮಾಡುವಂತಹದ್ದು ನನಗೇನೂ ಕಾಣುತ್ತಿರಲಿಲ್ಲ. "Where both the spouses are government servants or servants in aided institutions" ಎಂದು ಹೇಳಿದ್ದರೆ ಮುಗಿದು ಹೋಗುತ್ತಿತ್ತು. ಹೀಗಾಗಿ, ಇದಕ್ಕೆ ಕ್ಲಾಸ್–5 ಎಂದು ಹೇಳಿ ಮಾಡಿರುವಂತಹದ್ದು, ಏತಕ್ಕೆಂದು ನನಗೆ ಗೊತ್ತಾಗುತ್ತಿಲ್ಲ. ಇದು ಒಂದು ವಿಚಾರ.

ಎರಡನೆಯದಾಗಿ, ಕೌನ್ಸಿಲಿಂಗ್ ಎನ್ನುವುದು ಏನಿದೆ, ಎಲ್ಲೋ ಒಂದು ಕಡೆ ಕೌನ್ಸಿಲಿಂಗ್ ನಲ್ಲಿ ಕೆಲವು ಅಧಿಕಾರಿಗಳಿಗೆ ಮೇಯಲಿಕ್ಕೆ ಅವಕಾಶ ಮಾಡಿಕೊಟ್ಟಂತಾಗಿದೆ. ದಂಪತಿಗಳಿದ್ದಲ್ಲಿ ನಲ್ಲಿ ಬೇರೆ ಇಲಾಖೆಗಳಲ್ಲಿ ವರ್ಗಾವಣೆ ಇದ್ದು, ನನಗೆ ಗೊತ್ತಿರುವ ಹಾಗ ಅಲ್ಲೇನೂ ಕೌನ್ಸಿಲಿಂಗ್ ಪದ್ಧತಿ ಇರುವುದಿಲ್ಲ. ಎಲ್ಲಾ ಇಲಾಖೆಗಳಲ್ಲಿ ಇರುವುದಿಲ್ಲ. ಎಲ್ಲೋ ಒಂದು ಇಲಾಖೆಯಲ್ಲಿ ಇರಬಹುದು. ಅಲ್ಲೊಂದರಲ್ಲಿ, ಇಲ್ಲೊಂದರಲ್ಲಿ ಇರಬಹುದು. ನಾಲ್ಕಾರು ವರ್ಷಗಳಲ್ಲಿ ನಡೆದಿರುವ ಅನೇಕ ಘಟನಾವಳಿಗಳು ಹಿನ್ನೆಲೆಯಲ್ಲಿ ನನ್ನ ಗಮನಕ್ಕೆ ಬಂದಿರುವುದೇನೆಂದರೆ ಕೌನ್ಸಿಲಿಂಗ್ ಎಂದ ತಕ್ಷಣ considerations ಬೇರೆ ಆಗುತ್ತವೆ. ಹಾಗಾಗಿ ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕಾಗುತ್ತದೆ. ಮೊದಲು 3 ವರ್ಷಗಳಿದ್ದರಿಂದ ಏನು ಸಮಸ್ಯೆಗಳಿತ್ತು, ಮತ್ತೆ ಎರಡನೆಯದಾಗಿ, ಇಲ್ಲಿ ಕೌನ್ಸಿಲಿಂಗ್ ಏತಕ್ಕೆ ಬೇಕು, ಬೇರೆ ಇಲಾಖೆಯಗಳಲ್ಲಿ ಕೌನ್ಸಿಲಿಂಗ್ ಇಲ್ಲದೇ ಇರತಕ್ಕಂತಹ ಹಿನ್ನೆಲೆಯಲ್ಲಿ ಅಲ್ಲಿ ಯಾವುದೇ ತೊಂದರೆಗಳಿಲ್ಲದೆ, ಅವರುಗಳು ದಂಪತಿಗಳು ಎನ್ನುವ ಹಿನ್ನೆಲೆಯಲ್ಲಿ ಅವರುಗಳ ವರ್ಗಾವಣೆ ಮಾಡುತ್ತಿರುತ್ತಾರೆ. ಇದು ನಗರಗಳಿಗಿಲ್ಲವೆಂದು ಹೇಳುತ್ತಿದ್ದೀರಿ. ಯಾವಾಗಲೂ ನಗರಗಳಿಗೆ ಬೇಡಿಕೆ ಇರುವಂತಹದ್ದು ನಿಮಗೆ ಗೊತ್ತಿರುವ ವಿಚಾರ. ಆದರೆ, ಗ್ರಾಮೀಣ ಭಾಗದಲ್ಲಿ ಇರುವಂತಹವರಿಗೆ, ಬಹುಶಃ ಅವರು ಕೇಳಿದಾಗ ಖಾಲಿ ಹುದ್ದೆ ಇದ್ದರೆ, ಅವರ ಗಂಡ ಅಥವಾ ಹೆಂಡತಿ ಎಲ್ಲಿದ್ದಾರೆ, ಅಲ್ಲಿಗೆ ವರ್ಗಾವಣೆ ಮಾಡುವಂತಹದಕ್ಕೆ ಇರುವಂತಹ ತೊಂದರೆಗಳೇನು? ಹಾಗಾಗಿ ಈ ಕೌನ್ಸಿಲಿಂಗ್ ನೆಪದಲ್ಲಿ ಅವರಿಗೆ harassment

ಮಾಡುವಂತಹದಕ್ಕೆ ಅಥವಾ exploit ಮಾಡುವಂಗಹದಾಕ್ಕಾಗಲಿ ಬಹುಶಃ ಅವಕಾಶವಾಗಬಹುದು. ಇದರ ಬಗ್ಗೆ ಸರ್ಕಾರ ಚಿಂತನೆ ಮಾಡುವುದು ಸೂಕ್ತವೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಐವನ್ ಡಿ'ಸೋಜ:–** ಮಾನ್ಯ ಸಭಾಪತಿಯವರೆ, ಈ ಬಿಲ್ಲನ್ನು ಎಲ್ಲಾ ಟೀಚರ್ಸ್ ಮತ್ತು ಅವರ ಪ್ರತಿನಿಧಿಗಳು ಸ್ವಾಗತ ಮಾಡಿದ್ದು, ನಾನು ಸಹ ಈ ಬಿಲ್ಲನ್ನು ಸ್ವಾಗತ ಮಾಡುತ್ತೇನೆ. ಟೀಚರ್ ಗಳಿಗೆ ಒಳ್ಳೆಯದಾಗಲಿ ಎಂದು ಬಯಸುತ್ತೇನೆ.

**ಸಭಾಪತಿಯವರು:–** ತಾವು ಮಾತನಾಡಲಿಕ್ಕೆ ಕೈ ಎತ್ತಿದ್ದೀರಿ, ಅದಕ್ಕೆ ನಾನು ಅವಕಾಶ ಕೊಟ್ಟೆ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಈ ಬಿಲ್ಲನ್ನು ಮಾನ್ಯ ಸಚಿವರಾದ ಶ್ರೀಯುತ ಕಿಮ್ಮನೆ ರತ್ನಾಕರ್ ರವರು ತುಂಬಾ ಕಸರತ್ತು ಮಾಡಿ ತಿಂದಿದಾರೆ. ನಾನು ಇದನ್ನು ಸ್ವಾಗತ ಮಾಡುತ್ತೇನೆ. ಆದರೆ, ಈ ವಿಚಾರದಲ್ಲಿ ಶ್ರೀಯುತ ಉಗ್ರಪ್ಪನವರು ಒಂದೆರಡು–ಮೂರು ವಿಚಾರಗಳನ್ನು ಹೇಳಿದರು.

**ಸಭಾಪತಿಯವರು:–** ಅವರದ್ದನ್ನು ಬಿಟ್ಟುಬಿಡಿ, ನಿಮ್ಮ ವಿಚಾರವನ್ನು ಹೇಳಿ.

**ಶ್ರೀ ವಿ. ಸೋಮಣ್ಣ(ವಿಧಾನಸಭಾ ಕ್ಷೇತ್ರ):–** ಅವರು ತುಂಬಾ ಜವಾಬ್ದಾರಿಯುತವಾಗಿ ಹೇಳಿದರು. ಈ ಕೌನ್ಸಿಲಿಂಗ್ ಎನ್ನುವುದು ಏನಿದೆ, ಇದು ಒಂದು ಬಿಳಿ ಆನೆ. ಅದಕ್ಕಿಂತ ಹೆಚ್ಚಾಗಿ ಪಟ್ಟಣ ಪ್ರದೇಶಗಳಿಗೆ ಬರತಕ್ಕಂತಹವರು ಯಾರಿದ್ದಾರೆ, ಅದರ ಬಗ್ಗೆ ತಮಗೂ ಸಹ ಸಾಕಷ್ಟು ಅನುಭವವಾಗಿದೆ. ಎರಡು ವರ್ಷಗಳಲ್ಲಿ ನಿಮ್ಮ ಕೆಲಸ ಮಾಡುವುದಕ್ಕಿಂತ ಹೆಚ್ಚಾಗಿ ಶಿಫಾರಸ್ಸುಗಳು ನಮ್ಮಿಂದ ಇರಬಹುದು, ಬೇರೆಯವರಿಂದ ಇರಬಹುದು, ಮಂತ್ರಿಗಳಿಂದ ಇರಬಹುದು, ಈ ದೇಶದಲ್ಲಿ ಇರುವಂತಹವರೆಲ್ಲರೂ ಕೂಡ ಅವರ ಮನೆಗೆ ಹೋಗುವಂತಹ ಪದ್ಧತಿ, ವಾಡಿಕೆ ಇದೆ. ಇದನ್ನು ಯಾವರೀತಿಯಲ್ಲಿ, ಏನು ಮಾಡಬೇಕೆನ್ನುವುದಕ್ಕಿಂತ ಹೆಚ್ಚಾಗಿ, ಇದರಿಂದ ತಾವು ಇವತ್ತು ಏನು ಕಾಯಿದೆಯನ್ನು ತಂದಿದ್ದೀರಿ, ಈ ಕಾಯಿದೆಯಿಂದ ಇದರ ಸಾಧಕ–ಭಾಧಕಗಳನ್ನು ನೀವು ಎಷ್ಟರಮಟ್ಟಿಗೆ ನೀವು ಒಂದು ಹಂತಕ್ಕೆ ತರಬಹುದು ಎನ್ನುವುದರ ಬಗ್ಗೆ ನನಗೆ ಅಷ್ಟು ಮಾಹಿತಿ ಇಲ್ಲ. ಆದ್ದರಿಂದ, ಈ ವಿಚಾರದಲ್ಲಿ ತಾವು ಬೆಳಕ್ಕನು ಚೆಲ್ಲುವುದು ಒಳ್ಳೆಯದು. ಎರಡನೆಯದಾಗಿ, ನನ್ನ ಹಳ್ಳಿಯ ಸುತ್ತಮುತ್ತಲ 2–3 ಹಳ್ಳಿಗಳಲ್ಲಿ ನನಗೆ ತಿಳಿದ ಮಟ್ಟಿಗೆ ಸುಮಾರು 16–17 ವರ್ಷಗಳಿಂದ ಕೆಲವು ಟೀಚರ್‌ಗಳು ಕೆಲಸ ನಿರ್ವಹಿಸುತ್ತಿದ್ದಾರೆ. ಅವರು ಬೇರೆ ಕಡೆ ಹೋಗಿ ಎಂದರೆ ಇಲ್ಲ, ನಾನು ಈ ಊರಿನಲ್ಲಿಯೇ ಇರುತ್ತೆನೆಂದು ಹೇಳುವಂತಹ ಬಹುತೇಕ ಪುಣ್ಯಾತ್ಮರು ಇರುವುದರಿಂದ ಅಲ್ಲಿಗೆ ಶಿಫಾರಸ್ಸು ಮಾಡುವುದು ಇವತ್ತಿಗೂ ಕೂಡ ಕಡಿಮೆ ಇದೆ. ನನ್ನ ಸ್ವಂತ ಹಳ್ಳಿಯಲ್ಲಿ ಇವತ್ತು ಅವನಿಗೆ ಮುಂಬಡ್ತಿ ಬಂದರೂ ಕೂಡ ನನಗೆ ಪ್ರಮೋಷನ್ ಬೇಡ, ನನಗೆ ಏನು ಸೌಲಭ್ಯ ಬರುತ್ತದೋ ಕೊಡಿ, ನಾನು ಇಲ್ಲಿಯೇ ಇದ್ದು ಕೆಲಸ ಮಾಡಿಕೊಂಡು ಹೋಗುತ್ತೇನೆಂದು ಹೇಳುವಂತಹ ಮಾದರಿಯಾದ ಶಿಕ್ಷಕರುಗಳಿದ್ದಾರೆ. ಇಂತಹವರನ್ನು ಗುರುತಿಸಿ, ನೀವು ಸರ್ಕಾರದ ವ್ಯವಸ್ಥೆಯಲ್ಲಿ ಏನಾದರೊಂದು ಅಂಗಹವರಿಗೆ ಗೌರವಿಸುವಂತಹ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದು. ಮಾದರಿಯಾಗಿ ಕೆಲಸ ಮಾಡಿ, ತನಗೆ ಯಾವುದೇ ಆಸೆ–ಆಕಾಂಶೆಗಳಿಲ್ಲದೆ, ಹಳ್ಳಿಗಾಡಿನಲ್ಲಿ ಮಕ್ಕಳಿಗೆ ಪಾಠ–ಪ್ರವಚನ ಮಾಡುತ್ತಿದ್ದಾರೆ. ಇವತ್ತಿಗೂ ಕೂಡ ನಮ್ಮ ಕಡೆ 5–6 ಕಿ.ಮೀ ದೂರದ ಹಳ್ಳಿಗೆ ನಡೆದುಕೊಂಡು ಪಾಠ–ಪ್ರವಚನಗಳನ್ನು ಮಾಡಿಕೊಂಡು ಬರುವಂತಹ ಅನೇಕ ಉದಾರಹಣೆಗಳಿವೆ. ಅಂತಹವರ ಬಗ್ಗೆ ನೀವು ಈ ಕೌನ್ಸಿಲಿಂಗ್ ಮಾಡಿರುವುದು. ಬೆಂಗಳೂರು ನಗರಕ್ಕೆ ಮತ್ತು ಬೇರೆ ಬೇರೆ ಪಟ್ಟಣಗಳಿಗೆ ವಲಸೆ ಬರತಕ್ಕಂತಹವರು ಜಾಸ್ತಿಯಾಗಿ, ಇಲ್ಲಿ ಕೆಲಸ ಮಾಡತಕ್ಕವರು, ತಲೆಗೆ ಬಟ್ಟೆ ಇಲ್ಲದವರು, ಅಂದರೆ, ಯಾವುದೇ ಶಿಫಾರಸ್ಸು ಇಲ್ಲದೇ ಇರುವಂಹವರಿಗೆ ಈ ಸರ್ಕಾರದ ರಕ್ಷಣೆ ಏನು? ಇಂತಹವರಿಗೆ ನಿಮ್ಮ ಕಾರ್ಯ ತತ್ವರತೆ ಏನು, ಮತ್ತೆ, ಈ ರೀತಿ ಕೌನ್ಸಿಲಿಂಗ್ ಮಾಡುವಾಗ ಕೇವಲ ನಗರಸಭೆಗಳಿರಬಹುದು, ಪುರಸಭೆಗಳಿರಬಹುದು, ಮಹಾನಗರ ಪಾಲಿಕೆಗಳಿರಬಹುದು, ಪಟ್ಟಣ ಪಂಚಾಯಿತಿ ಇರಬಹುದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇರಬಹುದು ಈ ರೀತಿಯಾಗಿ ಬರತಕ್ಕಂತಹ ಶಿಫಾರಸ್ಸನ್ನು, ಮತ್ತೆ ಹಳ್ಳಿಯಿಂದ ಬರತಕ್ಕಂತಹ ಒತ್ತಡವನ್ನು ಕಡಿಮೆ ಮಾಡಲಿಕ್ಕೆ ನಿಮಗೆ 3 ವರ್ಷಗಳಾಗಬಹುದು, 5 ವರ್ಷಗಳಾಗಬಹುದು.

ಅದನ್ನು ಒಂದು ಕಡೆಯಲ್ಲಿ ಇಟ್ಟುಕೊಂಡು ಹಳ್ಳಿಯಲ್ಲಿ ಕೆಲಸ ಮಾಡತಕ್ಕಂತಹ ಶಿಕ್ಷಕರಿಗೆ ನೀವು ಏನಾದರೂ ಗೌರವ ಆ ಒಂದು ವ್ಯವಸ್ಥೆಯನ್ನು ಹೆಚ್ಚಿಗೆ ಮಾಡುವುದರಿಂದ ಇಂತಹ ಪರಿಣಾಮವನ್ನು ತಡೆಗಟ್ಟಬಹುದು. ಅದರ ಬಗ್ಗೆ ಮಾನ್ಯ ಸಚಿವರು ಬೆಳಕನ್ನು ಚೆಲ್ಲಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

**ಶ್ರೀ ಕಿಮ್ಮನೆ ರತ್ನಾಕರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ಗೌರವಾನ್ವಿತ ಎಲ್ಲಾ ಸದಸ್ಯರು ಮಾನ್ಯ ಅರುಣ್ ಶಹಾಪೂರ್ ಅವರು ಮಾನ್ಯ ಸಂಕನೂರ್ ಅವರು ಆನ್ಯ ರಾಮಚಂದ್ರಗೌಡರವರು, ಮಾನ್ಯ ಮಧೂಸೂದನ್ ಅವರು ಮಾನ್ಯ ಬಸವರಾಜ ಹೊರಟ್ಟಿಯವರು, ಪ್ರೊ ಕೃಷ್ಣಭಟ್ ಅವರು ಶ್ರೀಮತಿ ಮೋಟಮ್ಮನವರು ಮಾನ್ಯ ಉಗ್ರಪ್ಪನರು ಹಾಗೂ ಮಾನ್ಯ ವಿಜಯಶಂಕರ್ ಅವರು ಮಾನ್ಯ ಸೋಮಣ್ಣನವರು ಶ್ರೀ ಐವನ್ ಡಿ'ಸೋಜಾ ಅವರು ಎಲ್ಲರೂ ಕೂಡ ಕೆಲವು ಮಾಹಿತಿಯನ್ನು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ತಮ್ಮ ಮೂಲಕ ಈ ಸದನಕ್ಕೆ ತಿಳಿಸುವುದೇನೆಂದರೆ, ಮಾನ್ಯ ಉಗ್ರಪ್ಪನವರು 5 ವರ್ಷ ಏಕೆ ಎಂದು ಹೇಳಿದರು. ಪರಸ್ಪರ ವಗಾವಣೆಗೆ ಸೀಮಿತಗೊಂಡಂತೆ ಮೂರು ವರ್ಷ ಕಳೆದಿರಬೇಕು. ಉಳಿದವರಿಗೆ 5 ವರ್ಷ ಆಗಬೇಕು ಅಷ್ಟೇ. ಇದಕ್ಕೆ ಕಾರಣವೇನೂ ಇಲ್ಲ. ಇದು ಅಡ್ಮಿನಿಸ್ಟ್ರೇಟಿವ್ ಹುದ್ದೆ ಅಲ್ಲ ಎನ್ನವುದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಆಗಿರುವುದು ಅಷ್ಟೇ. ಕೌನ್ಸಿಲಿಂಗ್ ಇಲ್ಲದಿದ್ದರೆ ಬಹಳ ಕಷ್ಟಾವಾಗುತ್ತದೆ. ನಾವೆಲ್ಲರೂ ಕೂಡ ಮಾನ್ಯ ಬಸವರಾಜ ಹೊರಟ್ಟಿಯವರಿಗೆ ಈ ವಿಚಾರದಲ್ಲಿ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ಕೌನ್ಸಿಲಿಂಗ್ ಪದ್ಧತಿಯನ್ನು ತರದೇ ಇದ್ದರೆ, ಇಲ್ಲಿ ಮಂತ್ರಿಯಾದವರು ಒಂದು ತಿಂಗಳ ನಂತರ ಓಡುವುದೇ. ಅದು ಅಷ್ಟು ಸುಲಭವಲ್ಲ. ಎಸ್.ಡಿ.ಎಂ.ಸಿ. ಸಮಿತಿಯವರ ಸಲಹೆ ತೆಗೆದುಕೊಂಡು ಮಾಡಿ ಎಂದು ಯಾರೋ ಸಲಹೆ ನೀಡಿದರು. ನಮ್ಮಲ್ಲಿ ಒಬ್ಬರು ಮಾಸ್ತರ್ ಇದ್ದರು. ಅವರು 18 ವರ್ಷ ಇದ್ದರು. ಆ ಊರಿನ ಹೆಸರು ಹೇಳುವುದಿಲ್ಲ. ಇಡೀ ಊರಿನವರು ಆ ಮೇಷ್ಟ್ರು ಬೇಕು ಎಂದು ಹೇಳುತ್ತಿದ್ದರು. ಮಕ್ಕಳಿಗೂ ಕೂಡ ಆ ಮಾಸ್ತರ್ ಬೇಕಾಗಿದ್ದಂತಹವರಾಗಿದ್ದರು. ಆದರೆ ಒಂದು ದಿವಸ ಪಾಠ ಮಾತ್ರ ಮಾಡುತ್ತಿರಲಿಲ್ಲ. 18 ವರ್ಷದಲ್ಲಿ ಅವರು ಒಂದು ದಿನವೂ ಪಾಠ ಮಾಡುತ್ತಿರಲಿಲ್ಲ. ಅವರಿಗೆ ಪಾಠ ಮಾಡುವುದಕ್ಕೇ ಬರುತ್ತಿರಲಿಲ್ಲ. But, he is very popular. ಚುನಾವಣೆಗೆ ಯಾರಾದರೂ ನಿಲ್ಲಬೇಕೆಂದಿದ್ದರೆ ಅವರು ಅವರಿಗೆ ಡಿಕ್ಟೇಟ್ ಮಾಡುತ್ತಿದ್ದರು. ಮಕ್ಕಳಿಗೂ ಅವರು ಆಕರ್ಷಣೆ, ಆ ಊರಿನವರಿಗೆ ಮತ್ತು ಅಲ್ಲಿನ ಜನ ಪ್ರತಿನಿಧಿಗಳಿಗೂ ಅವರ ಬಗ್ಗೆ ಗೌರವ. ಆದರೆ ಅವರು ಮಕ್ಕಳಿಗೆ ಪಾಠ ಮಾತ್ರ ಮಾಡುತ್ತಿರಲಿಲ್ಲ. ಬೇರೆಯವರ ಹತ್ತಿರವೇ ಮಾಡಿಸುತ್ತಿದ್ದರು. ತಂಬಾ ಒಳ್ಳೆಯವರಾಗಿದ್ದರು. He used to select the candidates for election. ಯಾರು ಎಲ್ಲಿ ನಿಲ್ಲಬೇಕೆಂದು ಅವರು ಹೇಳುತ್ತಿದ್ದರು. ಎಲ್ಲರನ್ನೂ ಸಮಾಧಾನವಾಗಿ ತೆಗೆದುಕೊಂಡು ಹೋಗುತ್ತಿದ್ದರು. ಎಲ್ಲರಿಗೂ ಆ ರೀತಿ ಮಾಡುವುದಕ್ಕಾಗುವುದಿಲ್ಲ. For this department, counselling is very important. ಏಕೆಂದರೆ, ನಮ್ಮಲ್ಲಿ ಒಂದೊಂದು ತಾಲ್ಲೂಕಿನಲ್ಲಿ 2–3 ಸಾವಿರ ಶಿಕ್ಷಕರಿದ್ದಾರೆ. ಒಂದೊಂದು ಜಿಲ್ಲೆಯಲ್ಲಿ 12–13000 ಜನ ಶಿಕ್ಷಕರಿದ್ದಾರೆ ಜನ ಶಿಕ್ಷಕರಿದ್ದಾರೆ. ಇಡೀ ಶಿಕ್ಷಣ ಇಲಾಖೆಯಲ್ಲಿ ಒಟ್ಟು 3,20,000 ಜನ ಶಿಕ್ಷಕರಿದ್ದಾರೆ. ಲೋಕೋಪಯೋಗಿ ಇಲಾಕೆಯಲ್ಲಿ ಅತಿ ಹೆಚ್ಚು ಜನರಿದ್ದಾರೆ. ಮೀನುಗಾರಿಕಾ ಇಲಾಖೆಯಲ್ಲಿ ಶಿವಮೊಗ್ಗ ಜಿಲ್ಲೆಗೆ ಇಬ್ಬರೇ ಇದ್ದಾರೆ. ಒಂದೊಂದು ಜಿಲ್ಲೆಗೆ 10 ಜನ ಒಂದೊಂದು ತಾಲ್ಲೂಕಿಗೆ 3–4 ಜನ ಇರುವ ಇಲಾಖೆಗೂ ಶಿಕ್ಷಣ ಇಲಾಖೆಗೂ ವ್ಯತ್ಯಾಸ ಇದೆ. ಇದನ್ನು ಸ್ವಲ್ಪ ಮಟ್ಟಿಗೆ ಸರಿಪಡಿಸುವುದಕ್ಕೆ ಸಾಧ್ಯವಿಲ್ಲ. ಗೌರವಾನ್ವಿತ ಮಾಜಿ ಸಚಿವರಾದ ಶ್ರೀಮತಿ ಮೋಟಮ್ಮನವರು ಒಂದು ಸಲಹೆಯನ್ನು ಮಾಡಿದರು. ನೇಮಕಾತಿಯನ್ನು ಮಾಡುವಾಗ ಆ ಜಿಲ್ಲೆಯಲ್ಲೇ ಸಂದರ್ಶನ ಕಂಡೀಷನ್ ಹಾಕುತ್ತಿದ್ದೇವೆ. ಹೈದರಾಬಾದ್ ಕರ್ನಾಟಕ, ಹೆಚ್.ಡಿ.ಕೋಟೆ, ಬಾಂಬೆ ಕರ್ನಾಟಕ ಇಲ್ಲಿ ಒಂದೊಂದು ಜೆಲ್ಲೆಗೆ 1200–1500 ಜನ ಖಾಲಿ ಇದೆ. ಶಿಕ್ಷಣ ಇಲಾಖೆ ಎನ್ನುವದು ಮಕ್ಕಳ ಶಿಕ್ಷಣಕ್ಕೆ ಮೊದಲ ಆದ್ಯತೆ ಕೊಡಬೇಕು. ಯಾರಿಗೂ ಸೇವೆ ಸಲ್ಲಿಸುವವರಿಗೆ ಆಸಕ್ತಿ ಇಲ್ಲ ಅವರು they should not opt for it. ಇದನ್ನು ಎಲ್ಲರೂ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. We will have to protect the interst of the child. ಎಂಪ್ಲಾಯೀ ಅವರದ್ದೂ ಮಾಡೋಣ But not at the cost of the child. ಈಗ ಯಾವ ಪರಿಸ್ಥಿತಿ ಬಂದಿದೆ ಎಂದರೆ, 1600 ಜನ ಗಲ್ಬರ್ಗ ಜಿಲ್ಲೆಯಲ್ಲಿ ಇಲ್ಲ. ಇಲ್ಲಿ ಯಾ ರೀತಿ ಅಕಾಮಡೇಟ್ ಮಾಡಬೇಕು? ಬೆಂಗಳೂರಿನಲ್ಲಿ ಖಾಲಿ ಹುದ್ದೆಗಳೇ ಇಲ್ಲ.

ನಾನು ಮೊನ್ನೆ ಬೀದರಿನ ಒಂದು ಶಾಲೆಗೆ ಹೋಗಿದ್ದೇನು ಅಲ್ಲಿ 12 ಜನ ಟೀಚರ್ಸ್ ಇದ್ದಾರೆ. 12 ಜನ ವಿದ್ಯಾರ್ಥಿಗಳು ಇದ್ದಾರೆ. ಎಸ್.ಎಸ್.ಎಲ್.ಸಿ. ಪರೀಕ್ಷೆ ತೆಗೆದುಕೊಂಡಿರುವವರ ಪೈಕಿ ಹೆಚ್ಚೂ ಕಡಿಮೆ ಫೇಲ್ ಆಗಿದ್ದಾರೆ. ಇವರ್ಯಾರು ಪಾಠ ಮಾಡುವುದಿಲ್ಲ. ಅಷ್ಟೂ ಜನರ ವಿಳಾಸವನ್ನು ಅವರುಗಳ ಫೋಟೋ ಜೊತೆಯಲ್ಲಿ ಕಳಿಸುವುದಕ್ಕೆ ಹೇಳಿದ್ದೇನೆ. ಈ ಶಾಲೆ ಟೌನ್ ನಲ್ಲಿ ಇದೆ. ಟೌನ್‌ನಲ್ಲಿ ಇದ್ದವರು ಒಬ್ಬರೂ ಹಳ್ಳಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ನಮಗೆ ಅವರನ್ನು ವೆಕೇಟ್ ಮಾಡಿಸುವುದಕ್ಕೆ ಪ್ರಾವಿಜನ್ ಇಲ್ಲ. ಅಲ್ಲಿ ಖಾಲಿಯೇ ಆಗುವುದಿಲ್ಲ. ಬೆಂಗಳೂರು ಖಾಲಿ ಇಲ್ಲ. ಸಿಟಿಗಳಲ್ಲಿ ಯಾವುದರಲ್ಲೂ ಖಾಲಿ ಇಲ್ಲ. ಸಿಟಿಗಳಲ್ಲಿ ಎಲ್ಲಾ ಕಡೆಯಲ್ಲೂ ಕೂಡ ನಮಗೆ 3 ಟೀಚರ್ಸ್ ಬೇಕು ಎಂದರೆ 6 ಟೀಚರ್ಸ್ ಇದ್ದಾರೆ. ಗ್ರಾಮಾಂತರ ಪ್ರದೇಶಕ್ಕೆ ಯಾರೂ ಕೂಡ ಹೋಗುವುದಿಲ್ಲ. ಇದಕ್ಕೆ ಒಂದು ಸಮಗ್ರವಾದ ತಿದ್ದುಪಡಿಯನ್ನು ತರಬೇಕೆಂದು ಇದ್ದೇನೆ. ಅ ಸಂದರ್ಭದಲ್ಲಿ ನೀವು ಸಲಹೆ ನೀಡಿರುವದನ್ನೆಲ್ಲಾ ಕೂಡ ಅದರಲ್ಲಿ ಅಲವಡಿಸುತ್ತೇನೆ. ಆ ಸಂದರ್ಭದಲ್ಲಿ ನಿವೆಲ್ಲರೂ ಬೆಂಬಲಕ್ಕೆ ನಿಲ್ಲಬೇಕು. ಕನಿಷ್ಠ 25 ವರ್ಷ ಸೇವೆ ಆಗಿರತಕ್ಕಂತಹ ಸಂದರ್ಭದಲ್ಲಿ 5 ವರ್ಷ ಕಂಪಲ್ಸರಿ ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಸಬೇಕೆಂಬುದನ್ನು ಕಡ್ಡಾಯ ಮಾಡದೇ ಇದ್ದರೆ, ಯಾವುದಾದರೂ ಗ್ರಾಮಾಂತರ ಪ್ರದೇಶವನ್ನು ಆಯ್ಕೆ ಮಾಡಿಕೊಳ್ಳಲಿ. ಬೇಕಿದ್ದರೆ ಇದಕ್ಕೆ ಕೌನ್ಸಿಲಿಂಗ್ ಮಾಡೋಣ. ಕೌನ್ಸಿಲಿಂಗ್ ಇಲ್ಲದೇ ಇದ್ದರೆ ನಾನೇ ನೂರು ತಪ್ಪು ಮಾಡಿ ಬಿಡುತ್ತೇನೆ. ಇಲ್ಲಿ ಮತ್ತು ಕೆಳ ಮನೆಯಲ್ಲಿ ನೀಡಿದಂತಹ ಸದಸ್ಯರ ಪತ್ರಗಳಿಗೆ ನಾನು ಗೌರವವನ್ನು ಕೊಡಲೇಬೇಕಾಗುತ್ತದೆ. ನಾನು ಅದನ್ನು ಮಾಡಲೇಬೇಕಾಗುತ್ತದೆ ಅನಿವಾರ್ಯ ಇಲ್ಲದಿದ್ದರೆ ನನಗೆ ಇಲ್ಲಿ ಕುಳಿತುಕೊಳ್ಳುವುದಕ್ಕೆ ಬಿಡುವುದಿಲ್ಲ. ಕೌನ್ಸಿಲಿಂಗ್ ಇದ್ದರೆ 99 ಪರ್ಸೆಂಟ್ ಲ್ಯಾಕೂನ ಇರುವುದಿಲ್ಲ. ಒಂದು ಪರ್ಸೆಂಟ್ ಯಾರಾದರೂ ಮಾಡಿದ್ದರೆ ಅದನ್ನು ಐಡೆಂಟಿಫೈ ಮಾಡಿದರೆ ಅವರಿಗೆ ಪಾಠ ಕಲಿಸುವ ಕೆಲಸ ಮಾಡಬಾರದು. ಕೌನ್ಸಿಲಿಂಗ್ ಇಲ್ಲದೇ ಇದ್ದರೆ ಖಂಡಿತವಾಗಿ ಬರೀ ಇನ್‌ಫ್ಲುಯೆನ್ಸ್ ನಡದು ಹೋಗುತ್ತದೆ. ಮತ್ತು ಸಚಿವರ್ಯಾರು ಇಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯಾವಿಲ್ಲ. ಆ ಪರಿಸ್ಥಿತಿ ಉಂಟಾಗುತ್ತದೆ. 3,25,000 ಲಕ್ಷ ಜನರು ಇದ್ದಾರೆ. ಇದರಲ್ಲಿ ಡಿಸ್ಕ್ರೀಷನರಿ ಪವರ್ಸ್ ಅನ್ನು ಇಟ್ಟುಕೊಂಡಿದ್ದೇ ಆದರೆ ಆದರಷ್ಟು ಮೂರ್ಖತನ ಇನ್ನೊಂದು ಇಲ್ಲ. ಒಂದು ಪೈಸೆಯೂ ಇರಬಾರದೆಂದು ನನ್ನ ಭಾವನೆಯಾಗಿದೆ, let it be any discretionary. ನಮ್ಮ ಹತ್ತಿರ ಯಾವುದೂ ಇರಬಾರದು. ಇಲ್ ಹೆಲ್ತ್ ಇರುತ್ತದಲ್ಲ ಇದಕ್ಕೆ ಡಿಸ್ಕ್ರೀಷನರಿ ಪವರ್ಸ್ ಇರಬೇಕಾಗುತ್ತದೆ. ಕಿಡ್ನಿ ತೊಂದರೆ ಮತ್ತೊಂದು ತೊಂದರೆಗೆ ಇದೆ.

**ಶ್ರೀಮತಿ ಮೋಟಮ್ಮ:–** ಕೆಲವು ಕಡೆಗಳಲ್ಲಿ ಸಬ್ ಟೀಚರ್ಸ್ ಅನ್ನು ಮಾಡಿ ಅವರ ಪರವಾಗಿ ಪಾಠ ಮಾಡುವುದಕ್ಕೆ ಕಳಿಸುತ್ತಾರೆ. ಅವರೇ ಕಂಟ್ರಾಕ್ಟ್ ಮೇಲೆ ಟೀಚರ್ಸ್ ಅನ್ನು ಆಯ್ಕೆ ಮಾಡಿಕೊಂಡು ಅವರ ಪರವಾಗಿ ಪಾಠ ಮಾಡುವುದಕ್ಕೆ ಕಳಿಸುತ್ತಾರೆ ಅದು ತಮಗೆ ಗೊತ್ತಿದೇಯೇ? ಮಲೆನಾಡು, ಚಿಕ್ಕಮಗಳೂರು, ಹಾಸನ ಎಲ್ಲೂ ಇಲ್ಲ. ನಿಮ್ಮ ಕಡೆಯಲ್ಲಿ ಇದೆ. ಅರ್ಧ ವೇತನವನ್ನು ಅವರಿಗೆ ಕೊಟ್ಟು ಇನ್ನು ಅರ್ಧವನ್ನು ಇವರು ತೆಗೆದುಕೊಳ್ಳುತ್ತಾರೆ. ಈಗ ನೀವು ಹೇಳಿದ ಬೀದರ್ ಕಥೆ ಅದೇ ಆಗಿರಬಹುದು. ಅದು ತಮಗೆ ಗೊತ್ತಿದೆಯೇ?

**ಸಭಾಪತಿಯವರು:–** ವರ್ಗಾವಣೆಗೂ ಇದಕ್ಕೂ ಸಂಬಂಧವಿಲ್ಲ.

**ಶ್ರೀ ಕಿಮ್ಮನೆ ರತ್ನಾಕರ್:–** ಕಂಪ್ಲೇಂಟ್ಸ್ ಇದೆ. ಆದರೆ ಬಹಳ ಕಡಿಮೆ ಆಗಿದೆ. ಮೊದಲಿನಷ್ಟು ಇಲ್ಲ. ಈ ತಿದ್ದುಪಡಿ ತರುವುದಕ್ಕೆ ಮೊದಲು ಗಂಡ ಹೆಂತಿ ಸಮಸ್ಯೆಯನ್ನು ಇಟ್ಟುಕೊಂಡೇ ಇದನ್ನು ನಾನು ತಂದಿರತಕ್ಕಂತಾದ್ದು. ಮೊದಲು ತಾವು ಮಾಡಿದಾಗ 5 ಪರ್ಸೆಂಟ್ ಇತ್ತು ಈಗ ಇದನ್ನು 8 ಪರ್ಸೆಂಟಿಗೆ ಏರಿದ್ದೇವೆ. ಇದರಿಂದಾಗಿ 8000 ದಿಂದ 9000 ಜನರಿಗೆ ರಿಲೀಫ್ ಸಿಗುತ್ತದೆ. ಎಲ್ಲರಿಗೂ ಸಿಗುತ್ತದೆಂದು ಇಲ್ಲ. ಕ್ರಮೇಣ ಇದು ಇಂಪ್ರೂವ್ ಆಗುವ ಅವಕಾಶಗಳು ಇರಬಹುದು. ನಾವು ಇನ್ನೊಂದು ಸಮಗ್ರ ಕಾಯಿದೆ ತಂದು ಸ್ವಲ್ಪ ಮಟ್ಟಿಗೆ ಅಕಾಮಡೇಟ್ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಆಗ ಎಲ್ಲರಿಗೂ ರಿಲೀಫ್ ಸಿಗುವ ಯೋಚನೆ ಆಗಬಹುದು. ಮುಂದೆ ನಾವು ಎಲ್ಲಿ ನೇಮಕಾತಿ ಮಾಡುತ್ತಿದ್ದೆವೆ ವೇಕೆನ್ಸಿ ಇದೆ ಅಲ್ಲಿ ಹಾಕುವಾಗ 10 ವರ್ಷವೆಂದು ಹಾಕಿದ್ದೇವೆ. 3 ವರ್ಷ ಒಂದು ಯೂನಿಟ್ ನಲ್ಲಿ ಕೆಲಸ ಮಾಡಬೇಕು. 10 ವರ್ಷ ಆ ಯೂನಿಟ್ ನ ಏರಿಯಾದಲ್ಲೇ ಕೆಲಸ್ ಮಾಡಬೇಕೆಂದು ನೇಮಕಾತಿಯ ಆದೇಶದಲ್ಲಿಯೇ ಅದನ್ನು ಹಾಕಿ ಕಳಿಸಬೇಕೆಂದು

ಯೋಚನೆ ಮಾಡಿದ್ದೇವೆ. ಮತ್ತು ಎಲ್ಲಾ ಜಿಲ್ಲೆಗಳಲ್ಲಿಯೂ ಒಂದೇ ಸಮಯಕ್ಕೆ ಪರೀಕ್ಷೆ ಮಾಡಬೇಕೆಂದು ಇದ್ದೇವೆ ನಮ್ಮ ಭಾಗದವರೆಲ್ಲರೂ ಈ ಭಾಗಕ್ಕೆ ಬಂದು ಇಲ್ಲಿ ಪೈಪೋಟಿ ಕಡಿಮೆ ಇರುತ್ತದೆ ಸುಲಭವಾಗಿ ಸಿಗುತ್ತದೆ ಎಂದು ಬಂದು ಸೇರಿಕೊಂಡಿದಾರೆ. ಸೇರಿ 8 ದಿವಸಕ್ಕೇ ಅಪ್ಪನಿಗೆ ಹುಷಾರಿಲ್ಲ, ಅಮ್ಮನಿಗೆ ಹುಷಾರಿಲ್ಲ ಗಂಡನಿಗೆ ಸಮಸ್ಯೆ ಈ ರೀತಿಯ ಸಮಸ್ಯೆಗಳನ್ನು ಹೇಳಿ ಕಣ್ಣೀರು ಹಾಕುತ್ತಾರೆ. ಅವರು ಕಣ್ಣೀರು ಹಾಕುವುದನ್ನು ನೋಡಿ ಎಲ್ಲರಿಗೂ ಕಣ್ಣೀರು ಬರುತ್ತದೆ. ಆದರೆ We could not accommodae. ಭದ್ರಾವತಿಯ ಹೆಣ್ಣುಮಗಳು ನನಗೆ ದೂರವಾಣಿ ಕರೆ ಮಾಡಿದ್ದಳು. ಆಕೆ ಅಳಂದದಲ್ಲಿ ಕೆಲಸ ಮಾಡುತ್ತಿದ್ದಾಳೆ. ಗಂಡ ಬೇಂಗಳೂರಿನಲ್ಲಿ ಇದ್ದಾರೆ. ಮಗು ಭದ್ರಾವತಿಯಲ್ಲಿ ಇದೆ. ನಮಗೆ ಅವರನ್ನು ಕಳದ ಎರಡು ವರ್ಷಗಳಿಂದ ವರ್ಗಾವಣೆ ಮಾಡುವುದಕ್ಕೆ ಆಗಲಿಲ್ಲ. We could not do it. ಈ ರೀತಿಯ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆಮದು ಸೀಮಿತವಾಗಿ ಇದನ್ನು ತಂದಿರತಕ್ಕಂಥಾದ್ದು. ಅವರು 17,000 ಜನ ಇದ್ದಾರೆ.

ಹದಿನೇಳು ಸಾವಿರ ಕಪಲ್ಸ್ ಇದ್ದಾರೆ. Husband and wife, Husband or wife ಹದಿನೇಳು ಸಾವಿರ ಜನ ಇದ್ದಾರೆ. ನಮ್ಮ ಶಿಕ್ಷಕಕ ಕ್ಷೇರದ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ಸ್ಲೈಡ್ಸ್ ಹಾಕಿ ತೋರಿಸಿದ್ದೇನೆ. ಕಳದ ವರ್ಷ ನಮ್ಮ ಹತ್ತಿರ ವರ್ಗಾವಣೆಯನ್ನು ಕೋರಿರುವ ಎಂಭತ್ತೈದು ಸಾವಿರ ಜನರ ಕೋರಿಕೆ ಬಾಕಿ ಇದೆ. ಅದರಲ್ಲಿ ಎಲಿಜಿಬಿಲಿಟಿ ಹೊಂದಿರುವವರು ಹದಿಮೂರು ಸಾವಿರ ಜನ ಇದ್ದಾರೆ. ಆ ಹದಿಮೂರು ಸಾವಿರ ಜನರನ್ನು ಇಪ್ಪತ್ತು ಸಾವಿರಕ್ಕೆ ತರುವಂಥ ಪ್ರಯತ್ನ ಈ ತಿದ್ದುಪಡಿಯ ಮೂಲಕ ಈಗ ಮಾಡಿದ್ದೇವೆ. ಹೆಚ್ಚು ಕಡಿಮೆ 19–20–21 ಸಾವಿರದ ವರೆಗೆ ಇದರಲ್ಲಿ accommodate ಆಗಬಹುದು. ಆದರೆ ಪರಿಪೂರ್ಣ ಆಗುವುದಿಲ್ಲ. ಪರಿಪೂರ್ಣ ಆಗಬೇಕೆಂದರೆ you have to go for an amendment ಅದರೆ ಸೆಕ್ಷನ್ 5ರಲ್ಲಿ ನಾವು ಯಾರನ್ನು ಬೇಕಾದರು ಎಲ್ಲಿ ಬೇಕಾದರು ಹಾಕಬಹುದು. ಆದೆ ಮತ್ತೆ influence problem ಪ್ರಾರಂಭವಾಗುತ್ತದೆ. ಕಾಯಿದೆ ಮೂಲಕ ಬೇಕಾದರು ಹಾಕಬಹುದು. ಆದರೆ ಮತ್ತೆ ಪ್ರಾರಂಭವಾಗುತ್ತದೆ. ಕಾಯಿದೆ ಮೂಲಕ ತಂದು ಬಿಟ್ಟರೆ ಯಾವುದೇ influence ಬರುವುದಿಲ್ಲ. We have to go for an amendment ಕೆಲಮೊಮ್ಮೆ ಹಳ್ಳಿಗೆ ಹೋದವರಿಗೆ ಹದಿನೈದು ವರ್ಷದಿಂದ relief ಸಿಕ್ಕಿಲ್ಲ, ಅವರು ನಿವೃತ್ತಿಯಾಗುವವರೆಗೂ ಸಿಗುವುದಿಲ್ಲ. ಕೆಲವರ ಪರಿಸ್ಥಿತಿ ಹಾಗೆ ಇದೆ. ಏಕೆಂದರೆ ಇನ್ನೊಂದು ಕಡೆ vecate ಆಗುವುದಿಲ್ಲ. ಇವರು ಕೇಳಿದರು ಕೂಡ ಅಲ್ಲಿ vecancy ಇರುವುದಿಲ್ಲ. ಇಪ್ಪತ್ತೈದು ವರ್ಷ service ಆದವರಿಗೆ ಮಿನಿಮಮ್ ಐದು ವರ್ಷಗಳ ಕಾಲ ರೂರಲ್‌ನಲ್ಲಿ accommodate ಮಾಡುವಂಥ ರೇಷಿಯೋ ಪ್ರಕಾರ ಮಾಡಿದರೆ ಒಂದು vecancy create ಆಗುತ್ತದೆ. ಆ ಟೈಮ್ ನಲ್ಲಿ ನಾವು ಇವರಿಗೆ accommodate ಮಾಡಬಹುದು. ಕೆಲವರು ಅವರ ಸ್ವಂತ ಜಿಲ್ಲೆಗೆ ಹೋಗಲಿಕ್ಕೆ ಆಗುವುದಿಲ್ಲ. ಇದು ಸ್ವಲ್ಪಮಟ್ಟಿನ ರಿಲೀಫ್ ಅಷ್ಟೇನೆ. It is not a relief to the entire lot. ಹದಿನೇಳು ಸಾವಿರ ಜನರಲ್ಲಿ 8–9 ಸಾವಿರ ಜನರಿಗೆ accommodate ಅಂದರೆ ಅರ್ಧದಷ್ಟು ಜನರಿಗೆ ಆಗುತ್ತದೆ. ಇದು ಬಹಳ ಪ್ರಮುಖವಾದದ್ದು.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪರಿಯವರೆ, ಮಾನವೀಯತೆಯ ದೃಷ್ಟಿಯಿಂದ ತಾವು ಏನು ಮಾಡಿದ್ದೀರಿ ಅದು ಆಗಬೇಕಾದದ್ದೆ. ಟೀಚರ್ಸ್ ಅಪಾಯಿಂಟ್‌ಮೆಂಟ್ ಆಗಿ ಬೇರೆ ಬೇರೆ ಇಲಾಖೆಗಳಲ್ಲಿ ಓಓಡಿ ಹೋಗಿ ಸೇರಿಕೊಂಡಿದ್ದಾರೆ ಅವರ ಮೇಲೆ ಹಕ್ಕುಬಾಧ್ಯತೆ move ಮಾಡಿದರು ಕೂಡ ಇವೊತ್ತಿಗೂ ಕೂಡ ಮಹುತೇಕ ಟೀಚರ್ಸ್ ಇಲಾಖೆಗೆ ಬಂದಿಲ್ಲ. ಇದರ ಬಗ್ಗೆ ಕೂಡ ಸರ್ಕಾರ ಗಮನಹರಿಸಬೇಕು. ಅವರಿಗೂ ಕೂಡ ಮೇನ್ ಸ್ಟ್ರೀಮ್ ಗೆ ಬರುವುದಕ್ಕೆ ಅವಕಾಶಗಳಿವೆಯೇ? ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ ನನ್ನ ಕಾಲದಲ್ಲಿ ಅನೇಕ ಟೀಚರ್ಸ್ ಮಂತ್ರಿಗಳಿಗೆ ಪಿ.ಎ.ಗಳಾಗಿದ್ದರು ಆದ್ದರಿಂದ ನಾನು ಶ್ರೀ ಬಸವರಾಜ ಹೊರಟ್ಟಿಯವರು ಮಂತ್ರಿಗಳಾಗಿದ್ದಾಗ ಶಿಕ್ಷಕರು ಅನ್ಯ ಇಲಾಖೆಗೆ ಓಓಡಿ ಹೋಗುವ ಬಗ್ಗೆ ಅವರ ಮೇಲೆ ಹಕ್ಕುಬಾಧ್ಯತೆಗಳನ್ನು move ಮಾಡಿದ್ದೇನು ಈಗ ಸರ್ಕಾರ ಮಾಡುತ್ತಿರುವ ಕೆಲಸದ ಬಗ್ಗೆ ಅಭಿನಂದನೆ ಸಲ್ಲಿಸುತ್ತಾ ಅದರ ಜೊತೆಗೆ ಈ ವಿಷಯದ ಬಗ್ಗೆ ಗಮನಹಸಿದ್ದೀರಾ ಎಂದು ಕೇಳುತ್ತಿದ್ದೇನೆ. ಏಕೆಂದರೆ ಇದು ಕೂಡ ಬಹಳ ಪ್ರಮುಖವಾದಂಥ ವಿಷಯವಾಗಿದೆ.

**ಸಭಾಪತಿಯವರು:–** ಇದು ಕೇವಲ ವರ್ಗಾವಣೆ ಬಿಲ್ ಇದೆ. ಆ ವಿಷಯ ಬೇರೆ.

**ಶ್ರೀ ಕಿಮ್ಮನೆ ರತ್ನಾಕರ್:–** ಮಾನ್ಯ ಸಭಾಪರಿಯವರೆ, ನಿರ್ದಿಷ್ಟವಾಗಿ ಅದರ ಬಗ್ಗೆ ದೂರು ಬಂದರೆ ನಾವು ಅವರ ಮೇಲೆ ಕ್ರಮವನ್ನು ಕೈಗೊಳ್ಳೋಣ. ಆದರೆ ಸಮಗ್ರವಾಗಿ ಎಲ್ಲಾ ಪ್ರಯತ್ನವನ್ನು ಮಾಡಿದ್ದೇವೆ. ಅರುಣ್ ಶಹಾಪೂರ್ ರವರು ಕೆಲವೊಂದು ಸಮಸ್ಯೆಗಳನ್ನು ಹೇಳಿದ್ದಾರೆ. ಟಿಜಿಟಿಯ ಬಗ್ಗೆ ಇರುವ ಸಮಸ್ಯೆಯನ್ನು ಈಗ ಬಗೆಹರಿಸುವುದಕ್ಕಾಗುವುದಿಲ್ಲ. ಖಂಡಿತವಾಗಿ 5200–5400 ಜನ ಶಿಕ್ಷಕರು ಇದ್ದಾರೆ. ಅವರಿಗೆ ಬಹಳ ದೊಡ್ಡ ತೊಂದರೆಯಾಗಿದೆ. ಅವರ ಸಮಸ್ಯೆ ಕೂಡ ಪ್ರತ್ಯೇಕವಾದ ಸಮಸ್ಯೆ ಆಗಿದೆ. ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಸಮಗ್ರವಾದ ತಿದ್ದುಪಡಿಯನ್ನು ತರತಕ್ಕಂಥ ಅಗತ್ಯತೆ ಇದೆ ಎಂದು ನನ್ನ ಭಾವನೆ ಇದೆ. ಆ ಸಂದರ್ಭದಲ್ಲಿ ಇರುವ ಹೇಳಿರತಕ್ಕಂಥ ಎಲ್ಲಾ ನ್ಯೂನ್ಯತೆಗಳನ್ನು ಸರಿಪಡಿಸಲು ಪ್ರಯತ್ನಿಸುತ್ತೇವೆ. ಈಗ ಅಲ್ಪಸ್ವಲ್ಪ ನ್ಯೂನ್ಯತೆಗಳಿದ್ದರೆ ರೂಲ್ಸ್ ನಲ್ಲಿ ನಾವು ಬದಲಾವನೆ ಮಾಡಿ ಕೊಡುತ್ತೇವೆ. ಮತ್ತೆ ಪ್ರಶ್ನೆ ಮಾಎಇದರೆ ನೋಡಿಕೋಳ್ಳೋಣ. ಅಂತಹದ್ದೇನು ಸಮಸ್ಯೆಯಾಗುವುದಿಲ್ಲ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪರಿಯವರೆ, ಕೌನ್ಸಿಲಿಂಗ್ ಪದ್ಧತಿ ಬಹಳ ಸ್ಪಷ್ಟವಾಗಿದೆ, ಕರೆಕ್ಟ್ ಆಗಿದೆ. ಯಾವುದೇ ರೀತಿಯ ಗೋಲ್‌ಮಾಲ್, ಗೊಂದಲ ಇಲ್ಲ. ಈಗ ಉದ್ಯೋಗದ ಆಸೆಯಿಂದ ಚಿಕ್ಕಮಗಳೂರು, ಉಡುಪಿ, ಶಿವಮೊಗ್ಗ ಆ ಕಡೆಯಿಂದ ಎಲ್ಲಾ ಈ ಕಡೆ ಬಂದಿದ್ದಾರೆ. ಮೊನ್ನೆ ಸದನದಲ್ಲಿ ಒಂದು ಮಾತು ಹೇಳಿದ್ದೇನೆ. ಒಂದು ಹೈಸ್ಕೂಲ್ ಹೆಣ್ಣುಮಗಳಿಗೆ ದಾರಿಯಲ್ಲಿಯೇ ಆ ಊರಿನ ಹುಡುಗರು ಅಡ್ಡ ಹಾಕಿಕೊಂಡು ಕಿಡ್ನ್ಯಾಫ್ ಮಾಡಿಕೊಂಡು ಎತ್ತುಕೊಂಡು ಹೋಗಿದ್ದಾರೆ. ಅದು ಪೊಲೀಸ್ ಸ್ಟೇಶನ್ ನಲ್ಲಿ ಎಫ್ ಐ ಆರ್ ಆಗಿದೆ. ಅವರನ್ನು ಅರಸ್ಟ್ ಮಾಡಿದರು. Local influence ಮಾಡಿದ ತಕ್ಷಣ ಬಿಟ್ಟುಬಿಟ್ಟರು. ಆ ಹೆಣ್ಣುಗಳು ಇವೊತ್ತು ಸ್ಕೂಲ್ ಗೆ ಹೋಗಬೇಕಾದರೆ ನಡಗುತ್ತದೆ. ಅಂತಹವರಿಗೇನಾದರು ಪರಿಹಾರ ಕೊಡಬೇಕಲ್ಲ.

**ಸಭಾಪತಿಯವರು:–** ಅದು individual case ಆಗುತ್ತದೆ. ಅದು ಟ್ರಾನ್ಸ್‌ಫರ್ ಕೇಸ್‌ಗೆ ಬೇಡ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪರಿಯವರೆ, ಇದು individual case ಅಲ್ಲ. ಇದು ಕೂಡ ವರ್ಗಾವಣೆಯ ಕೇಸ್ ಇದೆ. ಅವರ ಮದುವೆಯಾಗಿಲ್ಲ. ಅವರಿಗೇನಾದರು ಮಾಡಬೇಕಲ್ಲ ಎನ್ನುವುದೆ ನನ್ನ ಕೋರಿಕೆ.

**ಶ್ರೀ ಕಿಮ್ಮನೆ ರತ್ನಾಕರ್:–** ಮಾನ್ಯ ಸಭಾಪರಿಯವರೆ, ಹಿಂದೆ ಮೂಲ ವಿಧೇಯಕವನ್ನು ತಂದಾಗ ಬಹಳ ದೀರ್ಘವಾಗಿ ಎಲ್ಲಾ ಚರ್ಚೆಯಾಗಿದೆ. ಆ ನಂತರ ನಾನು ಇದನ್ನು ತಂದಿರತಕ್ಕಂಥದ್ದು. ಇದರಲ್ಲಿರತಕ್ಕಂಥದ್ದಕ್ಕೆ ನೀವು ಒಪ್ಪಿಗೆ ಕೊಡಿ. ಯಾರು ಯಾರಿಗೆ ಅವಕಾಶ ಇದೆ ಈ ಹಿಂದೆ ಏನಿತ್ತು ಅದನ್ನೇ ಕಂಟಿನ್ಯೂ ಮಾಡಿದ್ದೇವೆ ಹೊರತು ಅಂಗವಿಕಲ, ಆರೋಗ್ಯದ್ದು ಹಿಂದೆ ಇದ್ದಿದ್ದನ್ನೆ ಈಗಲೂ ನಾವು ಅಳವಡಿಸಿಕೊಂಡಿದ್ದೇನೆ. ಹೊರತು ನಾವೇನು ಬದಲಾವಣೆ ಮಾಡುವುದಕ್ಕೆ ಹೋಗಿಲ್ಲ. ಮುಂದೆ ತರತಕ್ಕಂಥದ್ದರಲ್ಲಿ ಇರತಕ್ಕಂಥದ್ದರಲ್ಲಿ ಏನಾದರೂ ನ್ಯೂನ್ಯತೆ ಇದ್ದರೆ ಖಂಡಿತವಾಗಿ ಅದನ್ನು ನಾನು ಸರಿಪಡಿಸತಕ್ಕಂಥ ಪ್ರಯತ್ನವನ್ನು ಮಾಡುತ್ಥೇನೆ ಎನ್ನತಂಕ್ಕಂಥ ಮಾತನ್ನು ಹೇಳುತ್ತಿದ್ದೇನೆ. ಇನ್ನೊಂದು ವಿಚಾರವನ್ನು ಬಸವರಾಜ ಹೊರಟ್ಟಿಯವರು ಮಾತನಾಡಿ ಸದನದಲ್ಲಿ ಆಶ್ವಾಸನೆಯನ್ನು ನೀಡಿದ್ದರೂ ಸಹ ಬದಲಾವಣೆ ಏಕೆ ತಂದಿಲ್ಲ? ಅದರ ಬಗ್ಗೆ ನಿಮ್ಮ ಮೇಲೆ ಏಕೆ ಹಕ್ಕುಚ್ಯುತಿ ತರಬಾರದೆಂದು ಹೇಳಿದ್ದಾರೆ. ಆಮೇಲೆ ನಾನು ಸೇಫ್ ಎಂದು ಗೊತ್ತಾಯಿತು. Once it is laid onthe table of the House, it becomes the property of the House. ಅದು ನನ್ನ ವಿರುದ್ಧ ಹಕ್ಕುಚ್ಯುತಿ ಮಾಡಿಸಲು ಸಾಧ್ಯವಿಲ್ಲ ಎಂದು ಗೊತ್ತಾಯಿತು. ಆದರೆ ಕೆಳಮನೆಯಲ್ಲಿ ಕೂಡ ಇದೇ ರೀತಿಯಾಗಿತ್ತು. ಆದ್ದರಿಂದ ಎಲ್ಲರೂ ಕೂಡ ಇದನ್ನೂ ಸ್ವಾಗತಿಸಿದ್ದೀರಿ ತಮ್ಮೆಲ್ಲರನ್ನು ಅಭಿನಂದಿಸಿ ಈ ವಿಧೇಯಯಕವನ್ನು ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಪ್ರಸ್ತಾಪ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2015ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ಅರ್ಗಾವನೆ ನಿಯಂತ್ರಣ)(ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

**ಖಂಡ 2**

**ಸಭಾಪತಿಯವರು:–** ಪ್ರಸ್ತಾಪ ಏನೆಂದರೆ,

"ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನ ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವ ಅಂಗೀಕಾರ**

ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):– ಮಾನ್ಯ ಸಭಾಪತಿಯವರೆ, "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2015ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ)(ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಸಭಾಪತಿಯವರು:– ಪ್ರಸ್ತಾವ ಏನೆಂದರೆ,

" ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2015ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ)(ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**9. ಖಾಸಗಿ ಸದಸ್ಯರ ನಿರ್ಣಯ**

**"ದಿನಾಂಕ:10.07.2015ರಂದು ಮಂಡಿಸಿರುವ ಅರಣ್ಯ ಮತ್ತು ಅರಣ್ಯೇತರ ಎಂಬ ಭೇದ ತೊರೆದು ಒಟ್ಟಾರೆ ಭೂಪ್ರದೇಶ ಗಮನದಲ್ಲಿಟ್ಟುಕೊಂಡು ಅರಣ್ಯೇತರ ಪ್ರದೇಶವನ್ನು ಕೂಡ ಯಾವುದೇ ಕಾರಣಕ್ಕೂ ಖಾಸಗೀಕರಣ ವ್ಯವಸ್ಥೆಗಳಿಂದ ವಂಚಿತವಾಗಿದೇ ವನಸಂಪತ್ತನ್ನು ಹೆಚ್ಚಿಸಿ ಹಸಿರೀಕರಣಗೊಳಿಸಲು ಪುರಸಭೆ, ನಗರಸಭೆ, ನಗರಾಭಿವೃದ್ಧಿ ಪ್ರಾಧಿಕಾರಗಳು, ನೀರಾವರಿ, ಲೋಕೋಪಯೋಗಿ, ಶಿಕ್ಷಣ, ಕೈಗಾರಿಕಾ ಇಲಾಖೆಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಲಭ್ಯವಾಗಬಲ್ಲ ಭೂಪ್ರದೇಶ ಮತ್ತು ಹಸರೀಕರಣಕ್ಕಾಗಿ ಲಭ್ಯವಿರುವ**

ಸಂಪನ್ಮೂಲದಲ್ಲಿ ಅಗತ್ಯ ಹಣಕಾಸಿನ ಅನುಕೂಲತೆ ಕಲ್ಪಿಸಿಕೊಂಡು ಹಸಿರೀಕರಣಕ್ಕೆ ಅದ್ಯತೆ ನೀಡಲು 'ಮರಸಂರಕ್ಷಣಾ ಅಧಿನಿಯಮ' ದ ಅಡಿಯಲ್ಲಿ ಮೇಲ್ಕಾಣಿಸಿದ ಇಲಾಖೆಗಳಿಗೂ ಹೊಣೆಗಾರಿಕೆ ನಿಗದಿಗೊಳಿಸಲು ಅದಲ್ಲದೇ ಸರ್ಕಾರಿ ಕಛೇರಿಗಳಲ್ಲಿನ ಆವರಣಗಳಲ್ಲಿ ಲಭ್ಯವಿರುವ ಜಾಗಗಳಲ್ಲಿ ಸಸಿಗಳನ್ನು ಕಡ್ಡಾಯವಾಗಿ ನೆಟ್ಟು ಬೆಳೆಸಲು ಸಂಬಂಧಿಸಿದ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿಸಲು ಈ ವಿಚಾರಗಳನ್ನು ಕೈಗೆತ್ತಿಕೊಳ್ಳುವ ಕುರಿತು''

**ಶ್ರೀ ಸಿ.ಹೆಚ್. ವಿಜಯಶಂಕರ(ನಾಮನಿರ್ದೇಶಿತು):–** ಮಾನ್ಯ ಸಭಪತಿಯವರೆ, ಒಂದು ಐತಿಹಾಸಿಕ ಸರ್ವಕಾಲಿಕ ವಿಚಾರಕ್ಕೆ ಸಂಬಂಧಪಟ್ಟಂತಹ ಒಂದು ಖಾಸಗಿ ನಿರ್ಣಯವನ್ನು ಈ ಸದನದಲ್ಲಿ ಮಂಡನೆ ಮಾಡುಂತಹ ಅವಕಾಶವನ್ನು ಕಲ್ಪಿಸಿದ್ದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನು ಸಮರ್ಪಣೆ ಮಾಡುತ್ತಾ, ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದೆ ಮಂಡಿಸುತ್ತೇನೆ.

''ಅರಣ್ಯ ಮತ್ತು ಅಣ್ಯೇತರ ಎಂಬ ಭೇದ ತೊರೆದು ಒಟ್ಟಾರೆ ಭೂಪ್ರದೇಶ ಗಮನದಲ್ಲಿಟ್ಟುಕೊಂಡು ಅರಣ್ಯೇತರ ಪ್ರದೇಶವನ್ನು ಕೂಡ ಯಾವುದೇ ಕಾರಣಕ್ಕೂ ಖಾಸಗೀಕರಣ ವ್ಯವಸ್ಥೆಗಳಿಂದ ವಂಚಿತವಾಗದೇ ವನಸಂಪತ್ತನ್ನು ಹೆಚ್ಚಿಸಿ ಹಸಿರೀಕರಣಗೊಳಿಸಲು ಪುರಸಭೆ, ನಗರಸಭೆ, ನಗರಾಭಿವೃದ್ಧಿ ಪ್ರಾಧಿಕಾರಗಳು, ನೀರಾವರಿ, ಲೋಕೋಪಯೋಗಿ, ಶಿಕ್ಷಣ, ಕೈಗಾರಿಕಾ ಇಲಾಖೆಗಳು ತಮ್ಮ ತಮ್ಮ ವ್ಯಪ್ತಿಯಲ್ಲಿ ಲಭ್ಯವಾಗಬಲ್ಲ ಭೂಪ್ರದೇಶ ಮತ್ತು ಹಸರೀಕರಣಕ್ಕಾಗಿ ಲಭ್ಯವಿರುವ ಸಂಪನ್ಮೂಲದಲ್ಲಿ ಅಗತ್ಯ ಹಣಕಾಸಿನ ಅನುಕೂಲತೆ ಕಲ್ಪಿಸಿಕೊಂಡು ಹಸರೀಕರಣಕ್ಕೆ ಆಧ್ಯತೆ ನೀಡಲು 'ಮರಸಂರಕ್ಷಣಾ ಅಧಿನಿಯಮ' ದ ಅಡಿಯಲ್ಲಿ ಮೇಲ್ಕಾಣಿಸಿದ ಇಲಾಖೆಗಳಿಗೂ ಹೊಣೆಗಾರಿಕೆ ನಿಗದಿಗೊಳಿಸಲು ಅದಲ್ಲದೇ ಸರ್ಕಾರಿ ಕಛೇರಿಗಳಲ್ಲಿನ ಅವರಣಗಳಲ್ಲಿ ಲಭ್ಯವಿರುವ ಜಾಗಗಳಲ್ಲಿ ಸಸಿಗಳನ್ನು ಕಡ್ಡಾಯವಾಗಿ ನೆಟ್ಟು ಬೆಳೆಸಲು ಸಂಬಂಧಿಸಿದ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿಸಲು ಈ ವಿಚಾರಗಳನ್ನು ಕೈಗೆತ್ತಿಕೊಳ್ಳುವ ಕುರಿತು''

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

''ಅರಣ್ಯ ಮತ್ತು ಅರಣ್ಯೇತರ ಎಂಬ ಭೇದ ತೊರೆದು ಒಟ್ಟಾರೆ ಭೂಪ್ರದೇಶ ಗಮನದಲ್ಲಿಟ್ಟುಕೊಂಡು ಅರಣ್ಯೇತರ ಪ್ರದೇಶವನ್ನು ಕೂಡ ಯಾವುದೇ ಕಾರಣಕ್ಕೂ ಖಾಸಗೀಕರಣ ವ್ಯವಸ್ಥೇಗಳಿಂದ ವಂಚಿತವಾಗದೇ ವನಸಂಪತ್ತನ್ನು ಹೆಚ್ಚಿಸಿ ಹಸಿರೀಕರಣಗೊಳಿಸಲು ಪುರಸಭೆ, ನಗರಸಭೆ, ನಗರಾಭಿವೃದ್ಧಿ ಪ್ರಾಧಿಕಾರಗಳು, ನೀರಾವರಿ, ಲೋಕೋಪಯೋಗಿ, ಶಿಕ್ಷಣ, ಕೈಗಾರಿಕಾ ಇಲಾಖೆಗಳು ತಮ್ಮ ತಮ್ಮ ವ್ಯಪ್ತಿಯಲ್ಲಿ ಲಭ್ಯವಾಗಬಲ್ಲ ಭೂಪ್ರದೇಶ ಮತ್ತು ಹಸರೀಕರಣಕ್ಕಾಗಿ ಲಭ್ಯವಿರುವ ಸಂಪನ್ಮೂಲದಲ್ಲಿ ಅಗತ್ಯ ಹಣಕಾಸಿನ ಅನುಕೂಲತೆ ಕಲ್ಪಿಸಿಕೊಂಡು ಹಸರೀಕರಣಕ್ಕೆ ಆಧ್ಯತೆ ನೀಡಲು 'ಮರಸಂರಕ್ಷಣಾ ಅಧಿನಿಯಮ' ದ ಅಡಿಯಲ್ಲಿ ಮೇಲ್ಕಾಣಿಸಿದ ಇಲಾಖೆಗಳಿಗೂ ಹೊಣೆಗಾರಿಕೆ ನಿಗದಿಗೊಳಿಸಲು ಅದಲ್ಲದೇ ಸರ್ಕಾರಿ ಕಛೇರಿಗಳಲ್ಲಿನ ಅವರಣಗಳಲ್ಲಿ ಲಭ್ಯವಿರುವ ಜಾಗಗಳಲ್ಲಿ ಸಸಿಗಳನ್ನು ಕಡ್ಡಾಯವಾಗಿ ನೆಟ್ಟು ಬೆಳೆಸಲು ಸಂಬಂಧಿಸಿದ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿಸಲು ಈ ವಿಚಾರಗಳನ್ನು ಕೈಗೆತ್ತಿಕೊಳ್ಳುವ ಕುರಿತು''

<u>ಪ್ರಸ್ತಾವವನ್ನು ಮಂಡಿಸಲಾಯಿತು</u>

**ಶ್ರೀ ಸಿ.ಹೆಚ್. ವಿಜಯಶಂಕರ(ನಾಮನಿರ್ದೇಶಿತು):–** ಮಾನ್ಯ ಸಭಪತಿಯವರೆ, ಪ್ರಾರಂಭದಲ್ಲಿ ಖಾಸಗಿ ನಿರ್ಣಯದ ಬಗ್ಗೆ ಚರ್ಚೆಗೆ ಅವಕಾಶ ಕೊಡುವ ಮೊದಲು ತಮ್ಮ ಮುಖಾಂತರ ಸರ್ಕಾರಕ್ಕೆ ನನ್ನ ಮನವಿ ಏನೆಂದರೆ, ಇದರ ವ್ಯಾಪ್ತಿಯಲ್ಲಿ ಅರೇಳು ಇಲಾಖೆಗಳು ಬರುತ್ತದೆ. ನಾನು ಚರ್ಚೆಗೆ ತೆಗೆದುಕೊಳ್ಳುವಂತಹ ಖಾಸಗಿ

ನಿರ್ಣಯದಲ್ಲಿಯೇ ಬರುತ್ತದೆ. ಸ್ವತಃ ಅರಣ್ಯ ಮಂತ್ರಿಗಳಾಗಲಿ ಅಥವಾ ಇತರ ಇಲಾಖಾ ಮಂತ್ರಿಗಳಾಗಲಿ ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ಅಧಿಕಾರಿಗಳಾಗಲಿ ಈ ಸದನದಲ್ಲಿ ನನಗೆ ಕಾಣುತ್ತಿಲ್ಲ. ನಾನು ಸ್ವತಃ ಅರಣ್ಯ ಮಂತ್ರಿಯಾಗಿಯೂ ಕೂಡ ಕೆಲಸವನ್ನು ಮಾಡಿದ್ದೇವೆ. ಜೊತೆಗೆ ಕಾಡಿನ ಭಾಗದಿಂದಲೂ ಕೂಡ ಬಂದವನಾಗಿದ್ದೇನೆ. ನಾನು ನಾಗರಹೊಳೆ ಭಾಗದಿಂದ ಬಂದಿರುವಂಥವನು. ಹೀಗಾಗಿ ಅರಣ್ಯದ ಬಗ್ಗೆ ಇರುವಂತಹ ಅನುಭವ ಮತ್ತು ಕಾಳಜಿ, ಎರಡನೆಯದಾಗಿ ನಾನು ಅರಣ್ಯ ಮಂತ್ರಿಯಾಗಿ ಕೆಲಸವನ್ನು ಮಾಡಿದಂತಹ ಸಂದರ್ಭದಲ್ಲಿ ನನ್ನ ಇದರ ಮಹತ್ವದಲ್ಲಿ ತೆಗೆದುಕೊಳ್ಳಬೇಕಾದಂತಹ ಕ್ರಮಗಳು ಇವೆಲ್ಲವನ್ನೂ ಕೂಡ ಕ್ರೂಢೀಕರಿಸಿ ಈ ಸದನ ಈ ರೀತಿಯ ಐತಿಹಾಸಿಕ ವಿಚಾರಕ್ಕೆ ಒಪ್ಪಿಗೆ ಕೊಡಬೇಕು ಎನ್ನುವ ಕಾರಣದ ಹಿನ್ನೆಲೆಯಲ್ಲಿ ನಾನು ಈ ಖಾಸಗಿ ನಿರ್ಣಯವನ್ನು ತೆಗೆದುಕೊಂಡು ಬಂದಿದೇನೆ. ಆದ್ದರಿಂದ ಸಂಬಂಧಪಟ್ಟಂತಹ ಎಲ್ಲಾ ಮಂತ್ರಿಗಳು ಈ ಸಮಯದಲ್ಲಿ ಸದನದಲ್ಲಿದ್ದರೆ ಉಪಯುಕ್ತವಾಗುತ್ತದೆ ಎನ್ನುವಂತಹ ಮಾತನ್ನು ತಮ್ಮ ಮುಖಾತರೀ ಸಮಯದಲ್ಲಿ ಸದನದಲ್ಲಿದ್ದರೆ ಉಪಯುಕ್ತವಾಗುತ್ತೆ ಎನ್ನುವಂತಹ ಮಾತನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುತ್ತಿದ್ದೆನೆ. ಮಾನ್ಯ ಸಭಾಪತಿಯವರೆ, ಈ ಖಾಸಗಿ ನಿರ್ಣಯವನ್ನು ಸದನದಲ್ಲಿ ಮಂಡಿಸುವುದಕ್ಕೆ ಕೆಲವೊಂದು ಬಹಳ ಪ್ರಮುಖವಾದಂತಹ ಕಾರಣಗಳಿವೆ. ಆ ಕಾರಣಗಳಲ್ಲಿ ನೋಡಿ, ಸಹಜ ಮಳೆ ಮತ್ತು ಶುದ್ಧವಾದಂತಹ ಗಾಳಿ ಇದು ಅತ್ಯಂತ ಅನಿವಾರ್ಯ ಎನ್ನುವುದು ನಮಗೆಲ್ಲರಿಗೂ ಕೂಡ ಬಹಳ ಸ್ಪಷ್ಟವಾಗಿ ಗೊತ್ತಿದೆ. ಸಹಜ ಮಳೆ ಬೇಕು. ಶುದ್ಧವಾದಂತಹ ಗಾಳಿ ಬೇಕೆಂದರೆ ನಮ್ಮವರಿಗೂ ಗೊತ್ತಿರುವ ಹಾಗೆ ಶೇಕಡ 33 ಭಗ ಅಂದರೆ ಭೂಮಿಯ ಮೂರನೆಯ ಒಂದು ಭಾಗ ಅರಣ್ಯ ಪ್ರದೇಶ ಇರಬೇಕಾಗುತ್ತದೆ. ಇಲ್ಲಿ ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿರುಂಥದ್ದು ಕೇವಲ 22 ಭಾಗ ಮಾತ್ರ ಈ 22 ಭಾಗದಲ್ಲಿಯೂ ಕೂಡ ಅರನ್ಯ ಇಲಾಖೆಗೆ ಕಾಯ್ದೆ ಒಂದು ಕಡೆಗೆ ಬಂದಿದೆ. ಆ ಅರಣ್ಯ ಹಕ್ಕು ಕಾಯ್ದೆ ಆಧಾರದ ಮೇಲೆ ಆದಿವಾಸಿಗಳಿಗೆ ಅರಣ್ಯ ಭೂಮಿಯನ್ನು ಬಿಟ್ಟುಕೊಡಬೇಕಾಗಿದೆ. ಅರಣ್ಯ ಇಲಾಖೆಯ ಕಾಯ್ದೆಗೆ ಇವತ್ತು ಸಂಸತ್ತು ಒಪ್ಪಿಗೆ ಕೊಟ್ಟಿದೆ. ಅದು ಕಾಯ್ದೆಯಾಗಿ ಹೊರಬಂದಿದೆ. ಹೀಗಾಗಿ ಅರಣ್ಯ ಹಕ್ಕು ಕಾಯ್ದೆಯಡಿಯಲ್ಲಿ ಆದಿವಾಸಿಗಳಿಗೆ ನಾನು ಇರುವಂತಹ ಶೇಖಡ 22 ಭಾಗದಲ್ಲಿ ಭೂಮಿಯನ್ನು ನಾವು ಬಿಟ್ಟುಕೊಡಬೇಕಾಗುತ್ತದೆ. ಎರಡನೆಯದಾಗಿ ಇರುವಂಥದ್ದು ಕಾಡಂಚಿನ ಗ್ರಾಮಗಳು. ಕಾಡಂಚಿನ ಗ್ರಾಮಗಳು ಇವತ್ತು ಏನಿದೆ. ನ್ಯಾಷನಲ್ ಪಾರ್ಕ್ ಆದಿಯಾಗಿ ಎಲ್ಲೆಲ್ಲಿ ಈ ರೀತಿಯಾಗಿ ಭೂಮಿ ಇದೆ ಮೂರು ಎಕರೆಗಿಂತಲೂ ಕಡಿಮೆ ಇರುವಂತಹ ಭೂಮಿಯನ್ನು ಯಾವುದೇ ಕಾರಣಕ್ಕೂ ನಾವು ಮುಟ್ಟುವುದಿಲ್ಲ. ಯಾವುದೇ ಕಾರಣಕ್ಕೂ ಅವರಿಗೆ ನಾವು ತೊಂದರೆಯನ್ನು ಕೊಡುವುದಿಲ್ಲ. ಅವರನ್ನು ನಾವು ಸಣ್ಣ ಹಿಡುವಳಿದಾರರು ಎಂದು ಪರಿಗಣಿಸುತ್ತೇವೆ. ಅವರನ್ನು ಯಾವುದೇ ಕಾರಣಕ್ಕೂ ಭೂಮಿಯಿಂದ ತೆರವುಗೊಳಿಸುವುದಿಲ್ಲ. ಈ ಮಾತನ್ನು ಸರ್ಕಾರ ಬಹಳ ಸ್ಪಷ್ಟವಾಗಿ ಹೇಳಿರುವಂಥದ್ದನ್ನು ಕೇಳಿದೆ. ಆ ಹಿನ್ನೆಲೆಯಲ್ಲಿಯೂ ಕೂಡ ಅರಣ್ಯ ಇಲಾಖೆಯ ಭೂಮಿಯನ್ನು ಕಳೆದುಕೊಳ್ಳುತ್ತೇನೆ. ಅದರ ಜೊತೆಯಲ್ಲಿ ಅಭಿವೃದ್ಧಿಯಾಗಬೇಕಾಗಿರುವಂಥದ್ದು ಅನಿವಾಯ್. ಅದು ರಸ್ತೆ ವಿಚಾರಕ್ಕೆ ಇರಬಹುದು, ನೀರಾವರಿ ಯೋಜನೆಗಳಿರಬಹುದು, ಕುಡಿಯುವ ನೀರಿನ ವಿಚಾರಗಳಿರಬಹುದು ಈ ರೀತಿಯ ಯೋಜನೆಗಳಿಗೆ ಅವಶ್ಯವಿರುವಾಗ ನಾವು ಅರಣ್ಯ ಭೂಮಿಯನ್ನು ಬಿಟ್ಟು ಕೊಟ್ಟಿದ್ದೇನೆ. ಯಾವುದೇ ಕಾರಣಕ್ಕೆ ಇಂತಹ ಯೋಜನೆಗಳೀಗೆ ಭೂಮಿ ಕೊಡುವುದಿಲ್ಲ. ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಈ ಹಂತದಲ್ಲಿಯೂ ಕೂಡ ಈ ಯೋಜನೆಗಳಿಗಾಗಿ ಅರಣ್ಯ ಇಲಾಖೆಯ ಭೂಮಿಯನ್ನು ಬಿಟ್ಟು ಕೊಟ್ಟಿದ್ದೇವೆ. ಬಿಟ್ಟು ಕೊಡುತ್ತಿದ್ದೇವೆ. ಇದಕ್ಕಿಂತಲೂ ಹೆಚ್ಚಾಗಿ ನಮ್ಮ ಮುಂದೆ ಚರ್ಚೆಯಲ್ಲಿರುವಂಥದ್ದು ಈ ಪಶ್ಚಿಮ ಘಟ್ಟದ ವಿಭಾಗ. ಪ್ರಶ್ಚಿಮ ಘಟ್ಟ ವ್ಯಾಪ್ತಿಯ ಕಾಡಿನ ಪ್ರದೇಶದ ವಿಚಾರಕ್ಕೆ ಬಂದಾಗ ಆ ಕಾಡಿನ ಒಳಗಡೆ ಇರುವಂತಹ ಗ್ರಾಮಗಳೇನಿದೆ, ಆ ಗ್ರಾಮಗಳನ್ನು ಯಾವುದೇ ಕಾರಣಕ್ಕೆ ತೆರವುಗೊಳಿಸುವುದಕ್ಕೆ ಸಾಧ್ಯವಿಲ್ಲ.

**(ಈ ಹಂತದಲ್ಲಿ ಸಭಾಪತಿಯವರ ಪೀಠವನ್ನು ಪ್ಯಾನಲ್ ಸದಸ್ಯರಾದಂತಹ ಶ್ರೀ ರಾಮಚಂದ್ರಗೌಡರು ಅಲಂಕರಿಸಿದರು)**

ತೆರವುಗೊಳಿಸುವುದಕ್ಕೂ ಕೂಡ ಸಾಧ್ಯವಿಲ್ಲ. ತೆರವುಗೊಳಿಸುವುದಕ್ಕೂ ಕೂಡ ಸಾಧ್ಯವಾಗುವುದಿಲ್ಲ. ಆ ಹಿನ್ನಲೆಯಲ್ಲಿಯೂ ಕೂಡ ಶೇಕಡ 22 ಅರಣ್ಯ ಭೂಮಿ ಎಂದು ಪರಿಗಣಿಸಿದ್ದೇವೆ. ಆ ವ್ಯಾಪ್ತಿಯಲ್ಲಿ ಬರುವ ಭಾಗ

ಅದೂ ಕೂಡ ಸೇರಿ ಕೊಂಡಿದೆ. ಈ ಹಿನ್ನಲೆಯಲ್ಲಿಯೂ ಕೂಡ ಕಾಡಿನ ಭೂಮಿ ಅಥವಾ ಅರಣ್ಯ ಇಲಾಖೆಗೆ ಸೇರಿದಂತಹ ಭೂಮಿ ಎಂದು ನಾವು ಪರಿಗಣಿಸುವುದಕ್ಕೆ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಶೇಕಡ 22 ಭಾಗ ಎಂದು ಕರೆದಿದ್ದೇವೆ. ಈ ಎಲ್ಲಾ ಕಾರಣಗಳಿಗೋಸ್ಕರವಾಗಿ ಶೇಕಡ 4 ರಿಂದ 5 ಭಾಗ ಅರಣ್ಯ ಭೂಮಿಯನ್ನು ಕಳೆದುಕೋಳ್ಳುತ್ತಿದ್ದೇವೆ. ನಾನು ಶೇಕಡ 22 ಭಾಗ ಅರಣ್ಯ ಎಂದು ಹೇಳಿದೆ. ಶೇಕಡ 22 ಭಾಗ ಭೂಮಿ ಎಂದು ಇದೆ. ಅದಕ್ಕಿಂತಲೂ ಹೆಚ್ಚು ಭೂಮಿಯನ್ನು ಅರಣ್ಯ ಭೂಮಿಯನ್ನು ವಿಸ್ತರಿಸಿವುದಕ್ಕೆ ಸಾಧ್ಯವಿಲ್ಲ. ಇರುವಂತಹ ಭೂಮಿಯಲ್ಲಿ ನಾನು ಮೇಲೆ ಇರುವಂತಹ ಕಾರಣಗಳನ್ನು ಹೇಳಿದೆ, ಈ ಎಲ್ಲಾ ಕಾರಣಗಳ ಹಿನ್ನಲೆಯಲ್ಲಿ ಅರಣ್ಯ ಇಲಾಖೆಯ ಭೂಮಿಯನ್ನು ಕಳೆದುಕೊಳ್ಳುತ್ತಿರುವುದು. ನಾನು ಶೇಖಡ 22 ಭಾಗ ಅರಣ್ಯ ಎಂದು ಹೇಳಿದೆ. ಶೆಕಡ 22 ಭಾಗ ಭೂಮಿ ಎಂದು ಇದೆ. ಅದಕ್ಕಿಂತಲೂ ಹೆಚ್ಚು ಭೂಮಿಯನ್ನು ಅರಣ್ಯ ಭೂಮಿ ಎಂದು ವಿಸ್ತಾರ ಮಾಡುವುದಕ್ಕೆ ಸಾಧ್ಯವಿಲ್ಲ. ಒಂದು ಇಂಚು ಕೂಡ ಅರಣ್ಯ ಭೂಮಿಯನ್ನು ವಿಸ್ತರಿಸಿವುದಕ್ಕೆ ಸಾಧ್ಯವಿಲ್ಲ. ಇರುವಂತಹ ಭೂಮಿಯಲ್ಲಿ ನಾನು ಮೇಲೆ ಇರುವಂತಹ ಕಾರಣಗಳನ್ನು ಹೇಳಿದೆ, ಈ ಎಲ್ಲಾ ಕಾರಣಗಳ ಹಿನ್ನೆಲೆಯಲ್ಲಿ ಅರಣ್ಯ ಇಲಾಕೆಯ ಭೂಮಿಯನ್ನು ಕಳೆದುಕೊಳ್ಳುತ್ತಿರುವುದು. ಹಾಗಾದರೆ ಮಾನ್ಯ ಸಭಾಪತಿಯವರೆ, ಮಾರ್ಗ, ಏನು ಅರಣ್ಯೇತರ ಭೂಮಿ ಇದೆ, ಅದು ಶೇಕಡ 78 ಭಾಗ ಇದೆ. ಅ ಅರಣ್ಯೇತರ ಭೂಮಿಯಲ್ಲಿ ನಾವು ಏನು ಶೇಕಡ 22 ಇರುವುದನ್ನು ಶೇಕಡ 33ಕ್ಕೆ ತೆಗೆದುಕೊಂಡು ಹೋಗಬೇಕಾಗಿದೆ, ಆ 12 ರಿಂದ 15 ಭಾಗದ ಭೂಮಿಯನ್ನು ಅಲ್ಲಿ ಹಸಿರುಕರಣಕ್ಕಾ ಒಳಪಡಿಸಬಹುದೇ? ಅ ರೀತಿಯ ಸಾಧ್ಯತೆಗಳಿಲ್ಲವೇ? ಈ ಯೋಚನೆಯನ್ನು ಈ ಸದನ ಮಾಡಬೇಕು. ಆ ರೀತಿಯ ನಿರ್ಣಯಕ್ಕೆ ಸದನ ಒಪ್ಪಿಗೆಯನ್ನು ಕೊಡಬೇಕು ಎನ್ನುವ ಕಾರಣಕ್ಕೋಸ್ಕರವಾಗಿ ಈ ರೀತಿ ಖಾಸಗಿ ನಿರ್ಣಯವನ್ನು ಮಸೂದೆಯನ್ನು ಈ ಸದನ ಮುಂದೆ ಮಂಡನೆ ಮಾಡುವಂತಹ ಅವಕಾಶವನ್ನು ಕೇಳಿ ಪಡೆದುಕೊಂಡಿದ್ದೇನೆ.

ಮಾನ್ಯ ಸಭಾಪತಿಯವರೆ, ನಾನು ನಮ್ಮ ರಾಜ್ಯದಲ್ಲಿ ಈ ರೀತಿ ಅರಣ್ಯೇತರ ಭೂಮಿಯಲ್ಲಿ ಹಸಿರುಕರಣವನ್ನು ಮಾಡುವುದಕ್ಕೆ ವಿಫಲವಾದಂತಹ ಅವಕಾಶಗಳಿವೆ. ಅದರ ಕಡೆ ಗಮನವನ್ನು ಕೊಡಬೇಕಾದಂತಹ ಜವಾಬ್ದಾರಿ ಮಾತ್ರ ನಮ್ಮ ಮೇಲೆ ಮತ್ತು ಈ ಸದನದ ಮೇಲಿದೆ. ಈ ದಿಕ್ಕಿನಲ್ಲಿ ನಾವು ಪ್ರಾಮಾಣಿಕವಾಗಿ ಈ ಕೊರತೆಯನ್ನು ತುಂಬಿಕೊಳೋಳುವುದಕ್ಕೆ ಪ್ರಯತ್ನ ಮಾಡಿದ್ದೆ ಆದರೆ ನಿಶ್ಚಿತವಾಗಿ ಈ ಕೊರತೆಯನ್ನು ತುಂಬುವುದಕ್ಕೆ ಅವಕಾಶ ಇದೆ ಎಂದು ಹೇಳುವುದಕ್ಕೆ ಕಾರಣಗಳು ಇದಕ್ಕೆ ಸಮರ್ಥನೆಯನ್ನು ಕೊಡುತ್ತದೆ ಎಂದು ತಮ್ಮ ಮುಖಾಂತರ ಹೇಳುವುದಕ್ಕೆ ಬಯಸುತ್ತಿದ್ದೇನೆ. ಈ ಕಾರಣಕ್ಕಾಗಿ ನಾವು ಕೈಗೆತ್ತಿಕೊಳ್ಳಬೇಕಾದಂತಹ ಯೋಜನೆ, ತೆಗೆದುಕೊಳ್ಳಬೇಕಾಂದತಹ ಕಾನೂನು ಕ್ರಮಗಳು, ಗಮನಿಸಬೇಕಾದಂತಹ ವಿಚಾರಗಳು ಇಲಾಖಾವಾರು ತೆಗೆದುಕೊಳ್ಳಬೇಕಾಂದತಹ ಕ್ರಮಗಳು ಈ ಹಿನ್ನೆಲೆಯಲ್ಲಿ ಈ ಸದನ ಒಂದು ನಿರ್ಣಯಕ್ಕೆ ಬಂದಿದ್ದೆ ಆದರೆ ನಿಶ್ಚಿತವಾಗಿ ಶೇಕಡ 33 ಭಾಗದ ನಾವು ಏನು ಅರಣ್ಯವನ್ನು ನಮ್ಮ ಮಧ್ಯೆದಲ್ಲಿ ಕಾಣಬೇಕು ಎನ್ನುವಂತಹ ವಿಚಾರ ಇದೆಯೋ ಅದು ಕಾಣುವುದಕ್ಕೆ ಸಾಧ್ಯವಿದೆ ಎಂದು ಈ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಮೇಲೆ ಹೇಳಿರುವಂತಹ ಇಲಾಖೆಯ ಯಾವ ಮಂತ್ರಿಗಳು ಕೂಡ ಸದನದಲ್ಲಿ ಕಾಣುತ್ತಿಲ್ಲ. ಏಕೆಂದರೆ, ಈ ಖಾಸಗಿ ನಿರ್ಣಯವನ್ನು ನಾನೇನು ಮಂಡನೆ ಮಾಡಿದ್ದೇನೆ. ಅದರಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಯಾವ್ಯಾವ ಇಲಾಖೆಗಳ ಜವಾಬ್ದಾರಿ ಇದರಲ್ಲಿದೆ ಎನ್ನುವುದನ್ನು ಇಲಾಕಾವರು ಕಾಣಿಸಿದ್ದೇನೆ. ಸರ್ಕಾರ ಕಡೆಯಲ್ಲಿ ಮಂತ್ರಿಗಳು ಕುಳಿತುಕೊಳ್ಳಬೇಕಾಗಿರುವಂತಹ ಎಲ್ಲಾ ಚೇರ್‌ಗಳು ಖಾಲಿ ಇರುವುದನನು ನಾನು ಕಾಣುತ್ತಿದ್ದೇನೆ. ಆ ಇಲಾಖೆಗಳ ಯಾವುದೇ ಮಂತ್ರಿಗಳನ್ನು ಕಾಣುವುದಕ್ಕೆ ಸಾಧ್ಯವಾಗುತ್ತಿಲ್ಲ. ಆ ಇಲಾಖಾ ಕಾರ್ಯದರ್ಶಿಗಳು ಕೂಡ ಇಲ್ಲಿ ಕಾಣುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ನಾನು ತಂದಿರುವಂತಹ ಖಾಸಗಿ ನಿರ್ಣಯ ಅನುಷ್ಠಾನ ಆಗಬೇಕಾದರೆ, ಸಂಬಂಧಪಟ್ಟ ಇಲಾಖಾ ಕಾರ್ಯದರ್ಶಿಗಳು ಮತ್ತು ಮಂತ್ರಿಗಳು ಇದ್ದು ಅವರ ಹೊಣೆಗಾರಿಕೆಗೆ ಪೂರಕವಾದಂತಹ ಜವಾಬ್ದಾರಿಯುತವಾದಂತಹ ಮಾತುಗಳನ್ನು ಹೇಳಬೇಕಾಗುತ್ತದೆ. ಇದಕ್ಕೆ ಪೂರಕವಾಗಿ ಸ್ಪಂದನೆಯನ್ನು ಮಾಡಬೇಕಾಗುತ್ತದೆ. ಇದುವರೆಗೂ ಈ ಇಲಾಖೆಗಳು ಕಾಣದೇ ಇರುವಂತಹ ವಿಚಾರದಲ್ಲಿ ಕಣ್ಣು ತೆರೆಸುವಂತಹ ಕೆಲಸವನ್ನು ಮಾಡುತ್ತೇವೆ. ಈಗಲೂ ಕೂಡ ಕಣ್ಣ ತೆರೆಯಲಿಲ್ಲ ಎಂದರೆ, ಯಾವುದೇ ಕಾರಣಕ್ಕೂ ಕೂಡ ಈ ದಿಕ್ಕಿನಲ್ಲಿ ನಾವು ನ್ಯಾಯವನ್ನು

ಕಂಡುಕೊಳ್ಳಬೇಕಾಗಿದೆ ಆ ನ್ಯಾಯಾವನ್ನು ನಾವು ಸಮಾಜಕ್ಕೆ ಈ ರಾಜ್ಯಕ್ಕೆ ನಾವು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಎಂದು ತಮ್ಮ ಮುಖಾಂತರ ಹೇಳುತ್ತಿದ್ದೇನೆ. ಇದು ಒಂದು ರೀತಿಯ ಬೇಜಬ್ದಾರಿಯ ಹೊಣೆಗಾರಿಕೆಯನ್ನು ಕಾಣದೇ ಇರುವಂತಹ ವರ್ತನೆ ಎಂದು ನಾನು ಭಾವಿಸುತ್ತೇನೆ. ಮತ್ತೆ ಎರಡನೆಯದಾಗಿ ಹೊಣೆಗಾರಿಕೆಯಿಂದ ನುಣಿಕಿಕೊಂಡಂತಹ ವರ್ತನೆ ಈ ಸದನದಲ್ಲಿ ಮಸೂದೆಯಾಗಲಿ, ಖಾಸಗಿ ನಿರ್ಣಯವಾಗಲಿ ಸದನದ ಇಡೀ ಗಮನವನ್ನು ಸೆಳೆಯಬೇಕೆಂದು ತಂದಂತಹ ವಿಚಾರಗಳಾಗಲಿ ಅದಕ್ಕೆ ಸರ್ಕಾರ ಆದಿಯಾಗಿ ಸ್ಪಷ್ಟವಾದಂತಹ ಕಾಳಜಿ ಒಂದು ಬದ್ದತೆಯನ್ನು ಕಾಣಬೇಕಾಗುತ್ತದೆ. ಇದರಲ್ಲಿ ಒಂದು ಅಭಿಪ್ರಾಯವೆಂದು ತಮ್ಮ ಮುಖಾಂತರ ಹೇಳುತ್ತಿದ್ಧೇನೆ. ಈ ಮೇಲೆ ಕಾಣಿಸಿದ ಎಲ್ಲಾ ಕಾರಣಗಳು ಮತ್ತು ಉದ್ದೇಶಗಳ ಈಡೇರಿಕೆಯ ಹಿನ್ನಲೆಯಲ್ಲಿ..

**ವೈಸ್ ಛೇಮರ್ನ್:-** ಸದನದಲ್ಲಿ ಈಗ ಇಬ್ಬರು ಮಂತ್ರಿಗಳಿದ್ದಾರೆ. ಮಾನ್ಯ ಸದಸ್ಯರು ಸದನದಲ್ಲಿ ಸಂಬಂಧಪಟ್ಟಂತಹ ಸಚಿವರು ಇಲ್ಲವೆಂದು ಆರೋಪ ಮಾಡುತ್ತಿದ್ದಾರೆ. ಆದ್ದರಿಂದ ಆ ಇಬ್ಬರು ಸಚಿವರನ್ನು ಯಾರು ಡಿಸ್ಟರ್ಬ್ ಮಾಡಬೇಡಿ. ಇರುವಂತಹ ಸಚಿವರ ಈಗ ಏನು ಸದಸ್ಯರು ಹೇಳುತ್ತಿದ್ದಾರೆ ಅದನ್ನು ನೋಟ್ ಮಾಡಿಕೊಳ್ಳಲಿ. ದಯವಿಟ್ಟು ನಿಮ್ಮ ನಿಮ್ಮ ಜಾಗಗಳಿಗೆ ಹೋಗಿ (ಗೌರವನ್ವಿತ ಸದಸ್ಯರಾದ ಶ್ರೀ ಶರವನ ಮಟ್ಟೂರು ಮತ್ತು ಶ್ರೀ ಎಂ.ಡಿ.ಲಕ್ಷ್ಮೀನಾರಾಯಣರವರನ್ನು ಕುರಿತು) ಇಬ್ಬರು ಮಂತ್ರಿಗಳಿಗೆ ಫ್ರೀಯಾಗಿ ಇರುವುದಕ್ಕೆ ಬಿಡಿ. ಮಾನ್ಯ ಸಿ.ಹೆಚ್. ವಿಜಯಶಂಕರ್‌ರವರೆ, ನೀವು ಮಾತನಾಡುತ್ತಿರುವುದನ್ನು ಇಬ್ಬರು ಮಂತ್ರಿಗಳು ನೋಟ್ ಮಾಡಿಕೊಳ್ಳುತ್ತಿದ್ದಾರೆ.

**ಶ್ರೀ ಸಿ.ಹೆಚ್. ವಿಜಯಶಂಕರ್:-** ಮಾನ್ಯ ಸಭಾಪತಿಯವರೆ, ನಾವು ಹಿಂದೆ ಸಕಾರವನ್ನು ನಡೆಸುವಂತಹ ಸಮಯದಲ್ಲಿ ಇದೇ ಸದನದಲ್ಲಿ ಇಬ್ಬರು ಮಂತ್ರಿಗಲಿದ್ದಾರೆ, ಮೂರು ಜನ ಮಂತ್ರಿಗಳಿದ್ದಾರೆಂದು ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಮತ್ತು ವಿರೋಧ ಪಕ್ಷದ ನಾಯಕರು ಸಭಾತ್ಯಾಗವನ್ನು ಮಾಡಿರುವಂತಹ ಉದಾಹರಣೆಗಳಿವೆ.

**ವೈಸ್ ಛೇಮರ್ನ್:-** ಸದನದಲ್ಲಿ ವಿಪ್ ಇಲ್ಲ. ಅವರು ಇದ್ದರೆ ಅವರಿಗಾದರು ಹೇಳುತ್ತಿದ್ದೆ.

**ಶ್ರೀ ಸಿ.ಹೆಚ್. ವಿಜಯಶಂಕರ್:-** ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟಂತಹ ಮಂತ್ರಿಗಳಿಲ್ಲ, ಸಭಾನಾಯಕರು ಇಲ್ಲ, ಸರ್ಕಾರದ ಮುಖ್ಯ ಸಚೇತಕರು ಇಲ್ಲ. ನಾನು ಯಾವ ಇಲಾಖೆಯನ್ನು ತೆಗೆದುಕೊಳ್ಳುತ್ತೇನೆ. ಆ ಇಲಾಖೆಯ ಕಾರ್ಯದರ್ಶಿಗಳು ಕೂಡ ಇಲ್ಲ.

**ವೈಸ್ ಛೇಮನ್‌ರವರು:-** ಅರಣ್ಯ ಇಲಾಖೆಯ ಪ್ರಧಾನ ಕಾರ್ಯದಶಿಗಳಾದ ಶ್ರೀಯುತ ವೇಣುಗೋಪಾಲ್ ಅವರಿದ್ದಾರೆ.

(ಈ ಹಂತದಲ್ಲಿ ಅರಣ್ಯಸಚಿವರಾದ ಶ್ರೀ ಬಿ.ರಮಾನಾಥ ರೈ ಅವರು ಸದನದೊಳಗೆ ಪ್ರವೇಶಿಸಿದರು)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಅರನ್ಯ ಸಚಿವರು ಬಂದ ಕೂಡಲೇ ಆಡಳಿತ ಪಕ್ಷದವರೆಲ್ಲರಿಗೂ ಬಹಳ ಖುಷಿಯಾಗುತ್ತಿದೆ.

**ಶ್ರೀ ಬಿ.ರಮಾನಾಥ ರೈ:-** ಮಾನ್ಯ ಸಭಾಪತಿಗಳೆ, ಮಾನ್ಯಸದಸ್ಯರುಗಳು ನಾನು ಅಲ್ಲಿಯೂ ಇಲ್ಲ, ಇಲ್ಲಿಯೂ ಇಲ್ಲ ಎಂದು ಆರೋಪ ಮಾಡುವುದಕ್ಕೆ ಮೊದಲು ಕೆಳಮನೆಯಲ್ಲಿದ್ದಾರೆಯೋ, ಇಲ್ಲವೋ ಎಂಬುದನ್ನು ವಿಷಯವಾದ್ದರಿಂದ ನಾನು. ಹೀಗಿರುವಾಗ ನನ್ನ ಮೇಲೆ ತಾವು ಈ ರೀತಿ ಆರೋಪ ಮಾಡುವುದು ಸರಿಯಾಗುವುದಿಲ್ಲ.

**ಶ್ರೀ ಸಿ.ಹೆಚ್. ವಿಜಯಶಂಕರ್:-** ಸನ್ಮಾನ್ಯ ಸಭಾಪತಿಯವರೆ, ನಾನು ಖಾಸಗಿ ಮಸೂದೆಯನ್ನು ತಂದಿರುವಂಥದ್ದು, ಅರಣ್ಯ ಇಲಾಖೆ ಸುಧಾರಣೆಯಾಗಬೇಕು ಎಂದಲ್ಲ; ಅರಣ್ಯ ಇಲಾಖೆ ಎಲ್ಲಿಯೋ ತಾನು ಗಮನ ಹರಿಸುವುದಕ್ಕೆ ಸಾಧ್ಯವಾಗದಿರುವಂತಹ ವಿಷಯಗಳನ್ನು ಇಲ್ಲಿ ತಾವು ಗಮನ ಹರಿಸಬೇಕೆಂದು ಅರಣ್ಯ ಇಲಾಖೆಯ ಮೇಲೆ ಒತ್ತಡ ತರಬೇಕು ಎನ್ನುವಂತಹ ಕಾರಣಕ್ಕೋಸ್ಕರ ಈ ಖಾಸಗಿ ನಿರ್ಣಯವನ್ನು ತಂದಿಲ್ಲ.

ನಾನು ಖಾಸಗಿ ನಿರ್ಣಯವನ್ನು ತಂದಿರುವಂಥದ್ದು, ಅರಣ್ಯೇತರ ಭೂಮಿಯಲ್ಲಿ ಹಸಿರೀಕರಣದ ಉದ್ದೇಶದ ಹಿನ್ನೆಲೆಯಲ್ಲಿ. ಬೇರೆ ಬೇರೆ ಇಲಾಖೆಗಳು ತಮ್ಮ ವ್ಯಾಪ್ತಿಯಲ್ಲಿ ಇವತ್ತಿನ ದಿವಸ ಈ ಹಸಿರೀಕರಣಕ್ಕೆ ಆದ್ಯತೆಯನ್ನು ಕೊಡುವುದಕ್ಕೆ ಸಾಧ್ಯತೆ ಇದೆ, ಆ ಸಾಧ್ಯತೆಗಳು ಪೂರ್ಣವಾಗಿ ಅನುಷ್ಠಾನಗೊಂಡಿಲ್ಲ ಎನ್ನುವಂತಹ ಕಾರಣಕ್ಕೋಸ್ಕರ ಬೇರೆ ಬೇರೆ ಇಲಾಖೆಗಳು ಇದರ ಕಡೆಗೆ ಗಮನ ಹರಸಬೇಕೆನ್ನುವ ಕಾರಣಕ್ಕೋಸ್ಕರ ತಂದಿರುವಂತಹ ಖಾಸಗಿ ನಿರ್ಣಯವಿದು. ಹೀಗಾಗಿ ನನಗೆ ಅರಣ್ಯ ಇಲಾಖೆಗಿಂತ ಹೆಚ್ಚಾಗಿ ಯಾವ ಯಾವ ಇಲಾಖೆಗಳನ್ನು ನಾನು ಖಾಸಗಿ ನಿರ್ಣಯದಲ್ಲಿ ಕಾಣಿಸಿದ್ದೇನೆ, ಆ ಇಲಾಖಾ ಕಾರ್ಯದರ್ಶಿಗಳು ಮತ್ತು ಆ ಇಲಾಖಾ ಮಂತ್ರಿಗಳು ಸದನದಲ್ಲಿ ಉಪಸ್ಥಿತರಿರಬೇಕಾಗಿತ್ತು ಎನ್ನವುದು ನನ್ನ ಬೇಡಿಕೆ.

**ಶ್ರೀ ಬಿ.ರಮಾನಾಥ ರೈ:–** ಅರಣ್ಯ ಇಲಾಖೆಯೂ ಸೇರಿದಂತೆ ಎಂದಿದೆ.

**ಶ್ರೀ ಸಿ.ಹೆಚ್. ವಿಜಯಶಂಕರ್:–** ಈ ಬಗ್ಗೆ ತಾವು ಇವತ್ತಿನ ಕಾರ್ಯಕಲಾಪ ಪಟ್ಟಿಯ ನಿರ್ಣಯದಲ್ಲೇನಿದೆ ಎಂಬುದನ್ನು ದಯಮಾಡಿ ನೋಡಿ ಆದ್ದರಿಮದ ಮೇಲೆ ಕಾಣಿಸಿದ ಎಲ್ಲಾ ಕಾರಣಗಳ. ಉದ್ದೇಶಗಳ ಬೇಡಿಕೆ ಈಡೇರಿಕೆಯ ಹಿನ್ನೆಲೆಯಲ್ಲಿ ಕೆಲವು ಇಲಾಖೆಗಳು ಅಂದರೆ ನೀರಾವರಿ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಲೋಕೋಪಯೋಗಿ ಇಲಾಖೆ, ಶಿಕ್ಷಣ ಇಲಾಕೆ, ಕೃಷಿ ಇಲಾಖೆ, ಕೈಗಾರಿಕಾ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಜ್ ಇಲಾಖೆ ಇಷ್ಟು ಇಲಾಖೆಗಳು ಸಹ ತಮ್ಮ ತಮ್ಮ ವ್ಯಾಪ್ತಿಯಲ್ಲಿ ಲಭ್ಯವಿರುವಂತಹ ಭೂಮಿಯನ್ನು ಮತ್ತು ಅವರ ಇಲಾಖಾ ವ್ಯಾಪ್ತಿಯಲ್ಲಿ ಲಭ್ಯವಿರುವಂತಹ ಮಾನವ ಸಂಪನ್ಮೂಲವನ್ನು ಮತ್ತೆ ಅವರಿಗೆ ಇಲಾಖಾವಾರು ಲಭ್ಯವಾಗುವಂತಹ ಅನುದಾನವನ್ನು ಅವರು ಬಳಕೆ ಮಾಡಿಕೊಳ್ಳುವುದಕ್ಕೆ ಬಯಸಿದ್ದೇ ಆದರೆ ನಮ್ಮ ಪರಿಧಿಯಲ್ಲಿ, ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ನಾವು ಅದ್ಭುತವಾದಂತಹ ಬದಲಾವಣೆಯನ್ನು ಕಾಣುವುದಕ್ಕೆ ಸಾಧ್ಯವಿದೆ. ಈ ಕಾರಣಕ್ಕಾಗಿ ಮೇಲ್ಕಾಣಿಸಿದ ಎಲ್ಲ ಇಲಾಖೆಗಳು ಪ್ರತ್ಯೇಕವಾಗಿ ತಮ್ಮ ತಮ್ಮ ವ್ಯಾಪ್ತಿಯಲ್ಲಿ ಯೋಜನೆಯನ್ನು ರೂಪಿಸಬೇಕಾಗುತ್ತದೆ, ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಇಲಾಖಾವಾರು ಲಭ್ಯವಿರುವಂತಹ ಅನುದಾನದಲ್ಲಿ ಇದಕ್ಕಾಗಿ ಅವರು ಅನುದಾನವನ್ನು ಕಾದಿರಿಸಬೇಕಾಗುತ್ತದೆ; ಇದಕ್ಕಾಗಿಯೇ ಒಂದು ಕಾಲಬದ್ಧ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ಹಸಿರೀಕರಣ ಕಾರ್ಯವನ್ನು ಇಲಾಖಾ ವ್ಯಾಪ್ತಿಯಲ್ಲಿ ಕೈಗೆತ್ತಿಕೊಳ್ಳಬೇಕಾಗುತ್ತದೆ. ಅದಕ್ಕೆ ನಾನು ಹೇಳುವಂಥದ್ದೇನೆಂದರೆ, ನಾವು ಸುಪ್ರೀಂ ಕೋರ್ಟ್‌ನಲ್ಲಿ ಹಸಿರು ಪೀಠ (Green Tribunal)ಎಂಬುದನ್ನು ಕಾಣುತ್ತೇವೆ. ಅಂದರೆ ಈ ದೇಶದ ಸರ್ವೋಚ್ಚ ನ್ಯಾಯಾಲಯದಲ್ಲಿ ಪರಿಸರದಲ್ಲಿ ಹಸಿರನ್ನು ಕಾಣುವಂತಹ ಉದ್ದೇಶದ ಹಿನ್ನೆಲೆಯಲ್ಲಿ; ಅರಣ್ಯಗಳನ್ನು ಸಂರಕ್ಷಿಸುವಂತಹ ಹಿನ್ನೆಲೆಯಲ್ಲಿ; ವನಸಂಪತ್ತನ್ನು ಕಾಪಾಡುವಂತಹ ಹಿನ್ನೆಲೆಯಲ್ಲಿ ಇದಕ್ಕಿರುವಂತಹ ಮಹತ್ವದ ಕಾರಣಕ್ಕಾಗಿ ಸ್ವತಃ ಒಂದು ಪ್ರತ್ರೇಕ ಪೀಠ ಇರುವಂಥದ್ದನ್ನು ನಾವು ಕಾಣುತ್ತೇವೆ. ರಾಜ್ಯ ಸರ್ಕಾರಕ್ಕೆ ಸಹ ಆ ರೀತಿಯ ಎಚ್ಚರಿಕೆ ಬೇಕಲ್ಲವೆ. ನಾನು ಉಲ್ಲೇಖಿಸಿದಂತಹ ಇಲಾಖೇಗಳ ವ್ಯಾಪ್ತಿಯಲ್ಲಿ ಕೂಡ ಹಸಿರುಪೀಠ ಅಥವಾ ಹಸಿರು ವಿಭಾಗ ಎನ್ನುವಂಥದ್ದು ಇಲಾಖಾವಾರು ಇರಬೇಕಾಗುತ್ತದೆ. ಈ ರೀತಿಯ ಒಂದು ಹಸಿರೀಕರಣ ವಿಭಾಗ ಪ್ರತಿಯೊಂದು ಇಲಾಖೆಯ ವ್ಯಾಪ್ತಿಯಲ್ಲಿ ಕೂಡ ಬರಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ನಾವೇನು 22% ರಿಂದ 33%ಗೆ ಹೋಗಲಿಕ್ಕೆ 12% ಪ್ರಮಾಣದ ವನಸಂಪತ್ತಿನ ಕೊರತೆಯನ್ನು ಕಾಣುತ್ತಿದ್ದೇವೆ. ಇದನ್ನು ನಿಶ್ಚಿತವಾಗಿ ಕೂಡ ತುಂಬಿಕೋಳ್ಳುವುದಕ್ಕೆ ಸಾಧ್ಯಾವಿದೆ. ಏಕೆಂದರೆ ನಮಗಿರುವ ಒಟ್ಟು ಭೂಪ್ರದೇಶದಲ್ಲಿ ಅರಣ್ಯ ಭೂಮಿಯ ಪ್ರಮಾಣ ಕೇವಲ 22% ಮಾತ್ರವಾಗಿದ್ದು, ಅರಣ್ಯೇತರ ಭೂಮಿಯ ಪ್ರಮಾಣ 78% ಎಂಬುದನ್ನು ನಾವು ವಿಶೇಷವಾಗಿ ಗಮನಿಸಬೇಕಾಗುತ್ತದೆ. ಈ ಎಲ್ಲ ಕಾರಣಗಳ ಹಿನ್ನೆಲೆಯಲ್ಲಿ ಕೆಳಕಂಡಂತೆ ಇಲಾಖಾವಾರು ಅನುಸರಿಸಬೇಕಾದ ಹಾಗೂ ಗನಿಸಬೇಕಾದ ವಿಷಯಗಳು ಹಾಗೂ ಇಲಾಖೆಯ ಹೊಣೆಗಾರಿಕೆ, ಇಲಾಖಾವಾರು ಜವಾಬ್ದಾರಿಯನ್ನು ಈ ಕೆಳಕಂಡಂತೆ ನಾನು ಅರ್ಥೈಸಬಯಸುತ್ತೇನೆ.

ಮೊಸಲನೆಯದಾಗಿ ನಾನು ನೀರಾವರಿ ಇಲಾಖೆಯನ್ನು ಕೈಗೆತ್ತಿಕೊಳ್ಳುತ್ತೇನೆ. ನೀರಾವರಿ ಇಲಾಖೆಯ ಸಚಿವರಾಗಲಿ ಅಥವಾ ಕಾರ್ಯದರ್ಶಿಗಳಾಗಲಿ ಸದನದಲ್ಲಿ ಈಗ ಉಪಸ್ಥಿತರಿಲ್ಲ. ನಾನು ಹಿಂದೆ ಕೂಡ ಪ್ರಸ್ತಾಪ ಮಾಡಿದ್ದೇನೆ. ಈಗಲೂ ಸಹ ನಾನು ಮತ್ತೊಮ್ಮೆ ಹೇಳಬಯಸುವುದೇನೆಂದರೆ, ನೀರಾವರಿ ಇಲಾಖೆಯ

ವಿಚಾರದಲ್ಲಿ ಅತ್ಯಂತ ಹೊಣೆಗೇಡಿತನದ ವರ್ತನೆಯನ್ನೇನಾದರೂ ಕಾಣುವುದಕ್ಕೆ ಸಾಧ್ಯವಿದ್ದರೆ ಮೊದಲನೆಯ ಸ್ಥಾನದಲ್ಲಿ ನೀರಾವರಿ ಇಲಾಖೆ ನಿಲ್ಲುತ್ತದೆ. ಅವರು ಈ ಹಸಿರೀಕರಣಕ್ಕೆ ಆದ್ಯತೆ ಕೊಡುವುದಿರಲಿ, ಹಸಿರೀಕರಣಕ್ಕೋಸ್ಕರ ಎಲ್ಲೆಲ್ಲಿ ಅಣೆಕಟ್ಟುಗಳನ್ನು ಕಳೆದ ಸುಮಾರು ಮುವತ್ತು–ನಲವತ್ತು ವರ್ಷಗಳ ಹಿಂದೆ ನಿರ್ಮಾಣ ಮಾಡಿದ್ದಾರೆ, ಆ ಕಟ್ಟೆಯ ಕೆಳಭಾಗದಲ್ಲಿ ಸುಮಾರು ನಾನ್ನೂರು–ಐನೂರು ಎಕರೆ ನಿರ್ಮಾಣ ಮಾಡಿದ್ದಾರೆ, ಆ ಕಟ್ಟೆಯ ಕೆಳಭಾಗದಲ್ಲಿ ಸುಮಾರು ನಾನ್ನೂರು–ಐನೂರು ಎಕರೆ ಭೂಮಿಯನ್ನು ವನಸಂಪತ್ತನ್ನು ಹೆಚ್ಚಿಸುವ ಉದ್ದೇಶಕ್ಕಾಗಿಯೇ ಮೀಸಲಿರಿಸಿದ್ದಾರೆ. ಅಲ್ಲಿ ಉದ್ಯಾನವನಗಳನ್ನು ಕೂಡ ನಿರ್ಮಾಣ ಮಾಡಿ ಸುಮಾರು ಐವತ್ತುವರ್ಷಗಳೇ ಕಳೆದಿವೆ. ಆ ಕಬಿನಿಕಟ್ಟೆಯ ವ್ಯಾಪ್ತಿಯಲ್ಲಿ ಸುಮಾರು 500 ಎಕರೆ ಪ್ರದೇಶವನ್ನು ಈ ರೀತಿಯ ಹಸಿರೀಕರಣಕ್ಕಾಗಿಯೇ ಉದ್ಯಾನವನಗಳನ್ನು ನಿರ್ಮಿಸುವ ಸಲುವಾಗಿ ಮೀಸಲಿರಿಸಲಾಗಿದೆ. ಅದೇರಿತಿ ಹಾರಂಗಿಕಟ್ಟೆಯ ವ್ಯಾಪ್ತಿಯಲ್ಲಿ ಸುಮಾರು 400 ಎಕರೆಗಳಷ್ಟು ಜಾಗವನ್ನು ಈ ಉದ್ದೇಶಕ್ಕಾಗಿ ಮೀಸಲಿರಿಸಲಾಗಿದೆ.

ನೀರಾವರಿ ಇಲಾಖೆಯ ಮುಖಾಂತರ ಬೇರೆ ಬೇರೆ ಪ್ರದೇಶದಲ್ಲಿ ವನಸಂಪತ್ತನ್ನು ಹೆಚ್ಚಿಸುವುದಕ್ಕೆ ಸಾಧ್ಯಾವಿದೆ ಎಂದು ನಾನೇನು ಹೇಳುತ್ತಿದ್ದೇನೆ. ಆ ಪುಣ್ಯಾತ್ಮ ಸರ್.ಎಂ.ವಿಶ್ವೇಶ್ವರಯ್ಯನವರು ಕನ್ನಂಬಾಡಿ ಕಟ್ಟೆಯನ್ನು ಕಟ್ಟಿದಂತಹ ಸಂದರ್ಭದಲ್ಲಿ ಅ ಉದ್ಯಾನವನವನ್ನು ನಿರ್ಮಾಣ ಮಾಡಿದ ಕಬಿನಿಕಟ್ಟೆ, ಹಾರಂಗಿಕಟ್ಟೆ ಪ್ರದೇಶದಲ್ಲಿ ನಾವು ಕಾಣುವುದಕ್ಕೆ ಸಾಧ್ಯವಾಗಿಲ್ಲ. ಹೀಗಾಗಿ ಕನ್ನಂಬಾಡಿ ಕಟ್ಟೆಯನ್ನು ಹೊರತುಪಡಿಸಿದರೆ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಎಲ್ಲೆಲ್ಲಿ ಆ ರೀತಿಯ ಕಟ್ಟೆಯನ್ನು ನಿರ್ಮಿಸಲಾಗಿದೆ. ಆ ಯಾವುದೇ ಭಾಗದಲ್ಲಿ ಕೂಡ ಈ ರೀತಿಯ ಉದ್ಯಾನವನಗಳಲ್ಲಿ ನಮಗೆ ಕಾಣಲಿಕ್ಕೆ ಸಾಧ್ಯಾವಾಗಲಿಲ್ಲ. ಈ ಜವಾಬ್ದಾರಿಯನ್ನು, ಹೊಣೆಗಾರಿಕೆಯನ್ನು ನಾವು ನೇರವಾಗಿ ನೀರಾವರಿ ಇಲಾಖೆಯ ಮೇಲೆ ವಿಧಿಸಬೇಕಾಗುತ್ತದೆ. ಅನೇಕ ಸಂದರ್ಭಗಳಲ್ಲಿ ನಾವು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ, ಆದರೆ ಆದರಿಂದ ಒಂದೇ ಒಂದು ಪೈಸೆಯಷ್ಟು ಕೂಡ ಪರಿವರ್ತನೆ, ಇಲಾಖೆಯಲ್ಲಿ ಏನಾದರೂ ಬದಲಾವಣೆ ಕಾಣುವುದಕ್ಕೆ ಸಾಧ್ಯವಾಗಿಲ್ಲ. ಇದು ಬೇಜವಾಬ್ದಾರಿಯ ಪರಮಾವಧಿಯಾಗಿದ್ದು, ಅದನ್ನು ನಾವು ಇವತ್ತಿನ ದಿವಸ ಕಾಣುತ್ತಿದ್ದೇವೆ. ನಾನು ಅರಣ್ಯ ಇಲಾಖೆಯ ಮಂತ್ರಿಗಳನ್ನು, ಶಿಕ್ಷಣ ಇಲಾಖೆಯ ಮಂತ್ರಿಗಳನ್ನು ಈ ವಿಚಾರದಲ್ಲಿ ಅಭಿನಂದಿಸುತ್ತೇನೆ. ಏಕೆಂದರೆ ನಾನು ಇವತ್ತು ತಂದಿರವಂತಹ ಖಾಸಗಿ ನಿರ್ಣಯವೇನಿದೆ. ಇದು ಅರಣ್ಯ ಇಲಾಖೆಗೆ ಸಂಬಂಧಿಸಿಲ್ಲ. ಅರಣ್ಯೇತರ ಭೂಮಿಗೆ ಸಂಬಂಧಪಟ್ಟಂತಹ ಒಂದು ಖಾಸಗಿ ನಿರ್ಣಯ. ಅರಣ್ಯ ಇಲಾಖೆಯ ಸಚಿವರು ಈ ಸದನಕ್ಕೆ ಬೆಳಿಗ್ಗೆ ಮೊದಲೇ ಬಂದು ಕುಳಿತಿದ್ದರು. ಅರಣ್ಯ ಇಲಾಖೆಯ ಎಲ್ಲ ಅಧಿಕಾರಿಗಳು ಕೂಡ ಪ್ರಾರಂಭದಲ್ಲಿಯೇ ಬಂದು ಕುಳಿತಿದ್ದರು. ಈ ಹಸಿರನ್ನು ಹೆಚ್ಚಿಸುವ ದಿಕ್ಕಿನಲ್ಲಿ, ವನಸಂಪತ್ತನ್ನು ಹೆಚ್ಚಿಸುವ ಹಿನ್ನೆಲೆಯಲ್ಲಿ ಅವರಿಗಿರುವಂತಹ ಬದ್ಧತೆ ಇತರೆ ಇಲಾಖೆಗಳಿಗೆ ಏಕಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಹಾಗಾದರೆ ಇದು ಕೇವಲ ಅರಣ್ಯ ಇಲಾಖೆಯ ಜವಾಬ್ದಾರಿಯೇ? ಅರಣ್ಯ ಸಂಪತ್ತನ್ನು ಹೆಚ್ಚಿಸುವುದು, ವನಸಂಪತ್ತನ್ನು ವೃದ್ಧಿಸುವುದು ಕೇವಲ ಅರಣ್ಯ ಇಲಾಖೆಯ ಜವಾಬ್ದಾರಿಯೇ? ಇದು ಸಕಾರದ ಸಾಮೂಹಿಕ ಜವಾಬ್ದಾರಿಯಲ್ಲವೆ; ಸಾಮೂಹಿಕ ಹೊಣೆಗಾರಿಕೆಯಲ್ಲವೆ. ಕೇವಲ ಅರಣ್ಯ ಇಲಾಖೆಯ ಮೇಲೆ ಮಾತ್ರ ಈ ಜವಾಬ್ದಾರಿಯನ್ನು ಹೊರಿಸುವುದಕ್ಕಾಗುತ್ತದೆಯೇ? ಅರಣ್ಯ ಇಲಾಖೆಗೆ ಮಾತ್ರ ಈ ಕರ್ತವ್ಯ, ಈ ಜವಾಬ್ದಾರಿ ಸೀಮಿತವಾಗಿದೆಯೇ? ಹಸಿರೀಕರಣ ಎನ್ನುವುದು ಕೇವಲ ಅರಣ್ಯ ಇಲಾಖೆಯ ಜವಾಬ್ದಾರಿಯೇ ಅಥವಾ ಸರ್ಕಾರದ, ಇಡೀ ಸಮಾಜದ ಜವಾಬ್ದಾರಿಯೇ? ಇದನ್ನು ಅರ್ಥೈಸುವುದಕ್ಕೋಸ್ಕರ ಈ ಖಾಸಗಿ ನಿರ್ಣಯವನ್ನು ನಾನು ಇವತ್ತು ತಮ್ಮ ಈ ಸದನದಲ್ಲಿ ಮಂಡನೆ ಮಾಡಿದ್ದೇನೆ. ಅದರಲ್ಲಿ ಮೊದಲನೆಯದಾಗಿ ನಾನು ಈ ನೀರಾವರಿ ಇಲಾಖೆಯನ್ನು ತೆಗೆದುಕೊಂಡಿದ್ದೇನೆ. ಏಕೆಂದರೆ ನಮ್ಮ ರಾಜ್ಯದಲ್ಲಿ ಅರಣ್ಯೇತರ ಭೂಮಿಯಲ್ಲಿ ಅತ್ಯಂತ ಹೆಚ್ಚು ಭೂಮಿ ಇರುವಂಥದ್ದು ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ. ಅದರಲ್ಲಿಯೂ ಸಹ ಒಟ್ಟು ಶೇಕಡ 64 ಭಾಗ ನಮಗೆ ಕೃಷಿಗೆ ಯೋಗ್ಯವಾದಂತಹ ಭೂಮಿ ಇದೆ ಎಂದು ನಾವು ಪರಿಗಣಿಸುವುದಾದರೆ ಅದರಲ್ಲಿ 27% ಭಾಗ ನೀರಾವರಿಗೆ ಒಳಪಟ್ಟಿದೆ. ಇದರಲ್ಲಿ ವಿಶೇಷವೆಂದರೆ, ಒಂದು ಕಡೆಗೆ ನಾಲೆಯಲ್ಲಿ ನೀರು, ನಾಲಾ ಅಚ್ಚುಕಟ್ಟು ವ್ಯಾಪ್ತಿಯಲ್ಲರುವಂತಹ ಕೆರೆಗಳಲ್ಲಿ ನೀರು ಇರುತ್ತದೆ. ಎರಡನೆಯದಾಗಿ ನಾವು ಯಾವ ಕಟ್ಟೆಗಳನ್ನು ಕಟ್ಟಿದ್ದೇವೆಯೋ ಆ ಕಟ್ಟೆಗಳಲ್ಲಿ ಸಹ ನೀರಿರುತ್ತದೆ. ಹೀಗಾಗಿ ಇದು ನೀರು ಲಭ್ಯವಿರುವಂತಹ

ಭೂಮಿಯಾಗಿರುತ್ತದೆ. ಎರಡನೆಯದಾಗಿ ಎಲ್ಲೆಲ್ಲಿ ನೀರಾವರಿ ಭೂಮಿ ಎಂದು ಕರೆಯುತ್ತೇವೆ ಅಲ್ಲಿ ಸಾಕಷ್ಟು ಮಳೆಯಾಗುತ್ತದೆ. ಅದು ಬರಗಾಲಪೀಡಿತ ಪ್ರದೇಶದಂತಲ್ಲ, ಒಣ ಭೂಮಿ ಪ್ರದೇಶದಂತಲ್ಲ; ಗುಲ್ಬರ್ಗಾ, ಬೀದರ್ ರೀತಿಯಲ್ಲ ಈ ಭಾಗ. ಇದು ಸದಾ ಹಚ್ಚಹಸಿರಿನಿಮದ ಕೂಡಿರುವಂತಹ ಈ ಭೂಮಿಯಲ್ಲಿ ಏನು 77% ಭಾಗ ನೀರಾವರಿ ಭೂಮಿ ಎಂದು ನಾನು ಹೇಳಿದ್ದೇನೆ, ಇದರಲ್ಲಿ ಅಧಿಕೃತ ವರದಿಯ 11,700, ಕಿಲೋ ಮೀಟರ್‌ನಷ್ಟು ನಾಲಾ ರಸ್ತೆ ಇದೆ. ಈ ನಾಲಾ ರಸ್ತೆಯಲ್ಲಿ ನಾವು ಮರಗಿಡಗಳನ್ನು ಬೇಳೆಸುತ್ತೇವೆ ಎನ್ನುವುದಾದರೆ ಬಹುಶಃ ನೀರಾವರಿ ಅಚ್ಚುಕಟ್ಟು ವ್ಯಾಪ್ತಿ ಸಂಪೂರ್ಣ ಹಸಿರೀಕರಣವಾಗಿ ಹೋಗುತ್ತದೆ.

ಇದು ನೀರಾವರಿ ಇಲಾಖೆಯ ನೈತಿಕ ಜವಾಬ್ದಾರಿ. ನೀರಾವರಿ ಇಲಾಖೆಯ ಜವಾಬ್ದಾರಿ ಏನೆಂದರೆ, ನೀರಾವರಿ ಇಲಾಖೆಯ ಅಚ್ಚುಕಟ್ಟು ಭೂಮಿಯ ವ್ಯಾಪ್ತಿಯಲ್ಲಿ ಹಸಿರನ್ನು ಹೆಚ್ಚಿಸಬೇಕು, ಮರಗಿಡಗಳನ್ನು ಬೆಳಸಬೇಕು, ಹಸಿರೀಕರಣ ಆಗಬೇಕು, ನೀರಾವರಿ ಇಲಾಖೆಯ ಬಹುದೊಡ್ಡ ಜವಾಬ್ದಾರಿಯಲ್ಲಿ ಇದೂ ಕೂಡ ಒಂದು. ಆ ನೈತಿಕ ಜವಾಬ್ದಾರಿಯನ್ನು, ಹೊಣೆಗಾರಿಕೆಯನ್ನು ನೀರಾವರಿ ಇಲಾಖೆ ಏನಾದರು ಪೂರೈಸಿದೆಯಾ?ಅದಕ್ಕೆ ಬೇಕಾದಂತಹ ಕೆಲಸವೇನಾದರು ಕಳೆದ 60 ವರ್ಷದಿಂದ ಆಗಿದೆಯೇ?ಎಂದು ಯೋಚನೆ ಮಾಡಿದರೆ ನನಗೆ ನಾಚಿಕೆ ಆಗುತ್ತದೆ. ಆ ರೀತಿ ಜವಾಬ್ದಾರಿಯನ್ನು ಹೊಣೆಗಾರಿಕೆಯನ್ನು ನೀರಾವರಿ ಇಲಾಖೆಯಲ್ಲಿ ಕಾಣುವುದಕ್ಕೆ ಸಾಧ್ಯವಿಲ್ಲ. ಆ ಕಾರಣಕ್ಕೋಸ್ಕರ ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, 11.700 ಕಿ.ಮೀಟರ್ ನಾಲಾ ರಸ್ತೆಯನ್ನು ಕಾಣುತ್ತೇವೆ. ಈ ನಾಲೆಯಲ್ಲಿ ಸದಾ ನೀರನ್ನು ಕಾಣುತ್ತೇವೆ, ಸಾಕಷ್ಟು ಮಳೆ, ನೀರು ಲಭ್ಯವಿರುವಂತಹ ಜಾಗ ಅತ್ಯಂತ ಸುಲಭವಾಗಿ ಮರಗಿಡಗಳನ್ನು ಬೆಳೆಸುವುದಕ್ಕೆ ಅವಕಾಶವಿದೆ. ಅದಕ್ಕೆ ನಾನು ನೀರಾವರಿ ಇಲಾಖೆಗೆ ತಮ್ಮ ಮೂಲಕ ಹೇಳಬಯಸುವುದೇನೆಂದರೆ, ದಯವಿಟ್ಟು ಈ ನಾಲಾ ರಸ್ತೆಯಲ್ಲಿ ನಾಲಾ ಬಂಡ್‌ನಲ್ಲಿ ಕೆರೆ ಅಚ್ಚುಕಟ್ಟಿನಲ್ಲಿ, ಅಚ್ಚುಕಟ್ಟು ವ್ಯಾಪ್ತಿಯಲ್ಲಿ ನೀರಾವರಿ ಇಲಾಖೆಗೆ ಎಷ್ಟೇಷ್ಟು ಭೂಮಿ ಲಭ್ಯವಿದೆ ಅಲ್ಲಿ ಮರಗಿಡಗಳನ್ನು ಬೆಳೆಸುವದಕ್ಕೆ ಪ್ರಯತ್ನ ಮಾಡಿ. ಮೊದಲನೆಯದು ಸಸಿಗಳನ್ನು ನಡೆಬೇಕು, ಎರಡನೆಯದಾಗಿ ಈ ನೀರಾವರಿ ಇಲಾಖೆಯಲ್ಲಿ ನೀರು ಬಳಕೆದಾರರ ಸಂಘಗಳಿಗೆ ನಿರ್ವಹಣೆಗೆಂದು ನೀರಾವರಿ ಇಲಾಖೆ ಕೊಡುತ್ತದೆ. ನಾನು ತಮ್ಮ ಮೂಲಕ ನೀರಾವರಿ ಇಲಾಖೆಗೆ ಹೇಳಬಯಸುವುದೇನೆಂದರೆ, ದಯವಿಟ್ಟು ಸಸಿಗಳನನು ನೆಡಿ. ಇವತ್ತಿನ ದಿವಸ ಹುಣಸೆ ಹಣ್ಣಿಗೆ ಬಹಳಷ್ಟು ಬೇಡಿಕೆ ಇದೆ. ಅದೇ ರೀತಿ ನೇರಳೆ ಹಣ್ಣು, ಬೇವಿನ ಬೀಜ, ಹೊಂಗೆಬೀಜ, ಸೀಗೇಕಾಯಿ, ಅಂಟುವಾಳ ಕಾಯಿಗಳಿಗೆ ಬಹಳಷ್ಟು ಬೇಡಿಕೆ ಇದೆ. ಆದುದರಿಂದ ಈ ಮರಗಳನನು ನೆಟ್ಟು ಕೇವಲ ಮೂರು ವರ್ಷ ಇದನ್ನು ನೀರಾವರಿ ಇಲಾಖೆ ಕಾಪಾಡಿ ನಾಲ್ಕನೇ ವರ್ಷಕ್ಕೆ ನೀರು ಬಳಕೆದಾರರ ಸಂಘಕ್ಕೆ ಕೊಡಿ. ನೀರು ಬಳಕೆದಾರರ ಸಂಘಗಳಿಗೆ ಕೊಡುವಾಗ ಮರದ ಮೇಲಿನ ಹಕ್ಕನ್ನು ನೀರಾವರಿ ಇಲಾಕೆ ವಹಿಸಿಕೊಳ್ಳಲಿ. ಆದರೆ ಅದರ ಫಸಲಿನ ಅಧಿಕಾರವನ್ನು ನೀರು ಬಳಕೆದಾರರ ಸಂಘಗಳಿಗೆ ಕೊಡಲಿ. ಐದು ವರ್ಷ ಅಥವಾ ಆರು ವರ್ಷದ ನಂತರ ಫಸಲು ಬರುತ್ತದೆ, ಹುಣಸೆ ಫಸಲು ಇರಬಹುದು, ಬೇವಿನ ಫಸಲು ಇರಬಹುದು, ಹೊಂಗೆ ಬೀಜವಿರಬಹುದು, ಅಥವಾ ನಾನು ಬೇರೆ ಬೇರೆ ಹೇಳಿದೆ, ಬರುವಂತಹ ಫಸಲು ಏನಿದೆ....

**ಶ್ರೀ ಬಿ.ರಾಮಕೃಷ್ಣ:–** ಮಾನ್ಯ ಸಭಾಪತಿಯವರೆ, 11,700 ಕಿ.ಮೀರ್ ನಾಲಾ ಕಾಲುವೆಯ ಬಗ್ಗೆ ಏನು ಹೇಳಿದಿರಿ, ಅಲ್ಲಿ ಯಾವ ಗಿಡಗಳನ್ನು ಹಾಕಬೇಕು ಎಂಬುದರ ಬಗ್ಗೆ ಸಲಹೆ ಕೊಡಿ. ಏಕೆಂದರೆ, ನೀವು ಹೇಳಿದಂತಹ ಗಿಡಗಳನ್ನು ಹಾಕಿದರೆ ಕಾಲವೆ ಎರಡು ಅಥವಾ ಮೂರು ವರ್ಷದಲ್ಲಿ ಬಿರುಕು ಬಿಡುತ್ತದೆ. ಕಾಲುವೆಗೆ ತೊಂದರೆಯಾಗುತ್ತದೆ. ಆದುದರಿಂದ ಯಾವ ಗಿಡಗಳನ್ನು ಹಕಿದರೆ ಆ ಕಲುವೆಗೆ ತೊಂದರೆಯಾಗುವುದಿಲ್ಲ ಅಂತಹ ಗಿಡಗಳನ್ನು ಬೆಳೆಸಿದರೆ ಅನುಕೂಲವಾಗುತ್ತದೆ. ಅದರ ಬಗ್ಗೆ ಸ್ವಲ್ಪ ಹೇಳಿ.

**ಶ್ರೀ ರಾಮಚಂದ್ರ ಗೌಡ:–** ಮಾನ್ಯ ವಿಜಯಶಂಕರ್‌ರವರೆ, ತಮ್ಮ ಮಾಹಿತಿಗಾಗಿ ಹೇಳುವುದೇನೆಂದರೆ, ಹಿಂದೆ ಬ್ರಿಟೀಷರ ಕಾಲದಲ್ಲಿ ಒಂದು ಕಾನೂನು ಇತ್ತು. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಯಾವ ಕುಟುಂಬಗಳು ಮರಗಿಡಗಳನ್ನು ಹಾಕುತ್ತಾರೆ ಅವರಿಗೆ ಒಂದು ಮೈಲಿ, ಎರಡು ಮೈಲಿ, ಮೂರು ಮೈಲಿ ಈ ರೀತಿ ಎರಡೂ ಹುಣಸೇ ಹಣ್ಣನ್ನು ಬಿಡಿಸಿಕೊಳ್ಳುವಂತಹ ಅಧಿಕಾರವನ್ನು ಅವರಿಗೇ ಕೊಟ್ಟಿತ್ತು. ಒಂದೊಂದು ಗ್ರಾಮಗಳಲ್ಲಿ ಆಗಿನ ಪಟೇಲರು, ಶ್ಯಾನುಭೋಗರು ಮೂರು, ಅಥವಾ ನಾಲ್ಕು ಕಿ.ಲೋ.ಮೀಟರ್ ದೂರದವರೆಗೂ ಮರಗಿಡಗಳನ್ನು

ನೆಟ್ಟು ಅವುಗಳನ್ನು ಕಾಪಾಡುತ್ತಿದ್ದರು. ಆದರೆ ಇತ್ತೀಚೆಗೆ ರಸ್ತೆ ಹಗಲೀಕರಣದಿಂದಾಗಿ ಮರಗಿಡಗಳನ್ನು ಕಿತ್ತು ಹಾಕಿದ್ದಾರೆ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೆ, ನಾವು ಇವತ್ತಿನ ದಿವಸ ಹೊಸೂರು ಮತ್ತು ತಮಿಳುನಾಡಿನ ಕೆಲವು ಭಾಗಕ್ಕೆ ಹೋಗಿ ನೋಡಿದರೆ, ರಸ್ತೆ ಬದಿಯಲ್ಲಿ ಎಲ್ಲಿ ನೋಡಿದರೂ ಹುಣಸೇ ಮರಗಳು ಕಾಣುತ್ತವೆ. ಅದು ಫಸಲು ಬಿಡುವಂತಹ ಹುಣಸೇಮರಗಳನ್ನು ಕಾಣುತ್ತೇವೆ. ಆದರೆ ನಮ್ಮಲ್ಲಿ ಹಾಕುವಂತಹ ಗಿಡಗಳು ಫಸಲನ್ನು ಬಿಡುವುದಿಲ್ಲ, ಅಥವಾ ನೇರಳನ್ನು ಕೊಡುವುದಿಲ್ಲ. ಆದುದರಿಂದ ಅದರ ಬಗ್ಗೆಯು ಸಹ ಸರ್ಕಾರ ಸ್ವಲ್ಪ ಚಿಂತನೆಯನ್ನು ಮಾಡಬೇಕು.

**ಶ್ರೀ ಸಿ.ಹೆಚ್. ವಿಜಯಶಂಕರ್:–** ಮಾನ್ಯ ಸಭಾಪತಿಯವರೆ, ನಾನು ಆ ವಿಷಯದ ಬಗ್ಗೆಯೇ ಬರುತ್ತಿದ್ದೇನೆ. ಮಾನ್ಯ ರಾಮಕೃಷ್ಣರವರು ನಾಲಾ ಬಂಡ್‌ನಲ್ಲಿ ಮರಗಿಡಗಳನ್ನು ಹಾಕಿದಾಗ ಬಂಡ್‌ಗೆ ತೊಂದರೆಯಾಗುತ್ತದೆ, ಆದುದರಿಂದ ಅಲ್ಲಿ ಬೇರೆ ರೀತಿಯ ಗಿಡಗಳನ್ನು ಹಾಕಬೇಕಾಗುತ್ತದೆಯೆಂದು ಹೇಳಿದರು. ಮಾನ್ಯ ಸಾಭಾಪತಿಯವರೆ, ನಾನು ನೀರಾವರಿ ಅಚ್ಚುಕಟ್ಟು ಪ್ರದೇಶದಿಂದ ಬಂದಂಥವನು. ಎಲ್ಲೆಲ್ಲಿ ನೀರಾವರಿ ಬಂಡ್‌ಗೆ ತೊಂದರೆಯಾಗುತ್ತದೆ, ಅಲ್ಲಿ ನಾವು ಬೇರೆ ರೀತಿಯ ಸಸಿಗಳನನು ನೆಡಬೇಕಾಗುತ್ತದೆ. ಎಲ್ಲಿ ಬಂಡ್‌ಗೆ ತೊಂದರೆಯಾಗ್ವುದಿಲ್ಲ ನಾಲಾ ರಸ್ತೆಯಲ್ಲಿ ಈ ರೀತಿ ಫಸಲನ್ನು ಕೊಂಡುವಂತಹ ಮರಗಳನ್ನು ಬೆಳೆಸುವುದಕ್ಕೆ ಸಾಧ್ಯತೆ ಇದೆ ಎನ್ನುವುದರ ಬಗ್ಗೆ ಕ್ಲಾಸಿಫೈ ಮಾಡಿಕೊಳ್ಳೋಣ.

**ಡಾ॥ಮತ್ತಿಕಟ್ಟೆ ವೀರಣ್ಣ:–** ಮಾನ್ಯ ಸಭಾಪತಿಯವರೆ, ನಾಲಾ ಬಂಡ್ ಪಕ್ಕ ಮರಗಿಡಗಳನ್ನು ನೆಡಬಾರದು, ಏಕೆಂದರೆ, ಅದರ ಬೇರು ಹೋಗಿ ಆ ಬಂಡ್ ಗೆ ತೊಂದರೆಯಾಗುತ್ತದೆ. ಆದುದರಿಂದ ನಾಲೆಗಳನ್ನು ನಾವು ಉಳಿಸಿಕೊಳ್ಳಬೇಕು. ಎಲ್ಲಿಯಾದರು ನಾಲೆ ಪಕ್ಕದಲ್ಲಿ ಗಿಡಗಳು ಬೆಳೆದಿದ್ದರೆ ಅಲ್ಲಿ ಹೊಡೆಯುತ್ತದೆ. ಆ ದೃಷ್ಟಿಯಿಂದ ನೀವು ಹೇಳೂವಂತಹ ಎಲ್ಲಾ ಮಾತುಗಳನ್ನು ಒಪ್ಪುತ್ತೇನೆ, ಆದರೆ ನೀರಾವರಿಯ ಅಚ್ಚುಕಟ್ಟು ಪ್ರದೇಶದಲ್ಲಿ ಬದಿತನಕ್ಕೆ ಮರಗಿಡಗಳನ್ನು ಹಾಕಬಹುದು. ಆದರೆ ನಾಲೆಗಳ ಮೇಲೆ ಗಿಡಗಳನ್ನು ಹಾಕಬಾರದು.

**ಶ್ರೀ ರಾಮಚಂದ್ರಗೌಡ:–** ನಾಲೆಗಳು ಭೂಮಿ ಮಟ್ಟದಿಂದ ಕೆಳಗಡೆ ಇದ್ದರೆ ನೆಡುತ್ತಾರೆ. ಆದರೆ ನಾಲೆಗಳಿಗೆ ಕಟ್ಟೆ ಕಟ್ಟಿದರೆ ನೆಡುವುದಕ್ಕೆ ಆಗುವುದಿಲ್ಲ.

**ಶ್ರೀ ಸಿ.ಹೆಚ್. ವಿಜಯಶಂಕರ್:–** ಮಾನ್ಯ ಸಭಾಪತಿಯವರೆ, ನಾನು ಹೇಳುತ್ತಿರುವುದು ನಾಲಾ ಬಂಡ್ ಮೇಲೆ ಅಲ್ಲ, ನಾಲಾ ರಸ್ತೆಯ ಬಗ್ಗೆ ಹೇಳುತ್ತಿರುವುದು. ನಾಲಾ ರಸ್ತೆ 11,700 ಕಿ.ಲೋ.ಮೀಟರ್ ಇದೆ. ನೀವು ಬಂಡ್‌ಗೆ ಹೋಗಬೇಡಿ. ಬಂಡ್‌ಗೆ ಹೋದರೆ ಬೇರು ಬಿಡುತ್ತದೆ, ಬಂಡ್‌ಗೆ ತೊಂದರೆಯಾಗುತ್ತದೆ. ಆದರೆ ನಾನು ಹೇಳುತ್ತಿರುವುದೇನೆಂದರೆ, ನಾಲಾ ರಸ್ತೆಯ ಬಗ್ಗೆ. ಆದುದರಿಂದ ನಾಲಾ ರಸ್ತೆಯನ್ನು ಬಳಸಿಕೊಳ್ಳಿ ಎಂದು ನಾನು ಹೇಳುತ್ತಿರುವುದು. ನಾಲಾ ಬಂಡ್ ಬೇರೆ, ನಾಲಾ ರಸ್ತೆ ಬೇರೆ.

**ಶ್ರೀ ಬಿ.ರಾಮಕೃಷ್ಣ:–** ಮಾನ್ಯ ಸಭಾಪತಿಯವರೆ, ಸಾಮಾನ್ಯವಾಗಿ ನಾಲಾರಸ್ತೆ ಹೆಚ್ಚಾಗಿ ಬಂಡ್ ಪಕ್ಕದಲ್ಲಿಯೇ ಇರುತ್ತದೆ. ಬಂಡ್ ಮೇಲೆ ಬರುತ್ತದೆ.

**ಶ್ರೀ ಸಿ.ಹೆಚ್. ವಿಜಯಶಂಕರ್:–** ಮಾನ್ಯ ಸಭಾಪತಿಯವರೆ, ನಾನು ಇದನ್ನು ಸೈನ್‌ಟಿಫಿಕ್ ಆಗಿ ಅನಲೈಸ್ ಮಾಡುವುದಕ್ಕೆ ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಬಿಡುತ್ತೇನೆ.

**ಶ್ರೀ ಬಿ.ರಾಮಕೃಷ್ಣ:–** ಮಾನ್ಯ ಸಭಾಪತಿಯವರೆ, ನನ್ನ ಅನುಭದ ಪ್ರಕಾರ ನಾಲಾ ರಸ್ತೆಗಳು ಬಂಡ್ ಪಕ್ಕದಲ್ಲಿಯೇ ಬರುತ್ತದೆ ವಿನಃ ಅದೇ ಪ್ರತ್ಯೇಕವಾಗಿ ಬರುವುದಿಲ್ಲ.

**ಶ್ರೀ ಸಿ.ಹೆಚ್. ವಿಜಯಶಂಕರ್:–** ಮಾನ್ಯ ರಾಮಕೃಷ್ಣರವರೆ, ತಾವು ಹೇಳುತ್ತಿರುವುದನ್ನು ನಾನು ಕೇಳಿಸಿಕೊಳ್ಳುತ್ತಿದ್ದೇನೆ, ಆದರೆ ನಾನು ಹೇಳುವುದೇನೆಂದರೆ, ಈಗ ಒಂದು ನಾಲಾ ರಸ್ತೆ ಇದೆಯೆಂದು ತಿಳಿದುಕೊಳ್ಳಿ, ಒಂದು ಭಾಗಕ್ಕೆ ನಾಲಾ ಬಂಡ್ ಬರುತ್ತದೆ, ಇನ್ನೊಂದು ಭಾಗಕ್ಕೆ ಏನು ಬರುತ್ತದೆ?

**ಶ್ರೀ ಬಿ.ರಾಮಕೃಷ್ಣ:–** ಇನ್ನೊಂದು ಭಾಗಕ್ಕೆ ಜಮೀನು ಬರುತ್ತದೆ.

**ಶ್ರೀ ಸಿ.ಹೆಚ್. ವಿಜಯಶಂಕರ್:–** ಈಗ ಸಧ್ಯಕ್ಕೆ ನೀರಾವರಿ ಅಚ್ಚುಕಟ್ಟು ವ್ಯಾಪ್ತಿಯ ಬಗ್ಗೆ ಕಾಳಜಿ ಇರುವಂಥದ್ದು. ಅದಕ್ಕೆ ಜಾಗ ಲಭ್ಯವಿರುವುದು ತಮಗೆ ಸ್ಪಷ್ಟವಾಗಿ ಗೊತ್ತಿದೆ. ಎಲ್ಲೆಲ್ಲಿ ಈ ರೀತಿಯ ತೊಂದರೆಯಾಗುತ್ತದೆ, ಅದನ್ನು ತಾವು ತಡೆಗಟ್ಟಬೇಕು. ಎಲ್ಲೆಲ್ಲಿ ಅನಾನುಕೂಲವಾಗುತ್ತದೆ ಅದನ್ನು ಬಿಟ್ಟುಬಿಡಿ. ಆದರೆ ಎಲ್ಲೆಲ್ಲಿ ಗಿಡಗಳನ್ನು ನೆಡುವುದಕ್ಕೆ ಸಾಧ್ಯತೆ ಇದೆಯೋ ಅದನ್ನು ಫಸಲಿನ ಹಕ್ಕನ್ನು ಅವರಿಗೆ ಕೊಡಿ. ಅವರು ಫಸಲನ್ನು ತೆಗೆದುಕೊಳ್ಳುವುದಕ್ಕೆ ಪ್ರಾರಮಭ ಮಾಡಿದರೆ ವರ್ಷ ವರ್ಷ ಫಸಲನ್ನು ಹರಾಜು ಹಾಕಿ, ಆದರಿಂದ ಬಂದಂತಹ ಹಣದಿಂದ ಆ ಗಿಡಗಳನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಅಲ್ಲದೆ ಅವರಿಗೆ ಅದರ ಆಧಾಯದ ಮೂಲ ಕೂಡ ಆಗುತ್ತದೆ. ಆ ಹಿನ್ನಲೆಯಲ್ಲಿ ನೀರಾವರಿ ಇಲಾಖೆಯ ಕೆರೆಯ ವ್ಯಾಪ್ತಿ ಇರಬಹುದು, ಅಥವಾ ನೀರಾವರಿ ಇಲಾಖೆಯ ಅಚ್ಚುಕಟ್ಟು ವ್ಯಾಪ್ತಿ ಇರಬಹುದು, ಅಥವಾ ನಾಲಾ ರಸ್ತೆಯ ವ್ಯಾಪ್ತಿಯಲ್ಲಿರಬಹುದು, ಅಥವಾ ಕಟ್ಟೆಗಳ ವ್ಯಾಪ್ತಿಯಲ್ಲಿರಬಹುದು. ಎಲ್ಲೆಲ್ಲಿ ನೀರಾವರಿ ಇಲಾಖೆಯ ಭೂಮಿ ಲಭ್ಯವಿದೆಯೋ, ಅದನ್ನು ಬೇರೆ ರೀತಿಯಲ್ಲಿ ಬಳಸುವುದಕ್ಕೆ ಸಾಧ್ಯವಿಲ್ಲವೋ, ಅಥವಾ ಉಳುಮೆ ಇಲಾಖೆ ಇದುವರೆಗೂ ಕೂಡ ತನ್ನ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಹಸೀಕರಣಕ್ಕೆ ಆಧ್ಯತೆಯನ್ನು ಕೊಟ್ಟಿಲ್ಲವೆಂದು ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಮಾನ್ಯ ವಿಜಯಶಂಕರ್‌ರವರು ಬಹಳ ಒಳ್ಳೆಯ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಆದರೆ ನಾಲೆಗಳ ವಿಷಯವನ್ನು ಮಾನ್ಯ ರಾಮಕೃಷ್ಣರವರು ಪ್ರಸ್ತಾಪ ಮಾಡಿದರು. ಇಲ್ಲಿ ಎರಡು ರೀತಿಯಲ್ಲಿ ರಸ್ತೆಗಳಾಗಲಿ, ಬಂಡ್ ಆಗಲಿ ಇರುತ್ತದೆ. ಒಂದು ಲೂಸ್ ಸಾಯಿಲ್, ಮತ್ತೊಂದು ಬ್ಲಾಕ್ ಕಾಟನ್ ಸಾಯಿಲ್ ಇರುವಂತಹ ಕಡೆ ಬೇರು ಹೋದರೆ ಹೆಚ್ಚು ಬಿರುಕು ಬಿಡುವಂಥದ್ದು ಇದೆ. ಇನ್ನು ಕೆಲವು ಜಾಗಗಳಲ್ಲಿ ಉದಾಹರಣೆಗೆ ತುಂಗಭದ್ರ ಡ್ಯಾಂನಿಂದ ನೀರು ಹರಿದು ಹೋಗುವಂತಹ ಜಾಗಗಳಲ್ಲಿ ಅದು ಎಡದಂಡ ಕಾಲುವೆ ಇರಲಿ, ಅಥವಾ ಬಲದಂಡೆ ಕಾಲುವೆ ಇರಲಿ. ವಿಶೇಷವಾಗಿ ಎಡದಂಡೆ ಕಾಲುವೆಯಲ್ಲಿ ನೀರು ಹರಿದುಹೋಗುವಂಥದ್ದರಲ್ಲಿ ಎಲ್ಲಿಯೂ ಸಹ ಗಿಡಬರಗಳು ಹೇಳಿದಕೊಳ್ಳುವಷ್ಟು ಇಲ್ಲ. ಅದು ವಿಸ್ತಾರವಾಗಿ ಒಂದಿಷ್ಟು ನದಿ ರೀತಿಯಲ್ಲಿ ಕೆಳಗಡೆ ಹರಿದುಹೋಗಿ ನಂತಹ ಕೆನಾಲ್ ಮಾಡಿರುವಂಥದ್ದು ಇದೆ. ಆ ರೀತಿ ಎಲ್ಲೆಲ್ಲಿ ಅಂತಹ ಜಾಗಗಳು ಇವೆ ಎಂಬುದನ್ನು ಪತ್ತೆಹಚ್ಚಿದರೆ, ಬಹುಶಃ ನಾನು ಈ ವಿಷಯದ ಮೇಲೆ ಮಾತನಾಡುವಂತಹ ಸಂದರ್ಭದಲ್ಲಿ ಹೇಳುತ್ತೇನೆ. ನನಗೆ ಇರುವಂತಹ ಮಾಹಿತಿಯ ಪ್ರಕಾರ ಪ್ರತೀವರ್ಷ ಅರಣ್ಯ ಇಲಾಖೆಯವರು ರೈತರಿಗೆ ಮೂರು ಕೋಟಿ ಗಿಡಗಳನ್ನು ಕೊಡುತ್ತಾರೆ. ಅರಣ್ಯ ಇಲಾಖೆಯ 1975ರಿಂದಲೂ ಪ್ರತೀವರ್ಷ ಸುಮಾರು 50 ಸಾವಿರ ಎಕ್ಟೇರ್‌ಗಳಲ್ಲಿ ನಾವು ಗಿಡ ಹಾಕಿದ್ದೇವೆಂದು ರೆಕಾರ್ಡ್‌ನಲ್ಲಿ ತೋರಿಸುತ್ತಾರೆ. ಆ ರೀತಿ ಒಂದು ಕಡೆ 3 ಕೋಟಿ, ಇನ್ನೊಂದು ಕಡೆ 50 ಸಾವಿರ ಎಕ್ಟೇರ್‌ಗಳಲ್ಲಿ ಹಾಕಿದ್ದರೆ ನಮ್ಮ ರಾಜ್ಯದ್ದಿರುವಂತಹ ಜಾಗದಲ್ಲಿ ಎಲ್ಲಿಯೂ ಸಹ ಗಿಡಗಳು ಇಲ್ಲದೆ ಇರುವುದಕ್ಕೆ ಸಾಧ್ಯವೇ ಇರುತ್ತಿರಲಿಲ್ಲ. ಬಹಳಷ್ಟು ಗಿಡಗಳು ಪೇಪರ್‌ಗಳಲ್ಲಿ ಬೆಳೆದಿವೆ. ಹಾಗಾಗಿ ಈಗಲಾದರು ಸಹ ನೆಲದಲ್ಲಿ ಬೆಳೆಸುವಂಥದ್ದಕ್ಕೆ ಚಿಂತನೆ ಮಾಡುವುದು ಉತ್ತರವೆಂದು ಹೇಳಬಯಸುತ್ತೇನೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಇನ್ನೊಂದು ವಿಷಯ ತಮ್ಮ ಮಾಹಿತಿಗಾಗಿ ಸರ್.ಎಂ.ವಿಶ್ವೇಶ್ವರಯ್ಯನವರು 224 ಅಡಿ ಕೆ.ಆರ್.ಎಸ್. ಡ್ಯಾಂ ಕಟ್ಟಿದರು. ಆದರೆ ಭೂಮಿಯನ್ನು ಅಕ್ವೈರ್ ಮಾಡಿದ್ದು 230 ಅಡಿ. ಆ ರೀತಿ ಮಾಡಿದ್ದರೂ ಸಹ ಲ್ಯಾಂಡನ್ನು ಅಕ್ವೈರ್ ಮಾಡುವಾಗ 230 ಅಡಿ ನೀರು ನಿಂತರೆ ಎಷ್ಟು ಭೂಮಿ ಮುಳುಗಡೆ ಆಗಬಹುದು ಅಷ್ಟು ಜಾಗವನ್ನು ಅಕ್ವೈರ್ ಮಾಡಿದ್ದಾರೆ. ಅದರ ಸುತ್ತಮುತ್ತಲೂ ಕೂಡ ಕನಿಷ್ಟವೆಂದರೆ 100 ಮೀಟರ್ ಜಾಗವಿದೆ. ಅರಣೀಕರಣ ಮಾಡುವಂತಿದ್ದರೆ ಕೃಷ್ಣರಾಜ ಸಾಗರದ ಸುತ್ತಲೂ ಅರಣ್ಯೇಕರಣ ಮಾಡುವುದಕ್ಕೆ ಅವಕಾಶವಿದೆ.

**ಶ್ರೀ ಸಿ.ಹೆಚ್. ವಿಜಯಶಂಕರ್:–** ಸುತ್ತಲು ನೀರಿದ್ದು, ಮಧ್ಯೆ ಮಧ್ಯೆ ಬೆಟ್ಟಗಳಿವೆ. ನಮ್ಮ ಕೊಡಗಿನ ಬೆಟ್ಟಗಳಿರುವ ಹಾಗೆ ಇದನ್ನು ಸಹ ಹಸರೀಕರಣ ಮಾಡುವುದಕ್ಕೆ ಸಾಧ್ಯಾವಿದೆ. ಈ ಪತ್ರವನ್ನು ಮಹಳ ಹಿಂದೆಯೇ

ನಾನು ಇಲಾಖಾಧಿಗಳಿಗೆ ಬರೆದಿದ್ದೇನೆ. ಇಲಾಖೆ ಮತ್ತು ಅಧಿಕಾರಿಗಳು ಮನಸ್ಸನ್ನು ಮಾಡಿದಲ್ಲಿ ಸುತ್ತಲೂ ತುಂಗಭದ್ರಾ ನದಿಯ ನೀರು ಹರಿಯುತ್ತದೆ. ಮಧ್ಯೆ ಮಧ್ಯೆ ಬೆಟ್ಟಗಳಿವೆ, ಸ್ವಲ್ಪ ಇಲಾಖೆ ಮನಸ್ಸು ಮಾಡಿದಲ್ಲಿ ಎಲ್ಲಾ ಬೆಟ್ಟಗಳನ್ನು ಹಸರೀಕರಣ ಮಾಡುವುದಕ್ಕೆ ಅವಕಾಶವಿದೆ. ಇದರ ಕಡೆ ಗಮನ ಕೊಡಿ ಎಂದು ನಾನು ಅಧಿಕಾರಿಗಳಿಗೆ ಪತ್ರವನ್ನು ಬರೆದಿದೇನು. ಈ ಪತ್ರ ಬರೆದ ಮೇಲೆ ಇಲಾಖೆ ಇದರ ಬಗ್ಗೆ ಕಿಂಚಿತ್ತು ಕೂಡ ಚಿಂತನೆಯನ್ನು ಮಾಡಿರುವುದಿಲ್ಲ. ಇಲಾಖೆಯ ಆಸಕ್ತಿ ಏನು ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಒಬ್ಬ ಶಾಸಕನಾಗಿ ಈ ರೀತಿ ಕಾಳಜಿಯಿಂದ ಬರೆದಂತಹ ಪತ್ರಗಳಿಗೆ ಪ್ರತ್ಯುತ್ತರವಾಗಿ ಯಾವುದೇ ಪತ್ರಗಳನ್ನು ಕೂಡ ಬರೆದಿರುವುದಿಲ್ಲ. "ನೀವು ಬರೆದಂತಹ ಪತ್ರ ಬಂದು ತಲುಪಿದೆ, ಈ ಕಡೆಗೆ ನಾವು ಗಮನ ಹರಿಸುತ್ತೇವೆ, ಇದರ ಸಾಧ್ಯಸಾಧ್ಯತೆಗಳ ಬಗ್ಗೆ ನಾವು ಅವಲೋಕಿಸುತ್ತೇವೆ, ಸಾದ್ಯವಿದ್ದಲ್ಲಿ ಕ್ರಮ ಕೈಗೊಳ್ಳುತ್ತೇವೆ" ಎನ್ನು ಒಕ್ಕಣೆಯ ಮಾವುದೇ ಪತ್ರಗಳು ಇಲಾಖೆಯಿಂದ ನಮಗೆ ಬಂದಿರುವುದಿಲ್ಲ. ಇಂತಹ ಸ್ಥಿತಿಗೆ ನಾವು ಬಂದು ತಲುಪಿದ್ದೇವೆ. ಏಕೆಂದರೆ ಕಳೆದ 20 ವರ್ಷಗಳಿಂದ ನಾನು ವಿಧಾನಸಭೆ, ವಿಧಾನಪರಿಷತ್ತು ಮತ್ತು ಲೋಕಸಭಾ ಸದಸ್ಯನಾಗಿ ಕೂಡ ಕೆಲಸವನ್ನು ಮಾಡಿದ್ದೇನೆ. ಆದರೆ ಅಂದು ನಾವು ಕಂಡಂತಹ ದಿನಗಳು...

**ಶ್ರೀ ಬಿ.ಜೆ.ಪುಟ್ಟಸ್ವಾಮಿ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ನಾವು ವಿರೋಧ ಪಕ್ಷದಲ್ಲಿದ್ದೆವು. ಆಗ ಅವರು ಒಂದು ಸುತ್ತೋಳೆಯನ್ನು ಹೊರಡಿಸಿ ಶಾಸಕರು ಕಾಗದ ಬರೆದರೆ ತಕ್ಷಣ ಅವರಿಗೆ ರಿಪ್ಲೈ ಮಾಡಬೇಕು. ಮತ್ತು ಅವರು ಅಧಿಕಾರಿಗಳನ್ನು ಭೇಟಿ ಮಾಡುವುದಕ್ಕೆ ಬಂದಾಗ ಅವರನ್ನು ಗೌರವದಿಂದ ಕರೆದು ಅವರನ್ನು ಮಾತನಾಡಿಸಿ ಅವರನ್ನು ವಾಪಸ್ಸು ಕಳುಹಿಸುವಾಗ ಎದ್ದು ನಿಂತು ಅವರಿಗೆ ಗೌರವ ಸೂಚಿಸಿ ಕಳುಹಿಸಬೇಕೆಂದು ಸುತ್ತೋಲೆಯನ್ನು ಅಧಿಕಾರಿಗಳಿಗೆ ಹೊರಡಿಸಿದ್ದರು. ಕೆಲವರು ಈ ರೀತಿ ನಡೆದುಕೊಳ್ಳುತ್ತಾರೆ. ಶಿಷ್ಟಾಚಾರದ ಒಂದು ವಿಧಾನ ಈಗ ಪಾಲನೆ ಮಾಡುವುದೇ ಇಲ್ಲ. ನಾನು ಈ ಸದನದಲ್ಲಿಯೇ ಪೊಲೀಸ್ ಕೇಸ್ ಆಗಿ 20 ಕೋಟಿ ಮೋಸ ಮಾಡಿರುವುದರ ಬಗ್ಗೊಂದು ಪತ್ರವನ್ನು ಬರೆದು ಅದನ್ನು ಗೃಹಸಚಿವರಿಗೆ ನಮ್ಮ ನಾಯಕರು ಪತ್ರ ನೀಡಿದರು. ಇವತ್ತಿನವರೆಗೆ ಅದಕ್ಕೆ ಇನ್ನು ಉತ್ತರ ಬಂದಿರುವುದಿಲ್ಲ. ಅದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಕೂಡ ನೀಡಿದ್ದೇವೆ. ಇವತ್ತಿನ ಅಧಿಕಾರಿಗಳಿಗೆ ಶಾಸಕರು ಎಂದರೆ ಮರ್ಯಾದೆಯೇ ಇಲ್ಲದಂತಾಗಿದೆ. ಈಗಲೂ ಸರ್ಕಾರ ಮನಸ್ಸು ಮಾಡಿದರೆ ಹಿಂದಿನಂತಯೇ ಒಂದು ಸುತ್ತೋಲೆಯನ್ನು ಹೊರಡಿಸಬೇಕು.

**ಶ್ರೀ ಸಿ.ಹೆಚ್. ವಿಜಯಶಂಕರ್:–** ನಾನು ನೀರಾವರಿ ಇಲಾಖೆಗೆ ಹೇಳುವುದೇನೆಂದರೆ ಅವರು ಅವರ ಇಲಾಖಾ ವ್ಯಾಪ್ತಿಯಲ್ಲಿ ಇದಕ್ಕೆ ಬೇಕಾದಂತಹ ಯೋಜನೆ, ಬೇಕಾದಂತಹ ಹಣಕಾಸಿನ ಲಭ್ಯತೆ ಇದಕ್ಕೆ ಬೇಕಾಗುವ ಹಸಿರು ವಿಭಾಗವನ್ನು ನೀರಾವರಿ ಇಲಾಖೆಯವರು ಮಾಡಿಕೊಡಬೇಕು. ಕಾಲಕಾಲಕ್ಕೆ ಯೋಜನೆಗಳನ್ನು ರೂಪಿಸಬೇಕು. ನೀರಾವರಿ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಹಸರೀಕರಣಕ್ಕೆ ಜಾಗ ಲಭ್ಯವಿದಯೋ ಅವಕಾಶ ಇದೆಯೋ ಆ ಅವಕಾಶಗಳನ್ನು ಇಳಸಿಕೊಳ್ಳಬೇಕು. ಹಸರೀಕರಣಕ್ಕೆ ನೀರಾವರಿ ಇಲಾಖೆ ಆದ್ಯತೆಯನ್ನು ನೀಡಬೇಕು. ನೀರಾವರಿ ಇಲಾಖೆ ಇದನ್ನು ಸಂಪೂರ್ಣವಾಗಿ ಕಡೆಗಣಿಸದೇ ಇಗಿರುವ ಪರಿಸ್ಥಿತಿಯಿಂದ ಎಚ್ಚೆತ್ತು ತನ್ನ ಜವಾಬ್ದಾರಿಯನ್ನು ಅರ್ಥ ಮಾಡಿಕೊಂಡು ನೀರಾವರಿ ಹಸರೀಕರಣಕ್ಕೆ ಆದ್ಯತೆಯನ್ನು ನೀಡಬೇಕು. ಈ ಹಿನ್ನೆಲೆಯಲ್ಲಿ ಕಾರ್ಯಪ್ರವೃತ್ತರಾಗಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಏಕೆಂದರೆ ಬಹಳ ಜನರಿಗೆ ಇದು ಅಧ್ಯತೆಯ ವಿಚಾರವಲ್ಲ. ಏಕೆಂದರೆ ಈಗಿನ ಅಧ್ಯತೆಗಳೇ ಬೇರೆ ಬೇರೆ. ಹಾಗಾಗಿ ಇದು ಆದ್ಯತೆಯ ವಿಚಾರವಲ್ಲ. ಇದು ಬದುಕಿಗೆ ಪೂರಕವಾದ ವಿಚಾರ ಆಗಿದ್ದರೂ ಸಹ ಎಷ್ಟೂ ಜನರಿಗೆ ಇದು ಆದ್ಯತೆಯ ವಿಚಾರವಲ್ಲ. ಆದರೆ ನನಗೆ ಇದು ಆದ್ಯತೆಯ ಮತ್ತು ಅನಿವಾರ್ಯದ ವಿಚಾರ. ಹಾಗಾಗಿ ಇಲ್ಲಿರುವಂತಹ ಜನರಾದರೂ ಸಹ ನನ್ನ ವಿಚಾರಕ್ಕೆ ಸ್ಪಂದಿಸಿ, ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ ನಗರಾಭಿವೃದ್ದಿ ಇಲಾಖೆಯ ಬಗ್ಗೆ ಹೇಳಬಯಸುತ್ತೇನೆ. ನಗರಾಭಿವೃದ್ಧಿ ಇಲಾಖೆಯದ್ದು ಇನ್ನೂ ದುರಂತದ ಕಥೆ. ನಗರಸಭೆ, ಪುರಸಭೆ, ನಗರಪಾಲಿಕೆ, ಮಹಾನಗರ ಪಾಲಿಕೆ ಇರಬಹುದು. ಮನಸ್ಸಿಗೆ

ಎಷ್ಟು ನೋವಾಗುತ್ತದೆ ಎಂದರೆ ನಗರದಲ್ಲಿ ಯಾವುದಾದರೂ ಒಂದು ನಗರಸಭೆ ಅಥವಾ ಒಂದು ಮಹಾನಗ ಪಾಲಿಕೆಯ ಉದಾಹರಣೆ ನೀಡುವುದಾದರೆ ಕಳೆದ 50 ವರ್ಷಗಳಿಂದ ಈಚೇಗೆ ವ್ಯವಸ್ಥಿತವಾಗಿ ನಗರವನ್ನು ಹಸರೀಕರಣ ಮಾಡಿದ್ದ ಉದಾಹರಣೆ ಇದೆಯೇ? ಬೆಂಗಳೂರು ನಗರದಲ್ಲಿ ಹಿಂದೆ ಲಾಲ್ ಬಾಗ್ ಮತ್ತು ಕಬ್ಬನ್ ಪಾರ್ಕ್ ಮಾಡಿರುವುದನ್ನು ಬಿಟ್ಟರೆ ಈಗ ಬೆಂಗಳೂರು ನಗರದಲ್ಲಿಯೂ ಸಹ ಈ ರೀತಿ ಕಾಣಲಿಕ್ಕೆ ಸಾಧ್ಯವಿಲ್ಲ. ಬೆಂಗಳೂರು ಹೊತುಪಡಿಸಿ ರಾಜ್ಯದ ಬೇರೆ ಯಾವುದೇ ನಗರಗಳನ್ನು ತೆಗೆದುಕೊಂಡರೂ ಸಹ ಪುರಸಭೆಯಿಂದ ಹಿಡಿದು ಮಹಾನಗರ ಪಾಲಿಕೆಯವರೆಗೂ ಸಹ ಹಸರೀಕರಣಕ್ಕೆ ಆದ್ಯತೆಯನ್ನು ನೀಡಿರುವಂತಹ ವ್ಯವಸ್ಥೆಯನ್ನೇ ನಾವು ಕಾಣುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಭಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಸಿ.ಹೆಚ್. ವಿಜಯಶಂಕರ್:–** ರಸ್ತೆ ಅಗಲೀಕರಣದಲ್ಲಿ ಇರುವಂತಹ ಮರಗಳನ್ನೇ ಕತ್ತರಿಸಿ ಹಾಕಲಾಗಿದೆ. ಮತ್ತೆ ಸಸಿಗಳನ್ನು ನೆಟ್ಟಿರುವುದಿಲ್ಲ, ಒಂದು ನಗರಕ್ಕೆ ಒಂದು ಉದ್ಯಾನವನ ಮಾಡಲಾಗಿದೆಯೇ ಎಂದರೆ ಇಲ್ಲ. ಈ ರೀತಿಯ ವ್ಯವಸ್ಥೆಯನ್ನು ನಗರಗಳಲ್ಲಿ ಕಾಣಲಿಕ್ಕೆ ಸಾಧ್ಯವಿಲ್ಲ. ನಗರಾಭಿವೃದ್ಧಿ ಇಲಾಖೆ ಈ ರೀತಿಯ ಯೋಜನೆಗಳನ್ನು ರೂಪಿಸಲಾಗಿದೆಯೇ? ಅದಕ್ಕೆ ಬಳಕಾದ ಹಣಕಾಸಿನ ವ್ಯವಸ್ಥೆಯನ್ನು ಮಾಡಲಾಗಿದೆಯೇ? ಕೇಂದ್ರಸರ್ಕಾರದಿಂದ ಬರುವ ಹಣಕಾಸಿನ ಸೌಲಭ್ಯ ಇರಬಹುದು, ರಾಜ್ಯಸರ್ಕಾರದಿಂದ ಬರುವಂತಹ ಹಣಕಾಸಿನ ಸೌಲಭ್ಯ ಇರಬಹುದು, ಕಡ್ಡಾಯವಾಗಿ ಹಸರೀಕರಣಕ್ಕಾಗಿ ಇಷ್ಟು ಹಣವನ್ನು ಬಳಸಬೇಕೆಂದು ನಿಯಮವನ್ನು ನಗರಾಭಿವೃದ್ಧಿ ರೂಪಿಸುವುದೇ? ಆ ಕಾರಣದಿಂದ ನಾನು ಪ್ರಾರ್ಥನೆ ಮಾಡುವುದೇನೆಂದರೆ ಈ ನಗರಾಭಿವೃದ್ಧಿ ಇಲಾಖೆಯ ನಿಯಮ ಏನಿದೆ., ಈ ನಿಯಮಗಳಿಗೆ ತಿದ್ದುಪಡಿಯನ್ನು ತರಬೇಕು., ಈ ನಿಯಮಗಳ ತಿದ್ದುಪಡಿ ಅಡಿಯಲ್ಲಿ ನಗರ ವ್ಯಾಪ್ತಿಯಲ್ಲಿ ಎಷ್ಟು ಭೂಮಿ ಹಸರೀಕರಣಕ್ಕೆ ಲಭ್ಯವಿದೆ, ಅದನ್ನು ವ್ಯವಸ್ಥಿತವಾಗಿ ಹಸರೀಕರಣ ಮಾಡುವುದಕ್ಕೆ ಯೋಜನೆಯನ್ನು ರೂಪಿಸಬೇಕು. ಇದಕ್ಕೆ ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರದಿಂದ ಬರತಕ್ಕ ಹಣದಲ್ಲಿ ಇಷ್ಟು ಹಣವನ್ನು ಹಸರೀಕರಣಕ್ಕಾಗಿ ಕಾಯ್ದಿರಿಸಬೇಕೆಂದು ಒಂದು ಕಡ್ಡಾಯ ನಿಯಮ ಜಾರಿಯಾಗಬೇಕು. ಈ ಹಿನ್ನೆಲೆಯಲ್ಲಿ ನಗರಾಭಿವೃದ್ಧಿ ಇಲಾಖೆ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ಮೂರನೆಯದಾಗಿ ಬಹಳಷ್ಟು ನಗರಾಭಿವೃದ್ಧಿ ಪ್ರಾಧಿಕಾರಣಗಳನ್ನು ನಾವು ಕಾಣುತ್ತೇವೆ. ನಗರಾಭಿವೃದ್ಧಿ ಪ್ರಾಧಿಕಾರಗಳ ಸ್ಥಿತಿ ಏನಾಗಿದೆ ಎನ್ನುವ ವಿಚಾರಕ್ಕೆ ನಾನು ಹೋಗುವುದಿಲ್ಲ. ಏಕೆಂದರೆ ಅದನ್ನು ಕೇಳಿದರೆ ನೀವೆಲ್ಲರೂ ಆಶ್ಚರ್ಯಪಡುತ್ತೀರಿ. ನಗರಾಭಿವೃದ್ಧಿ ಪ್ರಾಧಿಕಾರಗಳ ಯಾವ ಸ್ಥಿತಿಗೆ ಬಂದಿವೆ ಎಂದರೆ ಈ ಪ್ರಾಧಿಕಾರಗಳನ್ನು ಯಾವ ಉದ್ದೇಶಕ್ಕಾಗಿ ರಚಿಸಲಾಗಿತ್ತು. ಇವತ್ತು ಈ ಪ್ರಾಧಿಕಾರಗಳು ಯಾವ ಯಾವ ಕಾಯಕದಲ್ಲಿ ತೊಡಗಿಸಿಕೊಂಡಿವೆ ಎಂದರೆ ನಮ್ಮ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವನ್ನು ಸೇರಿಸಿ ನಾನು ಹೇಳುತ್ತಿದ್ದೇನೆ. ಏಕೆಂದರೆ ನಾನು ಮೈಸೂರು ನಗರಾಭಿವೃದ್ಧಿಯ ಸದಸ್ಯ ಅದರ ಕಾಯಕ ನೋಡಿ ನಾನು ಕಳೆದ 3 ವರ್ಷಗಳಿಂದ ಪ್ರಾಧಿಕಾರದ ಸಭೆಗಳಿಗೆ ಹಾಜರಾಗುತ್ತಿಲ್ಲ. ಈ ಪ್ರಾಧಿಕಾರಗಳನ್ನು ಯಾವ ಯಾವ ಕಾಯಕದಲ್ಲಿ ತೊಡಗಿಸಿಕೊಂಡಿವೆ ಎನ್ನುವುದನ್ನು ಒಂದು ಸಲ ಆತ್ಮಾವಲೋಕನ ಮಾಡಿಕೊಂಡರೆ ಮನಸ್ಸಿಗೆ ಬಹಳ ನೋವಾಗುತ್ತದೆ. ಇವುಗಳ ಉದ್ದೇಶಗಳೇ ಬೇರೆ ಆಗಿದೆ, ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಹಸರೀಕರಣಕ್ಕೆ ಆದ್ಯತೆಯನ್ನು ನೀಡಬೇಕೆಂದು ನಾನು ಕಳೆದ 5 ವರ್ಷಗಳಿಂದ ಸಂಬಂಧಪಟ್ಟವರಿಗೆ ಕಾಗದವನ್ನು ಬರೆಯುತ್ತಲೇ ಇದ್ದೇನೆ. ವ್ಯವಸ್ಥಿತವಾಗಿ ಬಡಾವಣೆಗಳನ್ನು ನಿರ್ಮಿಸುವಾಗ ಅಲ್ಲಿ ಹಸರೀಕರಣಕ್ಕೆ ಆದ್ಯತೆಯನ್ನು ಕೊಡಿ, ಎನ್ನುವ ಮನವಿಯನ್ನು ನಾವು ಮಾಡುತ್ತಿದ್ದೇವೆ. ಆ ರೀತಿ ಏನಾದರೂ ಪ್ರಾಧಿಕಾರಗಳ ತಮಗೆ ಲಭ್ಯವಿರುವ ಹಣಕಾಸಿನಲ್ಲಿ ಹಸರೀಕರಣಕ್ಕಾಗಿ ಒಂದು ಪ್ರಾಧಿಕಾರದ ಉದಾಹರಣೆಯನ್ನು ಕೊಡಿ. ಯಾವುದು ಇಲ್ಲ. ಹಾಗಾದರೆ ಈ ನಗರ ವ್ಯಾಪ್ತಿಯಲ್ಲಿ ಲಭ್ಯವಿರುವ ಈ ಭೂಮಿಯನ್ನು ಅಥವಾ ನಗರವ್ಯಾಪ್ತಿಯಲ್ಲಿ ನಾವು ಕಾಣಬಹುದಾದ ಹಸಿರನ್ನು ನಿರ್ಮಿಸುವ ವ್ಯವಸ್ಥೆ ಯಾರಿಂದ ಸಾಧ್ಯಾವಿದೆ? ಈ ನಗರಪಾಲಿಕೆಗಳು ಪುಸಭೆಗಳು, ಈ ಕೆಲಸವನ್ನು ಮಾಡದೇ ಹೋದರೆ ನಗರ ವ್ಯಾಪ್ತಿಯಲ್ಲಿ ಹಸಿರನ್ನು ಕಾಣಲಿಕ್ಕೆ ಹೇಗೇ ಸಾಧ್ಯವಾಗುತ್ತದೆ? ಆ ಕಾರಣಕ್ಕಾಗಿ ಪ್ರಾಧಿಕಾರಗಳು

ಮತ್ತು ನಗರಸಭೆಗಳು ಮತ್ತು ಇವುಗಳ ನಿಯಮಗಳಿಗೆ ತಿದ್ದುಪಡಿಯನ್ನು ತರಬೇಕಾಗುತ್ತದೆ. ರಾಜ್ಯದಿಂದ ಮತ್ತು ಕೇಂದ್ರದಿಂದ ಬರುವ ಹಣದಲ್ಲಿ ಹಸರೀಕರಣಕ್ಕೆದಿಂತಿಷ್ಟು ಹಣವನ್ನು ಕಡ್ಡಾಯವಾಗಿ ಮೀಸಲಿಡಬೇಕು. ಆ ಹಣವನ್ನು ಅದಕ್ಕಾಗಿಯೇ ಬಳಸುವಂತಹ ವಿಶೇಷ ಕಾಯಿದೆಯನ್ನು ತಂದಾಗ ಮಾತ್ರ ಪುರಸಭೆ, ನಗರಸಭೆ, ಮಹಾನಗರ ಪಾಲಿಕೆ, ಮತ್ತು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ನಾವು ಹಸಿರನ್ನು ಕಾಣಲಿಕ್ಕೆ ಸಾಧ್ಯಾವಾಗುತ್ತದೆ. ಇಲ್ಲದಿದ್ದರೆ ಯಾವುದೇ ಕಾರಣಕ್ಕೂ ಸಹ ನಾವು ಹಸರೀಕರಣವನ್ನು ಕಾಣುವುದಕ್ಕೆ ಸಾಧ್ಯವಿಲ್ಲ.

ಇವತ್ತು ಸದನದಲ್ಲಿ ಅರಣ್ಯಸಚಿವರು ಇದ್ದಾರೆ, ಇಲಾಖೆಯ ಪ್ರಧಾನ ಕಾರ್ಯದಶಿಯಗಳಿದ್ದಾರೆ, ನಾನು ಹಿಂದೆ ಅರಣ್ಯ ಸಚಿವನಾಗಿದ್ದ ಸಂದರ್ಭದಲ್ಲಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕಬ್ಬನ್‌ಪಾರ್ಕ್ ಮತ್ತು ಲಾಲ್‌ಬಾಗ್ ಬಿಟ್ಟರೆ ಬೇರೆ ಯಾವುದೇ ಹೊಸ ಜಾಗದಲ್ಲಿ ಹಸರೀಕರಣ ಮಾಡುವುದು ಸಾಧ್ಯಾವಿಲ್ಲವೆಂದು ಗಮನಕ್ಕೆ ಬಂದಾಗ ಹೊಸದಾಗಿ 6 ಕಡೆಗಳಲ್ಲಿ ಹಸರೀಕರಣಕ್ಕಾಗಿ ಜಾಗಗಳನನು ನಾನು ಗುರುತಿಸಿದ್ದೆನು. ಅದರಲ್ಲಿ ತಕರಾರು ಇರುವ 4 ಜಾಗಗಳನನು ಗುರುತಿಸಿದ್ದೇನೆ. 250 ರಿಂದ 600 ಎಕರೆಯವರೆಗೆ ಜಾಗವನ್ನು ನಾನು ಗುರುತಿಸಿ, ಅದನ್ನು ಕಾಯ್ದಿರಿಸಿದ್ದೇನೆ. ನಾನು ಮಾನ್ಯ ಅರಣ್ಯಮಂತ್ರಿಗಳಲ್ಲಿ ಆಸ್ತಿಯಲ್ಲ, ನಾನು ಅರಣ್ಯ ಇಲಾಖೆಯ ಜಾಗವನ್ನು ಗುರುತಿಸಿದ್ದೇನೆ. ಬೆಂಗಳೂರು ನಗರದ ಪೂರ್ವ–ಪಶ್ಚಿಮ, ಉತ್ತರ–ದಕ್ಷಿಣ ಭಾಗಗಳಿಲ್ಲಿ ಕಬ್ಬನ್ ಪಾರ್ಕಿಗೆ ಪರ್ಯಾಯವಾಗಿ ಜಾಗಗಳನ್ನು ಗುರುತಿಸಿ ಇಟ್ಟರುವುದು ಇಂದು ಬೇರೆಯವರಿಂದ ಒತ್ತುವರಿ ಆಗುತ್ತಿದೆ. ಹಾಗಾಗಿ ನಾನು ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ ಬದ್ಧತೆ ಇರುವ ಅಧಿಕಾರಿಗಳು ಸಚಿವರ ಜೊತೆಗಿದ್ದಾರೆ, ಬೆಂಗಳೂರು ನಗರದ ಹಸರೀಕರಣಕ್ಕಾಗಿ ನಾನು ಯಾವ ಜಾಗವನ್ನು ಗುರುತಿಸಿದ್ದೇನು, ಅದನ್ನು ಕಬ್ಬನ್ ಪಾರ್ಕಿಕೆ ಪರ್ಯಾಯವಾಗಿ ಮಾಡುವ ಚಿಂತನೆಯನ್ನು ಅವರು ಮಾಡಬಹುದೇ? ಬೇರೆ ಬೇರೆ ಜಿಲ್ಲಾ ಕೇಂದ್ರಗಳಲ್ಲಿಯೂ ಸಹ ಅಲ್ಲಿನ ನಗರಸಭೆಗಳು ಕಬ್ಬನ್ ಪಾರ್ಕಿಕೆ ಪರ್ಯಾಯವಾದ ಉದ್ಯಾನವನಗಳನ್ನು ರೂಪಿಸುವ ಅವಕಾಶಗಳನ್ನು ಮಾಡುಬಹುದಲ್ಲವೇ? ಆ ಹಿನ್ನಲೆಯಲ್ಲಿ ನಗರಪಾಲಿಕೆ ಎಚ್ಚೆತ್ತುಕೊಳ್ಳಬೇಕು. ಈ ಯೋಜನೆಗೆ ಪೂರಕವಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಗಳೆ, ಮುಂದೆ ನಾನು ಲೋಕೋಪಯೋಗಿ ಇಲಾಖೆಯ ಬಗ್ಗೆ ಮಾತನಾಡಬಯಸುತ್ತೇನೆ. ಅವರಿಗೆ ಏನು ಹೇಳಿದರೂ ಒಂದೇ ಅಥವಾ ಹೇಳದೇ ಇದ್ದರೂ ಒಂದೇ ಲೋಕೋಪಯೋಗಿ ಇಲಾಖೆಯ ಆಸಕ್ತಿಗಳೇ ಬೇರೆ.

**(6–00ಗಂಟೆ)**

ಇವರ ಚಿಂತನೆಗಳೆ ಬೇರೆ. ಈ ಇಲಾಖೆಯಲ್ಲಿ ಕೆಲಸ ಮಾಡುವಂತಹ ಕೆಳಹಂತದ ಅಧಿಕಾರಿಗಳನ್ನು ನಾನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇನೆ, ಅವರ ವಿಚಾರಗಳೆ ಬೇರೆ, ಚಿಂತನೆಗಳೆ ಬೇರೆ. ಅವರು ಏಕೆ ಈ ಇಲಾಖೆಗೆ ಬಂದಿದ್ದಾರೆ ಎಂದು ಒಂದು ಕಡೆಯಿಂದ ಸರ್ವೆ ಮಾಡಿದರೆ, ಎಷ್ಟು ಜನರನ್ನು ಇಲಾಖೆಯಲ್ಲಿ ಇಟ್ಟುಕೊಳ್ಳಬೇಕು, ಎಷ್ಟು ಜನರನ್ನು ಇಲಾಖೆಯಿಂದ ಕಳುಹಿಸಬೇಕು ಎನ್ನವುದನ್ನು ಯೋಚನೆ ಮಾಡುವಂತಹ ಸ್ಥಿತಿಗೆ ಅವರು ಬಂದಿದ್ದಾರೆ. ಇಲ್ಲಿ ಯಾವ ಜಿಲ್ಲೆ ಎನ್ನುವ ಪ್ರಶ್ನೆ ಬರುವುದಿಲ್ಲ. ಇಲಾಖೆ ನಿರಂತರ. ಮಂತ್ರಿಗಳು ಬರುತ್ತಾ ಇರುತ್ತಾರೆ, ಬದಲಾಗುತ್ತಾ ಇರುತ್ತಾರೆ. ಅದು ಮುಖ್ಯವಲ್ಲ. ಆದರೆ ಇಲಾಖಾಧಿಕಾರಿಗಳ ಮಾನಸಿಕ ಸ್ಥಿತಿಯನ್ನು ನಾನು ಹೇಳಬಯಸುತ್ತೇನೆ. ಲೋಕೋಪಯೋಗಿ ಇಲಾಖೆಯ ಬಗ್ಗೆ ಹೇಳುವಾಗ ಸಾಲು ಮರಗಳ ವಿಚಾರ ಬರುತ್ತದೆ. ಸಾಲು ಮರ ನೆಡುವುದು ಅಶೋಕ ಚಕ್ರವರ್ತಿಯ ಕಲ್ಪನೆ ಮಾತ್ರವಲ್ಲ ಪುಣ್ಯ ಕಾರ್ಯ ಎಂದರೆ ಸಾಲು ಮರಗಳನ್ನು ನೆಡುವುದು, ಕೆರೆ–ಕಟ್ಟೆಗಳನ್ನು ಕಟ್ಟಿಸುವುದು, ಅರವಟ್ಟಿಗಳನ್ನು ನಡೆಸುವುದು. ಇವು ಮೂರು ನನ್ನ ಜೀವನದ ಶ್ರೇಷ್ಠ ಕಾರ್ಯಗಳೆಂದು ಅಶೋಕ ಚಕ್ರವರ್ತಿ ತಿಳಿದುಕೊಂಡಿದ. ಸಾಲುಮರದ ತಿಮ್ಮಕ್ಕನ ರೀತಿಯಲ್ಲಿ ನನ್ನ ಮನಸ್ಸಿಗೆ ಬಹಳ ನೋವಾಗುವುದು ಏನು ಎಂದರೆ, ಸಾಲು ಮರಗಳನ್ನು ನೆಡುವ ವಿಚಾರದಲ್ಲಿಯೂ ಅವರಲ್ಲಿ ಯೋಜನೆಗಳನ್ನು ಕಾಣಲು ಸಾಧ್ಯವಿಲ್ಲ. ಹಿಂದೆ ರಸ್ತೆ ಬದಿಯಲ್ಲಿ ನೆಟ್ಟಿರುವಂತಹ ಮರಗಳನ್ನು ಕತ್ತರಿಸುವಂತಹ ವಿಚಾರದಲ್ಲಿ ಅವರಿಗೆ ಯಾವುದೆ ಕರುಣೆ ಇಲ್ಲ. ಅಭಿವೃದ್ಧಿ ಮಾಡಬೇಡಿ ಎಂದು ನಾನು ಹೇಳುವುದಿಲ್ಲ. ರಸ್ತೆ ಅಗಲೀಕರಣವಾಗಬೇಕು. ಆದರೆ ರಸ್ತೆ ಅಗಲೀಕರಣ ಮಾಡುವ ಬಗ್ಗೆ ಒಂದು

ನೋಟಿಫಿಕೇಶನ್ ಆದ ತಕ್ಷಣ ಅವರು ಮಾಡುವ ಮೊದಲ ಕಾಯ್ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳುವದಲ್ಲ, ಅದಕ್ಕೆ ಬೇಕಾದ ಹಣವನ್ನು ಇಡುವುದಲ್ಲ, ಅದಕ್ಕೆ ಬೇಕಾದ ರೀತಿಯಲ್ಲಿ ಕಾನೂನಾತ್ಮಕ ಕ್ರಮಗಳನ್ನು ತೆಗೆದುಕೊಂಡು ಟಿಂಡರ್ ಕರೆಯುವುದು ಅಲ್ಲ. ರಸ್ತೆ ಅಗಲೀಕರಣವಾಗಬೇಕು ಎಂದು ನೋಟಿಫಿಕೇಶನ್ ಆದತಕ್ಷಣ ಮೊದಲು ಆದ್ಯತೆ ಎಂದರೆ, ರಸ್ತೆ ಬದಿಯಲ್ಲಿ ಅಗಲೀಕರಣವಾಗಬೇಕು ಎನ್ನು ನೋಟಿಫಿಕೇಶನ್ ಹತ್ತಾರು ವರ್ಷ ಮುಂದಕ್ಕೆ ಹೋಗುತ್ತದೆ. ಆದರೆ ರಸ್ತೆ ಬದಿಯಲ್ಲಿರುವ ಮರಗಳನ್ನು ಆಗಲೇ ಕತ್ತರಿಸಿ ಹಾಕಿರುತ್ತಾರೆ. ಇವತ್ತು ಮರಗಳನ್ನು ಕತ್ತರಿಸಿ ಹತ್ತು ವರ್ಷಗಳ ನಂತರ ರಸ್ತೆ ಅಗಲೀಕರಣ ಕೆಲಸವನ್ನು ಕೈಗೊಳ್ಳಲಾಗುತ್ತದೆ. ಆಗ ಅನೇಕ ಮರಗಳನ್ನು ತೆಗೆಯಬೇಕಾಗುತ್ತದೆ. ಆದರೆ ಮರಗಳನ್ನು ತೆಗೆಯುವ ಅಗತ್ಯವಿಲ್ಲ. ಇದೊಂದು ಲಾಬಿ, ಇದೊಂದು ದಂಧೆಯಾಗಿದೆ.

**ಪ್ರೊ: ಪಿ.ವಿ. ಕೃಷ್ಣಭಟ್ಟ:–** ಮಾನ್ಯ ಸಭಾಪತಿಗಳೆ, ರಸ್ತೆ ಅಗಲೀಕರಣ ಮತ್ತು ರಸ್ತೆ ಪಕ್ಕ ಇರುವ ಮರಗಳನ್ನು ಕತ್ತರಿಸುವ ವಿಚಾರದಲ್ಲಿ ಹಿಂದೆ ಅನೇಕ ಸಂದರ್ಭಗಳಲ್ಲಿ ಸಂಬಂಧಪಟ್ಟವರ ಜೊತೆಯಲ್ಲಿ ನಾನು ಚರ್ಚೆ ಮಡಿದೆ. ಹಿಂದೆ ನಮ್ಮ ಪೂರ್ವಿಕರು ಎರಡು ಕಡೆಗಳಲ್ಲಿ ಮರಗಳನ್ನು ನೆಟ್ಟಿದ್ದಾರೆ. ವಿಜಯಶಂಕರ್ ಹೇಳಿದ ಹಾಗೆ ಈ ಯೋಜನೆ ಇನ್ನು ಪ್ರಾರಂಭವಾಗುವುದಕ್ಕಿಂತ ಮುಂಚೆ ಮರಗಳನ್ನು ಕಡೆಯುವ ಕೆಲಸ ಪ್ರಾರಂಭವಾಗಿ ಬಿಡುತ್ತದೆ. ರಸ್ತೆಯನ್ನು ಸ್ವಾಧೀನಪಡಿಸಿಕೊಂಡು ಇನ್ನೊಂದು ರಸ್ತೆ ಮಾಡಿ. ಆಗ ಮರಗಳನ್ನು ಕತ್ತರಿಸದೆ ರಕ್ಷಣೆ ಮಾಡಿಕೊಳ್ಳಲು ಅವಕಾಶ ಸಿಗುತ್ತದೆ. ಅಕಸ್ಮಾತ್ ಅದು ಸಾಧ್ಯವಿಲ್ಲ ಎನ್ನುವುದಾದ್ದರೆ ಕೊನೆ ಪಕ್ಷ ಒಂದು ಸಾಲನ್ನು ಉಳಿಸಿಕೊಂಡು ಇನ್ನೊಂದು ಸಾಲನ್ನು ಕತ್ತರಿಸಿ. 30–40 ವರ್ಷಗಳಿಂದ ಬೆಳೆದಿರುವ ಮರಗಳನ್ನು ಕತ್ತರಿಸುವುದು ಸರಿಯಲ್ಲ. ನಾನು ಶಿವಮೊಗ್ಗದಲ್ಲಿದ್ದಾಗ ಪ್ರತಿವಾತ ಹುಬ್ಬಳಿಗೆ ಪ್ರಯಾನ ಮಾಡುತ್ತಿದೆ. ಎರಡು ಕಡೆಗಳಲ್ಲಿ ಉದ್ದಕ್ಕೆ ಸಾಲು ಮರಗಳು ಇರುವುದನ್ನು ನಾನು ಪ್ರತಿ ಸಾರಿ ನೋಡುತ್ತಿದೆ. ರಸ್ತೆ ಅಗಲೀಕರಣವಾಯಿತು, ಇವತ್ತು ಎಷ್ಟು ಬಟ್ಟಾಬಯಲು ಎಂದರೆ, ಅಲ್ಲಿ ಏನಾದರು ಮಧ್ಯಾಹ್ನದ ಸಮಯದಲ್ಲಿ ವಾಹನ ಕೆಟ್ಟು ನಿಂತರೆ ಬಿಸಿಲಿನ ಝಳವನ್ನು ತಡೆದುಕೊಳ್ಳಲು ಆಗುವುದಿಲ್ಲ. ಅಂತಹ ಸ್ಥಿತಿ ಇದೆ. ಅಲ್ಲಿ ಪಕ್ಕದಲ್ಲಿ ಎಲ್ಲಿಯಾದರು ನಿಂತುಕೊಳ್ಳೋಣ ಎಂದರೆ ಒಂದು ಕಡೆಯು ನೆರಳಿನ ಜಾಗವಿಲ್ಲ. ಈ ರೀತಿ ಸಮಾಜಕ್ಕೆ ಹಾನಿಯನ್ನು ಉಂಟು ಮಾಡುವಂತಹ ಬಹಳ ದೊಡ್ಡ ನಿರ್ದಯವಾದ ರಸ್ತೆ ಅಗಲೀಕರಣ ಕೆಲಸ ನಡೆದಿದೆ. ಈ ವಿಷಯದಲ್ಲಿ ಸರ್ಕಾರ ಮತ್ತು ಸಂಬಂಧಪಟ್ಟ ಮಂತ್ರಿಗಳು ವಿಶೇಷವಾದ ಗಮನ ಹರಿಸಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತೇನೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಹಣಕಾಸಿನ ಸೌಲಭ್ಯ ಇರಬಹುದು, ತಾವು ನೋಡಿದ್ದೀರಿ ತುಮಕೂರು–ಚಿತ್ರದುರ್ಗ, ಅಥವಾ ಬೆಂಗಳೂರು–ಅನಂತಪುರ, ನೆಲಮಂಗಲ–ಕುಣಿಗಲ್, ತುಮಕೂರು–ಪಾವಗಡ. ಹಿಂದೆ ಮಹಾರಾಜರ ಮತ್ತು ಪಾಳೇಗಾರರ ಕಾಲದಲ್ಲಿ ಅನೇಕ ರಸ್ತೆಗಳಲ್ಲಿ ಸಾಲು ಮರಗಳನ್ನು ಬೆಳೆಸಲಾಗಿತ್ತು. ಸಾಲು ಮರಗಳು, ಕಲ್ಯಾಣಿ, ಬೇವು ನೇರಲಿ, ಹಿಪ್ಪೆ, ಮಾವು ರಸ್ತೆಗಳಲ್ಲಿ ಸ್ವಲ್ಪ ಕಡಿಮೆ. ಆದರೆ ಹೆಚ್ಚು ಹುಳಿ ಇರುವ ಮಾವುಗಳನ್ನು ಹಾಕುತ್ತಿದ್ದರು. ಕತ್ರಿ ಮಾವು ಎಂದು ನಾರಿನ ಮಾವು ಅದು. ರಾಷ್ಟ್ರೀಯ ಹೆದ್ದಾರಿ 4ರಲ್ಲಿ, ಬೆಂಗಳೂರಿನಿಂದ ಬೆಳಗಾವಿಯವರೆಗೆ ರಸ್ತೆ ಅಗಲೀಕರಣ ಮಾಡಿದ್ದಾರೆ. ಒಂದೇ ಒಂದು ಮರವು ಇಲ್ಲ. ನಮ್ಮಲ್ಲಿ ಅರಳೀ ಮರ ಕಡಿದ್ದರೆ ಮಾತ್ರ ಪಾಪ ಬರುತ್ತದೆ ಎಂದು ಒಂದು ಕಡಿದರೆ 20 ಮರಗಳನ್ನು, 9ಮರಗಳನ್ನು, ಕನಿಷ್ಠ 3 ಮರಗಳನ್ನು ಹಾಕುವವರು ಇದ್ದಾರೆ. ಆ ಪಾಪ ಪ್ರಜ್ಞೆ ಅರಳಿ ಮರಕ್ಕೆ ಮಾತ್ರ ಏಕೆಂದರೆ ಸಂಸ್ಕೃತದಲ್ಲಿ

**" ಮೂಲತೋ ಬೃಹ್ಮರೂಪಾಯ**

**ಮಧ್ಯತೋ ವಿಷ್ಣು ರೂಪಿಣೆ**

**ಅಗ್ರತ: ಶಿವರೂಪಾಯ**

**ವೃಕ್ಷ ರಾಜಾಯತೇ ನಮ:"**

ಈ ಅರಳಿಮರದಲ್ಲಿ ಮೂರು ಜನ ಅಂದರೆ ತ್ರಿಮೂರ್ತಿಗಳು ಸ್ಥಾಪಿತರಾಗಿರುತ್ತಾರೆ ಎಂದು ಹೇಳುತ್ತಾರೆ.

**ಶ್ರೀ ಬಿ.ರಾಮಕೃಷ್ಣ:–** ಈ ಶ್ಲೋಕ ಆರ್‌ಎಸ್‌ಎಸ್ ನವರಿಂದ ಕೇಳಿದ ಹಾಗೆ ಇದೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಎಲ್ಲಿ ಯಾವ ಶ್ಲೋಕ್ ಹೇಳಿ ಕೊಡುತ್ತಾರೆ ಎನ್ನುವುದು ಇವರಿಗೆ ಗೊತ್ತಿಲ್ಲ. ತಮಗೆ ಚೆನ್ನಾಗಿ ಗೊತ್ತು. ಹೈಸ್ಕೂಲ್‌ನಿಂದ ಬಿಎಸ್‌ಸಿ ಯವರಗೆ ನನ್ನ ಎರಡನೆ ಭಾಷೆ ಸಂಸ್ಕೃತ್.

**ಶ್ರೀ ಕೆ.ಗೋವಿಂದರಾಜು:–** ಮೇಲುಕೋಟೆಯಲ್ಲಿ ಓದಿದ್ದಿರಾ?

**ಶ್ರೀ ವಿ.ಎಸ್.ಉಗ್ರಪ್ಪ:–** ನಾನು ಐದು ವರ್ಷ ಸಿದ್ದಗಂಗಾ ಮಠದಲ್ಲಿ ಓದಿದ್ದೆನೆ. ಅಲ್ಲಿ ಬೆಳಗ್ಗೆ 6ಗಂಟೆಯಿಂದ 10ಗಂಟೆವರೆಗೆ ಸಂಸ್ಕೃತವನ್ನು ಅಧ್ಯಯನ ಮಾಡದೆ ಇದ್ದರೆ ಪ್ರಥಮ, ಮಧ್ಯಮ,ಉತ್ತಮ, ಸಾಹಿತ್ಯ ಓದುವವರೆಗೆ ಅಲ್ಲಿ ಊಟ ಹಾಕುತ್ತಿರಲಿಲ್ಲ. ಊಟದ ಅನಿವಾರ್ಯತೆಯಿಂದ ಇನ್ನೊಂದು ಇದನ್ನು ಕಲಿಯಬೇಕು ಎನ್ನುವ ಆಸಕ್ತಿ. ಮಹಿರ್ಷಿ ವಾಲ್ಮೀಕಿ ವಂಶಸ್ಥರಾದ ನಾವು ಸ್ವಲ್ಪ ಸಂಸ್ಕೃತ ಕಲಿಯೋಣ ಎನ್ನುವ ಹಿನ್ನೆಲೆಯಲ್ಲಿ ಕಲಿಯಲಾಯಿತು.

**ಡಾ॥ ವೀರಣ್ಣ ಮತ್ತೀಕಟ್ಟಿ:–** ಮಹಿರ್ಷಿ ವಾಲ್ಮೀಕಿಯವರ ಸಂತತಿಯವರು ನಮ್ಮ ಮಠದಲ್ಲಿ ಇದ್ದರು ಎನ್ನುವುದು ಸಂತೋಷದ ವಿಚಾರ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಗಳೆ, ಹೇಗೆ ಅರಳಿಮರದ ವಿಚಾರದಲ್ಲಿ ಪಾಪ ಪ್ರಜ್ಞೆಯನ್ನು ಜನರು ಇಟ್ಟುಕೊಂಡಿದ್ದಾರೆ, ಬೇವನ್ನು ಪೂಜೆ ಮಾಡುತ್ತಾರೆ. ಅನೇಕ ಸಂದರ್ಭದಲ್ಲಿ ಪುಟ್ಟಸ್ವಾಮಿಯವರು ಮಾನ್ಯ ರಾಮಕೃಷ್ಣ ಹೆಗಡೆಯವರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ರಾಮಕೃಷ್ಣ ಹೆಗಡೆಯವರ ಅವಧಿಯಲ್ಲಿ ಅರಣ್ಯ ಸಚಿವರಾಗಿ ಶ್ರೀ ಡಿ.ಎ.ಜಿವಿಜಿ ಯವರು ಇದ್ದರು. ಇವರ ಕಾಲದಲ್ಲಿ ಬೆಂಗಳೂರು ನಗರದಲ್ಲಿ ಇರಬಹುದು ಅಥವಾ ಜಿಲ್ಲಾ ಹೆಡ್‌ಕ್ವಾರ್ಟ್ಸ್‌ನಲ್ಲಿ ಇರಬಹುದು ಸಾಲು ಮರಗಳಿಗೆ ಸಾಕಷ್ಟು ಒತ್ತನ್ನು ಕೊಟ್ಟರು. ಇವರ ಕಾಲದಲ್ಲಿ ಸಿಕ್ಕಷ್ಟು ಒತ್ತು ಈಗಿನ ಮಾನ್ಯ ರಮಾನಾಥ್ ರೈರವರ ಮತ್ತು ಸಿದ್ದರಾಮಣ್ಣನವರ ಕಾಲದಲ್ಲಿಯು ಸಿಗುತ್ತದೆ ಎಂದು ನಾನು ಭಾವಿಸುತ್ತೇನೆ.

**ಶ್ರೀ ಕೆ.ಗೋವಿಂದರಾಜು:–** ಪ್ರೋಫೆಸರ್‌ರವರು ಮರ ಕಡಿಯುವುದರ ಬಗ್ಗೆ ಹೇಳಿದರು. ಬೇರೆ ದೇಶದಲ್ಲಿ ಒಂದು ಮರ ಕಡ್ಡಿದರೆ ಮೂರು ಗಿಡಗಳನ್ನು ನೆಡಬೇಕು ಎನ್ನುವ ಕಾನೂನು ಇದೆ. ಆ ರೀತಿ ಇಲ್ಲಿಯು ಮಾಡಬೇಕೆಂದು ಹೇಳಬಯಸುತ್ತೇನೆ.

**ಶ್ರೀ ಸಿ.ಎಚ್.ವಿಜಯಶಂಕರ್:–** ಮಾನ್ಯ ಸಭಾಪತಿಗಳೆ, ಪ್ರೊಫೆಸರ್‌ರವರು ಶಿವಮೊಗ್ಗ ವಿಚಾರವನ್ನು ಮತ್ತು ಉಗ್ರಪ್ಪನವರು ತುಮಕೂರು ವಿಚಾರವನ್ನು ಹೇಳಿದರು. ನಮ್ಮ ಹುಣಸೂರು–ಮೈಸೂರು ರಸ್ತೆಯಲ್ಲಿ ಮಹಾರಾಜರು ನೆಟ್ಟಂತಹ ಮರಗಳು ಇವೆ.

**ಶ್ರೀ ಬಿ.ರಾಮಕೃಷ್ಣ:–** ಮಾನ್ಯ ಸಭಾಪತಿಗಳೆ, ಈಗಲೂ ಕೂಡಾ ಹಳ್ಳಿಗಳಲ್ಲಿ ಒಂದು ಮರ ಕಡ್ಡಿದರೆ ಒಂದು ಗೋನೆ ತೆಗೆದುಕೊಂಡು ಅದೇ ಜಾಗದಲ್ಲಿ ಇಡುತ್ತಾರೆ. ಮರ ಕಡಿಯುವುದಕ್ಕಿಂತ ಮುಂಚೆ ನೆಡುತ್ತಾರೆ. ಮರ ಕಡಿದಾದ ಮೇಲೆ ಒಂದು ನೆಡುತ್ತಾರೆ. ಇದು ನಮ್ಮ ನಾಗರೀಕರಲ್ಲಿ ಬರಬೇಕು. ರಸ್ತೆಗಳನ್ನು ಗಿಡಗಳನ್ನು ನಾವು ನೆಡಬೇಕು ಆದರೆ ನೆಡುವುದಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಗಳೆ, ಹೈವೆ ಯವರು ಮರಗಳನ್ನು ಕಡಿದಿದ್ದಾರೆ ಅವರ ಎಲ್ಲಾ ಅಗ್ರಿಮೆಂಟ್‌ಗಳಲ್ಲಿ ಮರಗಳನ್ನು ಹಾಕಬೇಕು ಎಂದು ಇದೆ. ಅದನ್ನು ಯಥಾವತ್ತಾಗಿ ಜಾರಿಗೆ ತಂದರೆ, ಹೈವೆಯಲ್ಲಿ ಸಂಗ್ರಹ ಮಾಡುವ ಟೋಲ್‌ನ್ನು ಸಂಗ್ರಹ ಮಾಡಲು ಬರುವುದಿಲ್ಲ. ಎಲ್ಲಿಯವರೆಗೆ ಮರಗಳನ್ನು ಬೆಳೆಸುವುದಿಲ್ಲ they are not entitled for it. ಹೈವೆ ಪ್ರಾಧಿಕಾರ ಹೆಚ್ಚು active ಆಗಿ ಕೆಲಸ ಮಾಡಿದರೆ, ಹೈವೆಯಲ್ಲಿ ಹೆಚ್ಚು ಮರಗಳನ್ನು ಬೆಳೆಸಲು ಸಾಧ್ಯವಿದೆ.

**ಶ್ರೀ ಬಿ.ರಾಮಕೃಷ್ಣ:–** ನಮ್ಮ ರೈತರು ಆ ಕೆಲಸ ಮಾಡುತ್ತಾರೆ. ಇನ್ನು ಇವರ ಕೈಯಿಂದ ಆಗುವುದಿಲ್ಲ.

**ಶ್ರೀ ಸಿ.ಎಚ್.ವಿಜಯಶಂಕರ್:–** ಮಾನ್ಯ ಸಭಾಪತಿಗಳೆ, ಹುಣಸೂರು–ಮೈಸೂರು ರಸ್ತೆ 15 ವರ್ಷಗಳಿಂದ ರಸ್ತೆ ಅಭಿವೃದ್ಧಿಯಾಯಿತು. ಅಭಿವೃದ್ಧಿಗಾಗಿ ಮರಗಳನ್ನು ಕತ್ತರಿಸಿ ಹಾಕಿದರು. ಅದರಲ್ಲಿ ಮಾವು ಇತ್ತು, ಬೇವು, ಆಲ, ಅರಳೀ,ಬ್ಯಾಲಾ, ಹುಣಸೆ ಮರಗಳು ಇದ್ದವು. ಆ ಮರಗಳನ್ನು ಕತ್ತರಿಸಿದ ಮೇಲೆ ರಸ್ತೆ ಅಗಲೀಕರವಾಗಿ 15 ವರ್ಷಗಳಾಯಿತು. ಒಂದು ಮರ ನೆಡುವ ಕೆಲಸವಾಗಿಲ್ಲ.

**ಸಭಾಪತಿಯವರು:–** ಸಾಲು ಮರಗಳ ಬಗ್ಗೆ ಮಾತನಾಡುತ್ತಾ ಬೆಂಗಳೂರು ಬಗ್ಗೆಯು ಪ್ರಸ್ತಾಪ ಮಾಡಿದ್ದೀರಿ, ನೀವು ಎಲ್ಲರು observe ಮಾಡಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ. ಬೆಂಗಳೂರಿನವರಿಗೆ ಏನು ತಾಪತ್ರಯ ಬಂದಿದೆ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಕಾರಣ ನಾನು ಸುಮಾರು 60ವರ್ಷಗಳಿಂದ ಬೆಂಗಳೂರಿಗೆ ಬಂದು ಹೋಗುತ್ತಿದ್ದೇನೆ. ನಾನು ಇಲ್ಲಿಯೇ ಓದಿದವನು. ಇಲ್ಲಿ ಯಾವುದೆ ಮರವನ್ನು ಹಾಕಿದರು ಲಡ್ಡ ಮರವನ್ನು ಹಾಕುತ್ತಾರೆ. ಅದರ ಮೇಲೆ ಒಂದು ಗಿಳಿ, ಹಕ್ಕಿ, ಕಾಗೆಯು ಕೂಡುವುದಿಲ್ಲ. ಜೋರಾಗಿ ಗಾಳಿ ಬಂದರೆ ಬಿದ್ದು ಹೋಗುತ್ತದೆ. ನಮ್ಮ ಕಡೆಗಳಲ್ಲಿ ಗಾಳಿಗೆ ಯಾವ ಮರಗಳು ಬೀಳುವುದಿಲ್ಲ. ಬಗ್ಗುತ್ತವೆ ಮತ್ತು ಸರಿಯಾಗುತ್ತವೆ. ಅಪರೂಪಕ್ಕೆ 100–200 ವರ್ಷವಾಗಿರುವ ಮರಗಳು ಬೀಳುತ್ತವೆ. ಬೆಂಗಳೂರಿನವರು ಬೆಳೆಸಿರುವ ಮರಗಳೆಲ್ಲವು ಲಡ್ಡು. ಕೈಯಲ್ಲಿ ಮುರಿಯುವ ಹಾಗೆ ಇರುತ್ತವೆ. ಅದು ಏಕೆ ಆ ರೀತಿ ಮರ ಬೆಳೆಸುತ್ತಾರೆ ಗೊತ್ತಿಲ್ಲ. ಅದರ ಬಗ್ಗೆ ಒಂದು ಸಾರಿ ಚರ್ಚೆಯಾದರೆ ಒಳ್ಳೆಯದು.

**ಪ್ರೊ.ಪಿ.ವಿ.ಕೃಷ್ಣಭಟ್ಟ:–** ಮರಗಳನ್ನು ನೋಡಲು ಆಗುವುದಿಲ್ಲ. ಎಲ್ಲ ಕಡೆ ಕಾಂಕ್ರಿಟ್ ಆಗಿರುವುದರಿಂದ ಬೇರುಗಳು ಗಟ್ಟಿಯಾಗುವುದಿಲ್ಲ.

**ಸಭಾಪತಿಯವರು:–** ಅದನ್ನು ತೆಗೆದುಕೊಂಡು ನಮ್ಮ ಊರಿನಲ್ಲಿ ನೆಟ್ಟರು ಅಷ್ಟೆ ಮರವೆ ಲಡ್ಡು ಅದು. ಕೆಲಸಕ್ಕೆ ಬಾರದ ಮರ. ಸೌದೆಗೂ ಬರುವುದಿಲ್ಲ ಅದು.

**ಶ್ರೀ ಎಚ್.ಎಂ.ರೇವಣ್ಣ:–** ಕತ್ತೆ ಮರ ಎಂದು ಹೇಳುತ್ತಾರೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಬೆಂಗಳೂರಿನಲ್ಲಿರುವ ವಾತಾವರಣಕ್ಕೆ ಮತ್ತು ಮಣ್ಣಿನ ಗುಣಕ್ಕೆ ಯಾವ ಮರ ಹಾಕಿದರು ಚೆನ್ನಾಗಿ ಬರುತ್ತವೆ. ಅಧಿಕಾರಿಗಳಿಗೆ ಏನಾಗಿದೆ ಗೊತ್ತಿಲ್ಲ, ಅಲಂಕಾರಿಕ ಗಿಡಗಳನ್ನು ಹಾಕುತ್ತಾರೆ.

**ಸಭಾಪತಿಯವರು:–** ಮೇಟ್ರಿ ಮರಗಳನ್ನು ಹಾಕುತ್ತಾರೆ. ಗಾಳಿ ಬಂದರೆ ಬಿದ್ದು ಹೋಗುತ್ತವೆ.

**ಶ್ರೀ ವಿ.ಎಸ್.ಉಗ್ರಪ್ಪ:–** 3–4 ವರ್ಷಗಳಲ್ಲಿ ದೊಡ್ಡದಾಗುತ್ತವೆ ಎಂದು ಹಾಕುತ್ತಾರೆ. ಆದರೆ 3–4 ವರ್ಷಗಳಲ್ಲಿ ಜೋರಾಗಿ ಗಾಳಿ ಬಂದರೆ ಅದು ಬಿದ್ದು ಹೋಗುತ್ತದೆ. ಮತ್ತೆ ಆ ಜಾಗ ಖಾಲಿ ಉಳಿಯುತ್ತದೆ. ನಾಲ್ಕು ವರ್ಷ ತಡವಾಗಿ ಬೆಳದರು ನೂರು ವರ್ಷ ಬಾಳುವಂತಹ ಮರಗಳನ್ನು ಹಾಕಬೇಕು.

**ಶ್ರೀ ಎಂ.ಡಿ.ಲಕ್ಷ್ಮಿನಾರಾಯಣ(ಅಣ್ಣಯ್ಯ):–** ತೇಗ,ಮತ್ತಿ,ಹೊನ್ನೆ ಈ ರೀತಿಯ ಲಾಭದಾಯಕವಾದ ಮರಗಳನ್ನು ನೆಟ್ಟರೆ ವಿಶೇಷವಾಗಿ ಬಾಳಿಕೆ ಬರುತ್ತವೆ.

**ಸಭಾಪತಿಯವರು:–** ಸಾಲು ಮರಕ್ಕೆ ಇವೆಲ್ಲ ಬೇಕಾಗಿಲ್ಲ.

**ಶ್ರೀ ಬಿ.ರಾಮಕೃಷ್ಣ:–** ಹಕ್ಕಿ ಪಕ್ಷಿಗಳಿಗೆ ಉಪಯೋಗವಾಗುವಂತಹ ಮರಗಳನ್ನು ಬೆಳೆಸಬೇಕು.

**ಸಭಾಪತಿಯವರು:–** ಪಕ್ಷಿಗಳು ಕೂಡುವಂತಹ ಮರಗಳು ಆಗಬೇಕು.

**ಶ್ರೀ ಸಿ.ಎಚ್.ವಿಜಯಶಂಕರ್:–** ಹಿಂದೆ ನಮ್ಮ ಹಿರಿಯರು ನೆಟ್ಟಂತಹ ಮರಗಳನ್ನು ನೋಡಿ, ಅದರಲ್ಲಿ ಕಾಡು ಮಾವು ಇತ್ತು.

**ಶ್ರೀ ಬಿ.ರಾಮಕೃಷ್ಣ:-** ನನ್ನ ತೋಟವಿದೆ. ಅಲ್ಲಿ ಒಳ್ಳೆಯ ಮರ-ಗಿಡಗಳನ್ನು ಬೆಳೆಸಿದ್ದೇನೆ. ಸದಾ ಕಾಲ ಹಕ್ಕಿ-ಪಕ್ಷಿಗಳು ಅಲ್ಲಿ ಇರುತ್ತವೆ. ದಯಮಾಡಿ ಎಲ್ಲರೂ ಬಂದು ನೋಡಿ. ಯಾರಿಗೆ ಏನು ಊಟ ಬೇಕು ಅದನ್ನು ಮಾಡಿಸುತ್ತೇನೆ. ಕೋಕ್ರೆಬೆಳ್ಳೂರ ಪಕ್ಕದಲ್ಲಿಯೇ ನಮ್ಮ ತೋಟವಿದೆ.

**ಶ್ರೀ ಐವನ್ ಡಿಸೋ'ಜ:-** ದಿನಾಂಕವನ್ನು ನಿಗದಿ ಮಾಡಿ ಆಮಂತ್ರಣ ಪತ್ರವನ್ನು ಕೊಡಿ.

**ಶ್ರೀ ಬಿ.ರಾಮಕೃಷ್ಣ:-** ನನ್ನ ತೋಟವನ್ನು ನೋಡಿಕೊಂಡು ನೀವು ಹಾಗೆ ಬೆಳಸಬೇಕು. ಆ ಕಂಡೀಶನ್ ಮೇಲೆ ಬರಬೇಕು.

**ಸಭಾಪತಿಯವರು:-** ಒಳ್ಳೆಯ ವಿಷಯ ಬಂತು ಎಲ್ಲರೂ ಭಾಗವಹಿಸಿದ್ದರು. ಈಗ ಮುಂದುವರೆಸಿ.

**ಶ್ರೀ ಸಿ.ಎಚ್.ವಿಜಯಶಂಕರ್:-** ಮಾನ್ಯ ಸಭಾಪತಿಗಳೆ, ಹಿಂದಿನ ಹಿರಿಯತು ಮತ್ತು ಮಹಾರಾಜರು ನೆಡುವಂತಹ ಮರಗಳನ್ನು ನೋಡಿ, ಅದರಲ್ಲಿ ಕಾಡು ಮಾವು, ಮಿಡಿ ಮಾವು, ಬೇವು, ಹೊಗ್ಗೆ, ಹುಣಸೆ, ಆಲ, ಅರಳೆ, ಹತ್ತಿ, ಹಿಪ್ಪೆ, ಗೋಣಿ ಮರಗಳನ್ನು ಇದ್ದವು. ಇವು ನೂರಾರು ವರ್ಷ ಬಾಳುತ್ತಿದ್ದವು. ಮತ್ತು ಹಕ್ಕಿ-ಪಕ್ಷಿಗಳಿಗೆ ಆಶ್ರಯ ಮತ್ತು ಆಹಾರ ಸಿಗುವ ಮರಗಳಾಗಿದ್ದವು. ಇದು ಇವತ್ತು ನಮ್ಮಿಂತ ಮರೆಯಾಗುತ್ತಿದೆ. ಮರಗಳಿಗೆ ಆದ್ಯತೆ ಕೊಡಬೇಕಾದರೆ ಈ ರೀತಿಯ ಮರಗಳಿಗೆ ಆದ್ಯತೆಯನ್ನು ಕೊಡಬೇಕೆಂದು ಹೇಳಬಯಸುತ್ತೇನೆ. ನಾನು ಲೋಕೋಪಯೋಗಿ ಇಲಾಖೆ ಬಗ್ಗೆ ಮಾತನಾಡುತ್ತಿದೆ, ಮರಗಳನ್ನು ತೆಗೆಯುವ ವಿಚಾರದಲ್ಲಿ ಅವರಿಗೆ ಯಾವುದೇ ರೀತಿಯ ಪರಿಕಲ್ಪನೆ ಇಲ್ಲ. ರಸ್ತೆ ಕೆಲಸ ಮುಗಿದ ಮೇಲೆ ಮರಗಳನ್ನು ಯಾವಾಗ ನೆಟ್ಟು ಬೆಳೆಸಬೇಕು ಎನ್ನುವ ಬಗ್ಗೆ ಕಾಲಬದ್ದ ಯೋಜನೆ ಇಲ್ಲ.

**ಸಭಾಪತಿಯವರು:-** ಅರಣ್ಯ ಸಚಿವರು ಇಲ್ಲೆ ಇದ್ದಾರೆ, ಒಂದು ವಿಷಯವನ್ನು ಗಮನಿಸಬೇಕು. ರಸ್ತೆ ಅಗಲೀಕರಣಕ್ಕಾಗಿ ಅಥವಾ ಮರಗಳಿಗೆ ವಯಸ್ಸಾಗಿದೆ ಎನ್ನುವ ಕಾರಣಕ್ಕೆ ಮರಗಳನ್ನು ಕಡಿಯುತ್ತಾರೆ. ಆದರೆ ಬಡ್ಡೆ ಅಲ್ಲಿಯೇ ಬಿಡುತ್ತಾರೆ. ಇದು ರಸ್ತೆ ಅಪಘಾತಕ್ಕೆ ಪೂರಕನಾ ಅಥವಾ ಮಾರಕ ಗೊತ್ತಾಗಲಿಲ್ಲ ನನಗೆ. ಬಡ್ಡೆ ಇದ್ದರೆ ಗಾಡಿ ಗುದ್ದುವುದಿಲ್ಲ ಮರವಿದ್ದರೆ ಗುದ್ದುತ್ತಾರೆ ಎನ್ನುವುದು ಅವರ ಅಭಿಪ್ರಾಯವೇ. ನಮ್ಮ ಊರ ಕಡೆಗೆ ಬನ್ನಿ ತೋರಿಸುತ್ತೇವೆ. ಬಡ್ಡೆ ತೆಗೆಯಲು ಸ್ವಲ್ಪ ಸಮಯವಾಯಿತು, ಜೆಸಿಪಿ ಬರಲಿಲ್ಲ ಎಂದರೆ ಅದು ಸರಿ. ಆದರೆ ನಾಲ್ಕು-ಹತ್ತು ವರ್ಷಗಳಿಂದ ಆ ಬಡ್ಡೆಗಳು ಹಾಗೆ ಇವೆ. ಇತ್ತೀಚೆಗೆ ಒಂದು ದುಃಖ:ದಾಯಕ ಸಂಗತಿ ಎಂದರೆ ಆ ಬಡ್ಡೆ ಡಿಕ್ಕಿ ಹೊಡೆದು ಒಬ್ಬರು ಸತ್ತು ಹೋದರು. ದೊಡ್ಡದಾದ ಬಡ್ಡೆ ಇದೆ. ರೇಲ್ವೆ ಗೇಟ್ ಹತ್ತಿರ ಇದೆ. ಏಕೆ ಇದನ್ನು ಕಡೆದಿದ್ದಾರೆ ಮತ್ತು ಬಡ್ಡೆಯನ್ನು ಏಕೆ ತೆಗೆದಿರುವುದಿಲ್ಲ ಎಂದು ಅಲ್ಲಿ ಇರುವ ಒಬ್ಬ ವ್ಯಕ್ತಿಯನ್ನು ಕೇಳಿದೆ. ರಸ್ತೆ ಅಗಲ ಮಾಡಲು ಕಡೆದಿದ್ದಾರೆ, ಬಡ್ಡೆ ಏಕೆ ಬಿಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ ಸರ್ ಎಂದು ಹೇಳಿದ. ಇದೊಂದು ವಿಚಿತ್ರವಾದ ಪದ್ದತಿಯಾಗಿದೆ ಅರಣ್ಯ ಮತ್ತು ಲೋಕೋಪಯೋಗಿ ಇಲಾಖೆಯವರದು. ಮರಗಳನ್ನು ಕಡೆಯಬೇಡಿ, ಕಡಿಯಲೆ ಬೇಕು ಎನ್ನುವುದಾದ್ದರೆ ಪೂರ್ತಿ ಕ್ಲೀನ್ ಮಾಡಿ ಅಲ್ಲಿ ಏನು ಬಿಡಬೇಡಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೆ, ಮರಗಳನ್ನು ಕಡಿಯಲು ಒಂದು ಇಲಾಖೆ, ಬಡ್ಡೆ ತೆಗೆಯುವುದು ಆ ಇಲಾಖೆ ಅಲ್ಲ, ಅದಕ್ಕೆ ಬೇರೆ ಇಲಾಖೆ ಇದು ಇರುವ ಅವಸ್ಥೆ. ವಿಜಯಶಂಕರ್‌ರವರು ಬಹಳ ಗಂಭೀರವಾದ ವಿಚಾರವನ್ನು ಎತ್ತುಕೊಂಡಿದ್ದಾರೆ. ಹುಡುಕಿ-ಹುಡುಕಿ ವಿದ್ಯುತ್ ತಂತಿಯ ಕೆಳಗೆಯೇ ಮರಗಳನ್ನು ನೆಡುತ್ತಾರೆ. ಮರ ಹಾಕಲು ಹಣ ಖರ್ಚು, ಆ ಮರ ಬೆಳೆದ ಮೇಲೆ ಪ್ರತಿ ವರ್ಷ ಅದನ್ನು ತಂತಿ ಮುಟ್ಟದಂತೆ ಕಟ್ ಮಾಡಲು ಹಣ ಖರ್ಚು. ಇಲಾಖೆಗಳಲ್ಲಿ ಕೆಲಸ ಮಾಡುವ ವಿಧಾನವನ್ನು ನಾವು ಬದಲಾವಣೆ ಮಾಡಿಕೊಳ್ಳದೆ ಇದ್ದರೆ ಯಾವ ಹಸಿರು ಮಾಡಲು ಆಗುವುದಿಲ್ಲ. 1947ರಲ್ಲಿ ನಮ್ಮ ದೇಶದಲ್ಲಿ ನಿಜವಾದ ಕಾಡು 33% ಇತ್ತು. ಇವತ್ತು 20% ಹಸಿರು ಎಂದು ಹೇಳುವಲ್ಲಿ ಎಲ್ಲವು ಬರುತ್ತದೆ. ನಿಜವಾದ ಕಾಡು ಕೇವಲ 11%ಗೆ ಇಳಿದಿದೆ. ಇದು ವಾಸ್ತವ. ಪ್ರಕೃತಿ ವಿಕೋಪ, ಅತಿವೃಷ್ಟಿ, ಅನಾವೃಷ್ಟಿ ಇದು ಎಲ್ಲವು ಖಂಡಿತವಾಗಿ ಪರಿಣಾಮ ಬೀರುತ್ತದೆ. ತುಂಬಾ ಗಂಭೀರವಾದ ವಿಚಾರವನ್ನು ಅವರು ತಂದಿದ್ದಾರೆ. ಇದನ್ನು ನಾವು ಎಲ್ಲರೂ ಗಂಭೀರವಾಗಿ

ತೆಗೆದುಕೊಳ್ಳಬೇಕಾಗಿದೆ. ಇಲಾಖೆಯವರು ಈ ಕೆಲಸ ನಮ್ಮದು ಅಲ್ಲ ಎಂದು ಹೇಳುವುದನ್ನು ಬಿಟ್ಟು coordinated efforts ಮಾಡದೆ ಇದ್ದರೆ ಸಮಸ್ಯೆಗೆ ಯಾವ ಪರಿಹಾರವು ಸಿಗಲು ಸಾಧ್ಯವಿಲ್ಲ.

**ಶ್ರೀ ಸಿ.ಎಚ್.ವಿಜಯಶಂಕರ್:-** ಮಾನ್ಯ ಸಭಾಪತಿಗಳೆ, ನಾನು ಲೋಕೋಪಯೋಗಿ ಇಲಾಖೆ ಬಗ್ಗೆ ಮಾತನಾಡುತ್ತಿದೆ. 25-30 ವರ್ಷಗಳ ಹಿಂದಿನ ಈ ಇಲಾಖೆಯ ಇತಿಹಾಸವನ್ನು ತೆಗೆದು ನೋಡಿ. ಮೆಟೆನೆನ್ಸ್‌ಗೂ ಇವತ್ತು ಸರ್ಕಾರವೆ ಗ್ರ್ಯಾಂಟ್ ಕೊಡಬೇಕು. ಆದರೆ ಕಳೆದ 30-40 ವರ್ಷಗಳ ಹಿಂದೆ ಹೇಗೆ ಇತ್ತು ಎಂದರೆ, ಹುಣಸೆ, ಬೇವು ಅಥವಾ ಹೊಗ್ಗೆ, ಹೊಗ್ಗೆ ಬೀಜ, ಹಲಸು, ಸಿಗ್ಗೆಕಾಯಿ ಮರಗಳನ್ನು ಹರಾಜು ಮಾಡುವ ಮೂಲಕ ಬರುವ ಹಣವನ್ನು ರಸ್ತೆ ರಿಪೇರಿಗೆ ಬಳಸುತ್ತಿದ್ದರು. ಮಾನ್ಯ ರೇವಣ್ಣನವರು ಹೇಳಿದ ಹಾಗೆ ತಮಿಳನಾಡಿಗೆ ಹೋದರೆ ರಸ್ತೆ ಅಕ್ಕ-ಪಕ್ಕ ಹುಣಸೆ ಮರಗಳನ್ನು ಕಾಣಬಹುದು. ಇವತ್ತು ಒಂದು ಗುಂಡಿ ಮುಚ್ಚಲು ಲೋಕೋಪಯೋಗಿ ಇಲಾಖೆಗೆ ಸರ್ಕಾರದಿಂದಲೇ ಹಣ ಬರಬೇಕು. ಸ್ಥಳೀಯವಾಗಿ income generate ಮಾಡಿಕೊಳ್ಳಲು ಏನಾದರು ವ್ಯವಸ್ತೆ ಇದೆಯೇ ಎಂದರೆ, ಆ ವ್ಯವಸ್ಥೆಯು ಇಲ್ಲ, ಆ ಬಗ್ಗೆ ಅವರು ಯೋಚನೆ ಮಾಡಲು ತಯಾರಿಲ್ಲ. ರಸ್ತೆ ಬದಿಯಲ್ಲಿ ಮರಗಳನ್ನು ಕತ್ತರಿಸುವ ಲೋಕೋಪಯೋಗಿ ಇಲಾಖೆ ನಾನು ಸ್ಪಷ್ಟವಾಗಿ ಹೇಳಬಯಸುವುದು, ತಾವು ಕೂಡಾ ಹೇಳಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೆ, 'ಈ ಹಣವನ್ನು ಹಸಿರೀಕರಣಕ್ಕಾಗಿ ಬಳಸಿ, ಬೇರೆ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳಬೇಡಿ, ಅದಕ್ಕಾಗಿ ಬೇರೆ ಹೆಡ್ ಮಾಡಿ, ಲೋಕೋಪಯೋಗಿ ಇಲಾಖೆಯ ಮೇನ್ ಹೆಡ್ ಗೆ ತೆಗೆದುಕೊಳ್ಳಬೇಡಿ' ಎನ್ನುವ ಮಾತುಗಳನ್ನು ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಇಲ್ಲಿಯವರೆಗೆ ಲೋಕೋಪಯೋಗಿ ಇಲಾಖೆಯವರು ಆ ಚಿಂತನೆಯನ್ನು ಮಾಡಿಲ್ಲ. ಮರಗಳನ್ನು ಕತ್ತರಿಸಿರುವುದರಿಂದ ಬಂದ ಹಣವೇನಿದೆ ಅದು ನಿರ್ಧಿಷ್ಠವಾದ ಹೆಡ್ ಗೆ ಹೋಗಬೇಕಾಗುತ್ತದೆ ಮತ್ತು ಹಸೀರಿಕರಣಕ್ಕಾಗಿಯೇ ಬಳಕೆ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ.

ಇನ್ನು ಎರಡನೆಯದಾಗಿ, ಸರ್ಕಾರದಲ್ಲಿ ನನ್ನ ಮನವಿಯೇನೆಂದರೆ, ರಸ್ತೆ ಅಗಲೀಕರಣದ ಸಮಯದಲ್ಲಿ ನಮ್ಮ ಪೂರ್ವಜರು ಮತ್ತು ಹಿರಿಯರು ನೆಟ್ಟಂತಹ ನೂರಾರು ವರ್ಷದ ಮರಗಳು ರಸ್ತೆ ಬದಿಗಳಲ್ಲಿ ಬೆಳೆದು ನಿಂತಿವೆ. ನಾವು ಬೆಳೆಗಾವಿಯಿಂದ ನಂದಘಟಗ್ಗಕ್ಕೆ ಹೋಗುವ ದಾರಿಯಲ್ಲಿ ಮತ್ತು ಬೆಳಗಾವಿಯಿಂದ ಕಾರವಾರಕ್ಕೆ ಹೋಗುವ ಹಾದಿಯಲ್ಲಿ ನೂರಾರು ವರ್ಷದ ಮರಗಳು ಸಮೃದ್ಧವಾಗಿ ಬೆಳೆದು ನೀಂತಿರುವುದನ್ನು ನೋಡಬಹುದಾಗಿದೆ. ನಾನು ಬೆಳಗಾವಿಯಿಂದ ಬಂದ ಕೂಡಲೇ ಮಾನ್ಯ ಅರಣ್ಯ ಸಚಿವರಿಗೆ ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಒಂದು ಪತ್ರವನ್ನು ಬರೆದು, 'ರಸ್ತೆಯ ಒಂದು ಬದಿಯ ಮರಗಳನ್ನಾದರೂ ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡಿ' ಎನ್ನುವ ಮನವಿಯನ್ನು ಆ ಪತ್ರದಲ್ಲಿ ಮಾಡಿದ್ದೆ. ರಸ್ತೆ ಅಗಲೀಕರಣವಾಗಬೇಕೆಂದ ಕೂಡಲೇ ಎರಡು ಬದಿಯ ಮರಗಳನ್ನು ಕಡಿಯುವ ಅವಶ್ಯಕತೆ ಏನಿದೆ? ಒಂದು ಬದಿಯ ಮರಗಳನ್ನಾದರೂ ನಾವು ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಾವು ಚಿಂತನೆ ಮಾಡಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೆ, ಮರಗಳನ್ನು ಕಡಿದ ಮೇಲೆ ಅದನ್ನು ಹರಾಜು ಹಾಕಿ ಬಂದಂತಹ ಹಣಕ್ಕೆ ಒಂದು ವಿಶೇಷ ಹೆಡ್ ಮಾಡಿ, ಆ ಹೆಡ್ ನಲ್ಲಿ ಈ ಹಣವನ್ನು ಕಾಯ್ದಿರಿಸಿ, ಹಸಿರೀಕರಣಕ್ಕಾಗಿ ಬಳಕೆ ಮಾಡಬೇಕೆನ್ನುವ ಮಾತನ್ನು ಈ ಹಿಂದೆ ಹೇಳಿದ್ದೆ. ಲೋಕೋಪಯೋಗಿ ಇಲಾಖೆಯಲ್ಲಿ ಅದು ಕಡ್ಡಾಯವಾಗಿ ಅನುಷ್ಠಾನಕ್ಕೆ ಬರಬೇಕೆನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಕವಟಗಿಮಠ ಮಹಂತೇಶ್ ಮಲ್ಲಿಕಾರ್ಜುನ:-** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ವಿಜಯಶಂಕರ್ ರವರು ಹೇಳಿದಂತೆ ಬೆಳಗಾವಿಯಿಂದ ಖಾನಾಪುರ್‌ವರೆಗೆ ಇರುವ ರಸ್ತೆಯ ಬದಿಗಳಲ್ಲಿ ನೂರಾರು ವರ್ಷಗಳಷ್ಟು ಹಳೆಯದಾದ ಮರಗಳನ್ನು ಮೊನ್ನೆ ರಸ್ತೆ ಅಗಲೀಕರಣಕ್ಕಾಗಿ ಮಾರಣಹೋಮ ಮಾಡಿಯಾಗಿದೆ. ತಳಕವಾಡಿಯಿಂದ ಖಾನಾಪುರ್‌ವರೆಗೆ ಇರುವ ದೊಡ್ಡ ಮರಗಳನ್ನು ಕಡಿದು ಹಾಕಿದ್ದಾರೆ. ಅಪಘಾತಗಳು ನಡೆಯಲಿ ಎನ್ನುವ ಕಾರಣಕ್ಕಾಗಿ ಬಡ್ಡೆಯನ್ನು ಮಾತ್ರ ಬಿಟ್ಟಿದ್ದಾರೆ.

**ಶ್ರೀ ಸಿ.ಎಚ್.ವಿಜಯಶಂಕರ್:–** ಮಾನ್ಯ ಸಭಾಪತಿಯವರೆ, ಯಾವ ಸಮಯದಲ್ಲಿ ಬಿಎಳೆದು ನಿಂತಿರುವ ಮರಗಳನ್ನು ಕಡೆದು ಹಾಕಬೇಕು, ಯಾವ ಸಮಯದಲ್ಲಿ ಪುನಃ ವಾಪಸ್ಸು ನೆಟ್ಟು ಬೆಳೆಸುವ ಕಡೆಗೆ ಗಮನ ಕೊಡಬೇಕು ಎನ್ನುವ ಬಗ್ಗೆ ಲೋಕೋಪಯೋಗಿ ಇಲಾಖೆಯಲ್ಲಿ ಯಾವುದೇ ಕಟ್ಟುಪಾಡುಗಳು ಇಲ್ಲ. ಯಾವುದೇ ನಿಯಮಗಳು ಇಲ್ಲ. ಅದನ್ನು ಪಾಲನೆ ಮಾಡಬೇಕೆನ್ನುವ ಬದ್ಧತೆ ಕೂಡ ಲೋಕೋಪಯೋಗಿ ಇಲಾಖೆಯಲಿಲ್ಲ. ಆದ್ದರಿಂದ ಸಾವಿರಾರು ಕಿಲೋಮೀಟರ್ ಗಳಷ್ಟು ಉದ್ದದ ಆಸ್ತಿಯಾಗುತ್ತದೆ ಮತ್ತು ಆದಾಯವಾಗುತ್ತದೆ. ಇದರ ಜೊತೆಗೆ ರಾಜ್ಯದಲ್ಲಿ ಹಸಿರೀಕರಣವನ್ನು ಕಾಣುವುದಕ್ಕೆ ಸಾಧ್ಯವಾಗುತ್ತದೆ. ಆದರೆ, ಲೋಕೋಪಯೋಗಿ ಇಲಾಖೆ ಇಲ್ಲಿಯವರೆಗೆ ಈ ದಿಕ್ಕಿನಲ್ಲಿ ತಮ್ಮದೇ ಆಗಿರುವ ಯೋಜನೆಗಳನ್ನು ರೂಪಿಸಿಕೊಂಡಿಲ್ಲ. ಆದ್ದರಿಂದ ಲೋಕೋಪಯೋಗಿ ಇಲಾಖೆಯವರು ತಮ್ಮ ವ್ಯಾಪ್ತಿಯಲ್ಲಿ ಇದಕ್ಕೆ ಬೇಕಾದ ಯೋಜನೆಗಳನ್ನು ರೂಪಿಸಿಕೊಳ್ಳುವುದರ ಜೊತೆಗೆ ಅಗತ್ಯವಿರುವ ಹಣವನ್ನು ಕಾಯ್ದಿರಬೇಕೆನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೆ, ಈ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಮಾತನಾಡುತ್ತಿದ್ದ ಸಂದರ್ಭದಲ್ಲಿ 'ರಾಜ್ಯದಲ್ಲಿ ಸುಮಾರು 6.5 ಲಕ್ಷ ಸರ್ಕಾರಿ ನೌಕರರು ಇದ್ದರೆ, ಅದರಲ್ಲಿ 3.5 ಲಕ್ಷ ಜನ ಸರ್ಕಾರಿ ನೌಕರರು ಶಿಕ್ಷಣ ಇಲಾಖೆಯಲ್ಲಿದ್ದಾರೆ. ನಮ್ಮ ರಾಜ್ಯದಲ್ಲಿ 6 ಕೋಟಿ ಜನಸಂಖ್ಯೆ ಇದೆಯೆಂದ ನಾವು ಭಾವಿಸುವುದಾದರೆ, ಒಂದನೇ ತರಗತಿಯಿಂದ ಪದವಿಪೂರ್ವ ಶಿಕ್ಷಣದಲ್ಲಿ ಓದುವಂತಹ ಸುಮಾರು 1.25 ಕೋಟಿ ಮಕ್ಕಳು ನಮ್ಮಲ್ಲಿ ಇದ್ದಾರೆ' ಎನ್ನುವ ಮಾತನ್ನು ಹೇಳಿದ್ದಾರೆ. ಅಂದರೆ, ಅತ್ಯಂತ ಹೆಚ್ಚು ಮಾನವ ಶಕ್ತಿ ಲಭ್ಯವಿರುವುದು ಶಿಕ್ಷಣ ಇಲಾಖೆಯಲ್ಲಿ ಅದಕ್ಕೋಸ್ಕರ ನಾನು ಅರಣ್ಯ ಮಂತ್ರಿಯಾಗಿದ್ದ ಸಂದರ್ಭದಲ್ಲಿ 'ಮಗುವಿಗೊಂದ ಮರ, ಶಾಲೆಗೊಂದು ವನ' ಎನ್ನುವ ಯೋಜನೆಯನ್ನು ಜಾರಿಗೆ ತಂದಿದೆ. ಇದಕ್ಕೆ ಸಂಬಂಧಪಟ್ಟಂತೆ ಬಹಳ ಸ್ಪಷ್ಟವಾಗಿರುವ ಒಂದು ಆದೇಶವನ್ನು ಹೊರಟಿಸಿದ್ದೆ. ಆ ಆದೇಶದ ಪ್ರತಿಯನ್ನು ಬೇಕಾದರೆ ತಾವು ತರಿಸಿ ನೋಡಬಹುದು. ಪ್ರತಿವರ್ಷವೂ ಪ್ರತಿ ಮಗುವಿನ ಅಭಿಪ್ರಾಯವನ್ನು ಸಂಗ್ರಹ ಮಾಡಬೇಕಾಗುತ್ತದೆ. ಪ್ರತಿ ಶಾಲೆಯಲ್ಲಿರುವ ಪ್ರತಿ ಮಗುವಿಗೆ ಯಾವ ಸಸಿ ಬೇಕು ಆ ಸಸಿಯನ್ನು ಕೊಡುವಂತಹ ವ್ಯವಸ್ಥೆ ಈ ರಾಜ್ಯದಲ್ಲಿ ಜಾರಿಗೆ ಬರಬೇಕು. ಮಗು ತಾನು ಬಯಸಿದರೆ ತನ್ನ ಮನೆಯ ಮುಂಭಾಗದ್ಲಿ ಆ ಸಸಿಯನ್ನು ನೆಟ್ಟು ಬೆಳೆಸಬಹುದು ಇಲ್ಲದಿದ್ದರೆ ಮಗುವಿಗೆ ಜಮೀನು ಇದ್ದರೆ ಆ ಜಮೀನಿನಲ್ಲಿ ನೆಟ್ಟು ಬೆಳೆಸಬಹುದಾಗಿದೆ. ಆ ಮಗು ಹೂವಿನ ಗಿಡ ಕೇಳುತ್ತದೆಯೇ ಅಥವಾ ಹಣ್ಣಿನ ಸಸಿಯನ್ನು ಕೇಳುತ್ತದೆಯೇ ಅದಕ್ಕೆ ಇಷ್ಟವಾಗಿರುವ ಯಾವುದೇ ಸಸಿಯಾದರೂ ಸರಿ, ಶ್ರೀಗಂಧವನ್ನು ಸೇರಿಸಿ ಅದನ್ನು ಕೊಡಬೇಕಾಗುತ್ತದೆ. ಪ್ರತಿವರ್ಷ ಮಕ್ಕಳ ಅಭಿಪ್ರಾಯವನ್ನು ಸಂಗ್ರಹ ಮಾಡಬೇಕು ಮತ್ತು ಅವರು ಬಯಸಿದಂತಹ ಸಸಿಯನ್ನು ಕೊಡುವ ವಾತಾವರಣ ಈ ರಾಜ್ಯದಲ್ಲಿ ನಿರ್ಮಾಣವಾಗಬೇಕು. ಆ ಮಗು ಕೂಡ ಅತ್ಯಂತ ಪ್ರೀತಿಯಿಂದ ಆ ಸಸಿಯನ್ನು ನೆಟ್ಟು ಬೆಳೆಸಬೇಕು.

ಇನ್ನು ಶಾಲೆಗೊಂದು ವನ ಎಂದರೆ, ಶಾಲೆಗೆ ಕಾಂಪೌಂಡ್ ಅಥವಾ ತಂತಿ ಬೇಲಿಯನ್ನು ಹಾಕಿರುತ್ತೇವೆ ಶಾಲೆಯಲ್ಲಿ ಸಾಕಷ್ಟು ಖಾಲಿ ಜಾಗ ಲಭ್ಯವಿರುತ್ತದೆ. ಅದ್ದರಿಂದ ಕಡ್ಡಾಯವಾಗಿ ವನ ಸಂಪತ್ತನ್ನು ನೆಟ್ಟಿ ಬೆಳೆಸುವ ಕೆಲಸವಾಗಬೇಕಾಗಿದೆ. ಆ ಶಾಲೆ ವನವಾಗಿ ಪರಿವರ್ತನೆ ಆಗಬೇಕಾಗಿದೆ. 'ಮಗುವಿಗೊಂದು ಮರ, ಶಾಲೆಗೊಂದು ವನ' ಯೋಜನೆ ತಂದಂತಹ ಹಿನ್ನೆಲೆ ಇದು. ಇದು ಶಿಕ್ಷಣ ಇಲಾಖೆಯಿಂದ ಜಾರಿಯಾಗಬೇಕಾಗಿದೆ. ಶಿಕ್ಷಣ ಇಲಾಖೆ ಬೇರೆ ಉದ್ದೇಶಗಳಿಗೆ ಹಣವನ್ನು ಕಾಯ್ದಿರಿಸಬೇಕಾಗಿಲ್ಲ ಅಥವಾ ಅರಣ್ಯ ಇಲಾಖೆ ಈ ಕಾರ್ಯಕ್ರಮವನ್ನು ಮಾಡಬೇಕೆನ್ನುವುದು ಅರ್ಥ ಮಾಡಿಕೊಡಬೇಕಾಗಿದೆ. ಆ ಹಂತದಲ್ಲಿಯೂ ಕೂಡ ಈ ಯೋಜನೆ ಜಾರಿಗೆ ಬರಬೇಕೆನ್ನುವ ಮಾತನ್ನು ನಾನು ಈ ಹಿಂದಯೇ ಹೇಳಿದ್ದೇನೆ. ಆದರೆ, ಶಿಕ್ಷಣ ಇಲಾಖೆಯಿಂದ ಇಲ್ಲಿಯವರೆಗೆ ಅ ಕೆಲಸವಾಗಿಲ್ಲ. ಯಾಕೆ ನಾನು ಈ ಮಾತನ್ನು ಹೇಳೂತ್ತಿದ್ದೇನೆಂದರೆ, ಬೆಳೆಯುವ ಮಕ್ಕಳಿಗೆ ಪರಿಸರದ ಕಾಳಜಿ, ಮರವನ್ನು ಬೆಳೆಸುವ ಜವಾಬ್ದಾರಿ, ಮರ ಮಗುವಿನ ಜೊತೆಗೆ ಬೆಳೆದರೆ, ಮಗುವಿನ ಹಾಗೆಯೇ ಆ ಮರವೂ ಬೆಳೆಯಬೇಕಾಗುತ್ತದೆ. ಮಗು ಮತ್ತು ಮರದ ನಡುವೆ ಒಂದು ರೀತಿಯ ಬಾಂದವ್ಯ ಮತ್ತು ಸಂಬಂಧ ವೃದ್ಧಿಯಾಗಬೇಕಾಗುತ್ತದೆ. ಆ ಮಗು ಆ ಮರದಿಂದ ಒಂದು ಹೂವನ್ನು ಕೀಳದೇ,

ಮಗು ಬೆಳೆದು ದೊಡ್ಡವನಾದ ಮೇಲೆ ಆ ಮರದಿಂದ ಹಣ್ಣನ್ನು ಕಿತ್ತು ತಿನ್ನಬೇಕು, ಆಗ ಮಗು ಮತ್ತು ಮರದ ನಡುವಿನ ಸಂಬಂಧವನ್ನು ವರ್ಣಿಸುವುದಕ್ಕೆ ಸಾಧ್ಯಾವಾಗುವುದಿಲ್ಲ. ಈ ರೀತಿಯ ಸಂಬಂಧವನ್ನು ನಾವು ಚಿಕ್ಕ ವಯಸ್ಸಿನಿಂದ ಬೆಳೆಸಿದ್ದೇ ಆದರೆ, ಮಗು ಮರವನ್ನು ಬೆಳೆಸಬೇಕಾದ ಅನಿವಾರ್ಯತೆಯನ್ನು ಅರ್ಥ ಮಾಡಿಕೊಳ್ಳುತ್ತದೆ ಮತ್ತು ಹಸಿರೀಕರಣವನ್ನು ಕಾಣುವುದಕ್ಕೆ ಸಾದ್ಯವಾಗುತ್ತದೆ. ಶಾಲಾ ಮತ್ತು ಕಾಲೇಜುಗಳಲ್ಲಿ ವನಸಂಪತ್ತನ್ನು ಹೆಚ್ಚಿಸುವ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆಯಿಂದ ಒಂದು ಯೋಜನೆ ಮತ್ತು ಕಾರ್ಯಕ್ರಮ ಜಾರಿಯಾಗಬೇಕೆಂದು ನಾನು ಈ ಹಿಂದೆಯೇ ಪ್ರಾರ್ಥನೆ ಮಾಡಿದ್ದೆ, ಆ ಪ್ರಾರ್ಥನೆ ಈಡೇರಲಿಲ್ಲ. ಈ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆ ತನ್ನ ಜವಾಬ್ದಾರಿಯನ್ನು ಅರ್ಥ ಮಾಡಿಕೊಂಡು ಬೆಳೆಯುವಂತಹ ಮಕ್ಕಳಲ್ಲಿ ಮರಗಳನ್ನು ನೆಟ್ಟಿ ಬೆಳೆಸುವ ಯೋಜನೆಯನ್ನು ನಾವೇನು ತಂದಿದ್ದೇವು ಅದನ್ನು ಜಾರಿಗೊಳಿಸಬೇಕೆನ್ನುವುದು ನನ್ನ ಒತ್ತಾಯವಾಗಿದೆ.

ಸನ್ಮಾನ್ಯ ಸಭಾಪತಿಯವರೆ, ಕೃಷಿ ಇಲಾಖೆಗೆ ಸಂಬಂಧಪಟ್ಟಂತೆ ಹೇಳಬೇಕಾದರೆ, 'ಕೃಷಿ, ಅರಣ್ಯ ಪ್ರೊತ್ಸಾಹ ಯೋಜನೆಯನ್ನು ನಾನು ರೂಪಿಸಿದ್ದೆ, ಇದೊಂದು ಅದ್ಬುತವಾಗಿರುವ ಯೋಜನೆಯಾಗಿದೆ. ಮಾನ್ಯ ರಾಮಕೃಷ್ಣರವರು, 'ನನ್ನ ಜಮೀನಿನಲ್ಲಿ ಮರಗಳನ್ನು ನೆಟ್ಟಿ ಬೆಳೆಸಿದ್ದೇನೆ' ಎನ್ನುವ ಮಾತನ್ನು ಹೇಳಿದ್ದರು. ನಮ್ಮಲ್ಲಿ ಅರಣ್ಯೇತರ ಭೂಮಿ ಶೇಕಡಾ 78 ರಷ್ಟು ಇದ್ದರೆ, ಅದರಲ್ಲಿ ಶೇಕಡಾ 64ರಷ್ಟು ಭಾಗ ಕೃಷಿ ಭೂಮಿ ಇದೆ. ಕೃಷಿ ಅರಣ್ಯ ಪ್ರೊತ್ಸಾಹ ಯೋಜನೆಯ ಮುಖ್ಯಾಂಶಗಳು ಏನೆಂದರೆ, ಪ್ರತಿ ವರ್ಷ ಪ್ರತಿ ಕೃಷಿಕರ ಮುಂದಿನ ಮೂರು ವರ್ಷಗಳ ಅಭಿಪ್ರಾಯ ಸಂಗ್ರಹವಾಗಬೇಕಾಗಿದೆ. ಅರಣ್ಯ ಸಚಿವರು ಈ ಯೋಜನೆಯನ್ನು ಜಾರಿಗೆ ತಂದರೆ ರಾತರ ಮನಸ್ಸಿನಲ್ಲಿ ಅವರು ಉಳಿದುಕೊಳ್ಳುತ್ತಾರೆ. ರಾಜ್ಯದಲ್ಲಿ ಯಾರ್‍ಯಾರ ಮನೆಗಳಿಗೆ ಸಸಿ ತಲುಪುತ್ತದೆ ಅವರೆಲ್ಲರೂ ಮಾನ್ಯ ಅರಣ್ಯ ಸಚಿವರ ಹೇಸರನ್ನು ಹೇಳುತ್ತಾರೆ. ಇದೊಂದು ಬಹಳ ಅಪರೂಪದ ಯೋಜನೆಯಾಗಿದೆ. ಈ ವರ್ಷದ ಬೇಡಿಕೆಯನ್ನು ಈ ವರ್ಷವೇ ತೆಗೆದುಕೊಳ್ಳುವುದು ಸರಿಯಲ್ಲ. ಮುಂದಿನ ಮೂರು ವರ್ಷಗಳ ಬೇಡಿಕೆಯನ್ನು ಈ ವರ್ಷ ತೆಗೆದುಕೋಳಬೇಕು. ಮುಂದಿನ ಮೂರು ವರ್ಷಗಳ ಬೇಡಿಕೆಯನ್ನು ಈ ವರ್ಷವೇ ಏತಕ್ಕೋಸ್ಕರ ತೆಗೆದುಕೊಳ್ಳಬೇಕೆಂದರೆ, ಕೆಲವೊಂದು ಸಸಿಗಳನ್ನು ಗುಣಮಟ್ಟದ ಸಸಿಯನ್ನು ಕೊಡಬೇಕಾಗುತ್ತದೆ. ಅದಕ್ಕಾಗಿ ನಾನು ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳ ಉಪಕುಲಪತಿಗಳನ್ನು ಕರೆದು ಮೂರು ಬಾರಿ ಸಭೆಯನ್ನು ನಡೆಸಿದ್ದೆ. ರೈತರು ಬಯಸಿದಂತಹ ಸಸಿ ಕೊಡುವುದಷ್ಟೇ ಅಲ್ಲ, ಗುಣಮಟ್ಟದ ಸಸಿಗಳನ್ನು ಕೊಡಬೇಕಾಗುತ್ತದೆ. ರೈತ ಅ ಸಸಿಗಳನ್ನು ತೆಗೆದುಕೊಂಡು ಹೋಗಿ ನೆಟ್ಟು 4–5 ವರ್ಷಗಳು ಕಳೆದ ಮೇಲೆ ಅದರಿಂದ ಅವನಿಗೆ ಬರುವ ಫಸಲಿನಲ್ಲಿ ಯಾವುದೇ ಕಾರಣಕ್ಕೂ ವ್ಯತ್ಯಾಸವಾಗಬಾರದು. ಸರ್ಕಾರ ಕೊಟ್ಟಿರುವ ಸಸಿಗಳ ಬಗ್ಗೆ ಆತನಿಗೆ ನಂಬಿಕೆ ಮತ್ತು ವಿಶ್ವಸ ಬರಬೇಕಾಗುತ್ತದೆ. ರೈತರಲ್ಲಿ ಆತ್ಮವಿಶ್ವಾಸ ಮೂಡಬೇಕು, ಆ ಸಸಿಗಳು ಅವನಿಗೆ ಆಸ್ತಿಯಾಗಿ ಪರಿವರ್ತನೆಯಾಗಬೇಕು. ಅದರಲ್ಲಿಯೂ ಕೂಡ 25–30 ಎಕರೆ ಅಥವಾ 50–100 ಎಕರೆ ಜಮೀನು ಹೊಂದಿರುವವರು ವ್ಯವಸಾಯ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವರುಗಳು ಭೂಮಿಯನ್ನು ಸುಮ್ಮನೆ ಪಾಳು ಬಿಡುತ್ತಿದ್ದಾರೆ.

ಇವತ್ತು ಅವರು ವ್ಯವಸಾಯವನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಅವರು ಭೂಮಿಯನ್ನು ಪಾಳು ಬಿಡುತ್ತಿದ್ದಾರೆ. ಈ ರೀತಿ ಭೂಮಿಯನ್ನು ಪಾಳು ಬಿಡುವಂತಹ ವ್ಯಕ್ತಿಗೆ ನೀನು ಬಯಸುವಂಥ ಸಸಿಯನ್ನು ನಾನು ಕೊಡುತ್ತೇನೆ, ಮುಂದಿನ ಮೂರು ವರ್ಷಗಳ ಕಾಲ ಇದನ್ನು ನಿರ್ವಹಣೆ ಮಾಡಲಿಕ್ಕೆ ಬೇಕಾದಂಥ ಅನುದಾನವನ್ನು ನಾನು ಕೊಡುತ್ತೇನೆ ಎಂದು ಹೇಳಿದರೆ ಅವನಿಗೆ ಅನುಕೂಲವಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, Karnataka Land Reforms Act dated 1.3.1974 ಬಂದ ನಂತರ ಎಲ್ಲವೂ ಮುಗಿದು ಹೋಗಿದೆ. ಎಲ್ಲಾ fragmentation ಆಗಿ ಯಾರಿಗೂ ಸಹ 10 ಎಕರೆಗಳಿಗಿಂತ ಹೆಚ್ಚಿನ ಭೂಮಿ ಇಲ್ಲ. ನಮ್ಮ ಉತ್ತರ ಕರ್ನಾಟಕದ ಭಾಗದಲ್ಲಿ landlords, ದಣಿಗಳು ಎಲ್ಲರೂ ಇದ್ದರು. ಎಲ್ಲರೂ ಭೂಮಿಯನ್ನು ಕಳೆದುಕೊಂಡು ಈಗ landless ಆಗಿದ್ದಾರೆ.

**ಶ್ರೀ ಸಿ.ಹೆಚ್.ವಿಜಯಶಂಕರ್:–** ಮಾನ್ಯ ಸಭಾಪತಿಯವರೆ, ಒಬ್ಬ ವ್ಯಕ್ತಿಯ ಹೆಸರಿನಲ್ಲಿ 48 ಎಕರೆಗಳನ್ನು ದಾಟಬಾರದೆಂದು ಇದೆ. ಹಾಗೆಂದು ತಮ್ಮ ಹೆಸರಿನಲ್ಲಿ 45 ಎಕರೆ ಭೂಮಿ ಇದೆ, ಈಗ ವಿ.ಎಲ್.ಪಾಟೀಲರ ಜಮೀನನ್ನು ನೀವು ತೆಗೆದುಕೊಳ್ಳಲಿಕ್ಕೆ ಆಗಿದೆಯೇ?

**ಶ್ರೀ ಎಸ್.ಆರ್.ಪಾಟೀಲ್:–** ಅವರದೇನು ಉಳಿದಿದೆ?

**ಶ್ರೀ ಸಿ.ಹೆಚ್.ವಿಜಯಶಂಕರ್:–** ರೋಣದ ಕಾಲಕಪ್ಪ ಬಂಡಿಯವರ ಜಮೀನನ್ನು ಮುಟ್ಟುವುದಕ್ಕಾಗಿದೆಯೇ? ನಮ್ಮ ರಾಮಕೃಷ್ಣರವರ ಸುಮಾರು ನೂರು ಎಕರೆ ಜಮೀನಿದೆ, ಅದನ್ನು ಮುಟ್ಟುವುದಕ್ಕಾಗುತ್ತದೆಯೇ? ನೂರು ಎಕರೆ ಜಮೀನಿರುವವರು ಇಲ್ಲಿಯೇ ಇದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಅವೆಲ್ಲಾ ಹಿಂದು ಅವಿಭಕ್ತ ಕುಟುಂಬಗಳು ವಿಭಜನೆಯಾಗಿ ಅವರಿಗೆ ಗಂಡ, ಹೆಂಡತಿ ಮೂರು ಜನ minor ಮಕ್ಕಳು 54 ಎಕರೆ ನಮ್ಮ ಕಡೆ, ಇಲ್ಲಿ ನೀರಾವರಿ ಭೂಮಿ 10 ಎಕರೆ. Karnataka Land Reforms Act ಬಂದಾಗಿನಿಂದ ನೀವು ಹೇಳಿದಂಥ ಜಮೀನ್ದಾರರ ಜಮೀನುಗಳು ಹೋಗಿವೆ.

**ಶ್ರೀ ಬಿ.ರಾಮಕೃಷ್ಣ:–** ಮಾನ್ಯ ಸಭಾಪತಿಯವರೆ, ಯಾರಿಗೆ ಎಷ್ಟು ಎಕರೆ ಇದೆ, ಎಷ್ಟು ಎಕರೆ ಇಲ್ಲ ಎನ್ನುವುದು ಇಲ್ಲಿ ಅಪ್ರಸ್ತುತ. ಈಗ ಬೇಕಾಗಿರುವುದೇನೆಂದರೆ, ರೈತರು ಒಳ್ಳೆಯ ಗುಣಮಟ್ಟದ ಗಿಡಗಳನ್ನು ನೆಟ್ಟು ಆ ಗಿಡಗಳಲ್ಲಿ ಹಕ್ಕಿ–ಪಕ್ಷಿಗಳು ಊಟವನ್ನು ಮಾಡುವ ಹಾಗೆ, ದನಕರುಗಳು ತಿನ್ನುವ ಹಾಗೆ, ಮನುಷ್ಯರಿಗೆ ನೆರಳು ಕೊಡುವ ಹಾಗೆ, ಪರಿಸರವನ್ನು ಕಾಯುವ ಹಾಗೆ, ಮಳೆಬೆಳೆ ಚೆನ್ನಾಗಿ ಆಗುವ ಹಾಗೆ ಅಂತಹ ಗಿಡಗಳನ್ನು ಬೆಳೆಸುವಂಥ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕು.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಇಲ್ಲಿ ಭೂಮಿಯನ್ನು classify ಮಾಡಿದ್ದಾರೆ A-class, B-class, C-class & D-class ಎಂದು ವರ್ಗೀಕರಣ ಮಾಡಿದ್ದಾರೆ. ಗರಿಷ್ಠ ಎಂದರೆ D-class ದು 56 ಎಕರೆ. ಇನ್ನು ಎರಡನೆಯದಾಗಿ ಅವರಿಗೆ ಸಹಾಯವಾಗಿ ಹೇಳುವುದಾದರೆ, ಈಗೇನು ಸೆಕ್ಷನ್ 79 (ಎ) ಮತ್ತು (ಬಿ) ಇದೆ, ಅದರ ಪ್ರಕಾರ ಹೋದರೆ ಬಹಳಷ್ಟು lands ಅನ್ನು confiscate ಮಾಡಿಕೊಳ್ಳಬೇಕು. Section 79 A & B of Karnataka Land Reforms Act ಪ್ರಕಾರ violation ಇದೆ.

**ಶ್ರೀ ಎಸ್.ಆರ್.ಪಾಟೀಲ್:–** ಅದೇ ಕಾಯ್ದೆ ಈಗ ಇಲ್ಲಿಗೆ ಬರುತ್ತದೆ. ಕೆಳಮನೆಯಲ್ಲಿ ಈ ವಿಧೇಯಕ ಅಂಗೀಕಾರವಾಗಿದೆ. ಈಗ ಸೆಕ್ಷನ್ 79 (ಎ) ಮತ್ತು (ಬಿ) ಬರುತ್ತದೆ. We are waiting for that enactment.

**ಶ್ರೀ ವಿ.ಎಸ್.ಉಗ್ರಪ್ಪ:–** ಅದನ್ನು ಈಗ enhance ಮಾಡುವುದು ಬೇರೆ ವಿಚಾರ. Income limit ಅನ್ನು 2 ಲಕ್ಷದಿಂದ 25 ಲಕ್ಷ ರೂಪಾಯಿ ಎಂದು ಮಾಡುವುದು ಬೇರೆ ವಿಚಾರ. As on the date of purchase violation ಇದೆ. ಹಾಗಾಗಿ ಅದರ ಆಧಾರದ ಮೇಲೆ confiscate ಮಾಡಿ...

**ಸಭಾಪತಿಯವರು:–** ಮಾನ್ಯ ವಿಜಯಶಂಕರ್‌ರವರು ಗಿಡ ನೆಡುವ ಕಾರ್ಯಕ್ರಮದ ಬಗ್ಗೆ ಹೇಳುತ್ತಿದ್ದಾರೆ. Karnataka Land Reforms Act ಬಗ್ಗೆ ಮಾತನಾಡುತ್ತಿಲ್ಲ.

**ಶ್ರೀ ಬಿ.ರಾಮಕೃಷ್ಣ:–** ಮಾನ್ಯ ಸಭಾಪತಿಯವರೆ, Land procure ಮಾಡುವವನಿಗೆ ಖುಷ್ಕಿ ಜಮೀನು ಎಷ್ಟಿರಬೇಕು, ಬಾಗಾಯತು ಜಮೀನು ಎಷ್ಟಿರಬೇಕು, ತರಿ ಜಮೀನು ಎಷ್ಟಿರಬೇಕು ಎಂಬುದು ಅವನಿಗೆ ಗೊತ್ತು. ಭೂಮಿಯನ್ನು ಹೊಂದಿರುವವನಿಗೆ ಅಷ್ಟು ಗೊತ್ತಾಗುವುದಿಲ್ಲವೇ? ಯಾವುದು ತರಿ ಭೂಮಿ, ಯಾವುದು ಬಾಗಾಯತು, ಯಾವುದು ಖುಷ್ಕಿ ಭೂಮಿ ಎನ್ನುವುದು ಗೊತ್ತಿಲ್ಲವೇ? ಅವನು ಮಾಡುತ್ತಾನೆ ಬಿಡಿ.

**ಶ್ರೀ ಸಿ.ಹೆಚ್.ವಿಜಯಶಂಕರ್:–** ಮಾನ್ಯ ಸಭಾಪತಿಯವರೆ, ನನ್ನ ಒಂದು ಕಾಳಜಿ ಇರುವಂಥಾದ್ದು, ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ ಅಡಿಯಲ್ಲಿ ಕೃಷಿ ಭೂಮಿಯ ಕೃಷಿಕ ತಾನು ಸಸಿಯನ್ನು ನೆಟ್ಟು ಬೆಳೆಸುವುದಕ್ಕೆ ತಯಾರಿದ್ದರೆ ಅವನಿಗೆ ಸಸಿ ಕೊಡುವಂಥ ಒಂದು ಯೋಜನೆ ಇದು. ಕೇವಲ ಸಸಿಯನ್ನು ಕೊಡುವುದು ಅಷ್ಟೇ ಅಲ್ಲ, ಅವನಿಗೆ ಮೂರು ವರ್ಷಗಳ maintenance grant ಕೊಡಲಿಕ್ಕೆ provision ಮಾಡಲಾಗಿದೆ. ಅವನಿಗೆ

ಒಂದು ಸಸಿಗೆ 15 ರೂಪಾಯಿ, 2ನೇ ವರ್ಷ 10 ರೂಪಾಯಿ, 3ನೇ ವರ್ಷ 5 ರೂಪಾಯಿ ಈ ರೀತಿ ಒಂದು ಗಿಡಕ್ಕೆ ಒಂದು ವರ್ಷಕ್ಕೆ maintenance grant ಕೊಡುವಂಥ ವ್ಯವಸ್ಥೆಯನ್ನು ನಾವು ಮಾಡಿ ಇಟ್ಟಿದ್ದೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ಮೊನ್ನೆಯ ದಿವಸ ಸದನದಲ್ಲಿ ಒಂದು ವಿಚಾರದ ಬಗ್ಗೆ ಚರ್ಚೆಯಾಗಿತ್ತು. ಬಾಗಲಕೋಟೆ ಜಿಲ್ಲೆಯ ಬಗ್ಗೆ ಮಾನ್ಯ ನಾರಾಯಣ ಬಾಂಡಗೆಯವರು ಪ್ರಶ್ನೆಯನ್ನು ಕೇಳಿದ್ದರು. 2 ವರ್ಷಗಳಲ್ಲಿ ಸುಮಾರು 42 ಲಕ್ಷಗಳಲ್ಲಿ 2 ಲಕ್ಷ ಸಸಿಗಳು ಸತ್ತು ಹೋಗಿವೆ. ಸುಮಾರು 40 ಲಕ್ಷ ಗಿಡಗಳನ್ನು ನೆಡಲಾಗಿದೆ ಎಂದು ಹೇಳಿದರು. ಪ್ರತಿ ಗಿಡಕ್ಕೆ ಸರಾಸರಿ 89 ರೂಪಾಯಿ ಖರ್ಚಾಗಿದೆ. ಈ ರೀತಿ ಇಡೀ ರಾಜ್ಯದಲ್ಲಿ ಎಷ್ಟು ಮಾಡಿರಬಹುದು ಎನ್ನುವುದನ್ನು ಲೆಕ್ಕಾ ಹಾಕಿ. Seedlings ಕಳುಹಿಸಿ ನೆಟ್ಟು ಬೆಳೆಸಿದ್ದಾರೆ. ಮೂರು ವರ್ಷಗಳ ಕಾಲ ಅದನ್ನು ಸಾಕುತ್ತಾರೆ. ಮಾನ್ಯ ವಿಜಯಶಂಕರ್‌ರವರು ಏನು ಹೇಳುತ್ತಾರೆಂದರೆ, Non-forest land ನಲ್ಲಿ agricultural land ಏನಿದೆ, ಅದರಲ್ಲಿ 64 percent actual agriculture ಆಗುತ್ತದೆ. ಕನಿಷ್ಠ ಉಳಿದ ಭೂಮಿಯಲ್ಲಾದರೂ ಸಹ ಅರಣ್ಯ ಇಲಾಖೆ ಮತ್ತು ಕೃಷಿ ಇಲಾಖೆ ಸೇರಿಕೊಂಡು ಹಸಿರು ಬೆಳೆಸುವುದಕ್ಕೆ ಏನಾದರೂ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಿಕ್ಕೆ ಸಾಧ್ಯವಿದೆಯೇ ಎನ್ನುವುದು ಅವರ ಪ್ರಶ್ನೆಯಾಗಿದೆ. ನಿಮ್ಮ ಹತ್ತಿರ 10 ಎಕರೆ, 20 ಎಕರೆ ಅಥವಾ 50 ಎಕರೆ ಇದೆಯೇ ಎಂದು ಅವರು ಕೇಳುತ್ತಿಲ್ಲ. 2 ಎಕರೆ ಪ್ರದೇಶವಿದ್ದರೂ ಸಹ ಅದರಲ್ಲಿ ಮರವನ್ನು ಬೆಳೆಸಲಿಕ್ಕೆ ಸಾಧ್ಯವಿದೆಯೇ? ಅದಕ್ಕೆ ನೀವು ರೈತರಿಗೆ ಪ್ರೋತ್ಸಾಹವನ್ನು ಕೊಡುತ್ತೀರಾ, ಅದಕ್ಕೆ ಬೇಕಾದ seedling ಕೊಡುತ್ತೀರಾ, ಅದನ್ನು ಮೂರು ವರ್ಷಗಳ ಕಾಲ ಬೆಳೆಸಲಿಕ್ಕೆ ಬೇಕಾದ ಅನುದಾನವನ್ನು ಕೊಡುತ್ತೀರಾ? ಇದನ್ನು ಮಾಡಿದರೆ ಖಂಡಿತವಾಗಿ ಹಸಿರು ಬೆಳೆಯುತ್ತದೆ ಎನ್ನುವುದನ್ನು ಅವರು ಹೇಳುತ್ತಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಗ್ರಾಂಟ್ ಇದೆ. Mahatma Gandhi National Rural Employment Guarantee scheme ಇದೆಯಲ್ಲಾ ಅದರಲ್ಲಿ it is mandatory that 20 percent has to be used for forest ಎಂದು ಇದೆ. ಅದನ್ನು ಉಪಯೋಗಿಸಿಕೊಂಡು ಅರಣ್ಯವನ್ನು ಬೆಳೆಸತಕ್ಕಂಥಾದ್ದಕ್ಕೆ ಅವಕಾಶವಿದೆ. ಅದು ಕಾಯ್ದೆಯಲ್ಲಿಯೇ ಇದೆ. ಆದರೆ unfortunately ಅದನ್ನು ಎಷ್ಟು ಜನರು ಉಪಯೋಗಿಸುತ್ತಿದ್ದಾರೆ ಎನ್ನುವುದು ಇಲ್ಲಿರುವ ಪ್ರಶ್ನೆ.

**ಶ್ರೀ ಸಿ.ಹೆಚ್.ವಿಜಯಶಂಕರ್:–** ಮಾನ್ಯ ಸಭಾಪತಿಯವರೆ, ನಾನು ಹೇಳುತ್ತಿರುವುದೇನೆಂದರೆ, ಕೃಷಿ ಇಲಾಖೆ ಈ ಯೋಜನೆಯನ್ನು ಕೈಗೆತ್ತಿಕೊಂಡು ಕೃಷಿಕರಿಗೆ ಬೇಕಾದಂಥ ಉಪಕರಣಗಳನ್ನು ಕೊಡುವಂಥ ಕೆಲಸ ಇಲ್ಲಿಯವರೆವಿಗೂ ನಡೆದುಕೊಂಡು ಬಂದಿದೆ. ಎಷ್ಟು ಉಪಕರಣಗಳು ರೈತರಿಗೆ ಉಪಯೋಗಿವಾಗಿದೆಯೋ ಇಲ್ಲವೋ ಎನ್ನುವುದನ್ನು ಕೃಷಿ ಇಲಾಖೆಯೇ ಆತ್ಮಾವಲೋಕನ ಮಾಡಿಕೊಳ್ಳಬೇಕು. ನಾನು ಹೇಳುವಂಥಾದ್ದು ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯನ್ನು ಅರಣ್ಯ ಇಲಾಖೆ ಜಾರಿಗೆ ತರುವಂಥಾದ್ದಲ್ಲ. ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯನ್ನು ಕೃಷಿ ಇಲಾಖೆ ಜಾರಿಗೆ ತರಬೇಕು. ಕೃಷಿ ಇಲಾಖೆ ಈ ಕಾರ್ಯಕ್ರಮವನ್ನು ತನ್ನದನ್ನಾಗಿ ಮಾಡಿಕೊಳ್ಳಬೇಕು. ಆ ಕಾರಣಕ್ಕೋಸ್ಕರ ನೀವು ತರುತ್ತಿದ್ದೀರಿ. ಆದರೆ ಇದರ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ಕೃಷಿ ಇಲಾಖೆ ಹೊರಬೇಕು ಎನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಅದಕ್ಕೋಸ್ಕರ ಕೃಷಿ ವಿಶ್ವವಿದ್ಯಾನಿಲಯಗಳು, ಕೃಷಿ ಸಂಶೋಧನೆಗಳು, ಕೃಷಿ ತಜ್ಞರು ಈ ಸುಧಾರಿತ ತಳಿಯನ್ನು ರೈತನಿಗೆ ಕೊಡುವಂಥ ವಿಚಾರದಲ್ಲಿ ಮತ್ತು ರೈತನಿಗೆ ಅಗತ್ಯವಿರುವಷ್ಟು ಸಸಿಗಳನ್ನು ಕೊಡುವಂಥ ಹಿನ್ನೆಲೆಯಲ್ಲಿ ಈ ಯೋಜನೆಯನ್ನು ರೂಪಿಸಬೇಕು, ಕೃಷಿ ಇಲಾಖೆ ಈ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕು. ಇಲ್ಲವೆಂದರೆ ಅರಣ್ಯ ಇಲಾಖೆ ಏನು ಈ ಜವಾಬ್ದಾರಿಯನ್ನು ಹೊತ್ತುಕೊಂಡಿದೆ, ಇದನ್ನು ವ್ಯವಸ್ಥಿತವಾಗಿ ಅನುಷ್ಠಾನ ಮಾಡುವಂಥ ಹಿನ್ನೆಲೆಯಲ್ಲಿ ನೀವೇ ಈ ಕಾರ್ಯಕ್ರಮವನ್ನು ಮುಂದುವರೆಸಬೇಕು ಎನ್ನುವಂಥ ಮಾತನ್ನು ಹೇಳಲಿಕ್ಕೆ ಬಯಸುತ್ತಿದ್ದೇನೆ. ಮುಂದುವರೆದು ಅರಣ್ಯ ಇಲಾಖೆಯ ವತಿಯಿಂದ ನಾವು ಸಸಿಗಳನ್ನು ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ ಅಡಿಯಲ್ಲಿ ಕೊಡಬೇಕೆನ್ನುವಂಥ ಸಮಯದಲ್ಲಿ ಮಾವು ಅದು ತೋಟಗಾರಿಕಾ ಬೆಳೆಯಾದ್ದರಿಂದ ಅದನ್ನು ನಾವು ಅರಣ್ಯ ಇಲಾಖೆಯ ವತಿಯಿಂದ ಕೊಡುವುದಕ್ಕೆ ಬರುವುದಿಲ್ಲ

ಎಂದಾಯಿತು. ನಾನು ಸ್ಪಷ್ಟವಾಗಿ ಒಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತಿದ್ದೇನೆ. ರೈತ ಬಯಸುವುದಾದರೆ ಇದಕ್ಕೆ ನಾವು exemption ಕೊಡಬೇಕಾಗುತ್ತದೆ. ಅದು ಮಾವು, ನೇರಳೆ, ಹುಣಸೆ. ಹಲಸು, ಅಂಟುವಾಳ, ಬೆಟ್ಟನೆಲ್ಲಿ, ದಾಲ್ಚಿನ್ನಿ, ಬೇಲ, ಬಾದಾಮಿ, ಗೋಡಂಬಿ ಅಥವಾ ಸೀಗೆ ಇರಬಹುದು, ಈ ರೀತಿ ರೈತ ಒಂದು ಸಾರಿ ಬೆಳೆದ ನಂತರ ಅದರಲ್ಲಿ ನಿರಂತರವಾದ ಆದಾಯ ಬರುತ್ತದೆಂದು ಬಯಸಿ ಈ ರೀತಿಯ ಸಸಿಗಳು ಬೇಕೆಂದು ಆತ ಬಯಸುವುದಾದರೆ, ಈ ರೀತಿಯ ಸಸಿಗಳನ್ನು ನಾವು ಕೃಷಿ ಇಲಾಖೆಯಿಂದ ರೈತನಿಗೆ ಕೊಡುವಂಥ ಹಿನ್ನೆಲೆಯಲ್ಲಿ ನಾವು ಗಮನವನ್ನು ಕೊಡಬೇಕಾಗುತ್ತದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಅದಲ್ಲದೇ ಇವತ್ತು ಗಿಡಮೂಲಿಕೆ, ಆಯುರ್ವೇದ, ವನಸ್ಪತಿ ಇರಬಹುದು ಇದಕ್ಕೆ ಬಹಳ ದೊಡ್ಡ ಬೇಡಿಕೆ ಇದೆ. ದೇಶೀಯ ಬೇಡಿಕೆ ಅಷ್ಟೇ ಅಲ್ಲ, ಇದಕ್ಕೆ ಜಾಗತಿಕ ಬೇಡಿಕೆಯು ಸಹ ಇದೆ. ಗಿಡಮೂಲಿಕೆ, ಆಯುರ್ವೇದ, ವನಸ್ಪತಿಗಳಿಗೆ ನಾನು ಹೇಳಿದಂಥ ಮರಗಳನ್ನು ಬಿಟ್ಟು ಮಾವು, ನೇರಳೆ, ಹುಣಸೆ, ಹಲಸು, ಅಂಟುವಾಳ, ಬೆಟ್ಟನೆಲ್ಲಿ, ದಾಲ್ಚಿನ್ನಿ, ಬೇಲ, ಬಾದಾಮಿ, ಗೋಡಂಬಿ ಅಥವಾ ಸೀಗೆ ರೈತ ಬಯಸುವಂಥ ಈ ಮರಗಳನ್ನು ಕೊಡುವಂಥ ಕೆಲಸ ನಮ್ಮಿಂದ ಆಗಬೇಕು. ಇದರ ಜೊತೆಯಲ್ಲಿ ಅವನು ಬಯಸುವಂಥ ತೇಗ, ಬೀಟೆ, ಶ್ರೀಗಂಧ, ಕರಡಿ, ತಡಸಲು, ಮತ್ತಿ ಅಥವಾ ಹೊನ್ನೆ ಮರ ಇರಬಹುದು ಈ ಗಿಡಗಳನ್ನು ಸಹ ರೈತನಿಗೆ ಕೊಡಬೇಕಾಗುತ್ತದೆ. ರೈತ ಬಯಸುವಂಥ ಈ ಎಲ್ಲಾ ಸಸಿಗಳನ್ನು ಸಹ ಕೊಡಬೇಕು. ಆತ ಶ್ರೀಗಂಧವನ್ನು, ರಕ್ತಚಂದನವನ್ನು, ತೇಗ, ಬೀಟೆ, ಬಯಸಿದರೆ ಕೊಡಿ. ರೈತ ಬಯಸುವಂಥ ಈ ಎಲ್ಲಾ ಸಸಿಗಳನ್ನು ಕೊಡುವಂಥ ವ್ಯವಸ್ಥೆಯಾಗಬೇಕು. ರೈತ ಕೇಳಿದಷ್ಟು ಸಸಿಗಳನ್ನು, ಅವನು ಕೇಳಿದ ಪ್ರಮಾಣದಲ್ಲಿ, ಸಕಾಲದಲ್ಲಿ, ಮಳೆಗಾಲದಲ್ಲಿ ಕೊಡುತ್ತಿಲ್ಲ. ಸಕಾಲದಲ್ಲಿ ಬೇಡಿಕೆಯನ್ನು ತೆಗೆದುಕೊಳ್ಳುತ್ತಿಲ್ಲ. ಅದರ ಜೊತೆಗೆ ಕೃಷಿ ಇಲಾಖೆ ಈ ಯೋಜನೆಯನ್ನು ಕೈಗೆತ್ತಿಕೊಳ್ಳುತ್ತಿಲ್ಲ. ಈ ಕೆಲಸ ಆಗಬೇಕು ಎನ್ನುವಂಥ ಮಾತನ್ನು ಈ ಸಮಯದಲ್ಲಿ ನಾನು ಹೇಳಲಿಕ್ಕೆ ಬಯಸುತ್ತಿದ್ದೇನೆ. ಅದರ ಜೊತೆಯಲ್ಲಿ ಕೃಷಿ ಇಲಾಖೆ ಗಿಡಮೂಲಿಕೆ, ಆಯುರ್ವೇದ, ವನಸ್ಪತಿ ಇರಬಹುದು ಈ ವಿಚಾರಕ್ಕೂ ಸಹ ಕೃಷಿ ಇಲಾಖೆ ತನ್ನ ಯೋಜನೆಯಲ್ಲಿ ಇದಕ್ಕೆ ಆದ್ಯತೆಯನ್ನು ಕೊಡಬೇಕು. ವಾಣಿಜ್ಯ ಬೇಡಿಕೆ ಇರುವಂಥ ಮರಗಳಿಗೂ ಸಹ ಆದ್ಯತೆಯನ್ನು ಕೊಟ್ಟು ಬೆಳೆಸುವಂಥ ಕೆಲಸ ಕೃಷಿ ಇಲಾಖೆಯಿಂದ ಆಗಬೇಕು ಎನ್ನುವಂಥ ಮಾತನ್ನು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಇನ್ನು ಕೈಗಾರಿಕಾ ಇಲಾಖೆಯ ಬಗ್ಗೆ ಹೇಳುವುದಾದರೆ, ಕೈಗಾರಿಕೆಯ ಅಭಿವೃದ್ಧಿಗೋಸ್ಕರ ನಾವು ಒಂದೊಂದು ಸಾರಿಗೆ 10,000, 20,000 ಎಕರೆ ಭೂಮಿಯನ್ನು ತೆಗೆದುಕೊಳ್ಳುತ್ತೇವೆ. ಒಂದು ಕೈಗಾರಿಕಾ ಪ್ರದೇಶದಲ್ಲಿ ವ್ಯವಸ್ಥಿತವಾಗಿ ಹಸಿರೀಕರಣವಾಗಿದೆ ಎಂದು ಹೇಳಿಕೊಳ್ಳುವಂಥ ಒಂದು ಪ್ರದೇಶವನ್ನು ನಮ್ಮ ರಾಜ್ಯ ವ್ಯಾಪಿ ಎಲ್ಲಿದೆ ಎಂಬುದನ್ನು ಹೇಳಿ. ಎಲ್ಲಿಯೂ ಸಹ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕಾ ಅಭಿವೃದ್ಧಿಗೆ ನಾವು ಆದ್ಯತೆಯನ್ನು ಕೊಡುತ್ತೇವೆಯೇ ವಿನಃ ಕೈಗಾರಿಕಾ ಅಭಿವೃದ್ಧಿಯ ಜೊತೆಯಲ್ಲಿ ಆ ಕೈಗಾರಿಕಾ ಪ್ರದೇಶದಲ್ಲಿ ಹಸಿರೀಕರಣವು ಸಹ ಆಗಬೇಕು, ಮರ–ಗಿಡಗಳನ್ನು ನೆಟ್ಟು ಬೆಳೆಸಬೇಕೆಂದು ನಾವು ಎಲ್ಲಿಯೂ ಸಹ ಕ್ರಮಗಳನ್ನು ತೆಗೆದುಕೊಂಡಿಲ್ಲ. ಕೈಗಾರಿಕಾ ಇಲಾಖೆ ತನ್ನ ವ್ಯಾಪ್ತಿಯಲ್ಲಿ ಈ ರೀತಿ ಚಿಂತನೆಯನ್ನು ಮಾಡುವುದಿಲ್ಲ. ಇದಕ್ಕೆ ಬೇಕಾದಂಥ ಹಣವನ್ನು ಕೈಗಾರಿಕಾ ಇಲಾಖೆ ಕಾದಿರಿಸುವುದಿಲ್ಲ. ಅವರಿಗೆ ಕೈಗಾರಿಕೆಗೋಸ್ಕರ ನಿವೇಶನವನ್ನು ಹಂಚುವಂಥಾದ್ದು, ಕೈಗಾರಿಕೆ ಸಕಾಲದಲ್ಲಿ ಪ್ರಾರಂಭವಾಯಿತೋ ಇಲ್ಲವೋ ಎನ್ನುವುದನ್ನು ನೋಡುವುದನ್ನು ಬಿಟ್ಟರೆ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ಇರಬಹುದು, ಕೈಗಾರಿಕಾ ಇಲಾಖೆ ಆಗಬಹುದು ಈ ರೀತಿ ಹಸಿರೀಕರಣಕ್ಕೆ ಆದ್ಯತೆಯನ್ನು ಕೊಡಬೇಕೆಂದು ತನ್ನ ಯೋಜನೆಯಲ್ಲಿ ಕಾರ್ಯಕ್ರಮವನ್ನು ರೂಪಿಸಿಕೊಳ್ಳುವಂಥಾದ್ದು, ಅದಕ್ಕೋಸ್ಕರ ಹಣವನ್ನು ಕಾದಿರಿಸುವಂಥಾದ್ದು ಮತ್ತು ಅದಕ್ಕೆ ಆದ್ಯತೆಯನ್ನು ಕೊಟ್ಟು ಹಸಿರೀಕರಣವನ್ನು ಅಭಿವೃದ್ಧಿ ಮಾಡಬೇಕು ಎನ್ನುವ ಚಿಂತನೆಯನ್ನು ಮಾಡಿರುವಂಥ ಒಂದೇ ಒಂದು ಉದಾಹರಣೆಯನ್ನು ನಾವು ಕಾಣಲಿಕ್ಕೆ ಸಾಧ್ಯವಿಲ್ಲ.

ಎರಡು ಕೆಲಸಗಳಾಗಬೇಕು. ಒಂದು ಇಲಾಖೆ ವತಿಯಿಂದ ಕಡ್ಡಾಯವಾಗಿ ಈ ರೀತಿಯ ಚಿಂತನೆಯಾಗಬೇಕು. ಅದಕ್ಕಾಗಿ ಹಣವನ್ನು ಕಾಯ್ದಿರಿಸಬೇಕು. ಕೈಗಾರಿಕೆ ಪ್ರದೇಶ ಅತ್ಯಂತ ಹೆಚ್ಚು ಉತ್ಪನ್ನಗಳನ್ನು ಉಂಟು ಮಾಡುವ ಪ್ರದೇಶ ಅದಾಗಿದೆ. ಹೀಗಾಗಿ, ಅತ್ಯಂತ ಹೆಚ್ಚು ಮರಗಳನ್ನು ಬೆಳೆಸುವುದಕ್ಕೆ ಅಲ್ಲಿ ನಾವು ಆದ್ಯತೆಯನ್ನು

ಕೊಡಬೇಕಾಗಿದೆ. ಎರಡನೆಯದಾಗಿ, ಕೈಗಾರಿಕಾ ಮಂಡಳಿ ಮೂಲಕ ಕೈಗಾರಿಕೆಯನ್ನು ಸ್ಥಾಪನೆ ಮಾಡಲಿಕ್ಕೆ ನಾವು ಏನು ನಿವೇಶನಗಳನ್ನು ಕೊಡುತ್ತೇವೆ, ಆ ಸಮಯದಲ್ಲಿ ನಾವು ಕಡ್ಡಾಯವಾಗಿ ನಿಬಂಧನೆಯನ್ನು ಹಾಕಬೇಕು. ಕೈಗಾರಿಕೆಗೋಸ್ಕರ ಈ ನಿವೇಶನವನ್ನು ಬಳಸಿ, ಉಳಿದಂತಹ ಜಾಗದಲ್ಲಿ ಕಡ್ಡಾಯವಾಗಿ ನೀನು ಇಷ್ಟು ಮರಗಳನ್ನು ಬೆಳೆಸಲೇಬೇಕೆಂದು ನಿಬಂಧನೆಯನ್ನು ಹಾಕುವುದರ ಮೂಲಕ ಅಲಾಟ್‌ಮೆಂಟ್ ಲೆಟರ್ ಕೊಡಬೇಕು.

**ಶ್ರೀ ಗೋ.ಮಧುಸೂಧನ್:–** ಶ್ರೀಯುತ ವಿಜಯಶಂಕರ್‌ರವರೆ, ಒಂದು ನಿಮಿಷ. ಇವರುಗಳೆಲ್ಲಾ ಏನು ಮಾಡುತ್ತಾರೆಂದರೆ ಲ್ಯಾಂಡ್ ಸ್ಕೇಪಿಂಗ್ ಮಾಡಿ ಬೇರೆ ಕಡೆಯಿಂದ ತೆಗೆದುಕೊಂಡು ಬಂದು ಹುಲ್ಲು ಹಾಕಿ ಆ ಹುಲ್ಲಿಗೆ ಬೆಳಿಗ್ಗೆಯಿಂದ ಸಂಜೆಯವರೆಗೆ ನೀರು ಹಾಕುತ್ತಾ ಇರುತ್ತಾರೆ. ಲ್ಯಾಂಡ್‌ಸ್ಕೇಪಿಂಗ್ ಹುಲ್ಲು ಬೆಳೆಸುತ್ತಾರೆ. ಅ ಹುಲ್ಲನ್ನು ಒಳಗಡೆ ಮೇಯ್ಯಲಿಕ್ಕೆ ದನಗಳನ್ನು ಬಿಡುವುದಿಲ್ಲ, ಮತ್ತೇನೂ ಬಿಡುವುದಿಲ್ಲ. ಬರಿ ಹುಲ್ಲು ಬೆಳೆಸುತ್ತಾರೆ. ಬರಿ ನೋಡಲಿಕ್ಕೆ ಬೆಳೆಸುತ್ತಾರೆ. ಅದು ಲಾನ್.

**ಶ್ರೀ ವಿ.ಎಸ್.ಉಗ್ರಪ್ಪ:–** ಶ್ರೀಯುತ ಮಧುಸೂಧನ್‌ರವರು ಇಲ್ಲಿ ಗಮನಿಸಬೇಕು.

**ಶ್ರೀ ಬಿ.ರಾಮಕೃಷ್ಣ:–** ಮಾನ್ಯ ಸಭಾಪತಿಯವರೆ, ಈ ವಿಚಾರದಲ್ಲಿ ಅಪಹಾಸ್ಯ ಮಾಡುವುದು ಬೇಡ. ಮಾನ್ಯ ಸದಸ್ಯರಾದ ಶ್ರೀಯುತ ವಿಜಯಶಂಕರ್‌ರವರು ಈ ವಿಚಾರವಾಗಿ ಗಂಭೀರವಾಗಿ ಮಾತನಾಡುತ್ತಿದ್ದಾರೆ, ಇವರುಗಳು ಮಧ್ಯೆದಲ್ಲಿ ಬಾಯಿ ಹಾಕಿದರೆ ಹೇಗೆ?

**ಸಭಾಪತಿಯವರು:–** ಶ್ರೀಯುತ ವಿಜಯಶಂಕರ್‌ರವರು ಮಾತನಾಡುತ್ತಿದ್ದು, ಮಧ್ಯೆ ಯಾರು ಬಾಯಿ ಹಾಕಬಾರದು ಎಂದು ಶ್ರೀಯುತ ರಾಮಕೃಷ್ಣರವರು ಹೇಳುತ್ತಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ.

**ಸಭಾಪತಿಯವರು:–** ಇಲ್ಲ, ಬೇಡ. ಶ್ರೀಯುತ ರಾಮಕೃಷ್ಣರವರು ಮಧ್ಯೆ ಪ್ರವೇಶ ಮಾಡಬಾರದು ಎಂದು ಹೇಳುತ್ತಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಈಗ ಕೆಐಡಿಬಿ.ಯವರು ಈ ನೈಸ್ ರೋಡ್‌ಗೆ ಲ್ಯಾಂಡ್ ಸ್ವಾಧೀನಪಡಿಸಿಕೊಂಡಿದ್ದಾರೆ. ಈ ಬೆಂಗಳೂರಿನ ಸುಮಾರು 46 ಕಿ.ಮೀಟರ್‌ನಷ್ಟು ದೂರದ ನೈಸ್ ರೋಡ್‌ಗೆ ಕೆಐಎಡಿಬಿ. ರವರು ಭೂಸ್ವಾಧೀನ ಮಾಡಿಕೊಂಡು ಅವರಿಗೆ ಕೊಟ್ಟಿದ್ದಾರೆ. ಮಾನ್ಯ ಸಭಾಪತಿಯವರು ಗಮನಿಸಬೇಕು. ಈ ನೈಸ್ ರೋಡ್‌ನಲ್ಲಿ ಎಲ್ಲಿಯಾದರೂ ಒಂದೇ ಒಂದು ಮರ ಇದ್ದರೆ ಸಹಭಾಶ್ ಎನ್ನಬಹುದಾಗಿತ್ತು. 1997ರ ಫ್ರೇಮ್‌ವರ್ಕ್ ಅಗ್ರಿಮೆಂಟ್ ಪ್ರಕಾರ ಈ ಗಿಡಗಳನ್ನು ಹಾಕುವುದು ಮ್ಯಾನ್‌ಡೇಟರಿ, ಕಂಪಲ್ಸರಿ. ಬಹುಶ: ಎಲ್ಲೋ ಒಂದು ಕಡೆ ಈ ರೀತಿಯ ಅಗ್ರೀಮೆಂಟ್ಸ್‌ನ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ಹೇಳಿದ ಹಾಗೆ ಅದನ್ನು ಕಂಪಲ್ಸರಿ ಮಾಡಬೇಕು. ಎಕೆಂದರೆ, ಲ್ಯಾಂಡ್ ಅಕ್ವೈರ್ ಮಾಡಿಕೊಳ್ಳುವವರು ಕೆಐಎಡಿಬಿ ರವರು. ಹೀಗಾಗಿ, ಆ ರೀತಿಯಲ್ಲಿ ಮಾಡುವುದರಿಂದ ಈ ರೀತಿಯ ಹಸಿರಿಕರಣ ಜಾಸ್ತಿಯಾಗಲಿಕ್ಕೆ ಸಾಧ್ಯವಿದೆ.

**(ಗೊಂದಲ)**

**ಶ್ರೀ ಸಿ.ಹೆಚ್.ವಿಜಯಶಂಕರ:** ಮಾನ್ಯ ಸಭಾಪತಿಯವರೆ, ನಾನು ಮಾತನಾಡುತ್ತಿರುವಾಗ ಬೇರೆ ಬೇರೆ ವಿಷಯಗಳು ಚರ್ಚೆಯಾಗಿ ನನ್ನ ಸಮಯ ಮುಗಿದು ಹೋಗುತ್ತಿದೆ.

**ಸಭಾಪತಿಯವರು:–** ನಿಮಗೆ 5 ನಿಮಿಷಗಳು ಮಾತ್ರ ಇದೆ. ನೀವು ಬೇರೆಯವರೆಗೆ ಅವಕಾಶವನ್ನು ಕೊಡಬಾರದಿತ್ತು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸದಸ್ಯರಾದ ಶ್ರೀಯುತ ಎಸ್.ಆರ್.ಪಾಟೀಲ್‌ರವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರಿಗೆ ಇನ್ನು ಸ್ವಲ್ಪ ಸಮಯ ಕೊಡಿ. ಹಸಿರೀಕರಣದ ಬಗ್ಗೆ ಸದನದ ಎಲ್ಲಾ ಸದಸ್ಯರ ಗಮನ ಸೆಳೆಯುವಂತೆ ಮಾತನಾಡುತ್ತಿದ್ದಾರೆ. ನನಗೆ ಮೆಚ್ಚುಗೆಯಾಗಿದೆ.

**ಶ್ರೀ ಸಿ.ಎಚ್.ವಿಜಯಶಂಕರ್:–** ಧನ್ಯವಾದಗಳು.

**ಡಾ|| ವೀರಣ್ಣ ಮತ್ತಿಕಟ್ಟಿ:–** ಈ ಸದನದಲ್ಲಿ ಇವತ್ತು ಶ್ರೀಯುತ ವಿಜಯಶಂಕರ್‌ರವರಿಗೆ ಸಿಕ್ಕಷ್ಟು ಅವಕಾಶ ಮತ್ಯಾರಿಗೂ ಸಿಕ್ಕಿರುವುದಿಲ್ಲ.

**ಶ್ರೀ ಬಿ.ರಾಮಕೃಷ್ಣ:–** ಅದಕ್ಕೆ ಶ್ರೀಯುತ ಮತ್ತಿಕಟ್ಟಿ ವೀರಣ್ಣನವರೆ ಕಾರಣಕರ್ತರು.

**ಶ್ರೀ ಸಿ.ಎಚ್.ವಿಜಯಶಂಕರ್:–** ಮಾನ್ಯ ಸಭಾಪತಿಯವರೆ, ಇನ್ನು 10 ನಿಮಿಷಗಳಲ್ಲಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ. ಕೈಗಾರಿಕೆ ಇಲಾಖೆ ಈ ರೀತಿಯಲ್ಲಿ ತನ್ನ ಇಲಾಖಾ ವ್ಯಾಪ್ತಿಯಲ್ಲಿ ಅಥವಾ ಕೈಗಾರಿಕಾ ಅಭಿವೃದ್ಧಿ ಮಂಡಳಿ ವ್ಯಾಪ್ತಿಯಲ್ಲಿ ಹಸಿರೀಕರಣವನ್ನು ಮಾಡಲಿಕ್ಕೆ ಬೇಕಾದಂತಹ ದಿಕ್ಕಿನಲ್ಲಿ ಯೋಜನೆಗಳನ್ನು ರೂಪಿಸಿಕೊಳ್ಳಬೇಕು. ಆ ರೀತಿಯ ಯೋಜನೆಗಳು ಜಾರಿಗೆ ಬರಬೇಕು. ಮತ್ತು ನಿವೇಶನವನ್ನು ಮಂಜೂರು ಮಾಡುವಂತಹ ಸಂದರ್ಭದಲ್ಲಿ ಆ ಭಾಗದಲ್ಲಿ ನಿವೇಶನವನ್ನು ಹೊಂದಿಂತಹ ವ್ಯಕ್ತಿ, ಕೈಗಾರಿಕೆಯನ್ನು ಸ್ಥಾಪನೆ ಮಾಡಲಿಕ್ಕೆ ಜಾಗವನ್ನು ಪಡೆದಂತಹ ವ್ಯಕ್ತಿ ತನ್ನ ವ್ಯಾಪ್ತಿಯಲ್ಲಿ ಎಷ್ಟು ಮರಗಳನ್ನು ನೆಟ್ಟಿ ಬೆಳೆಸಬೇಕೆಂದು ಅವನಿಗೆ ಕಡ್ಡಾಯಗೊಳಿಸುವುದರ ಮೂಲಕ ಹಸಿರೀಕರಣ ಮಾಡುವಂತಹ ಹಿನ್ನೆಲೆಯಲ್ಲಿ ಕ್ರಮಗಳನ್ನು ಕೈಗೊಳ್ಳಬೇಕೆನ್ನುವ ಮಾತನ್ನು ನಾನು ಹೇಳಲಿಕ್ಕೆ ಬಯಸುತ್ತಿದ್ದೇನೆ.

ಇದರ ಜೊತೆಯಲ್ಲಿ ಈಗಾಗಲೇ 2–3 ದಿನಗಳಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನಾನು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಪಟ್ಟಂತೆ ನಾನು ಸ್ಪಷ್ಟವಾಗಿ ಹೇಳಲಿಕ್ಕೆ ಬಯಸುತ್ತೇನೆ. ಕೆಲಸಗಳನ್ನು ಏನ್‌ಆರ್‌ಇಜಿಯಲ್ಲಿ ತೆಗೆದುಕೊಳ್ಳಲಿಕ್ಕೆ ಅವಕಾಶವಿದೆ, ನರ್ಸರಿ ರೈಸ್ ಮಾಡಲಿಕ್ಕೆ ಅವಕಾಶವಿದೆ ಎಂದು ಮಾನ್ಯ ಸದಸ್ಯರೊಬ್ಬರು ಹೇಳಿದರು. ಇವತ್ತು ಪ್ರತಿ ಪಂಚಾಯಿತಿಗೂ ಸಹ 10 ಲಕ್ಷ 15 ಲಕ್ಷ, 20 ಲಕ್ಷ ರೂಪಾಯಿಗಳನ್ನು ನಿರ್ವಹಣಾ ಗ್ರಾಂಟ್ ಎಂದು ಕೊಡಲಾಗುತ್ತಿದೆ. ಮತ್ತೆ ಒಂದು ಪಂಚಾಯಿತಿಗೆ 7 ಗ್ರಾಮ, 8 ಗ್ರಾಮ, 9 ಗ್ರಾಮಗಳು ಬರುತ್ತವೆ. ಆ ಗ್ರಾಮಗಳ ವ್ಯಾಪ್ತಿಯಲ್ಲಿ ಬರುವಂತಹ ರಸ್ತೆಗಳು, ಗ್ರಾಮ ವ್ಯಾಪ್ತಿ ಬರುವಂತಹ ಸರ್ಕಾರಿ ಜಾಗಗಳು, ಆ ಗ್ರಾಮಗಳ ವ್ಯಾಪ್ತಿಯಲ್ಲಿ ಸಸಿ ನೆಡುವಂತಹ ಜಾಗಗಳನ್ನು ಗುರುತಿಸಿ, ಆ 7–8 ಗ್ರಾಮಗಳಲ್ಲಿ ಸಸಿಗಳನ್ನು ನೆಟ್ಟಿದ್ದೇ ಆದರೆ, ಅದರಲ್ಲಿ ಬರುವಂತಹ ಹುಣಸೆ ಫಸಲು ಇರಬಹುದು, ಮಾವಿನ ಫಸಲು ಇರಬಹುದು, ಬೇವಿನಬೀಜ ಇರಬಹುದು, ಹೊಂಗೆಬೀಜ ಇರಬಹುದು, ಅಥವಾ ಹಲಸಿನ ಹಣ್ಣು ಇರಬಹುದು, ಈ ರೀತಿಯ ಮರಗಳನ್ನು ನೆಟ್ಟು, ಈ ರೀತಿಯಲ್ಲಿ ಆದಾಯ ಬರುವಂತಹ ಮರಗಳನ್ನು ಬೆಳೆಸಿ, ಆ ಮರಗಳಿಂದ ಬರುವ ಫಸಲನ್ನು ಪ್ರತಿ ವರ್ಷ ಹರಾಜು ಹಾಕಿದರೆ ಹಣ ಬರುತ್ತದೆ. ಒಂದು ಪಂಚಾಯಿತಿ ವ್ಯಾಪ್ತಿಯಲ್ಲಿ 2000 ಬೇವಿನ ಮರಗಳು, 2000 ಹೊಂಗೆ ಮರಗಳು, 2000 ಬೆಟ್ಟದ ನೆಲ್ಲಿ ಮರಗಳು, 2000 ಸಿಗೆ ಮರಗಳು, 2000 ಅಂಟು ಮರಗಳನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ರಸ್ತೆ ಬದಿಗೆ ಹಾಕಲಿಕ್ಕೆ ಖಂಡಿತವಾಗಿ ಅವಕಾಶ ಸಿಕ್ಕುತ್ತದೆ. ಈ ರೀತಿಯ ತಲಾ ಎರಡೆರಡು ಸಾವಿರ ಮರಗಳನ್ನು ರೆಸ್ತೆ ಬದಿಯಲ್ಲಿ ಬೆಳೆಸಿದರೆ ಧೈರ್ಯವಾಗಿ ನಾನು ಈ ಜಾಗದಲ್ಲಿ ನಿಂತು ಹೇಳಲಿಕ್ಕೆ ಬಯಸುತ್ತೇನೆ. ಏನು ಸರ್ಕಾರದಿಂದ ಪ್ರತಿಯೊಂದು ಪಂಚಾಯಿತಿಗೆ 20 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ, ಆ ಸಸಿಗಳನ್ನು ಬೆಳೆಸುವಂತಹ ಮತ್ತು ಪಾಲನೆ ಮಾಡುವಂತಹ ಜವಾಬ್ದಾರಿಯನ್ನು ಆ ಪಂಚಾಯಿತಿಗೆ ಒಪ್ಪಿಸಿ, 4–5 ವರ್ಷಗಳು ಕಳೆದಾದ ಮೇಲೆ ಈ ಬೀಜದ ಫಸಲಿನ ಹರಾಜಿನಲ್ಲಿ ಪ್ರತಿಯೊಂದು ಪಂಚಾಯಿತಿಯಲ್ಲಿಯೂ ಸಹ 50 ಲಕ್ಷ ರೂಪಾಯಿಗಳ ಆದಾಯ ಬರಲಿಲ್ಲವೆಂದರೆ ಹೇಳಿ.

ಅದಕ್ಕೋಸ್ಕರ ಪಂಚಾಯತ್ ರಾಜ್ ಇಲಾಖೆಗೆ ನಾನು ಹೇಳಬಯಸುವುದೇನೆಂದರೆ, ಗ್ರಾಮಾಂತರ ಪ್ರದೇಶದಲ್ಲಿ ಒಂದು ಕಡೆ ನೀಲಿ ನಕ್ಷೆ ತಯಾರಾಗಬೇಕು, ಗ್ರಾಮಾಂತರ ಪ್ರದೇಶದಲ್ಲಿ ಎಲ್ಲೆಲ್ಲಿ ಸಸಿಗಳನ್ನು ನಡೆಬೇಕೆಂದು ಹೇಳಿ ಪಂಚಾಯತ್ ರಾಜ್ ಇಲಾಖೆ ತನ್ನದೇ ಆದಂತಹ ಬಹಳ ಸ್ಪಷ್ಟವಾದ ಮಾಹಿತಿಯನ್ನು ಪಡೆಯಬೇಕು. ಅದಕ್ಕೆ ಬೇಕಾದಂತಹ ಕಾರ್ಯ ಯೋಜನೆಯನ್ನು ತನ್ನ ವ್ಯಾಪ್ತಿಯಲ್ಲಿ ತಯಾರು ಮಾಡಿಕೊಳ್ಳಬೇಕು. ಇಲಾಖೆ ತಾನು ಕೊಡುವಂತಹ ಅಭಿವೃದ್ಧಿ ಹಣದಲ್ಲಿ ಈ ಸಸಿಗಳನ್ನು ಗ್ರಾಮೀಣ ಮಟ್ಟದಲ್ಲಿ ನೆಟ್ಟು ಬೆಳಸಲಿಕ್ಕೆ ಗ್ರಾಮಾಂತರ ಜನರಿಗೆ ಏನು ಆ ಪಂಚಾಯಿತಿ ವ್ಯಾಪ್ತಿಯಲ್ಲಿ ಆ ಸಸಿಗಳು ಬೇಕೆಂದು ಬಯಸುತ್ತಾರೆ, ಅವುಗಳನ್ನು ಕೊಡುವಂತಹ ಹಿನ್ನೆಲೆಯಲ್ಲಿ ಪಂಚಾಯಿತಿಗಳಿಗೂ ಕೂಡ ಈ ರೀತಿಯ ಜವಾಬ್ದಾರಿಯನ್ನು ನಿಗದಿ ಮಾಡಬೇಕು. ಅದು ಗ್ರಾಮ ಪಂಚಾಯಿತಿ ಇರಲಿ, ತಾಲ್ಲೂಕು ಪಂಚಾಯಿತಿ ಇರಲಿ, ಜಿಲ್ಲಾ ಪಂಚಾಯಿತಿ ಇರಲಿ. . . .

**ಶ್ರೀ ಬಿ.ರಾಮಕೃಷ್ಣ:-** ಮಾನ್ಯ ಸದಸ್ಯರಾದ ಶ್ರೀಯುತ ವಿಜಯಶಂಕರ್‌ರವರು ಇಲ್ಲಿ ಗಮನಿಸಬೇಕು. ಆ ಪಂಚಾಯಿತಿ ವ್ಯಾಪ್ತಿಯಲ್ಲಿ ಸಸಿಗಳನ್ನು ಕೊಡುವಂತಹ ಜವಾಬ್ದಾರಿ ಅರಣ್ಯ ಇಲಾಖೆಗೆ ಇದ್ದು, ಅದನ್ನು ಅವರು ಕೊಡುತ್ತಾರೆ. ಇವತ್ತು ಏನು ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿಗೇ ತೊಂದರೆಯಾಗಿರುವುದರಿಂದ ಗಿಡಗಳನ್ನು ಹೇಗೆ ಬೆಳೆಸುತ್ತಾರೆನ್ನುವುದನ್ನು ನೋಡಬೇಕಾಗಿದೆ. ಈ ಕೆಲಸ ಮಾಡಬೇಕಾದರೆ, ನಾವು ನೀವು ಹೇಳಿದಷ್ಟು ಸುಲಭದ ಕೆಲಸವಲ್ಲ. ಅದಕ್ಕೆ ಒಂದು ಕಾರ್ಯಕ್ರಮವನ್ನು ನಿಗದಿ ಮಾಡಬೇಕು. 1000-1500 ಅಡಿ ಬೋರ್‌ವೆಲ್ ಕೊರೆದರೂ ಸಹ ನೀರೇ ಸಿಕ್ಕುತ್ತಿಲ್ಲ. ಹೀಗಿರುವಾಗ 2000 ಗಿಡಗಳನ್ನು ಹೇಗೆ ಬೆಳೆಸಲಿಕ್ಕೆ ಆಗುತ್ತದೆ. ಇದಕ್ಕೆ ಆದಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಕೊಡುತ್ತಿರುವ 20 ಲಕ್ಷ ರೂಪಾಯಿಗಳ ಅನುದಾನವನ್ನು ಬರಿ ಗಿಡಗಳನ್ನು ಬೆಳಸಲಿಕ್ಕೆ ಹಾಕಿದರೆ ಬೇರೆ ಏನು ಮಾಡುವುದಕ್ಕಾಗುತ್ತದೆ. ಇದಕ್ಕೆ ನೀವು ಬೇರೆ ರೀತಿಯಲ್ಲಿ ಏನಾದರೊಂದು ಸಲಹೆಯನ್ನು ಕೊಡಿ.

**ಶ್ರೀ ಸಿ.ಎಚ್.ವಿಜಯಶಂಕರ:-** ಮಾನ್ಯ ಸಭಾಪತಿಯವರೆ, ಇದರಲ್ಲಿ ಎರಡು ಭಾಗ ಇದೆ. ಮೊದಲನೆಯದು, ಎಲ್ಲೆಲ್ಲಿ ಈ ರೀತಿಯಲ್ಲಿ ನೀರಿನ ಸಮಸ್ಯೆ ಇಲ್ಲವೋ ಎಲ್ಲೆಲ್ಲಿ ನೀರಿನ ಅನುಕೂಲತೆ ಇದೆಯೋ ಅವುಗಳನ್ನು 'ಎ' ಕ್ಯಾಟಗರಿ ಪಂಚಾಯಿತಿ ಎಂದು ಮಾಡಿ. ಎಲ್ಲೆಲ್ಲಿ ನೀರನ್ನು ಒದಗಿಸಿ ಸಸಿಗಳನ್ನು ನೆಡಲಿಕ್ಕೆ ಸಾಧ್ಯವಿದೆ ಅದನ್ನು 'ಬಿ' ಕ್ಯಾಟಗರಿ ಎಂದು ಮಾಡಿ. ಎಲ್ಲಿ ನೀರು ಸಿಕ್ಕುವುದಿಲ್ಲ, ನಾವು ಅನಿವಾರ್ಯವಾಗಿ ನೀರನ್ನು ಸರಬರಾಜು ಮಾಡಿ, ಆ ಸಸಿಗಳನ್ನು ನೋಡಿಕೊಳ್ಳಬೇಕಾಗುತ್ತದೆ ಅದನ್ನು ಸಿ. ಕ್ಯಾಟಗರಿಗೆ ತನ್ನಿ. 'ಎ' ಮತ್ತು 'ಬಿ' ಗುಂಪಿನ ಪಂಚಾಯಿತಿಗಳ ಪಟ್ಟಿಯನ್ನು ನಿಶ್ಚಿತವಾಗಿ ಮಾಡಿ ಪಂಚಾಯತ್ ರಾಜ್ ಇಲಾಖೆ ತನ್ನ ವ್ಯಾಪ್ತಿಯಲ್ಲಿ ಇದಕ್ಕೋಸ್ಕರ ಹಣವನ್ನು ಕಾಯ್ದಿರಿಸಿ, ತನ್ನ ಯೋಜನೆಯಲ್ಲಿ ಈ ರೀತಿ ವಿಚಾರವನ್ನು ಕೈಗೆತ್ತಿಕೊಂಡು ಅದಕ್ಕೋಸ್ಕರ ಹಣವನ್ನು ಕೊಟ್ಟಿದ್ದೇ ಆದರೆ ನಿಶ್ಚಿತವಾಗಿಯೂ ಕೂಡ ಗ್ರಾಮಾಂತರ ಮಟ್ಟದಲ್ಲಿ ಆದಾಯದ ಮೂಲವನ್ನು ಕಾಣಲಿಕ್ಕೆ ಸಾಧ್ಯವಿದ್ದು, ಹಸಿರೀಕರಣ ಕಾಣಲಿಕ್ಕೆ ಸಾಧ್ಯವಿದೆ. ಇಷ್ಟೆಲ್ಲಾ ವಿಚಾರವನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಸುಮಾರು 15 ವರ್ಷಗಳ ಹಿಂದೆ, ನಾನು ಒಂದು ಮದುವೆ ಕಾರ್ಯಕ್ರಮಕ್ಕೆ ಹೋದಂತಹ ಸಮಯದಲ್ಲಿ ಒಂದು ಬಿಸಲರಿ ಬಾಟಲ್ ಅನ್ನು ತಂದು ಟೇಬಲ್ ಮೇಲೆ ಇಟ್ಟರು. ನನಗೆ ಬಹಳ ಆಶ್ಚರ್ಯವಾಯಿತು. ಇದೇಕೆ ನೀರನ್ನು ಬಾಟಲಿನಲ್ಲಿ ಇಡುತ್ತಿದ್ದೀರಿ ಎಂದು ನಾನವರನ್ನು ಕೇಳಿದೆ. ಅದಕ್ಕವರು ಇದು ಅರ್ಬಲ್ ವಾಟರ್ ಎಂದು ಹೇಳಿದರು. ಅರ್ಬಲ್ ವಾಟರ್ ಎಂದರೆ ಏನು ಎಂದು ನಾನವರನ್ನು ಕೇಳಿದೆ. ಅದಕ್ಕವರು ಏನು ಯಥೇಚ್ಛವಾದ ಕಾಡು ಇರುತ್ತದೆ, ಆ ಕಾಡನ್ನೆಲ್ಲಾ ಬಳಸಿಕೊಂಡು ಬರುವಂತಹ ನೀರು ಇದಾಗಿದ್ದು, ಇದಕ್ಕೆ ವಿಶೇಷವಾದ ಶಕ್ತಿ ಇದೆ, ಈ ನೀರನ್ನು ಕುಡಿಯುವುದರಿಂದ ಅನೇಕ ರೀತಿಯಲ್ಲಿ ಅನುಕೂಲವಾಗುತ್ತದೆ. ಆ ರೀತಿಯಲ್ಲಿ ಒಂದು ಮೂಲದಿಂದ ಸಂಗ್ರಹ ಮಾಡಿಕೊಂಡು ಬಂದು ನೀರು ಇದಾಗಿದೆಯೆಂದರು. ನಾನು ಆಗ ಇರಬಹುದೆಂದು ಭಾವಿಸಿದೆ. ಆದರೆ, ಇವತ್ತು ಒಂದು ಲೀಟರ್ ಹಾಲಿಗಿಲ್ಲ ಬೆಲೆ, ಒಂದು ಲೀಟರ್ ನೀರಿಗೆ ಬೆಲೆ ಇದೆ. ಬಿಸಲರಿ ಬಾಟಲ್ ನೀರೆಂದು ಹೇಳಿ, ದೊಡ್ಡವರು ಹೇಗೋ ನೀರನ್ನು ತೆಗೆದುಕೊಂಡು ಕುಡಿದುಬಿಡುತ್ತಾರೆ. ಬೋರ್‌ವೆಲ್‌ಗಳನ್ನು ಕೊರೆದು, ಅಲ್ಲಿಂದ ನೀರನ್ನು ತೆಗೆದುಕೊಂಡು ಎಲ್ಲಾ ಕಡೆ ಬಿಸಲರಿ ನೀರನ್ನು ಸರಬರಾಜು ಮಾಡುವಂತಹ ವ್ಯವಸ್ಥೆಯನ್ನು

ನಾವಿಂದು ಕಾಣುತ್ತಿದ್ದೇವೆ. ದೊಡ್ಡವರು ಹೇಗೋ ನೀರನ್ನು ಕುಡಿದು ಬದುಕುತ್ತಾರೆ, ಅವರು ಯಾವ ನೀರನ್ನು ಬೇಕಾದರೂ ಕುಡಿಯುತ್ತಾರೆ. ಆದರೆ, ಸರ್ಕಾರದ ಜವಾಬ್ದಾರಿ ಏನೆಂದರೆ, ಸಮಾಜದ ಕಟ್ಟಕಡೆಯ ವ್ಯಕ್ತಿಗೆ ನ್ಯಾಯ ಕೊಡುವಂತಹದ್ದು ಆಗಬೇಕು. ಆ ರೀತಿಯಲ್ಲಿ ಬಿಸಲರಿ ನೀರನ್ನು ಸಾಮಾನ್ಯ ವ್ಯಕ್ತಿ ಕುಡಿಯಲಿಕ್ಕೆ ಸಾಧ್ಯವಿದೆಯೇ? ಆ ಒಂದು ಸ್ಥಿತಿಯನ್ನು ನಾವಿಂದು ನಮ್ಮ ಮಧ್ಯೆದಲ್ಲಿ ಕಾಣುತ್ತಿದ್ದೇವೆ. ಇದಕ್ಕೆ ಯಾರು ಕಾರಣಕರ್ತರು, ಇದಕ್ಕೆ ಯಾರು ಜವಾಬ್ದಾರರು? ನಾನು ಈ ಒಂದು ಪರಿಸ್ಥಿತಿಯನ್ನು ನಾನು 15 ವರ್ಷಗಳ ಹಿಂದೆಯೇ ಕಂಡಿದ್ದೇನೆ. ನೀರಿಗೆ ದುಡ್ಡು ಕೊಟ್ಟು ಕುಡಿಯುವಂತಹ ವ್ಯವಸ್ಥೆಯನ್ನು ಕಂಡು ನನಗೆ ಅಂದು ಆಶ್ಚರ್ಯವಾಯಿತು. ಈ ವ್ಯವಸ್ಥೆ ನಮ್ಮ ಸಮಾಜದಲ್ಲಿ ಬಂದಿದೆಯಲ್ಲಾ, ಎಂದು ನನಗೆ ಅಘಾತವಾಗಿತ್ತು. ಇವತ್ತು ನಾನು ಏನು ಈ ಒಂದು ವಿಚಾರವಾಗಿ ಖಾಸಗಿ ನಿರ್ಣಯವನ್ನು ತಂದಿದ್ದೇನೆ, ಇದಕ್ಕೆ ಆದ್ಯತೆ ಸಿಕ್ಕದೇ ಹೋದರೆ, ನಾನು ಈ ಜಾಗದಲ್ಲಿ ನಿಂತುಕೊಂಡು ಧೈರ್ಯವಾಗಿ ಹೇಳುವುದೇನೆಂದರೆ ಇನ್ನು 10–15 ವರ್ಷಗಳ ಕಾಲ ನಾವು ಇದೇ ರೀತಿಯ ಬೇಜವಾಬ್ದಾರಿಯಿಂದ ನಡೆದುಕೊಂಡಿದ್ದೇ ಆದರೆ, ಹಸಿರೀಕರಣಕ್ಕೆ ಆದ್ಯತೆ ಕೊಡಬೇಕಾದ ವಿಚಾರದಲ್ಲಿ ಗಮನಹರಿಸದೇ ಹೋದರೆ, ಇದಕ್ಕೆ ಬೇರೆ ಬೇರೆ ಇಲಾಖೆಗಳು ಏನು ಆದ್ಯತೆ ಕೊಡಬೇಕಾಗಿದ್ದು, ಕೊಡದೇ ಹೋದರೆ ಆಕ್ಸಿಷನ್ ಯುನಿಟ್ಸ್, ಆಕ್ಷಿಷನ್ ಸೆಂಟರ್ ಪ್ರಾರಂಭವಾಗಲಿಲ್ಲವೆಂದರೆ ಹೇಳಿ. ಶುದ್ಧವಾದ ಗಾಳಿಯನ್ನು ಕುಡಿಯುವುದಕ್ಕೋಸ್ಕರ ನಾವು ಆಕ್ಸಿಷನ್ ಸೆಂಟರ್‌ಗೆ ನಾವು ಹೋಗಬೇಕಾಗುತ್ತದೆ. ದುಡ್ಡು ಕೊಟ್ಟು ಶುದ್ಧಗಾಳಿಯನ್ನು ಕುಡಿಯಬೇಕಾಗುತ್ತದೆ. ಆ ಒಂದು ಸ್ಥಿತಿಯನ್ನು ನಾವು ಇನ್ನು 10–15 ವರ್ಷಗಳಲ್ಲಿ ಕಾಣಬೇಕಾಗುತ್ತದೆ. ದೊಡ್ಡವರು ಹೇಗೋ ಶುದ್ಧಗಾಳಿಯನ್ನು ಕುಡಿಯುತ್ತಾರೆ, ಸಾಮಾನ್ಯ ಜನರ ಕತೆ ಏನು ಸ್ವಾಮಿ? ಸಾಮಾನ್ಯ ಜನರಿಗೆ ಯಾರು ಶುದ್ಧಗಾಳಿಯನ್ನು ಕೊಡುತ್ತಾರೆ?

ಹಕ್ಕಿಪಕ್ಷಿಗಳಿಗೆ ಯಾರು ಶುದ್ಧ ಗಾಳಿಯನ್ನು ಕೊಡುವವರು? ಆ ಹಿನ್ನೆಲೆಯಲ್ಲಿ ಸರ್ಕಾರವನ್ನು ಎಚ್ಚರ ಮಾಡುವುದಕ್ಕೆ ಈ ಖಾಸಗಿ ನಿರ್ಣಯವನ್ನು ನಾನು ತಂದಿದ್ದೇನೆ ಎನ್ನುವ ಮಾತನ್ನು ಈ ಸಮಯದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಆ ಕಾರಣಕೋಸ್ಕರ ಈ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ. ಮೇಲ್ಕಾಣಿಸಿದ ಎಲ್ಲಾ ಇಲಾಖೆಗಳು ತನಗೆ ಲಭ್ಯವಿರುವ ಈ ರೀತಿ ಭೂಪ್ರದೇಶವನ್ನು ಹಸಿರೀಕರಣದ ಅಡಿಯಲ್ಲಿ ತರಲು ಮತ್ತು ತಮಗೆ ಲಭ್ಯವಿರುವ ಭೂಮಿಯನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಈವರೆಗೆ ಚಿಂತಿಸದಿರುವುದು, ಇದಕ್ಕಾಗಿ ವ್ಯವಸ್ಥಿತ ಹಾಗೂ ಕಾಲಬದ್ಧ ಯೋಜನೆಯನ್ನು ತಮ್ಮ ತಮ್ಮ ಇಲಾಖಾ ವ್ಯಾಪ್ತಿಯಲ್ಲಿ ಜಾರಿಗೊಳಿಸಲು ಗಮನಹರಿಸದಿರುವುದು ಒಂದು ಸಾಮಾಜಿಕ ದುರಂತ ಎಂದು ನಾನು ಭಾವಿಸುತ್ತೇನೆ. ಮೇಲ್ಕಾಣಿಸಿದ ಎಲ್ಲಾ ಕಾರಣಗಳ ಹಿನ್ನೆಲೆಯಲ್ಲಿ ಸಂಬಂಧಿಸಿದ ಇಲಾಖೆಗಳು ಈಗಲಾದರೂ ಕಣ್ಣತೆರೆದು ತಮ್ಮ ನೈತಿಕ ಹಾಗೂ ವ್ಯವಹಾರಿಕ ಜವಾಬ್ದಾರಿಯನ್ನು ಅರ್ಥ ಮಾಡಿಕೊಂಡು ತಕ್ಷಣ ತಮ್ಮ ತಮ್ಮ ಇಲಾಖಾ ವ್ಯಾಪ್ತಿಯಲ್ಲಿ ನಿಯಮಾವಳಿಗಳಿಗೆ ಅಗತ್ಯ ತಿದ್ದುಪಡಿಯನ್ನು ತರಲು ಮತ್ತು ಈ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೊಳಿಸಲು ಅವಶ್ಯಕತೆ ಇರುವ ಎಲ್ಲಾ ರೀತಿಯ ಕ್ರಮಗಳನ್ನು ಕೈಗೆತ್ತಿಕೊಳ್ಳಲು, ತಮ್ಮ ತಮ್ಮ ಇಲಾಖೆಗಳ ಮೂಲ ನಿಯಮಾವಳಿಗಳಿಗೆ ತಿದ್ದುಪಡಿ ತರಲು ಹಾಗೂ ಹಣಕಾಸಿನ ಅಗತ್ಯತೆಗಳನ್ನು ಹೊಂದಿಸಿಕೊಳ್ಳಲು ಕಾನೂನಾತ್ಮಕ ಕ್ರಮ ಕೈಗೊಳ್ಳಲು ಅವಕಾಶವಾಗುವಂತೆ ನೋಡಿಕೊಳ್ಳಲು ಈ ಖಾಸಗಿ ಮಸೂದೆಯನ್ನು ಅಗತ್ಯ ಕ್ರಮಗಳಿಗಾಗಿ ಸದನದ ಮುಂದೆ ನಾನು ಮಂಡಿಸುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ವಿಜಯಶಂಕರ್‌ರವರೇ, ತಾವು ಚೆನ್ನಾಗಿ ಮಾತನಾಡುತ್ತಿದ್ದೀರಿ. ಇನ್ನು ಸ್ವಲ್ಪ ಮಾತನಾಡಿ, ನಾವು ಕೇಳುತ್ತೇವೆ.

**ಡಾ:ಮತ್ತಿಕಟ್ಟಿ ವೀರಣ್ಣ:–** ಮಾನ್ಯ ವಿಜಯಶಂಕರ್‌ರವರೇ, ನೀವು ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ. ನೀವು ಪ್ರಸ್ತಾಪಿಸಿರುವ ವಿಚಾರ ಅತ್ಯಂತ ಗಹನವಾದ ವಿಚಾರ. ದಯಮಾಡಿ ಇನ್ನು ಅರ್ಧ ಗಂಟೆ ಮಾತನಾಡಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಮೊದಲನೆ ಬಾರಿ ಸದನದಲ್ಲಿ ಮಾತು ನಿಲ್ಲಿಸಿ ಎಂದು ತಾವು ಹೇಳುತ್ತಿಲ್ಲ. ಮಾತನಾಡಿ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇದನ್ನು ನೋಡಿದರೆ ಏನೋ ಸಮಸ್ಯೆ ಇರಬಹುದೆಂದು ನನಗನಿಸುತ್ತಿದೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಆ ವಿಷಯದ ಬಗ್ಗೆ ಮಾತನಾಡುವುದಕ್ಕೆ ಬೇರೆಯವರಿಗೆ ಅವಕಾಶ ಇಲ್ಲವೆ?

**ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಶ್ರೀಮಂತರು ಔಥಥಿಂಜಟಿ ಣಟಿಣ ಇರುವಂತಹ ಪ್ರದೇಶದಲ್ಲಿ ಉಸಿರಾಡುವಂತಹ ವ್ಯವಸ್ಥೆ ಬಂದಿದೆ. ಕುಡಿಯುವ ನೀರಿನ ಸಲುವಾಗಿ ಮೂರನೇ ಮಹಾಯುದ್ಧ ನಡೆಯುವಂತಹ ಪರಿಸ್ಥಿತಿಯೂ ಉದ್ಭವಿಸಬಹುದು. ಅದರ ಬಗ್ಗೆ ಇನ್ನಷ್ಟು ಬೆಳಕು ಚೆಲ್ಲುವಂತಹ ವಿಚಾರ ಹೇಳಿದರೆ ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದು. ಅವರು ಇನ್ನಷ್ಟು ವಿಚಾರ ಮಾತನಾಡಿ ಬೆಳಕು ಚೆಲ್ಲಲಿ ಎಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಕೆಳಮನೆಯಲ್ಲಿ ಎರಡು ಮಸೂದೆಗಳು ಪಾಸ್ ಆಗಿರುವ ಬಗ್ಗೆ ನನಗೆ ಸಂದೇಶ ಬಂದಿದೆ. ಈಗ ಎರಡು ಪ್ರಕಟಣೆಗಳಿವೆ.

10. **ಪ್ರಕಟಣೆಗಳು**

**ಮಾನ್ಯ ಸಭಾಪತಿಯವರು:– ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶಗಳು ಬಂದಿರುತ್ತವೆ:–**

**ಅ)** ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ:31.07.2015 ರಂದು **2015ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಗಳೊಂದಿಗೆ** ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

**ಆ)** ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ:31.07.2015 ರಂದು **2015ನೇ ಸಾಲಿನ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು** ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

**ಸಭಾಪತಿಯವರು:–** ಅವರು ನನಗೆ ಕಳುಹಿಸಿಕೊಟ್ಟಂಥ ಎರಡು ಸಂದೇಶಗಳನ್ನು ನಾನು ಸದನದ ಗಮನಕ್ಕೆ ತಂದಿದ್ದೇನೆ. ಆದರೆ, ಇವೆರಡು ಮಸೂದೆಗಳು ಬಹಳ ಪ್ರಮುಖವಾಗಿರುವಂಥದ್ದು. These Bills will have far reaching effect. ನಾವು ಕಾರ್ಯ ಕಲಾಪ ಸಲಹಾ ಸಮಿತಿಯಲ್ಲಿ ಪದೇಪದೇ ಸರ್ಕಾರಕ್ಕೆ ಹೇಳುತ್ತಲೇ ಇದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಇದ್ದಾಗಲೂ ಹೇಳಿದ್ದೇವೆ. ಯಾವುದೇ ಮಸೂದೆಗಳನ್ನು ಒಂದು ದಿವಸ ಅಥವಾ ಎರಡು ದಿವಸ ಮುಂಚೆ ಕೊಟ್ಟರೆ ಮಾತ್ರ ಓದಿ ಅದರ ಬಗ್ಗೆ ನಾವು ನಮ್ಮ ಅಭಿಪ್ರಾಯಗಳನ್ನು ಹೇಳಬಹುದು, ಸದನದಲ್ಲಿ ಚರ್ಚೆ ಮಾಡಬಹುದು. ಕಡೆ ನಿಮಿಷದಲ್ಲಿ ತಂದಾಗ ಹಿರಿಯರಾಗಿರುವಂತಹ ನಮ್ಮ ಕಂದಾಯ ಸಚಿವರಾದ ಶ್ರೀನಿವಾಸ ಪ್ರಸಾದ್‌ರವರು ನನಗೆ ಈಗ ಕೆಳಗಿನ ಮನೆಯಿಂದ ಬಂದು ಬಿಡುತ್ತದೆಂದು ಸನ್ನೆ ಮಾಡಿ ತೋರಿಸಿದರು. ಆದರೆ ನಾನು ಸದನಕ್ಕೆ ಬಿಡುತ್ತೇನೆ. ಅದರಲ್ಲಿ ಏನಿದೆ, ಏನಿಲ್ಲ ಎಂದು ಓದುವುದಕ್ಕೂ ಸಮಯವಿಲ್ಲ. ಹಾಗೆಯೇ ಪಾಸ್ ಮಾಡಿಕೊಡುತ್ತೇವೆಂದು ನೀವೆಲ್ಲಾ ಒಪ್ಪುವುದಾದರೆ ನಾನು ಅರ್ಧ ಗಂಟೆ ಸದನವನ್ನು ಮುಂದಕ್ಕೆ ಹಾಕುತ್ತೇನೆ, ಮತ್ತೆ ಸೇರೋಣ. ಆದರೆ ಹೀಗೆ ಸುಮ್ಮನೆ ನಾವು ಪದ ಹೇಳಿಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಆ ಮಸೂದೆಗಳಿಗೋಸ್ಕರ ಅರ್ಧ ಗಂಟೆ ಸದನವನ್ನು ಮುಂದಕ್ಕೆ ಹಾಕುವುದಕ್ಕೂ ನಾನು ತಯಾರಿದ್ದೇನೆ, ಮತ್ತೆ ಸೇರೋಣ. ಆದರೆ ಆ ಮಸೂದೆಯನ್ನು ನಾನು ಇಲ್ಲಿ ಇಟ್ಟ ಮೇಲೆ ಅದನ್ನು ಪಾಸ್ ಮಾಡಿಕೊಡಬೇಕು, ಇಲ್ಲವೇ ಫೇಲ್ ಮಾಡಿಕೊಡಬೇಕು. ಇಲ್ಲ, ನಮಗೆ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಸಮಯ ಬೇಕು, ನಾವು ಓದಿಲ್ಲ, ನಾವು ನೋಡಿಲ್ಲ, ಒಳಗೆ ಏನಿದೆಯೋ, ಹೊರಗೆ ಏನಿದೆಯೋ ಎಂಬುದು

ನಮಗೆ ಗೊತ್ತಿಲ್ಲ. ಏನು ತಪ್ಪುಗಳಿವೆಯೋ ಓದುವುದಕ್ಕೂ ನಮಗೆ ಆಗಲಿಲ್ಲ ಎಂದು ನೀವು ಹೇಳುವುದಾದರೆ ಅರ್ಧ ಗಂಟೆ ಸದನವನ್ನು ಮುಂದಕ್ಕೆ ಹಾಕುವುದಕ್ಕೂ ನಾನು ತಯಾರಿದ್ದೇನೆ, ಈ ಮಾತನ್ನು ನಾನು ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ಪದೇಪದೇ ಹೇಳಿದ್ದೇನೆ. ಆದರೂ ಕೆಲವು ಬಾರಿ ಇವತ್ತು ಬೆಳಗ್ಗೆ ಬಂದಂತಹ ಶಿಕ್ಷಣಕ್ಕೆ ಸಂಬಂಧಪಟ್ಟ ವಿಧೇಯಕ ಇವತ್ತೇ ಬಂದರೂ ಕೂಡ ಅದನ್ನು ಓದಿ ಮಾತನಾಡುತ್ತೇವೆಂದು ಸದಸ್ಯರೆಲ್ಲರೂ ಅಭಿಪ್ರಾಯ ಪಟ್ಟಿದ್ದಕ್ಕಾಗಿ ಅದಕ್ಕೆ ಅವಕಾಶ ಕೊಟ್ಟು ಪಾಸ್ ಮಾಡಿಸಿಕೊಟ್ಟೆವು. ಸ್ವತಃ ಮುಖ್ಯಮಂತ್ರಿಗಳು ಬೆಳಿಗ್ಗೆ ಬಂದಾಗ ಅವರ ಹತ್ತಿರ ನೇರವಾಗಿ ಸದನದಲ್ಲಿ ಮಾತನಾಡುವುದಕ್ಕಾಗುವುದಿಲ್ಲ. ಅವರು ಸನ್ನೆ ಮಾಡಿ ಇನ್ನು ಎರಡು ವಿಧೇಯಕಗಳು ಬರುತ್ತಿವೆ ಸಹಕಾರ ಮಾಡಿ ಎಂದು ಹೇಳಿದರು. ಆದರೆ ಈಗ ಏಳು ಗಂಟೆಯಾಯಿತು. ಆ ವಿಧೇಯಕಗಳು ಇನ್ನು ಪ್ರಿಂಟ್ ಆಗಿ ನಮ್ಮ ಸದನಕ್ಕೆ ಬಂದಿಲ್ಲ. ನಾಳೆ ಯಾವುದೇ ವಿಧೇಯಕವನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಕಾರಣವೇನೆಂದರೆ, Assembly session ಇರುವುದಿಲ್ಲ ಮತ್ತು ನಾವು ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ತೀರ್ಮಾನ ಮಾಡಿದ್ದೇವೆ. ನಾಳೆ ಒಂದೇ ಒಂದು ಕಾರಣಕ್ಕಾಗಿ ನಾವು ಸದನ ಕರೆಯುತ್ತಿದ್ದೇವೆ. ಕಾರಣವೇನೆಂದರೆ ಉಪ ಸಭಾಪತಿ ಚುನಾವಣೆ. ಅಷ್ಟು ಬಿಟ್ಟು ಬೇರೇನೂ ನಾಳೆ ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ನಾನು ಸಭೆಗೆ ಬಿಡುತ್ತೇನೆ ಮತ್ತು ಸಭಾನಾಯಕರು ಏನು ಹೇಳುತ್ತಾರೆ ಅಥವಾ ನೀವೆಲ್ಲಾ ಏನು ಹೇಳುತ್ತೀರಾ ಅದನ್ನು ಕೇಳುವುದಕ್ಕೆ ನಾನು ತಯಾರಿದ್ದೇನೆ. ಇನ್ನಷ್ಟು ವಿಧೇಯಕಗಳು ಬಂದರೆ ನಾವು ಚರ್ಚೆ ಮಾಡುತ್ತೇವೆ, ಸಭೆ ನಡೆಸುತ್ತೇವೆ ಎಂದು ಹೇಳಿದರೆ ರಾತ್ರಿ 12 ಗಂಟೆಯಾಗಲಿ ನಾನು ಕುಳಿತುಕೊಳ್ಳುವುದಕ್ಕೆ ತಯಾರಿದ್ದೇನೆ. ಆದರೆ ನಾನು ಕೂರುವುದಕ್ಕೆ ತಯಾರಿಲ್ಲ ಎಂದಲ್ಲ. ಆದರೆ the whole purpose should not get defeated. ವಿಧೇಯಕದಲ್ಲಿ ನಿಮ್ಮ ಉದ್ದೇಶ ಒಳ್ಳೆಯದು ಇರುತ್ತದೆ, ಒಳಗಡೆ ಸರಿ ಇದೆಯೋ, ತಪ್ಪು ಇದೆಯೋ, ಅದನ್ನು ನೋಡುವುದಕ್ಕೆ, ಚರ್ಚೆ ಮಾಡುವುದಕ್ಕೂ ಅವಕಾಶ ಇಲ್ಲವೆಂದರೆ ಇದು ಭಾರಿ ಅಪಹಾಸ್ಯವಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು):–:–** ಇದೇನು ಸುದೀರ್ಘವಾದಂತಹ ತಿದ್ದುಪಡಿಯಲ್ಲ.

**ಶ್ರೀ ಬಿ.ರಾಮಕೃಷ್ಣ:–** ಮಾನ್ಯ ಸಭಾಪತಿಯವರೆ, ಸೋಮವಾರ ತೆಗೆದುಕೊಳ್ಳಿ.

**ಸಭಾಪತಿಯವರು:–** ಆಗುವುದಿಲ್ಲ, ಸರ್ಕಾರ ಒಪ್ಪಿಕೊಳ್ಳಬೇಕು.

**ಶ್ರೀ ಬಿ.ರಾಮಕೃಷ್ಣ:–** ಸೋಮವಾರಕ್ಕೆ ಎಂದು ಸರ್ಕಾರಕ್ಕೆ ಕೇಳಿಬಿಡಿ.

**ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು):–** ರಾಮಕೃಷ್ಣರವರೇ, ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಿ. ಸಹಕಾರ ಮಾಡಿ. ಮಾನ್ಯ ಸಭಾಪತಿಯವರೇ, it has far reaching effect. ಇದು ಸುದೀರ್ಘವಾದಂತಹ ತಿದ್ದುಪಡಿಯಲ್ಲ.

**ಸಭಾಪತಿಯವರು:–** ತಿದ್ದುಪಡಿಯನ್ನು ಓದದೆ ಚರ್ಚೆ ಮಾಡುತ್ತೀರಾ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಓದದೆ ಚರ್ಚೆ ಮಾಡಿ ಎಂದು ನಾನು ಹೇಳುವುದಿಲ್ಲ. ದಯಮಾಡಿ ಅರ್ಧ ಗಂಟೆ ಬೇಕಾದರೆ ಸದನವನ್ನು ಮುಂದೂಡಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ತಾವು ಹೇಳಿದ ಹಾಗೆ ಕಂದಾಯ ಇಲಾಖೆಗೆ ಸಂಬಂಧಪಟ್ಟ ವಿಧೇಯಕ ಬರುತ್ತಿದೆ. ಅದು ಏನು ಎಂದು ನಮಗೆ ಇನ್ನು ಗೊತ್ತಿಲ್ಲ. ಯಾರು ನೋಡಿಲ್ಲ. ಬಹಳ ಜನ ಸದಸ್ಯರು ಇಲ್ಲ. ಹಾಗಾಗಿ ಚರ್ಚೆ ಮಾಡದೆ ಹಾಗೆ ವಿಧೇಯಕವನ್ನು ಪಾಸ್ ಮಾಡಿಕೊಡಬೇಕು ಎಂದು ಹೇಳುವುದನ್ನು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ. ನಾವು ಖಂಡಿತವಾಗಿಯೂ ಅದರ ಬಗ್ಗೆ ಅಧ್ಯಯನ ಮಾಡಬೇಕು. ಕಂದಾಯ ಇಲಾಖೆಗೆ ಸಂಬಂಧಪಟ್ಟ ವಿಧೇಯಕವೆಂದರೆ ಗ್ರಾಮಾಂತರದಲ್ಲಿರುವಂತಹ ಬಡ ರೈತರಿಗೆ ಸಂಬಂಧಪಟ್ಟ ವಿಧೇಯಕವಿದು.

**ಶ್ರೀ ಎಸ್.ಆರ್.ಪಾಟೀಲ್:–** ಅವರ ಸಲುವಾಗಿಯೇ ನೀವು ಇಲ್ಲಿ ಇದ್ದೀರಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಸ್ವಲ್ಪವಾದರೂ ಚರ್ಚೆ ಮಾಡುವುದಕ್ಕೆ, ವಿಮರ್ಶೆ ಮಾಡುವುದಕ್ಕೆ ಅವಕಾಶ ಬೇಕು. ಎರಡು ವಿಧೇಯಕಗಳಿವೆ. ಈಗಾಗಲೇ ಏಳು ಗಂಟೆಯಾಗಿದೆ. ಇವರದ್ದು ಇನ್ನು ಮುಗಿದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮುಖ್ಯ ಸಚೇತಕರವರೇ, ಜಿಚಿಡಿ ಡಿಜಚಿಟಿಥಿಟಿರ ಜಜಿಜಿಜಥಿಣ ಇದೆ, ಬಹಳ ಮಹತ್ವವಾದ ವಿಧೇಯಕವಾಗಿದೆ.

**ಸಭಾಪತಿಯವರು:–** ಅಧ್ಯಯನ ಮಾಡುವುದಕ್ಕೂ ಸಮಯ ಕೊಡಲಿಲ್ಲವೆಂದು ನನ್ನನ್ನು ಯಾರು ಬೈಯ್ಯಬಾರದು. ನಾಳೆ ಯಾವುದೇ ಸದಸ್ಯರು ನನ್ನ ಮೇಲೆ ಈ ರೀತಿಯ ಮಾತುಗಳನ್ನು ಹೇಳಬಾರದು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಬೈಯ್ಯುವಂತಹ ಪ್ರಶ್ನೆ ಉದ್ಭವಿಸುವುದಿಲ್ಲ. ಇವತ್ತು ಶಿಕ್ಷಕರಿಗೆ ಸಂಬಂಧಪಟ್ಟ ವಿಧೇಯಕ ಬಂತು. ಬಂದ ತಕ್ಷಣ ಅದರ ಮೇಲೆ ಎಲ್ಲರೂ ಚರ್ಚೆ ಮಾಡಿದರು.

**ಸಭಾಪತಿಯವರು:–** ಮಧ್ಯಾಹ್ನ ಅವರಿಗೆ ಅದನ್ನು ಓದುವುದಕ್ಕೆ ಎರಡು ಗಂಟೆ ಸಮಯ ಸಿಕ್ಕಿತ್ತು.

**ಶ್ರೀ ಆರ್.ವಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಬಹುತೇಕ ಸದಸ್ಯರು ಚರ್ಚೆಯೇ ಬೇಡ ಪಾಸ್ ಮಾಡಿಕೊಡೋಣ ಎಂದು ಹೇಳಿ ಎರಡು ಗಂಟೆ ಸಮಯ ಚರ್ಚೆ ಮಾಡಿದರು.

**ಸಭಾಪತಿಯವರು:–** ಅವರು ಚರ್ಚೆ ಮಾಡಿದರು.

**ಶ್ರೀ ಆರ್.ವಿ.ವೆಂಕಟೇಶ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಇದು ಉದ್ದೇಶ ಪೂರ್ವಕವಾಗಿ ಆಗಿರುವುದಲ್ಲ. ಅನಿವಾರ್ಯವಾಗಿ ಆಗಿದೆ. ನಾವು ಈ ರೀತಿಯ ಸಮಸ್ಯೆಗಳನ್ನು ವಿರೋಧ ಪಕ್ಷದಲ್ಲಿದ್ದಾಗ ಮಾಡಿದ್ದೇವೆ. ಒಂದೇ ದಿವಸ 17 ವಿಧೇಯಕಗಳನ್ನು ತಂದು ಪಾಸ್ ಮಾಡಲಾಗಿದೆ. ಅದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಒಂದೊಂದು ಸಲ ಅನಿವಾರ್ಯವಾಗಿ ಆಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ರಾಜ್ಯದ ಜನತೆಯ ಮೇಲೆ ಅದರ ದುಷ್ಪರಿಣಾಮ ಆಗುವಂತಹ ಪರಿಸ್ಥಿತಿ ಬಂದಿದೆ. Amendment to Section 79(a)&(b) ಬಹಳ ಮಹತ್ವದ ತಿದ್ದುಪಡಿ.

**ಸಭಾಪತಿಯವರು:–** ಸದನವನ್ನು ನಾನು ಅರ್ಧ ಗಂಟೆಯವರೆಗೆ ಅಂದರೆ, 7:30 ಗಂಟೆಯವರೆಗೆ ಮುಂದೂಡಿದ್ದೇನೆ.

**(ಸಂಜೆ 6ಗಂಟೆ 58 ನಿಮಿಷಕ್ಕೆ ಅರ್ಧ ಗಂಟೆಯ ಅವಧಿಗೆ ಮುಂದೂಡಲ್ಪಟ್ಟ ಸದನವು ಪುನಃ ಸಂಜೆ 7 ಗಂಟೆ 40 ನಿಮಿಷಕ್ಕೆ ಪ್ರಾರಂಭವಾಯಿತು)**

**(ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಿದ್ದರು)**

**ಶ್ರೀ ಸಿ.ಎಚ್.ವಿಜಯಶಂಕರ:–** ಇಂದು ಖಾಸಗಿ ನಿರ್ಣಯ ಇದೆ. ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ

**ಸಭಾಪತಿಯವರು:–** ಆಯಿತು ಮುಂದಿನ ಯಾವುದಾದರೂ ಶುಕ್ರವಾರ ತಮಗೆ ಅವಕಾಶ ಕೊಡುತ್ತೇನೆ. ಸಭೆಯ ಗಮನಕ್ಕೆ ಒಂದು ವಿಷಯವನ್ನು ತರುವುದಕ್ಕೆ ಇಷ್ಟಪಡುತ್ತೇನೆ. ಕೆಳಮನೆಯಿಂದ ಎರಡು ವಿಧೇಯಕಗಳು ಅಲ್ಲಿಂದ ಪಾಸಾಗಿ ಬಂದಿರುವುದನ್ನು ತರುವುದಕ್ಕೆ ಸಭೆಯ ಗಮನಕ್ಕೆ ತಂದಿದ್ದೇನೆ. ಮಾನ್ಯ ಸಚಿವರು ಗಳು ಈ ವಿಧೇಯಕಗಳನ್ನು ನಾವು ಮಂಡಿಸುತ್ತೇವೆ. ಸಭೆ ಇದರ ಬಗ್ಗೆ ಚರ್ಚೆ ಮಾಡಿ ಒಪ್ಪಿಗೆ ಕೊಡಬೇಕೆಂದು ನನ್ನ ಎದುರಿಗೆ ಪ್ರಸ್ತಾಪ ಮಾಡಿದ್ದಾರೆ. ಆಗಲೇ ನಾನು ಸದನವನ್ನು ಮುಂದೂಡುವುದಕ್ಕೆ ಮುಂಚೆಯೇ ಹೇಳಿದ್ದೆನು. ನಮ್ಮ ಸದನದಲ್ಲಿ ಈ ರೀತಿಯ ತಾಪತ್ರಯ ಇದೆ. ವಿಧೇಯಕದ ಪ್ರತಿಗಳನ್ನು ಮೊದಲೇ ನೀಡಿರುವುದಿಲ್ಲ. ಈಗಷ್ಟೇ ವಿಧೇಯಕವನ್ನು ನೀಡುವುದರಿಂದ ಸದಸ್ಯರುಗಳು ಓದಿರುವುದಿಲ್ಲವೆಂಬ ಕಾರಣ ಇರುತ್ತದೆ It goes to the credit

of the Hon'ble Minister ಮತ್ತೆ ಅವರು ಒಂದು ಮಾತನ್ನು ಹೇಳಿದರು. ಸಭೆ ಒಪ್ಪಿದರೆ ಮಾತ್ರ ಆ ವಿಧೇಯಕದ ಬಗ್ಗೆ ಚರ್ಚೆ ಮಾಡೋಣ. ಸಭೆ ಇಲ್ಲ ಈ ಪದ್ಧತಿ ಒಳ್ಳೆಯದಲ್ಲಾ ಎಂದು ಇಚ್ಛೆ ಪಟ್ಟರೆ ಈ ವಿಧೇಯಕಗಳನ್ನು ನಮಗೆ ಯಾವಾಗ ಅವಕಾಶ ಸಿಗುತ್ತದೆ ಆಗ ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ ಎಂದು ಹೇಳಿದ್ದಾರೆ. ಎಲ್ಲರೂ ಒಟ್ಟಿಗೆ ಮಾತನಾಡುವುದು ಕಷ್ಟವಾಗುತ್ತದೆ. ವಿರೋಧ ಪಕ್ಷದ ಮೊದಲನೆಯ ಸಾಲಿನಲ್ಲಿ ಹಿರಿಯ ಸದಸ್ಯರು ಯಾರು ಇಲ್ಲ. ಇಷ್ಟು ಹೊತ್ತಿನ ಮೇಲೆ ವಿಧೇಯಕಗಳನ್ನು ತೆಗೆದುಕೊಳ್ಳಬೇಕಾಗಿದೆ. ವಿಧೇಯಕದ ಪ್ರತಿಗಳು ಮೊದಲೇ ಬಂದಿದ್ದ ರೆ ಆ ವಿಧೇಯಕಗಳನ್ನು ಯಾವಾಗ ಬೇಕಾದರೂ ತೆಗೆದುಕೊಳ್ಳಬಹುದಿತ್ತು. ವಿಧೇಯಕದ ಪ್ರತಿಗಳನ್ನೇ ಕೊಡದೆ ಅವರುಗಳನ್ನು ನೀವು ಇಲ್ಲಿಯೇ ಕುಳಿತುಕೊಳ್ಳಬೇಕಾಗಿತ್ತು ಎಂದು ಹೇಳುವುದು ಸರಿಯಾಗುವುದಿಲ್ಲ. ಇಂದಿನ ಅಜೆಂಡಾದಲ್ಲಿ ಸಹ ಈ ವಿಧೇಯಕಗಳನ್ನು ಹಾಕಿರುವುದಿಲ್ಲ. ಈ ಹಿನ್ನೆಲೆಯಲ್ಲಿ ವಿರೋಧ ಪಕ್ಷದ ಚೀಫ್ ವಿಪ್ ಅವರೋ ಇಲ್ಲವೇ ಇಲ್ಲಿ ಕುಳಿತಿರುವವರು ಯಾರಾದರೂ ತಮ್ಮ ಅಭಿಪ್ರಾಯಗಳನ್ನು ಹೇಳಿದರೆ ನಾನು ಮುಂದಕ್ಕೆ ಹೋಗುವುದಕ್ಕೆ ಇಷ್ಟಪಡುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಯಾವುದೇ ವಿಧೇಯಕವನ್ನು ಸದನದಲ್ಲಿ ದುರುದ್ದೇಶದಿಂದ introduce ಮಾಡುವುದಿಲ್ಲ. ಒಳ್ಳೆಯ ಉದ್ದೇಶದಿಂದ introduce ಮಾಡಲಾಗುತ್ತದೆ. ನಾವು ಇದೇನು Debating Forum ಎಂದು ಹೇಳುತ್ತೇವೆ ಇಲ್ಲಿ ಸಮಗ್ರವಾಗಿ ಚರ್ಚೆಯಾಗಬೇಕಾಗುತ್ತದೆ. ಯಾವ ಕಾರಣಕ್ಕಾಗಿ ಈ ವಿಧೇಯಕವನ್ನು ತರುತ್ತಿದ್ದೇವೆ ಏನು ಸಮಸ್ಯೆಯಾಗಿದೆ ಇದನ್ನು ಓದಿ, ನನಗೆ ಅದರ ಬಗ್ಗೆ ಅಭಿಪ್ರಾಯವನ್ನು ಹೇಳುವುದಕ್ಕೆ ಅವಕಾಶ ಬೇಕು. ತಾವು ಈ ವಿಧೇಯಕದ ಬಗ್ಗೆ ಉಲ್ಲೇಖ ಮಾಡಿದ ನಂತರ ಅರ್ಧ ಗಂಟೆಗೆ ಸದನ ಸ್ವಲ್ಪ ಕಾಲದ ಮಟ್ಟಿಗೆ ಮುಂದೂಡಲ್ಪಟ್ಟಿತು. ಆ ಸಮಯದಲ್ಲಿ ಕೂಡ ನಮಗೆ ಈ ವಿಧೇಯಕದ ಪ್ರತಿಗಳು ಸಿಗಲಿಲ್ಲ. ಈಗ ಟೇಬಲ್ ಮೇಲೆ ಇಟ್ಟಿದ್ದಾರೆ. ತಾವು ಮೆನೆಷನ್ ಮಾಡಿದ ಹಾಗೆ ಇಲ್ಲಿ ಹಿರಿಯ ಸದಸ್ಯರುಗಳು ಇಲ್ಲ. ಸಂಖ್ಯೆ ನೋಡಿದರೆ ಗೊತ್ತಾಗುತ್ತದೆ. ಈ ಬಾರಿ 23 ದಿವಸಗಳ ಕಾಲ ಸದನ ನಡೆದಿದೆ. ಬಹಳ ಮುಖ್ಯವಾದ ವಿಧೇಯಕಗಳು ಇದ್ದರೆ ಸದಸ್ಯರಿಗೆ ಓದುವುದಕ್ಕೆ ಅವಕಾಶವನ್ನು ಕೊಡಬೇಕೆಂದು ತಾವು ಎರಡು ಬಾರಿ ಸದನ ಸಲಹಾ ಸಮಿತಿಯಲ್ಲಿ ಉಲ್ಲೇಖ ಮಾಡಿದ್ದೀರಿ. ನಾವು ಈ ವಿಧೇಯಕದ ಮಹತ್ವವನ್ನು ಖಂಡಿತವಾಗಿ ಕಡೆಗಣಿಸುತ್ತಿಲ್ಲ. ಅಥವಾ ಈ ವಿಧೇಯಕವನ್ನು ಈಗ ಏಕೆ introduce ಮಾಡಿದ್ದೀರಿ ಎಂದು ಕೂಡ ಕೇಳುತ್ತಿಲ್ಲ ಆದರೆ ಸ್ವಲ್ಪ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಿದರೆ, ಅಥವಾ ಅದನ್ನು ವಿಮರ್ಶೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಿದರೆ, ಅದನ್ನು ಅರ್ಥ ಮಾಡಿಕೊಳ್ಳುವುದಕ್ಕೂ ಅವಕಾಶ ಕೊಡುವುದಿಲ್ಲವೆಂದು ಹೇಳಿದರೆ ಸರಿಯಲಾಗುವುದಿಲ್ಲ. ನನಗೆ ತಿಳಿದ ಹಾಗೆ ಎಲ್ಲೂ ಒಂದು ಕಡೆಯಲ್ಲಿ ಇನ್ನೂ 2–3 ವಿಧೆಯಕಗಳು ಇದೆ ಎಂದು ಹೇಳಿದರೆ, ಇದು ಸರಿಯಲ್ಲ. ಈ ಸದನದಲ್ಲಿ ತುಂಬಾ ಸಂದರ್ಭಗಳಲ್ಲಿ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಪ್ರಮುಖವಾಗಿ ಕಂದಾಯ ಇಲಾಖೆಯ ವಿಧೇಯಕ ಎಂದರೆ, ಅದು ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿರುವ ಜನ ಸಾಮಾನ್ಯರ ಬಗ್ಗೆ ಪರಿಣಾಮ ಬೀರುವಂತಹ ವಿಧೇಯಕವೇ ಆಗಿರುತ್ತದೆ. ನಾವು ಚರ್ಚೆಯೇ ಮಾಡುವುದಿಲ್ಲವೆಂದರೆ ಸರಿಯಾಗುವುದಿಲ್ಲ. ಇದರ ಬಗ್ಗೆ ವಿಮರ್ಶೆ ಮಾಡುವುದಕ್ಕೆ ಸಮಯ ಬೇಕು ಖಂಡಿತವಾಗಿ ಕಡೆಯ ಗಳಿಗೆಯಲ್ಲಿ ಟೇಬಲ್ ಅಜೆಂಡಾ ರೀತಿ ಕೊಡುವುದು ಸರಿಯಲ್ಲ. ಇದರ ಬಗ್ಗೆ ಮತ್ತೆ ಮತ್ತೆ ಚರ್ಚೆಯಾಗಿ ಮತ್ತೆ ಮತ್ತೆ ವಿಮರ್ಶೆಯಾಗಿದೆ. ಮತ್ತು ಯಾವುದೋ ಒಂದು ವಾರ ಅಥವಾ 4 ದಿನಗಳಿಗೆ ಅಧಿವೇಶನ ನಡೆದಿಲ್ಲ. 23 ದಿನಗಳ ಕಾಲ ಸರಿ ಸುಮಾರು ಒಂದು ತಿಂಗಳೂ ಅಧಿವೇಶನ ನಡೆದಿದೆ. ಈ ವಿಧೇಯಕ ಇಷ್ಟು ಪ್ರಮುಖವಾದ ಮತ್ತು ಅಗತ್ಯವಾಗಿ ಆಗಬೇಕು ಎಂದು ಅಂದುಕೊಂಡಿದ್ದರೆ, ಇಷ್ಟು ದಿವನ ಇದನ್ನು ಏಕೆ introduce ಮಾಡಲಿಲ್ಲ ಈ ಸಂಗತಿಯನ್ನು ಇಟ್ಟುಕೊಂಡು ದಯವಿಟ್ಟು ಇದನ್ನು ಮತ್ತೆ introduce ಮಾಡುವುದಕ್ಕೆ ಅವಕಾಶ ಕೊಡಿ. ನಾವು ಈ ವಿಧೇಯಕದ ಬಗ್ಗೆ ಚೆನ್ನಾಗಿ ಓದಿಕೊಂಡು ಬರಬೇಕು. ಇದು ಸರಿಯಲ್ಲ ಇದರ ಬಗ್ಗೆ ತಾವು ಅವಕಾಶವನ್ನು ಮಾಡಿಕೊಡಬಾದೆಂದು ವಿನಂತಿ.

**ಶ್ರೀ ಗೊ.ಮಧುಸೂದನ್:–** ಈ ವಿಧೇಯಕದ ಬಗ್ಗೆ...

**ಸಭಾಪತಿಯವರು:–** ದಯವಿಟ್ಟು ಈ ವಿಧೇಯಕದ ಬಗ್ಗೆ ಈಗ ಮಾತನಾಡಬೇಡಿ.

**ಶ್ರೀ ಗೊ.ಮಧುಸೂದನ್:–** ಬಿಲ್ introduction ಬಗ್ಗೆಯೇ ಮಾತನಾಡುತ್ತಿದ್ದೇನೆ.

**ಸಭಾಪತಿಯವರು:–** ಏಕೆಂದರೆ ಒಂದು ಸಲ ವಿಧೇಯಕದ ಬಗ್ಗೆ ಚರ್ಚೆ ಶುವಾದರೆ have to go achead.

**ಶ್ರೀ ಗೊ.ಮಧುಸೂದನ್:–** ಮಾನ್ಯ ಸಭಾಪತಿಯವರೆ, please don't presume. ಈ ವಿಧೇಯಕದ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಬಹಳ ಬಾರಿ ಚರ್ಚೆಯಾಗಿದೆ. ಅವರಲ್ಲೇ ಭಿನ್ನಾಭಿಪ್ರಾಯ ಇದ್ದು ಬಹಳ ನಿಧಾನ ಮಾಡಿಕೊಂಡು ಶಾಸಕಾಂಗ ಪಕ್ಷದ ಸಭೆಯಲ್ಲಿ ಕೂಡ ಚರ್ಚೆಯಾಗಿದೆ. ಎಲ್ಲಾ ಕಡೆ ಚರ್ಚೆಯಾಗಿದೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಸಚಿವ ಸಂಪುಟದಲ್ಲಿ ಚರ್ಚೆಯಾಗಿರುವ ಬಗ್ಗೆ ನಿಮಗೆ ಮಾಹಿತಿ ಎಲ್ಲಿಂದ ಬರುತ್ತದೆಯೋ ಗೊತ್ತಿಲ್ಲ. ಬರೀ ಇದೇ ಹೇಳುತ್ತಿದ್ದೀರಿ. Is he our cabinet Colleague?

## 11. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಕಾರ್ಯದರ್ಶಿಯವರು(ಕ.ವಿ.ಪ):–** ಮಾನ್ಯ ಸಭಾಪತಿಯವರೆ, ತಮ್ಮ ಅನುಮತಿಯೊಂದಿಗೆ ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2015ನೇ ಸಾಲಿನ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ ಹಾಗೂ ವಿಧಾನ ಸಭೇಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2015ನೇ ಸಾಲಿನ ಕರ್ನಾಟಕ ಭೂ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದಿಡುತ್ತೇನೆ.

**ಶ್ರೀ ವಿ. ಶ್ರೀನಿವಾಸ ಪ್ರಸಾದ್(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೆ, ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ಸಭೆಗೆ ಬಿಡುತ್ತೇನೆ. 2015ನೇ ಸಾಲಿನ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ ಹಾಗೂ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಬಹುಶಃ ನಾನು ಈ ವಿಧೇಯಕಗಳನ್ನು ಬೆಳಗಾಂ ಅಧಿವೇಶನದಲ್ಲಿಯೇ ತಂದಿದ್ದೇನು. ಅಧಿವೇಶನಗಳು ಹೇಗೆ ನಡೆಯುತ್ತಿದೆ ಎಂದು ತಮಗೆ ಗೊತ್ತಿದೆ. ಕೆಳ ಮನೆಯ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸ್ಪಷ್ಟವಾಗಿ ಹೇಳಿದ್ದೇನು. ತಮ್ಮ ಗಮನಕ್ಕೆ ತಂದಿದ್ದು ಮಸೂದೆಯನ್ನು ಮಂಡಿಸಿದ್ದೆನು. ಅಲ್ಲಿ ಇನ್ನೂ ಹೆಚ್ಚಿನ ಸಮಯ ಬೇಕು ಎಂದು ಹೇಳಿ ನೀವು ಅಲ್ಲಿ ಚರ್ಚೆ ಬೇಡ ಬೆಂಗಳೂರಿನಲ್ಲಿ ಮುಂದುವರಿಯತಕ್ಕಂತಹ ಅಧಿವೇಶನದಲ್ಲಿ ಇದನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದ್ದಿರಿ. ಅಧಿವೇಶನಗಳು ಯಾವ ರೀತಿ ನಡೆಯುತ್ತಿದೆ ಎಂದು ಎಲ್ಲರಿಗೂ ಗೊತ್ತಿದೆ. ಇದರ ಬಗ್ಗೆ ನಾನು ಹೇಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಬಹಳ ಸಣ್ಣದಾದ ಪ್ರಮುಖವಾದ ತಿದ್ದುಪಡಿಗಳನ್ನು ತಂದಿದ್ದೇನೆ. ತಾವೇ ಹೇಳಿದ ಹಾಗೆ ಈ ಭೂ ನೀತಿಯನ್ನು ಮಾಡುವುದಕ್ಕೆ ಸಚಿವ ಸಂಪುಟದ ಒಂದು ಉಪ ಸಮಿತಿ ಇದೆ. ಅದಕ್ಕೆ ನಾನು ಅಧ್ಯಕ್ಷನಾಗಿದ್ದೇನೆ. ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು ಹಆಗೂ ನಮ್ಮ ಸಚಿವ ಸಂಪುಟದ ಇತರೆ ಕೆಲವು ಸಹೊದ್ಯೋಗಿ ಸಚಿವರುಗಳು ಕೂಡ ಅದರಲ್ಲಿ ಸದಸ್ಯರಾಗಿದ್ದಾರೆ. ಇದರ ಬಗ್ಗೆ ಸಾಕಷ್ಟು ಚರ್ಚೆಗಳನ್ನು ಮಾಡಿದ್ದೇವೆ. ಅದರಲ್ಲು ಕೂಡ 79 ಎ ಅಂಡ್ ಬಿ ಇದೆ. 94 ಸಿ ಬಗ್ಗೆ ಈಗಾಗಲೇ ತಾವು ಮಾಡಿದ್ದೀರಿ ಒಂದು ಸಣ್ಣ ತಿದ್ದುಪಡಿಯನ್ನು ಅದಕ್ಕೆ ತೆಗೆದುಕೊಂಡು ಬಂದಿದ್ದೇವೆ. ಇದರ ಬಗ್ಗೆ ನೀವುಗಳು ಅಷ್ಟು ಆಳವಾಗಿ ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ಈಗಾಗಲೇ ಇದೆಲ್ಲವೂ ತಮಗೆ ಗೊತ್ತಿರುತ್ತದೆ. 79 ಎ ಅಂಡ್ ಬಿ ನಲ್ಲಿ ನಾನ್–ಅಗ್ರಿಕಲ್ಚರಿಸ್ಟ್ ಒಂದು ಬರಬೇಕೇ ಹೊರತು, ಬಹುಶಃ ನೀವು ಇದರ ಬಗ್ಗೆ ಚರ್ಚೆ ಮಾಡುವುದು ಏನೂ ಇಲ್ಲ. ಇನ್ನು ಉಳಿದದ್ದು ಅಗ್ರಕಲ್ಚರಿಸ್ಟ್ ಫ್ಯಾಮಿಲಿಯವರಿಗೆ 79 ಬಿ ನಲ್ಲಿ ಅವರಿಗೆ other than agriculture income. ಅನ್ನು 2 ಲಕ್ಷದಿಂದ 25 ಲಕ್ಷಕ್ಕೆ ಏರಿಸುವ ರೀತಿಯಲ್ಲಿ ಇದೆ. ಇದನ್ನು ಎಲ್ಲರೂ ಕೂಡ ಒಪ್ಪಿಕೊಳ್ಳುತ್ತಾರೆ. ಆದರೆ ನಾನ್–ಅಗ್ರಿಕಲ್ಚರಿಸ್ಟ್‌ಗೆ ಕೊಡುವಂತಹ ವಿಷಯದಲ್ಲಿ ಸಾಕಷ್ಟು ಜಿಜ್ಞಾಸೆ ಇದೆ. ಉಳಿದುದೆಲ್ಲವೂ ಕೂಡ ಬಹಳ ಚೆನ್ನಾಗಿ ಇದೆ. ಈ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ನಾವು ಏನು

ತಿದ್ದುಪಡಿಯನ್ನು ಇಲ್ಲಿ ತಂದಿದ್ದೇವೆ ಇದು ಬಹಳ ಪ್ರಮುಖವಾದದ್ದು. ತಾವು ಮನಸ್ಸು ಮಾಡಿದರೆ ಬಹಳಷ್ಟು ಜನ ತಾವು ಈಗಲೇ ಇದರ ಬಗ್ಗೆ ಚರ್ಚೆ ಮಾಡಿ ಮಾತನಾಡಿ ಇದಕ್ಕೆ ಒಪ್ಪಿಗೆಯನ್ನು ಕೊಟ್ಟರೆ ಒಳ್ಳೆಯದು. ಮತ್ತೆ ಸೆಪ್ಟೆಂಬರ್ ತಿಂಗಳಲ್ಲಿ ವಿಶೇಷ ಅಧಿವೇಶನ ನಡೆಯಬಹುದು. ಕೆಳಮನೆಯಲ್ಲಿ ಇದು ಆಗಿದೆ. ಬಹಳ ದಿವಸದಿಂದ ಆಗಬೇಕೆಂದು ಇದೆ. ತಾವು ಅವಕಾಶ ಕೊಟ್ಟು ಒಪ್ಪಿದರೆ ಮಾಡುತ್ತೇವೆ. ನಾನು ಈ ವಿಚಾರವನ್ನು ಮಾನ್ಯ ಸಭಾಪತಿಯವರಿಗೆ ಮತ್ತು ಸದನಕ್ಕೆ ಬಿಡುತ್ತೇನೆ.

**Mr.CHAIRMAN:-** I leave it to the House.

**ಶ್ರೀ ಬಿ. ರಾಮಕೃಷ್ಣ:–** ನಾವು ನಮ್ಮ ಪಕ್ಷದ ವತಿಯಿಂದ ಇದಕ್ಕೆ ಅವಕಾಶವನ್ನು ಮಾಡಿಕೊಡುತ್ತೇವೆ. ಸಮಯವನ್ನು ಹಾಳು ಮಾಡುವುದು ಬೇಡ. ವಿಧೇಯಕವನ್ನು ಮಂಡಿಸಲಿ ಎಂದು ನಾನು ಹೇಳಬಯಸುತ್ತೇನೆ.

**ಶ್ರೀ ಬಿ.ಜಿ. ಪುಟ್ಟಸ್ವಾಮಿ:–** ನಮ್ಮ ವಿರೋಧ ಪಕ್ಷದ ಮಾನ್ಯ ಮುಖ್ಯ ಸಚೇತಕರು ಸ್ವಲ್ಪ ಮರುಪರಿಶೀಲನೆ ಮಾಡಿ ಇದಕ್ಕೆ ಒಪ್ಪಿಗೆ ಕೊಟ್ಟರೆ ಎರಡೂ ವಿಧೇಯಕಗಳನ್ನು ಮುಗಿಸಬಹುದಾಗಿದೆ.

**ಶ್ರೀ ಬಿ. ರಾಮಕೃಷ್ಣ:–** ಸಮಯವನ್ನು ಹಾಳು ಮಾಡುವುದು ಬೇಡ. ವಿಧೇಯಕವನ್ನು ಮಂಡಿಸಲಿ.

**ಶ್ರೀ ಎಸ್.ಆರ್.ಪಾಟೀಲ್:–** ಧನ್ಯಾವಾದಗಳು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಇದೊಂದು ಬಿಲ್ಲಿಗೆ ಸಂಬಂಧಿಸಿದಂತೆ ಒಪ್ಪಿಗೆಯನ್ನು ಕೊಡಬಹುದು.

**12. ಶಾಸನ ರಚನೆ.**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕ, 2015 ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ವಿ. ಶ್ರೀನಿವಾಸ ಪ್ರಸಾದ್(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕ, 2015 ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಶ್ರೀ ವಿ. ಶ್ರೀನಿವಾಸ ಪ್ರಸಾದ್(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೆ, ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕ 2015 ರಲ್ಲಿ 79 ಎ ಅಂಡ್ ಬಿ ನಲ್ಲಿ ಅವಶ್ಯಕತೆ ಇದೆ ಎಂದು ತಿದ್ದುಪಡಿಯನ್ನು ತಿಂದಿದ್ದೇವೆ. ಇದರಲ್ಲಿ ಮುಖ್ಯವಾಗಿ 79 ಎ ನಲ್ಲಿ ಏನು ಇದೆ ಇದರಲ್ಲಿ 2 ಲಕ್ಷದಿಂದ 25 ಲಕ್ಷದವರೆಗೂ ಕೂಡ ಮಾಡಿದ್ದೇವೆ. ಇದು ಆದಾಯಕ್ಕೆ ಸಂಬಂಧಪಟ್ಟಂತೆ ಇರುತ್ತದೆ. 79 ಬಿ ಯಲ್ಲಿ ಕೃಷಿಕ ಅವಿಭಕ್ತ ಕುಟುಂಬ ಎಲ್ಲಾ ಸೇರಿಸಿ ಕೃಷಿಯೇತರ ವರಮಾನದಿಂದ ಬರತಕ್ಕಂತಾದ್ದು 2 ಲಕ್ಷ ಮೊದಲು ಇತ್ತು ಅದನ್ನು 25 ಲಕ್ಷದವರೆಗೂ ಕೂಡ ಮಾಡುತ್ತಿದ್ದೇವೆ. ನಾನ್–ಅಗ್ರಿಕಲ್ಚರಿಸ್ಟ್ ಅವರಿಗೂ ಕೂಡ 2 ಲಕ್ಷದಿಂದ 25 ಲಕ್ಷದವೆಗೂ ಮಾಡುತ್ತಿದ್ದೇವೆ. ಆದರೆ ಇವರು 80 ರಲ್ಲಿ ಅಸಿಸ್ಟೆಂಟ್ ಕಮೀಷನರ್ ಅವರಿಂದ ಅನುಮತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಕೆಲವು ಕಂಡೀಷನ್ಸ್ ಹಾಕಿದ್ದೇವೆ. ಆದರೆ ಅಸಿಸ್ಟೆಂಟ್ ಕಮೀಷನರ್ ಹಂತದಲ್ಲಿ ಈ ಕಾಯಿದೆಯನ್ನು ಬಹಳಷ್ಟು ದುರುಪಯೋಗ ಮಾಡಿಕೊಂಡಿದ್ದಾರೆ. ಆದ್ದರಿಂದ ನಾನು ಇದರ ಬಗ್ಗೆ ಉತ್ತರ ಕೊಡುವಾಗ ಹೇಳುತ್ತೇನೆ.

ಮಾನ್ಯ ಸಭಾಪತಿಯವರೆ, ಅದರ ಬಗ್ಗೆ ಎಷ್ಟೆಷ್ಟು ದೂರುಗಳು ಬಂದಿದ್ದವು, ಎಷ್ಟು ಪರಿಶೀಲನೆ ಮಾಡಿದ್ದೇವೆ, ಎಷ್ಟು ವಿಲೇವಾರಿ ಮಾಡಿದ್ದೆವೆ, ಎಷ್ಟು ಭೂಮಿಯನ್ನು ನಾವು ತೆಗೆದುಕೊಂಡಿದ್ದೇವೆ ಎನ್ನತಕ್ಕಂಥದ್ದನ್ನು ನಾನು ಉತ್ತರ ಕೊಡುವ ಸಮಯದಲ್ಲಿ ಹೇಳುತ್ತೇನೆ. ಆದ್ದರಿಂದ ಅದನ್ನು 80ರಲ್ಲಿ ತೆಗೆದುಕೊಂಡು ಬಂದು ಅದು ನಾನ್ ಅಗ್ರಿಕಲ್ಚರಿಸ್ಟ್ ಏನಿದೆ, 2 ರಿಂದ 25 ಲಕ್ಷ ಮಾಡಿದ ಮೇಲೆ Assistant

Commissioner ರಿಂದ ಜಿಲ್ಲಾಧಿಕಾರಿಗಳಿಗೆ ಕೊಡಬೇಕೆಂದು ಬಂದಿರತಕ್ಕಂಥದ್ದು. ಇನ್ನು ಮೂರನೆಯದು 63 ಸೀಲಿಂಗ್ ಲಿಮಿಟ್ ಇದೆ, 79 (ಬಿ)ದು exemption ಇರುವಂಥದ್ದು. 109ನಲ್ಲಿ ಬರತಕ್ಕಂಥದ್ದು ಇದೆ, ಜಿಲ್ಲಾಧಿಕಾರಿಗಳಿಗೆ ಇರತಕ್ಕಂಥ, ಸರ್ಕಾರಕ್ಕೆ ಇರತಕ್ಕಂಥ ಯೂನಿಟ್ಸ್ ಅನ್ನು ಡಬಲ್ ಮಾಡಿದ್ದೇವೆ. 4 ಕೊಡುವ ಬದಲು 8, 8 ಕೂಡುವ ಬದಲು 16 ಈ ರೀತಿಯಾಗಿರತಕ್ಕಂಥದ್ದನ್ನು ನಾನು ಮಾಡಿದ್ದೇನೆ. ಈ ಮೂರು ತಿದ್ದುಪಡಿಗಳನ್ನು ತಂದಿರತಕ್ಕಂಥದ್ದು. ಬಹುತೇಕವಾಗಿ ತಾವು ಪ್ರಸ್ತಾಪ ಮಾಡತಕ್ಕಂಥದ್ದು 79 ಬಿ ನಲ್ಲಿ ಬರತಕ್ಕಂಥದ್ದು 79 ಗಿ ನಲ್ಲಿ ಬಹುತೇಕವಾಗಿ ಕೆಳಮನೆಯಲ್ಲಿ ಚರ್ಚೆಯಾದಂಥದ್ದು ಕೃಷಿಯೇತರರಿಗೆ 25 ಲಕ್ಷ ರೂಪಾಯಿ ಮಾಡಿದ್ದೀರಲ್ಲ ಅದರ ಸಾಧಕ ಬಾಧಕಗಳು ಏನು, ಅದನ್ನು ಕೊಡಬಹುದೇ, ಬಿಡಬಹುದೇ ಎನ್ನತಕ್ಕಂಥ ಚರ್ಚೆಗಳು ನಡೆದಿವೆ ಹಾಗೂ ಆ ಸದಸ್ಯರುಗಳಿಂದ ಒಪ್ಪಿಗೆ ಪಡೆದು ಬಂದಿದ್ದೇವೆ. ತಾವು ಕೂಡ ಅದರ ಬಗ್ಗೆ ತಮ್ಮ ಅಭಿಪ್ರಯಗಳನ್ನು ಸಲಹೆಗಳನ್ನು ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಅಶ್ವತ್ ನಾರಾಯಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕ, 2015 ಅನ್ನು ಕಂದಾಯ ಸಚಿವರು ಸದನದಲ್ಲಿ ಮಂಡಿಸಿದ್ದಾರೆ. ಕಳೆದವಾರ ನಾನು 79 ಎ ಮತ್ತು 79 ಬಿ ಇದರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ. ಆ ಸಂದರ್ಭದಲ್ಲಿ 2 ಲಕ್ಷ ರೂಪಾಯಿಗಳಿಂದ 25 ಲಕ್ಷ ರೂಪಾಯಿಗಳ ವರೆಗೆ ಈ ಅಧಿವೇಶನದಲ್ಲಿಯೇ ತರುತ್ತೇವೆಂದು ಹೇಳಿದ್ದರು. ಆ ಪ್ರಕಾರ ವಿಧೇಯಕವನ್ನು ತಂದಿದ್ದಾರೆ. ಇದು 1/3/1973 ನಲ್ಲಿ ಅಂದರೆ 42–43 ವರ್ಷಗಳ ಹಿಂದೆ ತಂದಂಥ ಕಾನೂನು. ಅಂತು ಒಂದು ಬದಲಾವಣೆ ತರುತ್ತಿದ್ದೀರಿ. ಸಂತೋಷ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನಮ್ಮ ಸರ್ಕಾರ ಇದ್ದಾಗ ಕೂಡ ಇದನ್ನು ಬದಲಾವಣೆ ಮಾಡಬೇಕೆಂದು ಚರ್ಚೆಯಾದಾದ ಕೆಲವೊಂದು ಸಂದರ್ಭದಲ್ಲಿ ಇದರ ದುರುಪಯೋಗವನ್ನು ರೈತ ಅಥವಾ ಭೂಮಿ ಖರೀದಿ ಮಾಡುವಂಥವನ್ನು ಮಾಡುತ್ತಿಲ್ಲವೆಂದು ಚರ್ಚೆಯಾಗಿದೆ. ಇದರ ದುಪಯೋಗ ಅಧಿಕಾರಿ ವರ್ಗದಲ್ಲಿ ಆಗುತ್ತಿದೆ. ನಾನು ಆಗ ಎಷ್ಟು ಸಾವಿರ ಕೇಸಸ್ ಇದೆ ಎಂದು ಪ್ರಶ್ನೆ ಕೇಳಿದಾಗ 34,000 ಕೇಸಸ್ ಇದೆ ಎಂದು ತಾವು ಉತ್ತರ ಕೊಟ್ಟಿದ್ದೀರಿ. ಅದರಲ್ಲಿ 4–7ಸಾವಿರ ಜಮೀನನ್ನು ವಾಪಸ್ಸು ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ. ಇನ್ನು 14,000 ಕೇಸಸ್ ಪೆಂಡಿಂಗ್ ಇದೆ ಎನ್ನತಕ್ಕಂಥದ್ದನ್ನು ತಾವು ಹೇಳಿದ್ದೀರಿ. ಅವರು ಮಂತ್ರಿಗಳಾದ ನಂತರ ಇದಕ್ಕೆ ಪ್ರಯತ್ನ ಪಟ್ಟಿದ್ದಾರೆ ಅದು ನನಗೆ ಖುಷಿ ಇದೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. 1995 ರಿಂದ ರೂಪಾಯಿ ಮೌಲ್ಯದ ಪರಿಷ್ಕರಣೆಗಳನ್ನು ಪರಿಗಣನೆಗೆ ತೆಗೆದುಕೊಂಡು ಯಾವುದೇ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಕೃಷಿ ಭೂಮಿಗಳನ್ನು ಹೊರತು ಪಡಿಸಿದ ಮೂಲಗಳಂದ ವಾರ್ಷಿಕ ಆದಾಯವನ್ನು 2 ಲಕ್ಷದಿಂದ 25 ಲಕ್ಷಕ್ಕೆ ಭೂಮಿಗಳನ್ನು ಎಂದು ಇದರಲ್ಲಿ ಇದೆ. ನೀವು ರೂಪಾಯಿ ಮೌಲ್ಯದ ಮೇಲೆ ಇದನ್ನು ಕನ್ಸಿಡರ್ ಮಾಡುವುದಕ್ಕೆ ಹೊಟಿದ್ದೀರಿ. ನೀವು ಜಾಸ್ತಿ ಹಿಂದೆ ಹೋಗುವುದು ಬೇಡ ಮಾನ್ಯ ಎಸ್.ಎಂ.ಕೃಷ್ಣಾರವರು ಮುಖ್ಯಮಂತ್ರಿಗಳಾದ ನಂತರ 2000 ದಿಂದ ಈಚೆಗೆ ಭೂಮಿಯ ಮೌಲ್ಯವನ್ನು ನೋಡಿದರೆ 1–2–3 ಪಟ್ಟು ಅಲ್ಲ ಸುಮಾರು 300 ಪಟ್ಟು ಜಾಸ್ತಿಯಾಗಿದೆ. ನಾನು 2005 ರಲ್ಲಿ ತೆಗೆದುಕೊಂಡಿರತಕ್ಕಂಥ ಜಮೀನಿಗೆ ಸರ್ಕಾರ ಇವೊತ್ತು ಒಂದೂವರೆ ಕೋಟಿ ರೂಪಾಯಿ Guidance Value fix ಮಾಡಿದೆ. ಆ ಜಮೀನನ್ನು ನಾನು 2005ರಲ್ಲಿ ಮೂರುವರೆ ಲಕ್ಷ ರೂಪಾಯಿಗೆ ಖರೀದಿ ಮಾಡಿದ್ದೇನೆ. ಕೆಂಪೇಗೌಡ ಬಡಾವಣೆಗೆ 80ಲಕ್ಷ ರೂಪಾಯಿ ಸರ್ಕಾರವೇ ಘೋಷಣೆ ಮಾಡಿದೆ. ಈ ರೀತಿ ನಡೆಯುವಂಥ revenue transaction, real estate transaction ಜಾಗದಲ್ಲಿ ವಿಶೇಷವಾಗಿ ನೀರಾವರಿ ಇರತಕ್ಕಂಥ ಜಮೀನುಗಳು ಇವೊತ್ತು ಮೂರು ಪಟ್ಟು ನಾಲ್ಕು ಪಟ್ಟು ಜಾಸ್ತಿಯಾಗಿದೆ. ನೀವು ರೂಪಾಯಿ ಮೌಲ್ಯದ ಬೆಲೆ ಆಧಾರದ ಮೇಲೆ ಜಾಸ್ತಿ ಮಾಡುವ ಬದಲು S.R.Value ಏನು ಜಾಸ್ತಿ ಮಾಡಿದ್ದೀರಿ, S.R.Value ಆಧಾರದ ಮೇಲೆ ನೀವು ಇದನ್ನು ಜಾಸ್ತಿ ಮಾಡಿಕೊಂಡು ಹೋದರೆ ಅದರಿಂದ ಸರ್ಕಾರಕ್ಕೆ ಆದಾಯ ಬರುತ್ತದೆ. ನೀವು ಎಲ್ಲರು ಖರೀದಿ ಮಾಡುತ್ತಾರೆ, ಹೊರ ರಾಜ್ಯದಿಂದ ಬಂದು ಖರೀದಿ ಮಾಡುತ್ತಾರೆ, ಕೃಷಿಯೇತರರು ಖರೀದಿ ಮಾಡುತ್ತಾರೆ ಅದಕ್ಕೋಸ್ಕರ ಈ ಕಂಡಿಷನ್ ಅನ್ನು ತರುತ್ತಿದ್ದೇವೆಂದು ಹೇಳಬಹುದು. ಸರ್ಕಾರಕ್ಕೆ ಬರತಕ್ಕಂಥ ಅದಾಯ ಮೂಲದಲ್ಲಿ ರೆವಿನ್ಯೂ ಮೂಲ ಕೂಡ ಒಂದು. ಆದ್ದರಿಂದ ನೀವು ಲ್ಯಾಂಡ್ ಸೀಲಿಂಗ್ ಲಿಮಿಟ್ಸ್ ಒಂದು ಕಡೆ ಇಡಿ. valuation ನೀವು 2 ಲಕ್ಷದಿಂದ 25 ಲಕ್ಷ ಏನು ಜಾಸ್ತಿ ಮಾಡಿದ್ದೀರಿ ಅದನ್ನು ಇನ್ನು ಸ್ವಲ್ಪ ಜಾಸ್ತಿ ಮಾಡಿ.

ಅಗ್ರಿಕಲ್ಚರ್ ಸ್ಟೇಟಸ್ ಬಿಟ್ಟು ಯಾವುದೇ ಕಾರಣಕ್ಕೂ ನೀವು ಪರವಾನಿಗೆ ಕೊಡಬೇಡಿ. ಕೃಷಿ ಭೂಮಿ ಕೃಷಿ ಭೂಮಿಯಾಗಿಯೇ ಉಳಿಯುತ್ತದೆ. Change of land use ಗೆ ನೀವು ಪರ್ಮಿಶನ್ ಕೊಡಬೇಡಿ. ಅಲ್ಲಿ ನೀವು ರೆಸ್ಟ್ರಿಕ್ಷನ್ ಇಟ್ಟಾಗ ಯಾವುದೇ ಕಾರಣಕ್ಕೆ ರಿಯಲ್ ಎಸ್ಟೇಟ್‌ನವರಾಗಲಿ, industrialist ನವರಾಗಲಿ ರೈತರಿಗೆ ಮೋಸ ಮಾಡುವುದಿಲ್ಲ. ಕೃಷಿ ಭೂಮಿ ಕೃಷಿ ಭೂಮಿಯಾಗಿಯೇ ಉಳಿಯುತ್ತದೆ. ಹೊರ ರಾಜ್ಯದಿಂದ ಬಂದು ಯಾರು ಭೂಮಿಯನ್ನು ಖರೀದಿ ಮಾಡುವುದಿಲ್ಲ. ರಿಯಲ್ ಎಸ್ಟೇಟ್‌ನವರು ಯಾರೂ ಖರೀದಿ ಮಾಡುವುದಿಲ್ಲ. ಇದು ಬಹಳ ಗಂಭೀರವಾಗಿರತಕ್ಕಂಥದ್ದು. ಇದರಿಂದ ಸರ್ಕಾರಕ್ಕೆ ಆದಾಯ ಬರುತ್ತದೆ. ನೀವು ಇವೊತ್ತು ಚಾಮರಾಜನಗರ, ಮೈಸೂರು, ಮಂಡ್ಯ ಯಾವುದೇ ಪ್ರದೇಶ ತೆಗೆದುಕೊಳ್ಳಿ ಇವೊತ್ತು ಭೂಮಿಯ ಬೆಲೆ ಕಳೆದ 2000ದಿಂದ 2015ರೊಳಗೆ 100–200–300ಪಟ್ಟು S.R.Value ಜಾಸ್ತಿಯಾಗಿದೆ. ನೀವೆ ಒಂದು ವರ್ಷದಲ್ಲಿ ಮೂರು ಬಾರಿ ಜಾಸ್ತಿ ಮಾಡಿದ್ದೀರಿ. S.R.Value ಅನ್ನು ನೀವು ಏನು ಜಾಸ್ತಿ ಮಾಡಿದ್ದೀರಿ ಆ ಸ್ಟೇಟಸ್ ಮೇಲೆ ಜಾಸ್ತಿ ಮಾಡಿದರೆ ಸರ್ಕಾರಕ್ಕೆ ಆದಾಯ ಬರುತ್ತದೆ, stamp value ನಲ್ಲಿ ಯಾರೂ ಕೂಡ ಮೋಸ ಮಾಡುವುದಕ್ಕೆ ಪ್ರಯತ್ನ ಪಡುವುದಿಲ್ಲ. ಏನು actual cost ಇರುತ್ತದೆ ಆ ಪ್ರಕಾರ ಸ್ಟ್ಯಾಂಪ್ ಡ್ಯೂಟಿ ಕಟ್ಟುತ್ತಾನೆ ತೆಗೆದುಕೊಳ್ಳುತ್ತಾನೆ. ಇಲ್ಲಿ valuation ನೀವು 25ಲಕ್ಷ ಮಾಡುತ್ತೀರಿ, ಜಮೀನು ಬೆಲೆ ಒಂದು ಕೋಟಿ ಒಂದುವರೆ ಕೋಟಿ ಇಡುತ್ತೀರಿ, ಇಲ್ಲಿ Market Value  ಬೇರೆ ಇರುತ್ತದೆ, S.R.Value ಬೇರೆ ಇರುತ್ತದೆ. ದುಡ್ಡು ಕೊಟ್ಟು ಖರೀದಿ ಮಾಡುವವನು S.R.Value ಮೇಲೆ ಖರೀದಿ ಮಾಡುವುದಿಲ್ಲ. ಮಾರುಕಟ್ಟೆ ವ್ಯಾಲ್ಯು ಮೇಲೆ ಖರೀದಿ ಮಾಡುತ್ತಾನೆ. ಉದಾಹರಣೆಗೆ ನೀವು ನೋಡಿದ ಮೈಸೂರಿನಲ್ಲಿ ಇವೊತ್ತು ಯಾವ ಭೂಮಿಯ ಬೆಲೆ ಇದೆ. ಆದ್ದರಿಂದ 25 ಲಕ್ಷ ಇರುವಂಥದ್ದನ್ನು 50 ಲಕ್ಷ ಹೀಗೆ S.R.Value ಮೇಲೆ ಜಾಸ್ತಿ ಮಾಡಿ. ಬೇಕಾದರೆ ಅದಕ್ಕೆ percentage ಇಡಿ, ಅದಕ್ಕೆ 30 ಪರ್ಸೆಂಟ್, 50 ಪರ್ಸೆಂಟ್, 75 ಪರ್ಸೆಂಟ್ ಇಡಬೇಕಾ ಎಂದು ನಿಗದಿ ಮಾಡಿ S.R.Value ಮೇಲೆ percentage fix ಮಾಡಿದರೆ ಯಾವುದೇ ರೀತಿಯಲ್ಲಿ ಮೋಸ ಆಗುವುದಿಲ್ಲ. ಆದರಿಂದ ಸರ್ಕಾರಕ್ಕೆ ಆದಾಯ ಬರುತ್ತದೆ, ರೈತರ ಜಮೀನು ಜನೀನಾಗಿಯೇ ಉಳಿಯುತ್ತದೆ. ಇನ್ನು ನಾನು ಆಗಲೇ ಹೇಳಿದ ಹಾಗೆ ಲ್ಯಾಂಡ್ ಸ್ಟೇಟಸ್ ಅನ್ನು ಬದಲಾವಣೆ ಮಾಡಲು ಪರವಾನಿಗೆಯನ್ನು ಕೊಡಬೇಡಿ. ಅದರಿಂದ ನಿಮ್ಮ ಉದ್ದೇಶ ಚೆನ್ನಾಗಿರುತ್ತದೆ. ಸರ್ಕಾರಕ್ಕೆ ಆದಾಯ ಕೂಡ ಬರುತ್ತದೆ. ಈ ನಿಟ್ಟಿನಲ್ಲಿ ನೀವು ಬದಲಾವಣೆ ಮಾಡಬೇಕೆನ್ನುವುದು ನನ್ನ ಉದ್ದೇಶ.

ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೆ, ನೀವು ಕೃಷಿಯೇತರರು ಕೃಷಿ ಭೂಮಿಯನ್ನು ಖರೀದಿ ಮಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದೀರಿ ಮತ್ತು ಅದರ ಇನ್ಕಂ ಲಿಮಿಟ್ಟ ಅನ್ನು 25 ಲಕ್ಷ ರೂಪಾಯಿಗೆ ಏರಿಸಿದ್ದೀರಿ. ಅದು ನಿಮ್ಮ ಉದ್ದೇಶ ಎಂದು ಹೇಳಿದ್ದೀರಿ. ಹಿಂದೆ ಅವರ ಖಾಸಗಿ ನಿರ್ಣಯದಲ್ಲೂ ಕೂಡ ಕೃಷಿ ಭೂಮಿ ಪರಿವರ್ತನೆಯಾಗಿ ಎಲ್ಲೋ ಹೋಗುತ್ತಿರುವ ಬಗ್ಗೆ ಅವರು ಉಲ್ಲೇಖ ಮಾಡಿದ್ದಾರೆ. ಆದರೆ ಇವೊತ್ತು ವಾಸ್ತವತೆ ಏನಿದೆ ಎಂದು ಮಾನ್ಯ ಅಶ್ವತ್‌ನಾರಾಯಣರವರು ಉಲ್ಲೇಖ ಮಾಡಿದರು. ಇಲ್ಲಿ ಇಪ್ಪತ್ತೈದು ಲಕ್ಷ ರೂಪಾಯಿ ಯಾವ ಫ್ಯಾಮಿಲಿಯ Annual Income ಇದೆ ಅವರು ಕೃಷಿ ಭೂಮಿಯನ್ನು ಖರೀದಿ ಮಾಡಬಹುದೆಂದು ತಾವು ಉಲ್ಲೇಖ ಮಾಡಿದ್ದೀರಿ. ಅವನು ಏತಕ್ಕಾಗಿ ಅವರು ಕೃಷಿ ಭೂಮಿ ಖರೀದಿ ಮಾಡುತ್ತಾನೆ. ಅವನ ಉದ್ದೇಶವೇನಿದೆ? ಅವನು ಅಲ್ಲಿ ಹೋಗಿ ಕೃಷಿ ಮಾಡುತ್ತಾನೆಯೇ? ಅವನು ತೆಗೆದುಕೊಂಡಥ ಭೂಮಿಯಲ್ಲಿ ಅವನು ಕೃಷಿಯೇ ಮಾಡುತ್ತಾನೆ. ಎನ್ನುವುದಕ್ಕೆ ಏನು provision ಇಟ್ಟುಕೊಂಡಿದ್ದೀರಿ? ನಾಳೆ ಅವನು ಖರೀದಿ ಮಾಡಿದ ಮೇಲೆ ಬೇರೆ ಬೇರೆ ದಾರಿಗಳಿಂದ ಆ ಭೂಮಿಯನ್ನು ಕನ್ವರ್ಟ್ ಮಾಡಿ ಬೇರೆ ಬೇರೆ ಕಮರ್ಶಿಯಲ್ ಯೂಸ್‌ಗೆ ಕನ್ವರ್ಟ್ ಮಾಡಿದರೆ ಅವರಿಗೆ ಕ್ರಮ ತೆಗೆದುಕೊಳ್ಳಲು ಇದರಲ್ಲಿ ಏನಾದರು provision ಇದೆಯೇ? ಕೃಷಿ ಭಮಿಯನ್ನು ಕೃಷಿ ಭೂಮಿಯನ್ನು ಇಟ್ಟುಕೊಳ್ಳುವುದರ ಬಗ್ಗೆ ಇದ್ದರೆ ಅದಕ್ಕೆ ಸ್ವಾಗತ ಇದೆ. ಖಂಡಿತವಾಗಿಯೂ ಅದರ ಬಗ್ಗೆ ಎರಡು ಮಾತಿಲ್ಲ. ಆ ಇನ್ಕಂ ಲಿಮಿಟ್ ಅನ್ನು 25 ಲಕ್ಷಕ್ಕೆ ಏರಿಸಿದ್ದೀರಿ. ಆದರೆ ಅವನು ಅಲ್ಲಿ ಹೋಗಿಬಿಟ್ಟು ಕೃಷಿ ಭೂಮಿಯನ್ನು ಖರೀದಿ ಮಾಡಲಿಕ್ಕೆ ಇರುವ ಅವಕಾಶವನ್ನು ಉಪಯೋಗ ಮಾಡಿಕೊಂಡು ಮತ್ತೆ ಯಾವುದೋ ದಾರಿಯಲ್ಲಿ ಬಂದು ಬಿಟ್ಟು ಅದನ್ನು ಕನ್ವರ್ಟ್ ಮಾಡಿಕೊಮಡು ಕೃಷಿಯೇತರ ಕೆಲಸಕ್ಕಾಗಿ ಉಪಯೋಗ ಮಾಡಿಕೊಂಡರೆ ಅದಕ್ಕೇನಾದು ಇದಯೇ? ನಾನು

ಇದನ್ನು ಪೂರ್ತಿ ಓದಲಿಕ್ಕೆ ಆಗಿಲ್ಲ. ಈ ಸಂದೇಹ ಬಂದಿದೆ. ಅದನ್ನು ತಾವು ಕ್ಲ್ಯಾರಿಫೈ ಮಡಬೇಕೆಂದು ವಿನಂತಿ ಮಾಡುತ್ತೇನೆ.

**(8–00 ಗಂಟೆ)**

ಆದರೆ ಆತ ಕೃಷಿ ಭೂಮಿ ಖರೀದಿಗೆ ಇರುವ ಅವಕಾಶವನ್ನು ಉಪಯೋಗ ಮಾಡಿಕೊಂಡು ಮತ್ತೆ ಯಾವುದೋ ದಾರಿಯಲ್ಲಿ ಬಂದು ಅದನ್ನು ಕನ್ವರ್ಟ್ ಮಾಡಿಕೊಂಡು ಕೃಷಿಯೇತರ ಉದ್ದೇಶಕ್ಕೆ ಉಪಯೋಗ ಮಾಡಿದರೆ ಅದಕ್ಕೆ ಏನಾದರೂ ಕ್ಲಾಜ್ ಹಾಕಲಾಗಿದೆಯೇ? ಏಕೆಂದರೆ ಈ ವಿಧೇಯಕವನ್ನು ಪೂರ್ತಿಯಾಗಿ ಓದುವುದಕ್ಕಾಗಲಿಲ್ಲ. ಹಾಗಾಗಿ ಈ ಸಂದೇಶ ಬಂದಿರುವುದರಿಂದ ಇದರ ಬಗ್ಗೆ ದಯಮಾಡಿ ಸ್ಪಷ್ಟೀಕರಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಸಿ.ಹೆಚ್.ವಿಜಯ ಶಂಕರ:–** ಸನ್ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಈ ಮಸೂದೆಗೆ ಸಂಬಂಧಿಸಿದಂತೆ ನನಗೆ ಕೆಲವು ಸಣ್ಣಪುಟ್ಟ ಗೊಂದಲಗಳಿವೆ. ಈ ಹಿಂದೆ ಈ ವಿಷಯಕ್ಕೆ ಸಂಬಂಧಿಸಿದಂತೆ ನಾನು ಒಂದು ಖಾಸಗಿ ಮಸೂದೆಯನ್ನು ಮಂಡಿಸಿ ಮಾತನಾಡಿದ್ದೆ. ಈ ಮಸೂದೆಯಲ್ಲಿ 'ಕೈಗಾರಿಕಾ ಅಭಿವೃದ್ಧಿಗಾಗಿ ಬಳಸಲಾದ 20 ಯುನಿಟ್‌ಗಳಿಗಿಂತ ಹೆಚ್ಚಿಲ್ಲದ ವಿಸ್ತೀರ್ಣ...' ಎಂದು ಹೇಳಲಾಗಿದೆ. ನಾನು ತಮ್ಮಲ್ಲಿ ಪ್ರಾರ್ಥಿಸುವುದೇನೆಂದರೆ, ಕೃಷಿ ಭೂಮಿ ಕೃಷಿ ಭೂಮಿಯಾಗಿಯೇ ಉಳಿಯಬೇಕು. ನೀವು 2 ಲಕ್ಷದಿಂದ 25 ಲಕ್ಷಕ್ಕೆ ತೆಗೆದುಕೊಂಡು ಹೋಗುತ್ತೀರೋ, 50 ಲಕ್ಷಕ್ಕೆ ತೆಗೆದುಕೊಂಡು ಹೋಗುತ್ತೀರೋ, ಒಂದು ಕೋಟಿಗೆ ತೆಗೆದುಕೊಂಡು ಹೋಗುತ್ತೀರೋ ಆ ಬಗ್ಗೆ ನಮ್ಮ ವಿರೋಧವೇನೂ ಇಲ್ಲ. ಆದರೆ ಕೃಷಿ ಭೂಮಿಯನ್ನು ಕೃಷಿಗಾಗಿಯೇ ಬಳಸುತ್ತೇವೆ; ಕೃಷಿಯನ್ನು ಬಿಟ್ಟು ಬೇರೆ ಉದ್ದೇಶಕ್ಕೆ ಅದನ್ನು ಬಳಸುವುದಿಲ್ಲ; ಕೃಷಿ ಚಟುವಟಿಕೆಯನ್ನು ಬಿಟ್ಟು ಬೇರೆ ಚಟುವಟಿಕೆಗಳನ್ನು ಮಾಡುವಂತಹ ಸಮಯದಲ್ಲಿ ಆ ಭೂಮಿ ಮೇಲೆ ನಮಗೆ ಅಧಿಕಾರ ಇಲ್ಲ, ಹಾಗೇನಾದರೂ ಆದಲ್ಲಿ ಸರ್ಕಾರ ಅದರ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಅಧಿಕಾರವನ್ನು ಹೊಂದಿದೆ ಎನ್ನುವಂತಹ ಹಿನ್ನೆಲೆಯಲ್ಲಿ ಕೃಷಿ ಭೂಮಿಯನ್ನು ಕೃಷಿಗಾಗಿ ಉಳಿಸುವುದಾದರೆ; ಕೃಷಿ ಭೂಮಿಯನ್ನು ಕೃಷಿಗಾಗಿ ಬಳಸಲಿಕ್ಕೆ ನೀವು ಅಧಿಕಾರ ಕೊಡುವುದಾದರೆ; ಈಗಿರುವಂತಹ ನಿಯಮಗಳಲ್ಲಿ ಕೃಷಿಗಾಗಿ ನಾನು ಭೂಮಿಯನ್ನು ಕೊಳ್ಳುತ್ತೇನೆ ಎನ್ನುವಂತಹ ವ್ಯಕ್ತಿ ಯಾರಿದ್ದಾರೆ ಆತನಿಗೆ ಹಣಕಾಸಿನ 2 ಲಕ್ಷದ ಇತಿಮಿತಿ ಅಡ್ಡಿಯಾಗಿದ್ದರೆ ನಿಶ್ಚಿತವಾಗಿಯೂ ಅದನ್ನು ತೆಗೆದುಹಾಕಿ. ಅದನ್ನು ನಾವು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇವೆ.

ಇನ್ನು ಎರಡನೆಯ ವಿಚಾರವೆಂದರೆ, ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಭೂಸ್ವಾಧೀನಗೊಳಿಸುವಾಗ ಕೃಷಿಯ ಉದ್ದೇಶಕ್ಕಾಗಿ ಮಾತ್ರ ಅದನ್ನು ಬಳಸಬೇಕು; ಕೃಷಿಯೇತರ ಉದ್ದೇಶಕ್ಕೋಸ್ಕರ ಬಳಸಲಿಕ್ಕೆ ಅವಕಾಶ ಕೊಡುವಾಗ ಇರುವಂತಹ ನಿಯಮಗಳು ತಿದ್ದುಪಡಿಯಾಗಬೇಕು ಎಂದು ಹಿಂದೊಮ್ಮೆ ನಾನು ಬಹಳ ಸ್ಪಷ್ಟವಾಗಿ ತಮ್ಮಲ್ಲಿ ಒಂದು ಮನವಿಯನ್ನು ಮಾಡಿದ್ದೆ. ಆ ಸಂದರ್ಭದಲ್ಲಿ ಕೃಷಿ ಭೂಮಿ ಬಳಕೆಯ ಸಮಗ್ರ ನಿಯಮ ಜಾರಿಗೆ ಬರಬೇಕೆಂದು ಕೂಡ ನಾನು ಒಂದು ಮನವಿ ಮಾಡಿದ್ದೆ. ಎರಡನೆಯ ಮನವಿ ಎಂದರೆ, ...

**ಸಭಾಪತಿಯವರು:–** ಸರ್ಕಾರ ತಂದಿರುವಂತಹ ಈ ವಿಧೇಯಕದ ವಿಚಾರದಲ್ಲಿ ಏನಾಗಬೇಕೆಂಬುದರ ಬಗ್ಗೆಯಷ್ಟೇ ತಾವೀಗ ಮಾತನಾಡಿ. ಇತರೆ ಸಾಮಾನ್ಯ ವಿಚಾರಗಳ ಬಗ್ಗೆ ಈಗ ಚರ್ಚೆ ಮಾಡುವುದು ಬೇಡ, what is the change you want in this Bill?

**ಶ್ರೀ ಸಿ.ಹೆಚ್.ವಿಜಯ ಶಂಕರ:–** ಈ ವಿಧೇಯಕದಲ್ಲಿ 'ಕೈಗಾರಿಕಾಭಿವೃದ್ಧಿಗಾಗಿ ಬಳಸಲಾದ 20 ಯುನಿಟ್‌ಗಿಂತ ಹೆಚ್ಚಿಲ್ಲದ ವಿಸ್ತೀರ್ಣ' ಎನ್ನುವಂತಹ ಒಂದು ಅಂಶವನ್ನೇನು ಕಾಣಿಸಿದ್ದಾರೆ, ಇದು ನಮಗೆ ಗೊಂದಲವಾಗುತ್ತದೆ. ಎರಡನೆಯ ವಿಚಾರವೆಂದರೆ, ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದ ಶೈಕ್ಷಣಿಕ ವ್ಯವಸ್ಥೆಗಳಿಗಾಗಿ ಕೃಷಿಯೇತರ ಉದ್ದೇಶಕ್ಕಾಗಿ ಬಳಸಲಾಗುವ 4 ಯುನಿಟ್‌ಗಳಿಗಿಂತ ಹೆಚ್ಚಿಲ್ಲದ

ವಿಸ್ತೀರ್ಣ ಎಂದು ಹೇಳಲಾಗಿದೆ. ಈ ವಿಧೇಯಕದಲ್ಲಿ ಸೆಕ್ಷನ್ 109 ನಮಗೆ ದೊಡ್ಡ ಸಮಸ್ಯೆಯಾಗಿದೆ. ಕೃಷಿ ಭೂಮಿಯನ್ನು ಕೃಷಿಗಾಗಿ ಬಳಸಬೇಕು ಎನ್ನುವುದಾದರೆ ಕೃಷಿಯೇತರ ಮೂಲದಿಂದ 2 ಲಕ್ಷಕ್ಕಿಂತ ಹೆಚ್ಚು ಆದಾಯ ಇರುವಂತಹ ವ್ಯಕ್ತಿ ಯಾವುದೇ ಕಾರಣಕ್ಕೂ ಸಹ ಭೂಮಿಯನ್ನು ಕೊಳ್ಳುವುದಕ್ಕೆ ಅವಕಾಶ ಇಲ್ಲ, ಏಕೆಂದರೆ ಸೆಕ್ಷನ್ 79 ಎ & ಬಿ ಇದಕ್ಕೆ ಅಡ್ಡಿ ಬರುತ್ತದೆ. ಆದರೆ 109ನೇ ಸೆಕ್ಷನ್ ಬಗ್ಗೆ ಪ್ರಶ್ನೆ ಬಂದಾಗ ಕೃಷಿಯೇತರ ಉದ್ದೇಶಕ್ಕೋಸ್ಕರ ಅವನು ಭೂಮಿಯನ್ನು ಕೊಳ್ಳುತ್ತೇನೆ ಎನ್ನುವುದಾದರೆ, 109ನೇ ಸೆಕ್ಷನ್ ಪ್ರಕಾರ ಆತನಿಗೆ ಯಾವುದೇ ಆದಾಯದ ಮಿತಿ ಇರುವುದಿಲ್ಲ. ಈ ಹಂತದಲ್ಲಿ ಏನು ಇವತ್ತು ಕೃಷಿ ಭೂಮಿ ದುರ್ಬಳಕೆಯಾಗುತ್ತಿದೆ ಅದನ್ನು ತಡೆಯಲಿಕ್ಕೆ ತಾವು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಅದರ ಜೊತೆಗೆ ಸಾಂಪ್ರದಾಯಿಕ ಬೆಳೆ, ತೋಟಗಾರಿಕೆ ಬೆಳೆ ಮತ್ತು ನೀರಾವರಿ ಭೂಮಿ ಯಾವುದೇ ಕಾರಣಕ್ಕೆ ಕೂಡ ಕೃಷಿಯೇತರ ಉದ್ದೇಶಕ್ಕೆ ಬಳಸಬಾರದು, ಅದನ್ನು ಕೃಷಿ ಭೂಮಿಯಾಗಿಯೇ ಉಳಿಸಬೇಕು, ಅದನ್ನು ಕೆನೆಪದರ ಎಂದು ಪರಿಗಣಿಸಬೇಕು ಎಂದು ನಾನು ಮನವಿ ಮಾಡಿದ್ದೆ. ಈ ನಿಯಮವನ್ನು ತಾವು ಜಾರಿಗೆ ತರುವಂತಹ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಸಹ ಅದನ್ನು ತಾವು ಪರಿಗಣನೆ ಮಾಡಿಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ಇದರ ಜೊತೆಗೆ ಒಂದು ಸಲ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೆ ಬಳಕೆ ಮಾಡಿದರೆ ...

**ಸಭಾಪತಿಯವರು:–** ಈಗ ಆ ವಿಚಾರಗಳೆಲ್ಲಾ ಬೇಡ. Don't repeat. ಈ ಮಸೂದೆಯ ಮುಖಾಂತರ ಸರ್ಕಾರ ಏನು ತಿದ್ದುಪಡಿಯನ್ನು ತಂದಿದೆ ಇದರಲ್ಲಿ ಯಾವುದು ಸರಿಯಿದೆ, ಯಾವುದು ತಪ್ಪಿದೆ ಎನ್ನುವುದನ್ನಷ್ಟೇ ತಾವೀಗ ತಿಳಿಸಿ.

**ಶ್ರೀ ಸಿ.ಹೆಚ್.ವಿಜಯ ಶಂಕರ:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ತಂದಿರುವಂತಹ ಈ ತಿದ್ದುಪಡಿಗಳಲ್ಲಿ ಎರಡು ಅಂಶಗಳ ಬಗ್ಗೆ ನಾನು ಬಹಳ ಸ್ಪಷ್ಟವಾಗಿ ತಿಳಿಸಬಯಸುತ್ತೇನೆ. ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಬಳಕೆ ಮಾಡುವಂತಹ ಸಂದರ್ಭದಲ್ಲಿ ಇಲ್ಲಿ ತಿಳಿಸಿರುವ ಶೈಕ್ಷಣಿಕ ಉದ್ದೇಶ, ಕೈಗಾರಿಕಾ ಉದ್ದೇಶ, ಪುಷ್ಪೋದ್ಯಮಗಳನ್ನು ಸ್ಥಾಪಿಸುವಂಥದ್ದು ಇತ್ಯಾದಿಗಳನ್ನೇನು ಕೃಷಿ ಭೂಮಿಯಲ್ಲಿ ಕಾಣಿಸಿದ್ದೀರಿ, ಆ ರೀತಿ ಕೃಷಿಯೇತರ ಉದ್ದೇಶಕ್ಕೆ ಬಳಸುವುದಕ್ಕೆ ಯಾವುದೇ ಕಾರಣಕ್ಕೂ ಸಹ ಸರ್ಕಾರ ಅವಕಾಶ ಕೊಡಬಾರದು. ಆ ರೀತಿ ಕೊಟ್ಟಂತಹ ಸಂದರ್ಭದಲ್ಲಿ ನಿಶ್ಚಿತವಾಗಿಯೂ ಸಹ ಅದು ಕೃಷಿ ಭೂಮಿಯ ಹೆಸರಿನಲ್ಲಿ ದುರುಪಯೋಗವಾಗುತ್ತದೆ.

ಎರಡನೆಯದಾಗಿ ರಾಜ್ಯ ಸರ್ಕಾರದಿಂದ ಅನುಮೋದಿತವಾದ ವಸತಿ ಯೋಜನೆಗಾಗಿ ಬಳಸಲಾದ 10 ಯುನಿಟ್‌ಗಿಂತ ಹೆಚ್ಚಿಲ್ಲದ ವಿಸ್ತೀರ್ಣ, ಪುಷ್ಪಕೃಷಿ ಮತ್ತು ಕೃಷಿ ಆಧಾರಿತ ಕೈಗಾರಿಕೆಗಳು ಸೇರಿದಂತೆ ತೋಟಗಾರಿಕೆ ಉದ್ದೇಶಕ್ಕಾಗಿ ...

**ಸಭಾಪತಿಯವರು:–** ಮಸೂದೆಯಲ್ಲಿರುವ ಆ ವಿಚಾರ ಸರಿಯಿದೆಯೋ ಇಲ್ಲವೋ, ಅದನ್ನು ತಾವು ಒಪ್ಪುತ್ತೀರೋ ಇಲ್ಲವೋ ಎಂಬುದನ್ನಷ್ಟೇ ತಾವು ಈ ಸಂದರ್ಭದಲ್ಲಿ ತಿಳಿಸಬೇಕಾಗುತ್ತದೆ.

**ಶ್ರೀ ಸಿ.ಹೆಚ್.ವಿಜಯ ಶಂಕರ:–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಾನು ಮಾನ್ಯ ಸಚಿವರಿಗೆ ಮನವಿ ಮಾಡಬಯಸುತ್ತಿರುವುದೇನೆಂದರೆ, ಕೃಷಿ ಭೂಮಿಯನ್ನು ಕೃಷಿ ಉದ್ದೇಶಕ್ಕೋಸ್ಕರವೇ ಬಳಕೆ ಮಾಡಬೇಕು, ಎರಡನೆಯದಾಗಿ ಈ ಮಸೂದೆಯ ಸೆಕ್ಷನ್ 109 ರ ಪ್ರಕಾರ ಹೋದರೆ ಸಂಪೂರ್ಣವಾಗಿ ದುರುಪಯೋಗವಾಗುತ್ತಿದೆ. ಆದ್ದರಿಂದ ಅದನ್ನು ಪರಿಷ್ಕರಣೆ ಮಾಡಬೇಕೆನ್ನುವುದು ನನ್ನ ವಿನಂತಿಯಾಗಿದೆ.

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ತರುವ ಬಗ್ಗೆ ಬಹಳ ವರ್ಷಗಳಿಂದ ಬೇಡಿಕೆ ಇತ್ತು. 1961ರಲ್ಲಿ 2 ಲಕ್ಷ ರೂಪಾಯಿಗಳಿಗೆ ಎಷ್ಟು ಬೆಲೆ ಇತ್ತು ಎನ್ನುವುದನ್ನು ಇವತ್ತು ಲೆಕ್ಕ ಹಾಕಿದರೆ ಅದರ ಬೆಲೆ ಇವತ್ತಿನ ಸುಮಾರು 20 ಕೋಟಿಗಳಿಗೆ ಸಮನಾಗಬಹುದು. ಆದಾಯದ ಮಿತಿಯನ್ನು 2 ಲಕ್ಷದಿಂದ 25 ಲಕ್ಷಕ್ಕೆ ಏರಿಸಿದ್ದೀರಿ, ಆದರೆ ನಾನು ಈಗಾಗಲೇ ತಿಳಿಸಿರುವಂತೆ

ಅವತ್ತಿನ 2 ಲಕ್ಷದ ಬೆಲೆ ಇವತ್ತು 20 ಕೋಟಿ ಇದೆ. ಅಂದರೆ ಯಾವ ಪ್ರಮಾಣದಲ್ಲಿ ಹಣದುಬ್ಬರವಾಗಿದೆ ಎಂದು ಚಿಂತನೆ ಮಾಡಿದಾಗ ಈ ಪ್ರಮಾಣದ ಆದಾಯದ ಮಿತಿಯನ್ನು ಈ ಮಸೂದೆಯ ಮುಖಾಂತರ ತಂದಿರುವುದು ಸ್ವಾಗತಾರ್ಹವಾಗಿದೆ. ವರ್ಷಕ್ಕೆ 25 ಲಕ್ಷ ರೂಪಾಯಿಗಳನ್ನು ಸಂಪಾದನೆ ಮಾಡುವಂತಹ ರೈತ ಕೂಡ ಇವತ್ತಿನ ಭೂಮಿ ಬೆಲೆ 1 ಕೋಟಿ, 2 ಕೋಟಿ ಈ ರೀತಿ ಏರಿಕೆಯಾಗಿರುವಾಗ ಅಷ್ಟು ಹಣವನ್ನು ಕೊಟ್ಟು ಖರೀದಿಸುವುದಕ್ಕೆ ಸಾಧ್ಯವಿದೆಯೇ? ಖಂಡಿತವಾಗಿಯೂ ಸಾಧ್ಯವಿಲ್ಲ. ಖರೀದಿಸಿದರೂ ಅಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಂಡು ಅಷ್ಟು ಸಂಪಾದನೆ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಒಂದು ಕೋಟಿ ರೂಪಾಯಿಗಳನ್ನು ಬ್ಯಾಂಕ್‌ನಲ್ಲಿ ಠೇವಣಿ ಇಟ್ಟರೆ ಅವನಿಗೆ ತಿಂಗಳಿಗೆ ಒಂದು ಕೋಟಿಗೆ ಒಂದು ಲಕ್ಷ ರೂಪಾಯಿಗಳಂತೆ ಬಡ್ಡಿ ಸಿಗುತ್ತದೆ. ನೀಲಗಿರಿ ಮರಗಳನ್ನು ಬೆಳೆಸಿದರೆ ಹಣ ಬರುತ್ತದೆ, ಆದರೆ ನಂತರ ಅಲ್ಲಿ ಬೇರೆ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುವುದಕ್ಕಾಗುವುದಿಲ್ಲ. ಹೀಗಾಗಿ ಇವತ್ತಿನ ಪರಿಸ್ಥಿತಿಯಲ್ಲಿ ರೈತ ಭೂಮಿಯನ್ನು ಇಟ್ಟುಕೊಳ್ಳುವುದಕ್ಕಿಂತ ಮಾರಾಟ ಮಾಡಿದರೆ ಸುಖವಾಗಿ ಜೀವನ ಮಾಡಬಹುದು ಎನ್ನುವಂತಹ ವಾತಾವರಣ ನಿರ್ಮಾಣವಾಗಿದೆ.

ನಾವು ಪಟ್ಟಣದಲ್ಲಿರುವವರು ರೈತರನ್ನು ಹುರಿದುಂಬಿಸುತ್ತೇವೆ, 'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು', ನೀವು ಕೃಷಿ ಮಾಡಿ ಎಂದು ಹೇಳುತ್ತೇವೆ. ಅವನು ಜಮೀನಿನಲ್ಲಿ ಹಗಲಿರುಳು ದುಡಿಯುತ್ತಲೇ ಇರುತ್ತಾನೆ, ನಾವು ಮಜಾ ಮಾಡುತ್ತಲೇ ಇರುತ್ತೇವೆ. ಇವತ್ತು ಕೃಷಿಯನ್ನಷ್ಟೇ ಅವಲಂಬಿಸಿಕೊಂಡು ಯಾವ ರೈತ ಕೂಡ ಬದುಕುವುದಕ್ಕಾಗುವುದಿಲ್ಲ. ನಾವೆಲ್ಲಾ ರೈತರ ಮಕ್ಕಳೇ, ಆದರೆ ಅಲ್ಲಿ ಆ ರೀತಿ ದುಡಿಯುವುದಕ್ಕೆ ನಮ್ಮಿಂದಾಗುವುದಿಲ್ಲ ಎನ್ನುವ ಕಾರಣಕ್ಕಾಗಿಯೇ ನಾವು ಊರುಬಿಟ್ಟು ಬಂದವರು. ಈಗ ಮತ್ತೆ ನಮ್ಮ ತೋಟದಲ್ಲಿ ಬೇಸಾಯವನ್ನು ಪ್ರಾರಂಭಿಸಿದ್ದೇನೆ, ಮೊನ್ನೆ ನಮ್ಮ ಮಾವಿನ ತೋಟದಲ್ಲಿ ಬೆಳೆದಿದ್ದ ಮಾವಿನ ಪಸಲು ಮಳೆಯ ಕಾರಣದಿಂದಾಗಿ ಸುಮಾರು 10 ಟನ್‌ನಷ್ಟು ಉದುರಿ ಹೋಯಿತು. ಕಳೆದ ವರ್ಷ 8 ಲಕ್ಷ ರೂಪಾಯಿಗಳಷ್ಟು ಆದಾಯ ಬಂದಿತ್ತು, ಆದರೆ ಈ ವರ್ಷ 80 ಸಾವಿರ ರೂಪಾಯಿಗಳಷ್ಟು ಆದಾಯ ಕೂಡ ಸಿಗಲಿಲ್ಲ. ಹೀಗಾಗಿ ಇವತ್ತಿನ ಪರಿಸ್ಥಿತಿಯಲ್ಲಿ ಮನುಷ್ಯ ಕೃಷಿಯನ್ನು ಅವಲಂಬಿಸಿ ಜೀವನ ನಡೆಸುವುದಕ್ಕಾಗುವುದಿಲ್ಲ. ಕಬ್ಬು ಬೆಳೆಗಾರರಾಗಲಿ, ಬೇರೆ ಕೃಷಿ ಅವಲಂಬಿಸಿರುವ ರೈತರಾಗಲಿ ಜೀವನ ನಡೆಸುವುದು ಕಷ್ಟವಿದೆ. ರೈತಾಪಿ ವರ್ಗ ಬೇಸಾಯ ಚಟುವಟಿಕೆಗಳಲ್ಲಿ ಯಾವ ರೀತಿ ದುಡಿಯುವಂತಹ ಸಂದರ್ಭ ಬರುತ್ತದೆ ಎನ್ನುವುದಕ್ಕೆ ಸಂಬಂಧಿಸಿದ ಕೆಲವು ಫೋಟೋಗಳನ್ನು ಸಹ ನಾನು ತಂದಿದ್ದೇನೆ, ಜಮೀನಿನಲ್ಲಿ ಬೆಳೆದ ಪೈರು ಹಾಳಾಗದಂತೆ ಎಚ್ಚರಿಕೆಯಿಂದ ಅರೆ ಹೊಡೆಯುವ ಕಾರ್ಯವನ್ನು ಕೈಗೊಳ್ಳುವಾಗ ನೊಗಕ್ಕೆ ಕಟ್ಟಿದ ಎತ್ತುಗಳ ಜೊತೆಗೆ ಹಿಂದೆ ನಾಲ್ಕು ಜನರು ಅದರ ಮೇಲೆ ನಿಂತು ಆ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಅಷ್ಟು ಕಷ್ಟಪಟ್ಟು ದುಡಿಯುವ ಜನರಿಗೆ ಬೇಸಾಯದಿಂದ ಸಿಗುವ ಅತ್ಯಲ್ಪ ಲಾಭದಿಂದ ಬದುಕುವುದಕ್ಕಾಗುವುದಿಲ್ಲ. ರೈತ ಭೂಮಿಯನ್ನು ಮಾರಿಕೊಂಡು ಹೋದರೆ ಮಾತ್ರ ಬದುಕಬಹುದು ಎನ್ನುವಂತಹ ಸ್ಥಿತಿ ನಿರ್ಮಾಣವಾಗಿದೆ. ಭೂಮಿ ಮಾರಿಕೊಂಡು ಹೋಗುವುದು ಎಂದರೆ, ಅದು ಒಂದು ರೀತಿಯಲ್ಲಿ 'ಕೆಟ್ಟು ಪಟ್ಟಣ ಸೇರು' ಎಂಬಂತೆ ಎಲ್ಲರೂ ಬಂದು ಪಟ್ಟಣ ಸೇರುತ್ತಿದ್ದಾರೆ, ಪಟ್ಟಣಗಳು ಬೃಹದಾಕಾರವಾಗಿ ಬೆಳೆಯುತ್ತಿವೆ. ಸರ್ಕಾರ ಈ ವಿಧೇಯಕವನ್ನೇನು ತಂದಿದೆ, ಇದನ್ನು ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ ಆದಾಯದ ಮಿತಿ 2 ಲಕ್ಷ ಇದ್ದಾಗ ಎಲ್ಲರೂ ಆದಾಯದ ಬಗ್ಗೆ ಸುಳ್ಳು ಮಾಹಿತಿಯನ್ನೇ ಕೊಡುತ್ತಿದ್ದರು. ಇದುವರೆಗೆ ಯಾರ್‍ಯಾರು ಭೂಮಿ ತೆಗೆದುಕೊಂಡಿದ್ದಾರೆ ಅವರೆಲ್ಲರಿಗೂ ವಾರ್ಷಿಕ 2 ಲಕ್ಷ ರೂಪಾಯಿಗಿಂತ ಹೆಚ್ಚು ಆದಾಯ ಇದ್ದುದರಿಂದಲೇ ಭೂಮಿಯನ್ನು ಖರೀದಿಸುವುದಕ್ಕೆ ಸಾಧ್ಯವಾಗುತ್ತಿತ್ತು. ಪರಿಸ್ಥಿತಿ ಈ ರೀತಿ ಇರುವಾಗ ಅವರಿಗೆ ಸುಳ್ಳು ಹೇಳುವುದಕ್ಕೆ ಏಕೆ ಅವಕಾಶ ಕೊಡಬೇಕು, ನಿಜವನ್ನೇ ಹೇಳಲಿ ಎನ್ನುವ ಸದುದ್ದೇಶದಿಂದ ಈ ಮಸೂದೆಯಲ್ಲಿ ಆದಾಯದ ಮಿತಿಯನ್ನು 25 ಲಕ್ಷಕ್ಕೆ ಹೆಚ್ಚಿಸಿದ್ದೀರಿ. ಭೇಷ್, ನಿಜಕ್ಕೂ ಇದು ಒಳ್ಳೆಯ ಮಸೂದೆಯಾಗಿರುವುದರಿಂದ ನಾನು ಇದನ್ನು ಒಪ್ಪಿಕೊಳ್ಳುತ್ತೇನೆ, ಆದರೆ ಬೆಂಗಳೂರಿನಂತಹ ನಗರದಲ್ಲಿಯೇ ಇದು ಬಹಳ ಸಮಸ್ಯೆಯಾಗಿದ್ದು, ಬೇರೆ ಹಳ್ಳಿಗಳಲ್ಲಿ ಇದು ಸಮಸ್ಯೆ ಆಗುವುದಿಲ್ಲ; ಅಲ್ಲೆಲ್ಲಾ ಸರಿಹೋಗುತ್ತದೆ. ಆದರೆ ಬೆಂಗಳೂರಿನಂತಹ ನಗರದಲ್ಲಿ ಒಂದು ಅಂಗುಲದಷ್ಟು

ಜಾಗವನ್ನು ಸಹ ಬಿಡದಂತೆ ಎಲ್ಲವನ್ನೂ ಸಹ ಹೊರರಾಜ್ಯಗಳಿಂದ ಬಂದಂತಹವರು ಆಕ್ರಮಿಸಿಕೊಂಡುಬಿಟ್ಟಿದ್ದಾರೆ. ಅವರು ಯಾವ ಯಾವ ರಾಜ್ಯಗಳಿಂದ ಬಂದಿದ್ದಾರೆ ಎಂದು ನಾನು ಹೇಳುವುದಿಲ್ಲ, ಆದರೆ ಹೊರರಾಜ್ಯದವರು ಬಂದು ನಮ್ಮ ರಾಜ್ಯದಲ್ಲಿದ್ದಂತಹ ಜಾಗವನ್ನೆಲ್ಲಾ ಕಬಳಿಸಿಬಿಟ್ಟಿದ್ದಾರೆ. ಆ ಹಿನ್ನೆಲೆಯಲ್ಲಿ ಇದರಿಂದ ಅವರಿಗೆ ಇನ್ನಷ್ಟು ಅನುಕೂಲವಾಯಿತು. ಅದಕ್ಕೋಸ್ಕರ ಅದಕ್ಕೇನಾದರೂ ಒಂದು ತಿದ್ದುಪಡಿಯನ್ನು ಈ ಮಸೂದೆಯಲ್ಲಿ ತರಬೇಕಾಗುತ್ತದೆ. ಯಾರು ಭೂಮಿಯನ್ನು ತೆಗೆದುಕೊಳ್ಳಬೇಕು, ಯಾರು ತೆಗೆದುಕೊಳ್ಳಬಾರದು, ತೆಗೆದುಕೊಂಡಿದ್ದನ್ನು ಯಾವುದಕ್ಕೆ ಬಳಕೆ ಮಾಡಬೇಕು, ಶಿಕ್ಷಣ ಸಂಸ್ಥೆಗಳು, ಕೈಗಾರಿಕೆಗಳು ಈ ರೀತಿ ಮಾಡುವುದಕ್ಕೆ ಸಂಬಂಧಿಸಿದಂತೆ ಕೂಡ ಸರ್ಕಾರ ಒಂದು ತಿದ್ದುಪಡಿಯನ್ನು ತಂದರೆ ಒಳ್ಳೆಯದು. ಈ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ, ಜೊತೆಗೆ ಈಗ ತಿಳಿಸಿರುವಂತಹ ವಿಚಾರದ ಬಗ್ಗೆ ಕೂಡ ಸರ್ಕಾರ ಒಂದು ಮಸೂದೆಯನ್ನು ತರಬೇಕೆಂದು ನಾನು ವಿನಂತಿಸುತ್ತಿದ್ದೇನೆ.

**ಶ್ರೀ ಬಿ.ರಾಮಕೃಷ್ಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. ಆದಾಯದ ಮಿತಿಯನ್ನು 2 ಲಕ್ಷದಿಂದ 25 ಲಕ್ಷಕ್ಕೆ ಏನು ಹೆಚ್ಚಿಸಲಾಗಿದೆ, ಇದನ್ನು 50 ಲಕ್ಷಕ್ಕೆ ಹೆಚ್ಚಿಸಿದ್ದರೆ ಒಳ್ಳೆಯದಿತ್ತು. ಏಕೆಂದರೆ ಇದರಿಂದ ಸರ್ಕಾರಕ್ಕೆ ಕೂಡ ಆದಾಯ ಬರುತ್ತದೆ, ಆದ್ದರಿಂದ ಅದರ ಬಗ್ಗೆ ಸ್ವಲ್ಪಮಟ್ಟಿಗೆ ಚಿಂತನೆ ಮಾಡುವುದು ಒಳ್ಳೆಯದು. ಸೆಕ್ಷನ್ 109ಕ್ಕೆ ಏನು ತಿದ್ದುಪಡಿಯನ್ನು ತರಲಾಗಿದೆ, 20 ಯುನಿಟ್‌ಗಳಿಗಿಂತ, 40 ಯುನಿಟ್‌ಗಳಿಗಿಂತ ಎಂದು ಏನು ಹೇಳಲಾಗಿದೆ ಅದರ ಬಗ್ಗೆ ಮಾನ್ಯ ಸಚಿವರು ಸ್ವಲ್ಪಮಟ್ಟಿಗೆ ತಮ್ಮ ಅಮೃತವಾಣಿಯಿಂದ ವಿವರಿಸಿದರೆ ನಾವು ಸಹ ಅದರ ಬಗ್ಗೆ ತಿಳಿದುಕೊಳ್ಳಬಹುದು.

**ಶ್ರೀ ಗೋ.ಮಧುಸೂದನ್(ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಬಹಳ ಒಳ್ಳೆಯ ಮಸೂದೆಯನ್ನು ತಂದಿದೆ. ಇದನ್ನು ನಾನು ಸ್ವಾಗತ ಮಾಡುತ್ತಾ, ಒಂದು ಸಂಗತಿಯನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಸರ್ಕಾರದ ಮೂಲ ಉದ್ದೇಶ ಇರುವಂಥದ್ದು, ಮೊದಲು ಪ್ರಾರಂಭ ಮಾಡಿದ್ದು 2 ಲಕ್ಷಕ್ಕಿದ್ದದ್ದು ಬೇರೆ ಯಾರೂ ತೆಗೆದುಕೊಳ್ಳಬಾರದು ಎಂಬುದಕ್ಕೆ, ಕೃಷಿ ಮಾಡದೆ ಇರುವಂಥವರು ಭೂಮಿಯನ್ನು ತೆಗೆದುಕೊಂಡರೆ ಅವರು ಬೆಳೆ ಬೆಳೆಯದೆ ಭೂಮಿಯನ್ನೇ ಇಟ್ಟುಕೊಳ್ಳುತ್ತಾರೆ, ನಮ್ಮ ದೇಶದ ನಿವ್ವಳ ರಾಷ್ಟ್ರೀಯ ಉತ್ಪನ್ನ(ಜಿ.ಡಿ.ಪಿ.) ಏನಿದೆ ಅದು ಎಫೆಕ್ಟ್ ಆಗುತ್ತದೆ ಎನ್ನುವಂತಹ ದೃಷ್ಟಿಯಿಂದ ಯೋಚನೆ ಮಾಡಿರುವಂಥದ್ದಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಭೂಮಿಯ ಬೆಲೆ ಜಾಸ್ತಿಯಾಗಿರುವುದು ನಮ್ಮೆಲ್ಲರ ಗಮನಕ್ಕೂ ಬಂದಿದೆ. ಅದೆಲ್ಲಕ್ಕಿಂತ ಹೆಚ್ಚಾಗಿ ದೊಡ್ಡ ಸಂಗತಿ ಬಂದಿರುವುದೇನೆಂದರೆ, ಈ ಇಡೀ ಭೂಮಿ, ರಿಯಲ್ ಎಸ್ಟೇಟ್ ವ್ಯವಹಾರ, ಭೂಮಿಯ ವ್ಯವಹಾರ ಎಲ್ಲದರಲ್ಲಿ ಕಪ್ಪು ಹಣದ ಬಹಳ ದೊಡ್ಡದಾದಂತಹ ಒಂದು ಪಾತ್ರ ನಿರ್ಮಾಣವಾಗಿಬಿಟ್ಟಿದೆ.

ಆ **'ಬ್ಲಾಕ್ ಮನಿ'** ರೋಲ್ ನಿರ್ಮಾಣ ಆಗಿರುವುದೇ ನಾವು ಇಲ್ಲಿ ಲಿಮಿಟೇಶನ್ ಹಾಕದೆ ಇರುವ ಕಾರಣಕ್ಕಾಗಿ. ಇಲ್ಲಿಯವರೆಗೂ ಏನು ಮಾಡುತ್ತಿದ್ದರು ಎಂದರೆ, ಎಷ್ಟೇ ಭೂಮಿಯನ್ನು ಖರೀದಿ ಮಾಡಿದರೂ ಸಹ ಅವರು ನಮ್ಮ ಗೈಡೆನ್ಸ್ ವ್ಯಾಲ್ಯೂ ಒಳಗೆ ತಂದು ತೋರಿಸುತ್ತಿದ್ದರು. ಮೈಸೂರು ಸುತ್ತಮುತ್ತಲು ಇರುವಂತಹ ಭೂಮಿ ಈಗಲೂ ಕೋಟ್ಯಾಂತರ ರೂಪಾಯಿ ಬೆಲೆ ಬಾಳುತ್ತದೆ. ಅದನ್ನು 8 ರಿಂದ 10 ಲಕ್ಷ ರೂಪಾಯಿ ತೋರಿಸುತ್ತಿದ್ದಾರೆ. ಅದೇ ರೀತಿ ಬೆಂಗಳೂರಿನ ಸುತ್ತಮುತ್ತಲೂ ಇದೇ ರೀತಿಯಲ್ಲಿಯೇ ತೋರಿಸುತ್ತಿದ್ದಾರೆ. ಆದರೆ 2 ಕೋಟಿ ರೂಪಾಯಿ ಬೆಲೆ ಬಾಳುವಂತಹ ಜಮೀನನ್ನು 'Commercial' ಆದರೆ ನಮ್ಮ ಗೈಡೆನ್ಸ್ ವ್ಯಾಲ್ಯೂ ಬೇರೆ, 'Residential' ಆದರೆ ಬೇರೆ, 'Agricultural purpose' ಆಯಿತು ಎಂದರೆ ಅದು 8 ರಿಂದ 10 ಲಕ್ಷಕ್ಕೆ ಇದೆ.

**ಶ್ರೀ ಬಿ.ರಾಮಕೃಷ್ಣ:–** ಮಾನ್ಯ ಸಭಾಪತಿಯವರೇ, Government value ಎಷ್ಟಿದೆ ಎಂದು ತೋರಿಸಲೇ ಬೇಕಲ್ಲವೆ?

**ಸಭಾಪತಿಯವರು:–** ನೀವು ಬಿಲ್ಲಿನ ಬಗ್ಗೆ ಅರ್ಥ ಮಾಡಿಕೊಂಡಿಲ್ಲ. 2 ಲಕ್ಷ ಇದ್ದಿದ್ದು non-agriculturist ನವರು 'agricultural land' ಖರೀದಿಮಾಡುವುದಾದರೆ ಈ ಮೊದಲು ಅವರ ಉತ್ಪತ್ತಿ 2 ಲಕ್ಷಕ್ಕಿಂತ ಕಡಿಮೆ

ಇದ್ದರೆ ಮಾತ್ರ ತೆಗೆದುಕೊಳ್ಳಬಹುದಾಗಿತ್ತು, ಆದರೆ ಈಗ 25 ಲಕ್ಷ ಉತ್ಪತ್ತಿ ಇದ್ದವರೂ ಸಹ ಕೃಷಿ ಭೂಮಿಯನ್ನು ತೆಗೆದುಕೊಳ್ಳಬಹುದೆಂದು ಮಾಡಿದ್ದಾರೆ. ಭೂಮಿ ಬೆಲೆ 25 ಲಕ್ಷ ರೂಪಾಯಿ ಅಲ್ಲ.

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೇ, ನಾನು ಆ ವಿಷಯದ ಬಗ್ಗೆಯೇ ಮಾತನಾಡುವುದಕ್ಕೆ ಬರುತ್ತಿದ್ದೇನೆ, ದಯವಿಟ್ಟು ನನಗೆ ಅವಕಾಶ ಕೊಡಿ.

**ಸಭಾಪತಿಯವರು:–** ನೀವು ಸುತ್ತಿ ಬಳಸಿ ಬರಬೇಡಿ, ನೇರವಾಗಿ ಬನ್ನಿ.

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೇ, ನಾನು ನಿಮ್ಮನ್ನು ಕೇಳುತ್ತಿರುವುದೇನೆಂದರೆ, the Government has to raise it to the Guidance Value from Rs.25 lakhs. ಏಕೆ ಇವರು Guidance Value ಹೆಚ್ಚಿಗೆ ಮಾಡಬೇಕೆಂದು ಹೇಳುತ್ತಿರುವುದೆಂದರೆ, ಬ್ಲಾಕ್ ಮನಿ ಉಪಯೋಗ ಆಗುವಂಥದ್ದು ಕಡಿಮೆಯಾಗುತ್ತದೆ. ಇವತ್ತು 2 ಕೋಟಿ ರೂಪಾಯಿ ಬೆಲೆ ಇರುವಂಥದ್ದು ನಿಮ್ಮ ಗೈಡೆನ್ಸ್ ವ್ಯಾಲ್ಯು 8 ಲಕ್ಷ ಇತ್ತು ಎಂದರೆ, ಅವರು 8 ಲಕ್ಷ ಮಾತ್ರ ತೋರಿಸುತ್ತಾರೆ, ಇನ್ನು 1 ಕೋಟಿ 90 ಲಕ್ಷ ರೂಪಾಯಿಗಳನ್ನು ಬ್ಲಾಕ್ ಮನಿ ವ್ಯವಹಾರವಾಗುತ್ತಿದೆ. ಇಲ್ಲಿ ಎರಡು ಸಂಗತಿಗಳಿವೆ. ಒಂದು ನಿಮ್ಮ ಯೋಚನೆ ಇರುವಂಥದ್ದು ಒಬ್ಬ non-agriculturist purchase ಮಾಡಿ ಬಿಡುತ್ತಾನೆ, ಅಷ್ಟೇ ಅಲ್ಲ, ಇದರಲ್ಲಿ ಬಹಳ ದೊಡ್ಡ ಬ್ಲಾಕ್ ಮನಿ ಇದೆ. The Government has to raise it to the Guidance Value. ನಿಮ್ಮ ಗೈಡೆನ್ಸ್ ವ್ಯಾಲ್ಯೂನೆ 1 ಕೋಟಿ ರೂಪಾಯಿ ಇತ್ತು ಎಂದರೆ, ನೀವೆ ಹೇಳಿ 25 ಲಕ್ಷಕ್ಕೆ ತಂದಿಟ್ಟರೆ 25 ಲಕ್ಷ ದುಡಿಯುವಂತಹ ಒಂದು ಕುಟುಂಬ ಅವರು ವರ್ಷಪೂರ್ತಿ ಊಟ ಮಾಡುವುದಕ್ಕೆ 5 ಲಕ್ಷ ರೂಪಾಯಿಗಳನ್ನು ಉಪಯೋಗಿಸಿ, ಒಂದು ವೇಳೆ ಅವರು 20 ಲಕ್ಷ ರೂಪಾಯಿಗಳನ್ನು ಉಳಿತಾಯ ಮಾಡಿದರೆ ಅವರು ಒಂದು ಎಕರೆ ಭೂಮಿಯನ್ನು ಕೊಂಡುಕೊಳ್ಳುವುದಕ್ಕೆ 10 ವರ್ಷಗಳು ಬೇಕಾಗುತ್ತದೆ. ಇದು ಸಾಧ್ಯವೆ? ಆದಕಾರಣ ನಾನು ಹೇಳುತ್ತಿರುವುದೇನೆಂದರೆ, the Government has to raise it to the Guidance Value. ಆಗ ಮಾತ್ರವೆ ನಾವು ಬ್ಲಾಕ್ ಮನಿಯನ್ನು ಕಡಿಮೆ ಮಾಡುವುದಕ್ಕೆ ಸಾಧ್ಯ. Unless and until black money ಜನರೇಟ್ ಆಗುವುದು ಉಳಿದರೆ ಮಾತ್ರ ಭ್ರಷ್ಟಾಚಾರ ಉಳಿಯುವುದು. ಇಲ್ಲವೆಂದರೆ ಭ್ರಷ್ಟಾಚಾರ ಉಳಿಯುವುದಿಲ್ಲ. ನೀವು ಎ.ಸಿ., ಯಿಂದ ಕಿತ್ತು ಡಿ.ಸಿ., ಗೆ ಹಾಕಿದರೆ ಭ್ರಷ್ಟಾಚಾರ ಬದಲಾವಣೆ ಆಗುತ್ತದೆ ಅಷ್ಟೆ.

**ಶ್ರೀ ಬಿ.ರಾಮಕೃಷ್ಣ:–** ಮಾನ್ಯ ಮಧುಸೂದನ್‌ರವರೇ, ಆ ರೀತಿ ಅಲ್ಲ.

**ಸಭಾಪತಿಯವರು:–** ಮಾನ್ಯ ರಾಮಕೃಷ್ಣರವರೇ, ನಾನು ಕಂಟ್ರೋಲ್ ಮಾಡುತ್ತೇನೆ, ನೀವು ಕಂಟ್ರೋಲ್ ಮಾಡುವುದಕ್ಕೆ ಹೋಗಬೇಡಿ. ಸಾಕು ಬಿಡಿ.

**ಶ್ರೀ ಗೊ.ಮಧುಸೂದನ್:–** ಮಾನ್ಯ ಸಭಾಪತಿಯವರೇ, ನೀವು ಕೃಷಿಕನ ಬಗ್ಗೆ ಮಾತನಾಡುತ್ತಿದ್ದೀರಿ, ನಾನು ಹೇಳುತ್ತಿರುವುದು black money generation ಬಗ್ಗೆ.ಅದಕ್ಕೋಸ್ಕರ the Government has to raise it to the Guidance Value and not just Rs.25 lakhs. ನೀವು ಒಂದೊಂದು ಏರಿಯಾಗೆ ಒಂದೊಂದು ಗೈಡೆನ್ಸ್ ವ್ಯಾಲ್ಯು ಮಾಡಿ. ಇಡೀ ರಾಜ್ಯಕ್ಕೆ ಒಂದು ಮಾನದಂಡ ಮಾಡುವುದಕ್ಕೆ ಆಗುವುದಿಲ್ಲ, ಬೇರೆ ಬೇರೆ ಜಾಗಕ್ಕೆ ಬೇರೆ ಬೇರೆ ಮಾಡಿ. ನೀವು ತಾಲ್ಲೂಕಿಗೆ ಬೇರೆ, ಹಳ್ಳಿಗೆ ಬೇರೆ, ಸಿಟಿ ಲಿಮಿಟ್ಸ್‌ನಲ್ಲಿ ಬೇರೆ.

**ಸಭಾಪತಿಯವರು:–** ಮಾನ್ಯ ಮಧುಸೂದನ್‌ರವರೇ, ಇಲ್ಲಿ ಭೂಮಿ ಬೆಲೆ ಕಟ್ಟುತ್ತಿಲ್ಲ, ದಯವಿಟ್ಟು ಅರ್ಥ ಮಾಡಿಕೊಳ್ಳಿ. ನಮ್ಮ ರಾಜ್ಯದಲ್ಲಿ ಈಗೇನಿದೆ, the Karnataka Land Reforms Act ಬಂದಾಗಿನಿಂದ ಕೃಷಿ ಚಟುವಟಿಕೆಯಲ್ಲಿ ಇಲ್ಲದೆ ಇರುವಂಥವರು ಕೃಷಿ ಭೂಮಿಯನ್ನು ಖರೀದಿ ಮಾಡುವುದಾದರೆ ಅವರ ಉತ್ಪತ್ತಿ 2 ಲಕ್ಷಕ್ಕಿಂತ ಕಡಿಮೆ ಇರಬೇಕು, ಅವರು ಮಾತ್ರ ತೆಗೆದುಕೊಳ್ಳಬಹುದಾಗಿತ್ತು. ಅಂದರೆ, ಬೇರೆಯವರು ತೆಗೆದುಕೊಳ್ಳುವಂತೆಯೇ ಇರಲಿಲ್ಲ. ಆದರೆ ಈಗ ಬೇರೆಯವರು 25 ಲಕ್ಷ ಉತ್ಪತ್ತಿ ಇದ್ದವರೂ ಸಹ ಕೃಷಿ ಭೂಮಿಯನ್ನು ತೆಗೆದುಕೊಳ್ಳಬಹುದೆಂದು ಮಾಡಿದ್ದಾರೆ. ಭೂಮಿ ಬೆಲೆ ಎಲ್ಲಿಂದ ಬರುತ್ತದೆ ಅದರಲ್ಲಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, Hon'ble Member Sri G.Madhusudan has a point. What he is trying to say is, ಅವರು ಏನು ಹೇಳುತ್ತಾರೆಂದರೆ, 25ಲಕ್ಷಕ್ಕೆ ಸರ್ಕಾರ ಹೆಚ್ಚು

ಮಾಡಿದೆ. ಮಾನ್ಯ ಅಶ್ವತ್ ನಾರಾಯಣ್‌ರವರು ಹೇಳಿದಂತೆ ಬೆಂಗಳೂರಿನಲ್ಲಿ 1 ಕೋಟಿ ರೂಪಾಯಿಗೋ ಅಥವಾ 2 ಕೋಟಿ ರೂಪಾಯಿಗೋ ಪ್ರಾರ್ಪಟಿ ತೆಗೆದುಕೊಳ್ಳಬೇಕು.

**ಸಭಾಪತಿಯವರು:–** ಯಾರ್‍ಯಾರಿಗೆ ಶಕ್ತಿ ಇರುತ್ತದೆಯೋ ಅವರು ತೆಗೆದುಕೊಳ್ಳುತ್ತಾರೆ.

**Cap. Ganesh Karnik:-** Sir, please listen to me.

**ಡಾ||ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ಒಂದೊಂದು ಏರಿಯಾಗೆ ಒಂದೊಂದು ಗೈಡ್‌ಲೈನ್ ಇರುತ್ತದೆ. ಇಡೀ ರಾಜ್ಯಾದ್ಯಂತ ಒಂದೇ ಗೈಡೆನ್ಸ್ ವ್ಯಾಲ್ಯೂ ಇರುವುದಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಆದಕಾರಣ ಈ ಬಿಲ್ ತರಬೇಡಿಯೆಂದು ಹೇಳುತ್ತಿರುವುದು. ದಯವಿಟ್ಟು ನಾವು ಹೇಳುವುದನ್ನು ಕೇಳಿ. ಮಾನ್ಯ ಮಧುಸೂದನ್ ಅವರು ಹೇಳಿದ್ದಕ್ಕೆ ಒಂದು ಪಾಯಿಂಟ್ ಇದೆ. 25 ಲಕ್ಷ ರೂಪಾಯಿಗೆ ಎಂದು ಒಂದು ಇನ್‌ಕಂ ಸರ್ಟಿಫಿಕೇಟ್ ತರುತ್ತಾನೆ. ಅವನು 2 ಕೋಟಿ ಪ್ರಾರ್ಪಟಿಯನ್ನು ಖರೀದಿ ಮಾಡುತ್ತಾನೆ. ಏಕೆಂದರೆ ಅವನು ಬ್ಲಾಕ್‌ನಲ್ಲಿ ಖರೀದಿ ಮಾಡುತ್ತಾನೆ. ಅಲ್ಲಿ ಗೈಡೆನ್ಸ್ ವ್ಯಾಲ್ಯೂ ಸುಮಾರು 8 ರಿಂದ 10 ಲಕ್ಷ ರೂಪಾಯಿಗಳಿರುತ್ತದೆ. ಅವರು ಏನು ಹೇಳುತ್ತಿದ್ದಾರೆಂದರೆ, ಆ ಲ್ಯಾಂಡ್‌ಗೆ ಏನು ಅಲ್ಲಿ ವ್ಯಾಲ್ಯೂ ಇದೆ, ಅದನ್ನು ಖರೀದಿ ಮಾಡುವುದಕ್ಕೆ ಇವನಿಗೆ ಸಾಮರ್ಥ್ಯವಿದೆಯೇ, ಬ್ಲಾಕ್ ವ್ಯವಹಾರ ನಿಲ್ಲಿಸಬೇಕೆಂದು ಹೇಳಿದರೆ 25 ಲಕ್ಷ ಅಲ್ಲ, ಅದನ್ನು ಇನ್ನೂ ಜಾಸ್ತಿ ಮಾಡಿಯೆಂದು ಅವರು ಹೇಳುತ್ತಿದ್ದಾರೆ. ಈಗ 2 ರಿಂದ 25 ಲಕ್ಷಕ್ಕೆ ಹೆಚ್ಚಿಗೆ ಮಾಡಿರುವುದು ಬೆಂಗಳೂರು ಮತ್ತು ಮೈಸೂರಿನಲ್ಲಿ ಆಗುವುದು immaterial ಅದು. ಅದು ಗ್ರಾಮಾಂತರದಲ್ಲಾಗಬಹುದು. ಆದರೆ ಎಲ್ಲಿ ಬೇಡಿಕೆ ಇದೆ, ಎಲ್ಲಿ ಖರೀದಿ ಮಾಡುತ್ತಾರೆ ಅಲ್ಲಿ ಗೈಡೆನ್ಸ್ ವ್ಯಾಲ್ಯೂ ಇಟ್ಟುಕೊಂಡು... ಮಾನ್ಯ ಮಧುಸೂದನ್‌ರವರು ಇಡೀ ರಾಜ್ಯಕ್ಕೆ ಒಂದೇ ಗೈಡೆನ್ಸ್ ವ್ಯಾಲ್ಯೂ ಮಾಡಬೇಡಿಯೆಂದು ಬಹಳ ಸೊಗಸಾಗಿ ಹೇಳಿದರು. ಆಯಾಯಾ ಪ್ರದೇಶಕ್ಕೆ ಬೇರೆ ಬೇರೆ ಗೈಡೆನ್ಸ್ ವ್ಯಾಲ್ಯೂ ಮಾಡಿಯೆಂದು ಹೇಳಿದರು. ಅದನ್ನು ಇಂಪ್ಲಿಮೆಂಟ್ ಮಾಡುವುದಾದರೆ, ಅವ್ಯವಹಾರ ಆಗದೆ ಇರುವುದಕ್ಕೆ ನಿಮಗೆ ಅರ್ಥ ಆಗದಿದ್ದರೆ ನಾವೇನು ಮಾಡುವುದಕ್ಕೆ ಆಗುವುದಿಲ್ಲ. ಕೊನೇ ಗಳಿಗೆಯಲ್ಲಿ ಬಿಲ್ಲನ್ನು ತಂದು ಪಾಸ್ ಮಾಡುತ್ತೇವೆಂದು ಹೇಳಿದರೆ ಇದೇ ಕಾರಣಕ್ಕೆ ಬೇಡವೆಂದು ಹೇಳಿದ್ದು. He has a point. Please listen to him.

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೇ, ನಾನು ಹೇಳಿದ್ದು ಏನೆಂದರೆ, ಒಬ್ಬ ರೈತ ಹಳ್ಳಿಯಲ್ಲಿರುವಂಥವರು ಬೆಂಗಳೂರಿಗೆ ಬಂದು ಭೂಮಿ ಖರೀದಿ ಮಾಡುವುದಿಲ್ಲ. ಆದರೆ ಬೆಂಗಳೂರಿನಲ್ಲಿರುವಂಥವರು ಹಳ್ಳಿಗೆ ಹೋಗಿ ಖರೀದಿ ಮಾಡುತ್ತಿದ್ದಾರೆ. ಈ ಕಾರಣಕ್ಕೋಸ್ಕರ ನಾನು ಹೇಳುತ್ತಿರುವುದೇನೆಂದರೆ, ಸರ್ಕಾರ ಇಡೀ ರಾಜ್ಯಾದ್ಯಂತ ಒಂದೇ ಯೂನಿಫಾರಂ ಮಾಡುವಂಥದ್ದಲ್ಲ. ಇದಕ್ಕೆ ನೀವು ಯಾವ ಯಾವ ಸಬ್ ರಿಜಿಸ್ಟರ್ ಆಫೀಸಿನಲ್ಲಿ ಯಾವ ಯಾವ ಗೈಡೆನ್ಸ್ ವ್ಯಾಲ್ಯೂ ಇರುತ್ತದೆ, ಅದನ್ನು ಇನ್‌ಕಂ ಲಿಮಿಟ್ ಎಂದು ಮಾಡಿದರೆ ಮಾತ್ರವೆ ಇದರ ಜೊತೆಗೆ ಬ್ಲಾಕ್ ಮನಿಯೂ ಜನರೇಟ್ ಆಗುವಂಥದ್ದು ನಿಲ್ಲುತ್ತದೆ. ಒಂದು ಸಲ ಬ್ಲಾಕ್ ಮನಿ ಜನರೇಟ್ ಆಗುವುದು ನಿಂತರೆ ನಿಮ್ಮ ಭ್ರಷ್ಟಾಚಾರ ಎಲ್ಲಾ ಮುಗಿದು ಹೋಗಿಬಿಡುತ್ತದೆ. ಇಲ್ಲವೆಂದರೆ transferring it from Assistant Commissioner to Deputy Commissioner does not matter. ಅವರ ಹತ್ತಿರ ಕೊಡುವಂತಹ ದುಡ್ಡೇ Deputy Commissioner ಗೆ ಕೊಡುತ್ತಾರೆ ಅಷ್ಟೆ. ಈ ರೀತಿಯಾದರೆ ಭ್ರಷ್ಟಾಚಾರ ಎಲ್ಲಿ ನಿಲ್ಲುತ್ತದೆ?

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಈ ಬಿಲ್ಲಿನ ಮೂಲಕ ಮೂರು issues ನ್ನು ಒಂದು ಸೆಕ್ಷನ್ 79(ಎ)ಗೆ, ಇನ್ನೊಂದು ಸೆಕ್ಷನ್ 80ಗೆ ಮತ್ತು ಸೆಕ್ಷನ್ 109 ಗೆ ಅಮೆಂಡ್‌ಮೆಂಟನ್ನು ತಂದಿದ್ದಾರೆ. ನಿಜಕ್ಕೂ ಸಹ ಇದು ಜನಪರವಾಗಿರುವಂತಹ ಕಾನೂನು ಎಂದು ನಾನು ಈ ವಿಧೇಯಕವನ್ನು ಸ್ವಾಗತ ಮಾಡಲು ಬಯಸುತ್ತೇನೆ. ಆದರೆ ಇಲ್ಲಿ ಎರಡು ವಿಚಾರಗಳನ್ನು ನಾನು ಮುಕ್ತಕಂಠದಿಂದ ಹೇಳಬೇಕಾಗುತ್ತದೆ. ಬಹುಶಃ ಈ ದೇಶದಲ್ಲಿ ಅತ್ಯಂತ ಪ್ರಗತಿಪರ ಲೆಜಿಸ್ಲೇಶನ್ ಯಾವುದಾದರು ಆಗಿದ್ದರೆ ಅದು the Karnataka Land

Reforms Act. ಇದರ ಮೂಲಕ ಇದರಲ್ಲಿ ಪ್ರಮುಖವಾಗಿ ಮೂರು ವಿಚಾರಗಳಿವೆ. ಒಂದು ಸೆಕ್ಷನ್ 48 ಕೆಳಗಡೆ ಫಾರಂ ನಂ 7 ಹಾಕಿ, ಉಳುವವನಿಗೆ ಭೂಮಿಯನ್ನು ಕೊಡುವಂಥದ್ದು, ಎರಡನೆಯದು ಸೆಕ್ಷನ್ 63 ಮತ್ತು ಸೆಕ್ಷನ್ 64ನಲ್ಲಿ ಲ್ಯಾಂಡ್ ಸೀಲಿಂಗ್ ಅನ್ನು ತರುವಂಥದ್ದು, ಸೆಕ್ಷನ್ 79(ಎ) ಮತ್ತು ಸೆಕ್ಷನ್ 79(ಬಿ)ನಲ್ಲಿ ಈ ಲ್ಯಾಂಡ್ ಬೇರೆಯವರಿಗೆ ಹೋಗಬಾರದು ಎನ್ನುವ ಉದ್ದೇಶದಿಂದ ತಂದಿರುವುದು.

ಮಾನ್ಯ ಸಭಾಪತಿಯವರೇ, ನಾನು ಏನನ್ನು ಹೇಳುವುದಕ್ಕೆ ಬಯಸುತ್ತೇನೆಂದರೆ, ಈ ಕಾನೂನನ್ನು ತರುವುದಕ್ಕೆ ದಿವಂಗತ ಡಿ.ದೇವರಾಜ್ ಅರಸ್‌ರವರ ಕ್ರಾಂತಿಕಾರಕವಾದಂತಹ ಚಿಂತನೆ ಏನಿತ್ತು, ಆ ಚಿಂತನೆ ನಿಧಾನವಾಗಿ ಎಲ್ಲೋ ಒಂದು ಕಡೆ ಡೈಲ್ಯೂಟ್ ಆಗುವಂಥದ್ದು ಕಾಣುತ್ತಿದೆ. ಆದಕಾರಣ ನಾನು ಹೇಳುವುದೇನೆಂದರೆ, ಸೆಕ್ಷನ್ 79(ಎ)ನಲ್ಲಿ ಏನು ಇನ್‌ಕಂ ಲಿಮಿಟ್ ಇದೆ. ಉದಾಹರಣೆಗೆ ನವರತ್ನ ಅಗ್ರಹಾರದ ಹತ್ತಿರ ಲ್ಯಾಂಡ್ ವ್ಯಾಲ್ಯೂ ಸುಮಾರು 3 ಸಾವಿರದಿಂದ 4 ಸಾವಿರ ರೂಪಾಯಿಗಳವರೆಗೆ ಇತ್ತು. ದಿನಾಂಕ:1–03–1974ರಲ್ಲಿ ಇದರ ಇನ್‌ಕಂ ಲಿಮಿಟ್ 50 ಸಾವಿರ ರೂಪಾಯಿ ಇತ್ತು. 1980ರಲ್ಲಿ 50 ಸಾವಿರ ಜನ 2 ಲಕ್ಷ ಮಾಡಿದರು. ಈಗ ಇದನ್ನು 25 ಲಕ್ಷ ಮಾಡಿದ್ದಾರೆ.

ಬಹುಶಃ ಆವತ್ತು ನವರತ್ನ ಅಗ್ರಹಾರದಲ್ಲಿ ಒಂದು ಎಕರೆಗೆ ರೂ.3000 ಇದ್ದಂಥದ್ದು ಇವತ್ತು ಒಂದು ಅಡಿಗೆ ರೂ. 5000 ಆಗಿದೆ. ಈ ಲಿಮಿಟನ್ನು ಜಾಸ್ತಿ ಮಾಡುವ ಹಿನ್ನೆಲೆಯಲ್ಲಿ ಎಲ್ಲೋ ಒಂದು ರೈತನಿಂದ ಈ ಜಮೀನು ದೂರ ಹೋಗುವಂಥದ್ದಾಗಬಹುದು, ಇದನ್ನು ತಡೆಯಬೇಕು ಎಂದರೆ 79 ಬಿ ಯಲ್ಲಿ ಏನಿದೆಯೋ ಅದನ್ನು ಯಥಾವತ್ತಾಗೆ ಜಾರಿಗೆ ತರುವಂತಹ ಕೆಲಸವನ್ನು ಸರ್ಕಾರ ಮಾಡಬೇಕಾಗುತ್ತದೆ. 79 ಬಿ ಯಲ್ಲಿ ಯಾರಿವತ್ತು ಕೃಷಿಯೇತರರಿದ್ದಾರೆ ಅವರು ಆ ಎಲ್ಲಾ ಪ್ರಾವಿಷನ್‌ಗಳನ್ನು ಜಾರಿಗೆ ತರುವಂಥದ್ದು, ಆ ರೀತಿ ಮಾಡಿರುವಂಥದ್ದನ್ನು ಸರ್ಕಾರಕ್ಕೆ ಆ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಅವಕಾಶ ಇದೆ. ಆ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಸೆಕ್ಷನ್ 80ಗೆ, ಎಸಿ ಯಿಂದ ಡಿಸಿ ಗೆ ಮಾಡಿದ್ದಾರೆ. ಯಾರು ನಮ್ಮ ತಾತ ಅಥವಾ ನಮ್ಮ ಅಪ್ಪ ವ್ಯವಸಾಯ ಮಾಡುತ್ತಿದ್ದರು, ನಾನು ಕಾರಣಾಂತಗಳಿಂದ ವ್ಯವಸಾಯ ಮಾಡುವುದಕ್ಕೆ ಆಗಲಿಲ್ಲ, ನನಗೆ ಅನುಮತಿ ಕೊಡಿ, ನಾನು ಕೃಷಿ ಭೂಮಿಯನ್ನು ಖರೀದಿ ಮಾಡಲಿಕ್ಕೆ ಎನ್ನುವಂಥದ್ದು ಅದರಲ್ಲಿದೆ. ಎಸಿಯವರು ಕೊಡುವುದಕ್ಕೆ ವರ್ಷಾನುಗಟ್ಟಲೆ, ತಿಂಗಳಾನುಗಟ್ಟಲೆ ಆಗುತ್ತಿದೆ. ಇನ್ನು ಡಿಸಿಗೆ ಈ powers ಅನ್ನು delegate ಮಾಡಿದರೆ, ಅದನ್ನು within no time ಕೊಡುವುದಕ್ಕೆ ಸಾಧ್ಯವಾಗುತ್ತದಯೇ? ಸರ್ಕಾರ ಇದನ್ನು ಯೋಚನೆ ಮಾಡುವುದು ಸೂಕ್ತ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಭಾಪತಿಗಳೆ, ಸೆಕ್ಷೆನ್ 109ನಲ್ಲಿ, ಇಲ್ಲಿ simple method ಅನ್ನು ಅಳವಡಿಸಿಕೊಂಡಿದ್ದಾರೆ. 2 ಯೂನಿಟ್ಸ್ ಇದ್ದರೆ 4 ಯೂನಿಟ್ಸ್, 5 ಯೂನಿಟ್ ಇದ್ದರೆ 10 ಯೂನಿಟ್ಸ್, 10 ಯೂನಿಟ್ಸ್ ಇದ್ದರೆ 20 ಯೂನಿಟ್ಸ್, 20 ಯೂನಿಟ್ಸ್ ಇದ್ದರೆ 40 ಯೂನಿಟ್ಸ್. ಉದ್ದೇಶಗಳಲ್ಲಿ, housing ಗೆ, educational institutions ಗೆ ಅಥವಾ religious institutions ಗೆ ಏಕೆ ಜಾಸ್ತಿ ಮಾಡುತ್ತಿದ್ದೀರಿ? Why? What is the reason? ದಯಮಾಡಿ ಈ reasoning ಅನ್ನು ಕೊಟ್ಟರೆ ಇದೇನು ಯೂನಿಟ್ಸ್‌ನ್ನು ಜಾಸ್ತಿ ಮಾಡಿರುವುದು ನನ್ನ ದೃಷ್ಟಿಯಲ್ಲಿ ವೈಜ್ಞಾನಿಕವಾಗಿದೆ ಎನಿಸುವುದಿಲ್ಲ. ಈ ಮೂರರ ಅಡಚಣೆಗಳೇನಿವೆ ಇದರ ಬಗ್ಗೆ ಸರ್ಕಾರದ ಗಮನಸೆಳೆದಿದ್ದೇನೆ. ಮಾನ್ಯ ದೇವರಾಜ್‌ಅರಸುರವರು ಯಾವ ಉದ್ದೇಶದಿಂದ ಈ ಕಾನೂನನ್ನು ಜಾರಿಗೆ ತಂದ್ದಿದ್ದರೋ, ಆ ರೈತರ ಹಿತವನ್ನು ಕಾಪಾಡುವ ದೃಷ್ಟಿಯಿಂದ ಸರ್ಕಾರ ಕ್ರಮ ಜರುಗಿಸುವುದಕ್ಕೆ ಚಿಂತನೆ ಮಾಡಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶನ ಹೊಂದಿದವರು)**:– ಮಾನ್ಯ ಸಭಾಪತಿಗಳೆ, ನಾನು ಒಂದೇ ನಿಮಿಷ ಮಾತನಾಡುತ್ತೇನೆ. Karnataka Land Reforms Bill, 2015 ಅನ್ನು ನಾನು ಸ್ವಾಗತ ಮಾಡುತ್ತೇನೆ. ನಾವು ಅನೇಕ ಸಮಯದಿಂದ ಸರ್ಕಾರದ ಮೇಲೆ ಒತ್ತಡ ತರುತ್ತಿದ್ದೆವು. ಗ್ರಾಮಾಂತರ ಪ್ರದೇಶದಲ್ಲಿರುವವರೂ ಕೂಡ land value ಜಾಸ್ತಿ ಆದಮೇಲೆ, guidance value ಜಾಸ್ತಿ ಆದಮೇಲೆ, ಖರೀದಿ ಮಾಡಬೇಕು ಎಂದು ಚಿಂತನೆ ನಡೆಸುತ್ತಿದ್ದರು. 25 ಲಕ್ಷ ಮಾಡಿದ್ದೀರಿ, ಇದು 5 ವರ್ಷದೊಳಗೆ ಮತ್ತೆ ಲ್ಯಾಪ್ಸ್ ಆಗುತ್ತದೆ, ಆದ್ದರಿಂದ ಇನ್ನೂ ಸ್ವಲ್ಪ ಇದನ್ನು ಜಾಸ್ತಿ ಮಾಡುವುದಕ್ಕೆ ಸರ್ಕಾರ ಚಿಂತನೆ ಮಾಡಬಹುದೇ? ಮತ್ತೆ, ಎಸಿಗೆ ಪವರ್

ಇದ್ದದ್ದನ್ನು ಡಿಸಿಗೆ ಕೊಟ್ಟಿದ್ದೀರಿ. ಮೊದಲೇ ಡಿಸಿಗಳು ಕೆಲಸ ಮಾಡುವುದಿಲ್ಲ. ಅಲ್ಲಿ ಒಂದೂ ಫೈಲನ್ನು ಕ್ಲಿಯರ್ ಮಾಡಲಿಕ್ಕೆ ಆಗುತ್ತಿಲ್ಲ. ಲಕ್ಷಾಂತರ ಕಡತಗಳು ಬಾಕಿ ಇವೆ. ಪುನಃ ಡಿಸಿಯವರಿಗೆ Land Reforms Act ನ ಕಲಂ 80 ರಲ್ಲಿ ಪವರ್ಸ್ ಕೊಟ್ಟಿರುವುದು ಸರಿಯಲ್ಲ ಎನ್ನುವುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಮಾನ್ಯ ಸಚಿವರು ಈ ವಿಧೇಯಕವನ್ನು ತಂದಿದ್ದಕ್ಕೆ ಗ್ರಾಮಾಂತರ ಪ್ರದೇಶ ಎಲ್ಲಾ ಜನ ಸಂತೋಷ ಪಡುತ್ತಾರೆ ಎಂದು ಹೇಳಬಯಸುತ್ತೇನೆ.

**ಶ್ರೀ ವಿ.ಶ್ರೀನಿವಾಸ್ ಪ್ರಸಾದ್(ಕಂದಾಯ ಸಚಿವರು):–** ಮಾನ್ಯ ಸಭಾಪತಿಗಳೆ, ಮಾನ್ಯ ಉಗ್ರಪ್ಪನವರು ಈ ತಿದ್ದುಪಡಿಗಳ ಬಗ್ಗೆ ಮಾತನಾಡುತ್ತಾ ಬಹಳ ಸ್ಪಷ್ಟವಾಗಿ ಹೇಳಿದರು. ಕರ್ನಾಟಕ ಭೂಸುಧಾರಣಾ ಕಾಯಿದೆಗೆ 3 ತಿದ್ದುಪಡಿಗಳನ್ನು ತಂದಿದ್ದೇವೆ. ಒಂದು, ಸೆಕ್ಷನ್ 79 ಎ ಗೆ, ಅಲ್ಲಿದ್ದ ಕೃಷಿಯೇತರರ ಆದಾಯವನ್ನು ರೂ. 2 ಲಕ್ಷದಿಂದ ರೂ. 25 ಲಕ್ಷಕ್ಕೆ ತೆಗೆದುಕೊಂಡು ಬಂದದ್ದೇವೆ. ಸೆಕ್ಷನ್ 80ಕ್ಕೆ ಸಂಬಂಧಪಟ್ಟಂತೆ, ಕೃಷಿಯೇತರರು ರೂ.2 ಲಕ್ಷದಿಂದ ರೂ.25 ಲಕ್ಷದ ತನಕ ಬರುತ್ತದೆಯೋ ಅದಕ್ಕೆ Assistant Commissioner ರಿಂದ ಅನುಮತಿ ತೆಗೆದುಕೊಳ್ಳಬೇಕು ಮತ್ತು ಅದಕ್ಕೆ ಕೆಲವು ಷರತ್ತುಗಳನ್ನು ಹಾಕಿದ್ದೇವೆ. ಈಗಿರುವ ಸೆಕ್ಷನ್ 80ರಲ್ಲಿ, ದುರುಪಯೋಗವಾಗಿದೆ ಎಂದು ದೂರುಗಳು ಬಂದ ಹಿನ್ನೆಲೆಯಲ್ಲಿ Assistant Commissioner ನಿಂದ Deputy Commissioner ಅವರಿಗೆ ಕೊಡಬೇಕು ಎಂದು ತಿದ್ದುಪಡಿ ತಂದಿದ್ದೇವೆ. ಮೂರನೆದಾಗಿ, ಸೆಕ್ಷನ್ 109 ಈಗಾಗಲೇ ceiling limit 63 ಇದೆ, 79 ಎ ಮತ್ತು 79 ಬಿ ಇಷ್ಟೂ ಕೂಡ ಸೇರಿದೆ. ಏಕೆ ಅವರಿಗೆ ಯೂನಿಟ್ಸನ್ನು ಜಾಸ್ತಿ ಮಾಡಿದಿರಿ ಎಂದು ಮಾನ್ಯ ಉಗ್ರಪ್ಪನವರು ಪ್ರಶ್ನೆ ಕೇಳಿದರು. ಇಡೀ ದೇಶದಲ್ಲಿ ಭೂಸುಧಾರಣೆ ಕಾಯಿದೆ ಕ್ರಾಂತಿಕಾರಕವಾದ ಕಾಯಿದೆಯಾಗಿದೆ. ಅದನ್ನು ಒಂದು revolutionary act ಎಂದು ಹೇಳಬಹುದು. ಬಹುಶಃ ಭಾರತ ದೇಶದಲ್ಲಿ ಬೇರೆಲ್ಲೂ ಇಲ್ಲ ಎಂದು ಹೇಳಬಹುದು. 1961ರ ಭೂಸುಧಾರಣಾ ಕಾಯಿದೆಗೆ ತಿದ್ದುಪಡಿಯನ್ನು ತಂದರೋ . . . 1.3.1974ರಲ್ಲಿ ಈ ಕಾಯಿದೆ ಅಸ್ತಿತ್ವಕ್ಕೆ ಬಂತು, effect ಗೆ ಕೊಟ್ಟಂಥದ್ದು ಬಂದಿದೆ. ಈ ಕಾಯಿದೆಯನ್ನು ತಂದಂಥ ಸಂದರ್ಭದಲ್ಲಿ ಬಹುಶಃ 'Tiller is the Owner of the land' ಎಂದು ರೈತರ ಹಿತದೃಷ್ಟಿಯನ್ನು ಇಟ್ಟುಕೊಂಡು ಅವರಿಗೆ ಕೊಟ್ಟಿದ್ದಾರೆ. Ceiling limit ಹಾಕಿದ್ದಾರೆ, ಉಳತಕ್ಕಂಥವನೇ ಆಗಬೇಕು, ಯಾರು ಉಳುಮೆ ಮಾಡುವುದಿಲ್ಲವೋ ಆತನಿಗೆ ಭೂಮಿಯಿಲ್ಲ ಎನ್ನುವ ಹಿನ್ನೆಲೆಯಲ್ಲಿ ಆವತ್ತು ಕಾನೂನು ಮಾಡಿದರು. 1974ರಲ್ಲಿ ಏನು ಮೊದಲನೆಯದಾಗಿ ಬಂತೋ ಅದರಲ್ಲಿ, 79 ಎ ಗೆ ಕೇವಲ ರೂ. 12 ಸಾವಿರ ಫಿಕ್ಸ್ ಮಾಡಿದ್ದರು. ಆದರೆ ಅಲ್ಲೇನಿತ್ತು ಎಂದರೆ ಕೃಷಿಯೇತರರಿಗೆ ಕೊಟ್ಟಿರಲಿಲ್ಲ, ನಿಷೇಧ ಮಾಡಿದ್ದರು. ಕೇವಲ ಕೃಷಿಕರಿಗೆ ಮಾತ್ರ ಅವರ ಆದಾಯ ರೂ. 12 ಸಾವಿರ ಒಳಗೆ ಇರಬೇಕು. ಇವರಿಗೆ ಮಾತ್ರ 1974ರಲ್ಲಿ ಅನುಮತಿ ಕೊಟ್ಟಿದ್ದರು. ಅದಾದ ಮೇಲೆ 1991ರಲ್ಲಿ ಕೃಷಿಯೇತರರನ್ನು ಸೇರಿಸಿಕೊಂಡು ಆದಾಯದಲ್ಲಿ ಜಾಸ್ತಿ ಮಾಡಿ ರೂ. 50 ಸಾವಿರಕ್ಕೆ ತಂದರು. 5.2.1990ರಲ್ಲಿ ಪರಿಷ್ಕೃತ ಮಾಡಿ, ಕೇವಲ ಕೃಷಿಕರಿಗೆ ಇದ್ದಂಥದ್ದನ್ನು ರೂ. 50 ಸಾವಿರಕ್ಕೆ ತಂದರು. ಮತ್ತೆ ಅದನ್ನು 1995ರಲ್ಲಿ ಅಂದರೆ 20 ವರ್ಷಗಳ ಹಿಂದೆ ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾಗಿ, ಮಾನ್ಯ ಜಾಲಪ್ಪನವರು ಕಂದಾಯ ಸಚಿವರಾಗಿದ್ದ ಸಂದರ್ಭದಲ್ಲಿ ರೂ. 50 ಸಾವಿರದಿಂದ ರೂ. 2 ಲಕ್ಷ ಎಂದು ಮಾಡಿದರು. ಇವತ್ತು ನಮ್ಮ ಮಾನ್ಯ ಕಾರ್ಣಿಕ್‌ರವರು, ಮಾನ್ಯ ಅಶ್ವತ್‌ನಾರಯಣರವರು ಮಾತನಾಡುತ್ತಾ ಇದನ್ನು ಕೇಳುತ್ತಿದ್ದರು. ಕೆಳಮನೆಯಲ್ಲಿ ವಿಶ್ವೇಶ್ವರಹೆಗ್ಗಡೆ ಕಾಗೇರಿಯವರು ವಿರೋಧ ಮಾಡಿದರು. ಏಕಾಏಕಿ ರೂ. 2 ಲಕ್ಷದಿಂದ ರೂ. 25 ಲಕ್ಷಕ್ಕೆ ಹೋಗುವುದಕ್ಕೆ ಇರುವ ಮಾನದಂಡವೇನು ಎಂದು ಪ್ರಸ್ತಾಪ ಮಾಡಿದರು. ಭೂಮಿ ಬೆಲೆ ಹೇಗಾಗಿದೆ ಎನ್ನುವುದು ಗೊತ್ತಿದೆ. ಶೇಕಡ 300–400 ರಷ್ಟು ಜಾಸ್ತಿಯಾಗಿದೆ. ಬೆಂಗಳೂರಿನಲ್ಲಿ ರೂ. 5–10 ಸಾವಿರಕ್ಕೆ ಸಿಗುತ್ತಿದುದು ಈಗ ರೂ. 90 ಲಕ್ಷದಿಂದ 1 ಕೋಟಿಯ ತನಕ ಆಗಿದೆ. ಕೃಷಿಕರನ್ನು ಗಮನದಲ್ಲಿಟ್ಟುಕೊಂಡು ಈ ತಿದ್ದುಪಡಿಯನ್ನು ತಂದಿದ್ದೇವೆ. ಕೃಷಿಕರ ಕುಟುಂಬಗಳನ್ನು ರಕ್ಷಣೆ ಮಾಡಬೇಕು ಎನ್ನುವ ದೃಷ್ಟಿಯಿಂದ, ಆದಾಯವನ್ನು ರೂ. 25 ಲಕ್ಷ ಎಂದು ಮಾಡಿದ್ದೇವೆ. ಕೃಷಿಯೇತರರದು ಬೇರೆ ಪ್ರಶ್ನೆ. ಇದನ್ನು ತಂದಂಥ ಸಂದರ್ಭದಲ್ಲಿ ಶೇಕಡ 70 ರಷ್ಟು ಕೃಷಿಕರಿಗೆ ರಕ್ಷಣೆ ಕೊಡಬೇಕು. ಗ್ರಾಮೀಣ ಪ್ರದೇಶದಲ್ಲಿರುವವರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಭದ್ರತೆ ಕೊಡಬೇಕು, ಬೇರೆ asset ಇಲ್ಲ. They are not asset owning

community ಎಂದು ಮಾನ್ಯ ದೇವರಾಜು ಅರಸು ಮತ್ತು ಅವರ ಸರ್ಕಾರ ಯೋಚನೆ ಮಾಡಿ ಒಂದು ಆಸ್ತಿ ಕ್ರಿಯೇಟ್ ಮಾಡಬೇಕು, ಯಾರು ಭೂಮಾಲಿಕ ಇದ್ದ ಅವನ ಮನೆ ಮುಂದೆ ಗೇಣಿದಾರ ಹೋಗಿ ನಿಂತುಕೊಳ್ಳಬಾರದು, ಆತನೇ ಮಾಲೀಕನಾಗಬೇಕು ಎನ್ನುವ ದೃಷ್ಟಿಯಿಂದ ಈ revolutionary act ಅನ್ನು ತಂದರು. ಇದು ನಮ್ಮ ದೇಶದಲ್ಲಿ ಬೇರೆಲ್ಲೂ ಇರಲಿಲ್ಲ. 1974ರಲ್ಲಿ ಈ ಕಾಯಿದೆ ತಂದು 40 ವರ್ಷಗಳಾಗಿವೆ, ಕುಟುಂಬದಲ್ಲಿ ಇವತ್ತು ಸಾಕಷ್ಟು ಬದಲಾವಣೆಗಳಾಗಿವೆ. ವಿದ್ಯಾವಂತರಾಗಿದ್ದಾರೆ, ಉದ್ಯೋಗದಲ್ಲಿದ್ದಾರೆ. ಅವಿಭಕ್ತ ಕುಟುಂಬ ಅಂದರೆ ಅಲ್ಲಿರುವಂಥವರಿಗೆ ಆದಾಯ ಸೇರಿಕೊಳ್ಳುತ್ತದೆ. 40 ವರ್ಷ ಆದಮೇಲೆ ಅವರಲ್ಲಿ ಬಹಳಷ್ಟು ಮಕ್ಕಳು, ಕುಟುಂಬ ಜಾಸ್ತಿಯಾಗಿದೆ. ಯಾರು ಕೃಷಿ ಮೇಲೆ ಅವಲಂಬಿಸಿದ್ದಾರೋ ಅವರಿಗೆ ಆಗ ಸಿಕ್ಕಿದ ಭೂಮಿಯನ್ನು ಬಿಟ್ಟು ಮತ್ತೆ ಬೇರೆ ಭೂಮಿಯನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ರೂ. 2ಲಕ್ಷ ಅಂದರೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ರೂ. 25 ಲಕ್ಷ ಮಾಡೋಣ, ಅವನ ಮನೆಯಲ್ಲಿ ಗುಮಾಸ್ತನಾಗಿ ಕೆಲಸ ಮಾಡುವವನಿಗೂ ವರ್ಷಕ್ಕೆ ಆದಾಯ ರೂ. 2ಲಕ್ಷ ದಿಂದ ಜಾಸ್ತಿ ಇರುತ್ತದೆ, ಆ ಕುಟುಂಬದವರೂ ಕೂಡ ಇನ್ನೆಲ್ಲಾದಾರೂ ಭೂಮಿಯನ್ನು ತೆಗೆದುಕೊಂಡು ವ್ಯವಸಾಯ ಮಾಡಬೇಕು ಎನ್ನುವ ದೃಷ್ಟಿಯಿಂದ, ಇದನ್ನು ಗಮನದಲ್ಲಿಟ್ಟುಕೊಂಡು ರೂ. 25 ಲಕ್ಷ ಎಂದು ಮಾಡಿದ್ದೇವೆ. ಆದರೆ, ಕೃಷಿಯೇತರರಿಗೆ ನೀವು ಕೊಡಬಾರದು ಎಂದು ಕೆಳಮನೆಯಲ್ಲಿ ಮಾನ್ಯ ಭೋಪಯ್ಯನವರು ಪ್ರಶ್ನೆ ಮಾಡಿದರು. ಕೃಷಿಯೇತರರಿಗೆ ಏಕೆ ಕೊಡುತ್ತೀರಿ ಎಂದು ಹೇಳಿದಾಗ ನಾನು, ಕೃಷಿಯೇತರರಿಗೆ ಏತಕ್ಕೆ ಕೊಡಬಾರದು, ಬೇರೆ ಬೇರೆ ಸೆಕ್ಟರ್‌ನಲ್ಲಿ ಅವರಿಗೆ ಅವಕಾಶ ಕೊಡುತ್ತೀರಿ, ಇಲ್ಲೇಕೆ ಬೇಡ ಎನ್ನುತ್ತೀರಿ ಎಂದು ಹೇಳಿದೆ. ಕಾನೂನುರೀತ್ಯ ಇದು ಆಗುತ್ತಿರಲಿಲ್ಲ. ಕೈಗಾರಿಕೆಗಳನ್ನು ಮಾಡುವುದಕ್ಕೆ ಅವಕಾಶ ಕೊಡುತ್ತೇವೆ, ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ ಕೊಡುತ್ತೇವೆ, ಐಟಿ–ಬಿಟಿಗೆ ಅನುಮತಿ ಕೊಡುತ್ತೇವೆ, ಈ ರೀತಿ ಬೇರೆ ಬೇರೆ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಇನ್‌ವೆಸ್ಟ್ ಮಾಡಿ ಬನ್ನಿ ಎಂದು ಕರೆಯುತ್ತೇವೆ ಆದರೆ ಕೃಷಿಗೆ ಬಂದಾಗ ಮಾತ್ರ ಏಕೆ ಅವರನ್ನು ನಿಷೇಧ ಮಾಡಬೇಕು? ಅದಕ್ಕೂ ಅವಕಾಶ ಮಾಡಿಕೊಡಬೇಕಾಗುತ್ತದೆ. ಆದರೆ ಯಾವರೀತಿ ಅವಕಾಶ ಕೊಡಬೇಕು ಎಂದರೆ, ಅವನು bonafide ಆಗಬೇಕು, ನನಗೂ ಕೃಷಿ ಮಾಡುವುದಕ್ಕೆ ಆಸಕ್ತಿ ಇದೆ, ನಾನೂ ಕೃಷಿ ಮಾಡುತ್ತೇನೆ ಎನ್ನುವ ತಿಳುವಳಿಕೆ ಬಂದರೆ ಅವನಿಗೂ ಅವಕಾಶ ಕೊಡಬಹುದು. ಆಗುತ್ತಿದ್ದ ದುರುಪಯೋಗವನ್ನು ತಡೆಯಲು ಸೆಕ್ಷನ್ 80ಕ್ಕೆ ತಿದ್ದುಪಡಿ ತಂದು ಅದನ್ನು ಡಿಸಿಗೆ ಕೊಟ್ಟಿದ್ದೇವೆ. ಮತ್ತೆ ಅದನ್ನು ಕೃಷಿಗೋಸ್ಕರವೇ ಬಳಸಬೇಕು ಎನ್ನುವ ಷರತ್ತು ಹಾಕಿದ್ದೇವೆ, ಈ ಅಂಶಗಳನ್ನು clause ನಲ್ಲಿ ಹಾಕಿದ್ದೇವೆ. ಕೃಷಿಯೇತರರು ಭೂಮಿಯನ್ನು ತೆಗೆದುಕೊಂಡರೆ ಅವನ ಆದಾಯ ರೂ.25 ಲಕ್ಷದ ಒಳಗೆ ಇದ್ದರೆ ಅವನು ಕೃಷಿಯನ್ನೇ ಮಾಡಬೇಕು. ಬೇರೆ ಕಡೆ diversion ಮಾಡುವಹಾಗೆ ಇಲ್ಲ.

**(8–30 ಗಂಟೆ)**

ಇದನ್ನು ಬಹಳ ಸ್ಪಷ್ಟವಾಗಿ ಮಾಡುತ್ತಿದ್ದೇವೆ. ಇವರಿಗೂ relief ಕೊಡತುತ್ತಿದ್ದೇವೆ. ಕೃಷಿ ಕುಟುಂಬಗಳಿಗೂ ಕೊಡುತ್ತಿದ್ದೇವೆ. ಏಕೆಂದರೆ ರಾಷ್ಟ್ರೀಯ ಸಮೀಕ್ಷೆಯನ್ನು ನೋಡಿದೆ. ಕೃಷಿ ಮಾಡುವವರು ಕಡಿಮೆಯಾಗುತ್ತಿದ್ದಾರೆ. ಇದಕ್ಕೆ ಬೇರೆ ರೀತಿಯಲ್ಲಿ ಪ್ರೋತ್ಸಾಯ ಕೊಡಬೇಕು ಎನ್ನುವ ಉದ್ದೇಶವಿದೆ. ಇದರಿಂದ ಅವರಿಗೂ ಪ್ರೋತ್ಸಾಯ ಕೊಟ್ಟ ಹಾಗೆ ಆಗುತ್ತದೆ. ಅವರು ಹೇಳಿದರು GDP rate, ಅಹಾರ ಉತ್ಪಾದನೆ ಇತ್ಯಾದಿ ಕೃಷಿ ಕ್ಷೇತ್ರದಲ್ಲಿ ಅವರಿಗೂ ಉತ್ತೇಜನವನ್ನು ಕೊಡಬೇಕು ಮತ್ತು ಕೃಷಿ ಭೂಮಿ ಕೃಷಿ ಭೂಮಿಯಾಗಿಯೇ ಉಳಿದುಕೊಳ್ಳಬೇಕು. ಭೂ ಸುಧಾರಣೆ ಕಾಯಿದೆಯ ಮೂಲ spirit ನ್ನು ಹಾಗೆ ಉಳಿಸಿಕೊಳ್ಳಬೇಕು ಎಂದು ಇದನ್ನು ತರಲಾಗಿದೆ. 25 ಲಕ್ಷ ರೂ.ಗಳಾಗಿ ಮಾಡಿ ತಿದ್ದುಪಡಿಯನ್ನು ಇವತ್ತು ತಂದಿದ್ದೇವೆ. ಮಾನ್ಯ ಐವನ್ ಡಿ'ಸೋಜಾರವರು ಹೇಳಿದರು, ಇವತ್ತು ನಾನು ಆದೇಶ ಮಾಡಿದ್ದೇನೆ. quasi-judicial authorities ದು ಎಷ್ಟು ತಡವಾಗುತ್ತದೆ ಎನ್ನುವುದನ್ನು ತಾವೇ ಪ್ರಶ್ನೆ ಮಾಡಿದ್ದೀರಿ. ಕೆಳಮನೆಯಲ್ಲಿಯೂ ಮಾಡಿದರು. ಎಲ್ಲಾ ಇಲಾಖೆಗಳ ಒತ್ತಡ ಕಂದಯ ಇಲಾಖೆಯ ಮೇಲೆ ಬಂದು ಬೀಳುತ್ತವೆ. ಉದಾಹರಣೆಗೆ ಅನ್ನಭಾಗ್ಯ ಯೋಜನೆಯು ನಮ್ಮ ಇಲಾಖೆಗೆ ಸಂಬಂಧ ಬರುತ್ತದೆ. ಒಂದು ಸಣ್ಣ ಗ್ರಾಮ ಪಂಚಾಯಿತಿ ಚುನಾವಣೆ ಬಂದರು ಇಡೀ ಕಂದಾಯ ಇಲಾಖೆಗೆ ಕೆಲಸ, ಯಾರಿಗೂ

ಸ್ವಲ್ಪವು ಸಮಯ ಇರುವುದಿಲ್ಲ. ಚುನಾವಣೆ ಘೋಷಣೆಯಾದಾಗಿನಿಂದ ಫಲಿತಾಂಶ ಪ್ರಕಟವಾಗುವವರಿಗೆ Village Accountant ನಿಂದ ಹಿಡಿದು Assistant Commissioner, Deputy Commissioner ವರೆಗೆ ಎಲ್ಲರೂ ಅಲ್ಲೇ ಇರಬೇಕಾಗುತ್ತದೆ. ಹೀಗಾಗಿ ನಮ್ಮ ಇಲಾಖೆ ಮೇಲೆ ಒತ್ತಡಗಳು ಜಾಸ್ತಿ. ಆದರೆ ಇಂತಹ ಸಮಯ ಬಂದಾಹ ಇದಕ್ಕೆ ಆದ್ಯತೆ ಕೊಟ್ಟು ಇದನ್ನು dispose ಮಾಡಬೇಕು ಎಂದು ನಾವು ಇದರ ಬಗ್ಗೆ ಗಮನವಹಿಸಿದ್ದೇವೆ. ಮಾನ್ಯ ಸದಸ್ಯರು Assistant Commissioner ಗೆ ಕೊಟ್ಟ ಸಂದರ್ಭದಲ್ಲಿ ಏನು ದುರುಪಯೋಗವಾಯಿತು ಎನ್ನುವುದನ್ನು ಹೇಳಿದರು. ಐದು ವರ್ಷದಲ್ಲಿ 79, 79(ಬಿ) ಉಲ್ಲಂಘನೆಯಾಗಿ 32.412 ಪ್ರಕರಣಗಳು ದಾಖಲಾಗಿವೆ. ಅದರಂತೆ ವಾರ್ಷಿಕ ಸರಾಸರಿ ಸುಮಾರು ಆರುವರೆ ಸಾವಿರ ಪ್ರಕರಣಗಳು ಇದರಲ್ಲಿ ದಾಖಲಾಗಿವೆ. ಸದರಿ 32,411 ಪ್ರಕರಣಗಳ ಪೈಕಿ 18,035 ಪ್ರಕರಣಗಳು ವಿಲೇವಾರಿಯಾಗಿದ್ದು ಇನ್ನು 55 ಪ್ರಕರಣಗಳು ಬಾಕಿ ಇವೆ. 14,376 ಪ್ರಕರಣಗಳು ಬಾಕಿ ಇವೆ. ಇದರಲ್ಲಿ ವಿಲೇವಾರಿಯಾಗಿರುವುದು ಸುಮಾರು 7,600 ಈ ಅಂಕಿ-ಅಂಶಗಳನ್ನು ನಾನು ಕೊಟ್ಟಿದ್ದೇನೆ. 79(ಎ) ಗೆ ಆದಾಯ ಜಾಸ್ತಿ ಮಾಡಿ, 79(ಬಿ) ನಲ್ಲಿ ಸೇರಿಸಬೇಕು ಎಂದು ಬಹಳ ಎಚ್ಚರಿಕೆಯಿಂದ ಈ ತಿದ್ದುಪಡಿಯನ್ನು ತಂದಿದ್ದೇವೆ. 80ಗೆ ತಿದ್ದುಪಡಿ ತಂದಿದ್ದೇವೆ. 109 ನಲ್ಲಿ 63, 79(ಎ) ಮತ್ತು 79(ಬಿ) ಎಲ್ಲವು ಸೇರಿಸಲಾಗಿದೆ. ಮಾನ್ಯ ಉಗ್ರಪ್ಪನವರು ಇದೇನು ನನಗೆ ಹಿಡಿಸಲಿಲ್ಲ ಎಂದು ಹೇಳಿದರು. ಯುನಿಟ್ ಏಕೆ ಹೀಗೆ ಮಾಡಿದ್ದೀರಿ. ಸರ್ಕಾರಕ್ಕೆ 20 ಏಕೆ ಮಾಡಿದ್ದೀರಿ ಎಂದು ಕೇಳಿದ್ದಾರೆ. ಅವರು ಕೊಡದಿದ್ದರೆ ಸರ್ಕಾರಕ್ಕೆ ಇಷ್ಟು ಯುನಿಟ್ ಬೇಕಾಗಿದೆ ಕೊಡಿ ಎಂದು ಮನವಿ ಕೊಡಬೇಕಾಗುತ್ತದೆ. ಇದನ್ನು ಅದಷ್ಟು ಕಡಿಮೆ ಮಾಡಿ, ಜಿಲ್ಲಾಧಿಕಾರಿಗಳಿಗೆ ಕೊಡಬೇಕಾದ, ಕೈಗಾರಿಕೆ, ಶೈಕ್ಷಣಿಕ, ಪೂಜಾ ಸ್ಥಳಗಳು, ವಸತಿ ಯೋಜನೆ, ತೋಟಗಾರಿಕೆ ತತ್ಸಂಬವಾದ ರೀತಿಯಲ್ಲಿ ಅವರಿಗೆ ಅವಕಾಶ ಕೊಡೋಣ. ಸರ್ಕಾರಕ್ಕೆ ಹೆಚ್ಚು ಮಾಡೋಣ.

**ಶ್ರೀ ವಿ.ಎಸ್. ಉಗ್ರಪ್ಪ:-** ಆದರೆ ಅದನ್ನು ಏಕೆ double ಮಾಡಿದ್ದೀರಿ ಎನ್ನುವದು ನನ್ನ ಪ್ರಶ್ನೆ.

**ಶ್ರೀ ವಿ. ಶ್ರೀನಿವಾಸ ಪ್ರಸಾದ್:-** 109ರಲ್ಲಿ ಕೆಳಹಂತದಲ್ಲಿಯೇ easy ಯಾಗಿ ಮೇಲ್ಮಟಕ್ಕೆ ಹೆಚ್ಚು ಮನವಿಗಳು ಬರಲಿ ಎಂದು. ಈಗ ಜಿಲ್ಲಾಧಿಕಾರಿಗಳಿಗೆ ಇರುವ ಅವಕಾಶವನ್ನು ಅವರಿಗೆ ಕೊಡಲಾಗಿದೆ.

**ಶ್ರೀ ಎಂ.ಡಿ.ಲಕ್ಷ್ಮಿನಾರಾಯಣ(ಅಣ್ಣಯ್ಯ):-** 80ರಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಳ್ಳಿ. ಜಿಲ್ಲಾಧಿಕಾರಿಗಳಿಗೆ ಇರುವುದನ್ನು Assistant Commissioner ಗೆ ಕೊಡಬೇಕು ಎನ್ನುವುದನ್ನು. .

**ಶ್ರೀ ವಿ. ಶ್ರೀನಿವಾಸ ಪ್ರಸಾದ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೆ, ಮೂರು ತಿದ್ದುಪಡಿಗಳನ್ನು ಇದೇ ದೃಷ್ಟಿಯಿಂದ ಮಾಡಿದ್ದೇವೆ. ಇವತ್ತು ತಂದಿರುವ ತಿದ್ದುಪಡಿ ಬಗ್ಗೆ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದೀರಿ. ಈ ತಿದ್ದುಪಡಿ ಮುಖಾಂತರ ಭೂ ಸುಧಾರಣೆಯ ಉದ್ದೇಶ ಇಡೇರುತ್ತದೆ.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಗಳೆ, clarigication ಒಂದು ಜಿಲ್ಲಾಧಿಕಾರಿಗಳಿಗೆ ಬಹಳ ಒತ್ತಡ ಇರುತ್ತದೆ. ನಾನು ಒಬ್ಬ non-agriculturist, ನಾನು ಕೃಷಿ ಮಾಡಬೇಕು ಅದಕ್ಕೆ ಅನುಮತಿಯನ್ನು ಕೊಡಿ ಎಮದು 80 ನಲ್ಲಿ ಯಾರೋ apply ಮಾಡುತ್ತಾರೆ. Assistant Commissioner ರನ್ನು ಬೇಟಿ ಮಾಡುವುದು ಕಷ್ಟ, Deputy Commissioner ನ್ನು ಭೇಟಿ ಮಾಡುವುದು ಇನ್ನು ಕಷ್ಟ. ಅದಕ್ಕಾಗಿ ಇದನ್ನು deemed clause ಏನಾದರು ಮಾಡುತ್ತೀರಾ? 30 ದಿನಗಳಲ್ಲಿ ಅವರ application reject ಮಾಡಬೇಕು ಇಲ್ಲದಿದ್ದರೆ `he has been granted with the permission', ಎನ್ನುವ ರೀತಿಯಲ್ಲಿ deemed clause ಏನಾದರು ಮಾಡುತ್ತೀರಾ? ಇಲ್ಲದಿದ್ದರೆ ಜಿಲ್ಲಾಧಿಕಾರಿಯಿಮದ ಅನುಮತಿ ಪಡೆಯುವುದು ಕಷ್ಟ.

**ಶ್ರೀ ವಿ. ಶ್ರೀನಿವಾಸ ಪ್ರಸಾದ್:-** ಆದಷ್ಟು ಬೇಗ ವಿಲೇವಾರಿಯಾಗಬೇಕು ಎನ್ನುವ ದೃಷ್ಟಿಯಿಂದ ಇದನ್ನು ನಾವು ತಂದಿದೇವೆ.

**ಶ್ರೀ ಗೋ.ಮಧುಸೂದನ್:–** ಇಲ್ಲದಿದ್ದರೆ deemed ಮಾಡಿಬಿಡಿ

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2015ರ ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕ ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕ್ಕನ್ನು ಪರ್ಯಾಲೋಚಿಸುವುದು**

**ಖಂಡಡ 2 ರಿಂದ 4 ರವರೆಗೆ**

**ಸಭಾಪತಿಯವರು;–** "ಖಂಡ 2 ರಿಂದ 4ರವರಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 4 ರವರೆಗೂ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ ದೀಘ್ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅದಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ ದೀಘ್ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅದಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವ ಅಂಗಿಕಾರ**

**ಶ್ರೀ ವಿ. ಶ್ರೀನಿವಾಸ ಪ್ರಸಾದ್(ಕಂದಾಯ ಸಚಿವರು):–** ಸನ್ಮಾನ್ಯ ಸಭಾಪತಿಯವರೆ, 2015ರ ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2015ರ ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

## 13. ಪ್ರಕಟಣೆಗಳು

ಸಭಾಪತಿಯವರು:– ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶಗಳು ಬಂದಿರುತ್ತವೆ

ಅ) ಕನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 104ರ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕ:31–07–2015 ರಂದು "2015ನೇ ಸಾಲಿನ ಕರ್ನಾಟಕ ಕುಲಾಂಧರಿ ಮತ್ತು ತಳಿ ವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜಗಳ ಮಾರಾಟ ಬೆಲೆಯ ನಿಗದಿ ಮತ್ತು ಸಮದಾಯ ವಿಧೇಯಕ" ವನ್ನು ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

ಆ) ಕರ್ನಾಟ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 104ರ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕ:31–07–2015 ರಂದು "2015ನೇ ಸಾಲಿನ ಕರ್ನಾಟಕ ರಾಜ್ಯ ಮೋಟಾರು ವಾಹನಗಳ ವಿಶೇಷ ಉಪಬಂಧಗಳ ವಿಧೇಯಕ" ವನ್ನು ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

ಸಭೆಯ ಗಮನಕ್ಕೆ ಒಂದು ವಿಇಷಯವನ್ನು ತರುತ್ತೇನೆ. ಕಳೆದವಾರ ವಾರದ ಕೊನೆಯ ದಿನ ಸದಸ್ಯರಿಗೆ ಉಪಹಾರದ ವ್ಯವಸ್ಥೆ ಮಾಡಲಾಗುತ್ತದೆ ಎಂದು ಹೇಳಿದೆ. ನಮಗೆ ನಾಳೆ ವಾರದ ಕೊನೆ ದಿನ ಆಗುವುದರಿಂದ ನಾಳೆ ಬೆಳಗ್ಗೆ 9 ಗಂಟೆ ಎಲ್ಲ ಮಾನ್ಯ ಸದಸ್ಯರಿಗೆ ಕೊಠಡಿ ಸಂಖ್ಯೆ:106ರಲ್ಲಿ ಉಪಹಾರದ ವ್ಯವಸ್ಥೆ ಇದೆ. ಆದ್ದರಿಂದ ಎಲ್ಲ ಮಾನ್ಯ ಸದಸ್ಯರು ಉಪಹಾರಕ್ಕೆ ಬರಬೇಕು. ಹತ್ತು ಗಂಟೆಗೆ ಸದನ ಪ್ರಾರಂಭವಾಗುತ್ತದೆ. ನಾಳೆ ಬೆಳಗ್ಗೆ ಹತ್ತು ಗಂಟೆವರೆಗೆ ಸಭೆಯನ್ನು ಮುಂದೂಡುತ್ತೇನೆ.

**(ಸದನವು ರಾತ್ರಿ 8 ಗಮಟೆ 38 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 1ನೇ ಆಗಷ್ಟ್ ಮಾಹೆ 2015ರ ಶನಿವಾರದಂದು ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು)**